# ಕಥಾಸಂಗಮ



ಪ್ರಿಯ ಓದುಗರೆ,

ಈ ವರ್ಷದ ಸಾಹಿತ್ಯ ಚಟುವಟಿಕೆಗಳನ್ನು ಪ್ರಾರಂಭಿಸಲು ಪೀಠಿಕೆಯಂತೆ ಸ್ವರ್ಣಸೇತು ಸಂಪಾದಕ ಸಮಿತಿಯು 'ಯುಗಾದಿ ಕಥಾ ಸ್ಪರ್ಧೆ-೨೦೦೬'ಅನ್ನು ಏರ್ಪಡಿಸಿತ್ತು. ಬರೆಯುವ ಹವ್ಯಾಸವಿರುವ ಹೊರನಾಡ ಕನ್ನಡಿಗರ ಮನದಾಳದಲ್ಲಡಗಿರುವ ಭಾವನೆಗಳಿಗೆ ಮತ್ತು ಅನುಭವಗಳಿಗೆ ಕತೆಯ ರೂಪಕೊಡುವಂತೆ ಉತ್ತೇಜಿಸುವುದೇ ಇದರ ಮುಖ್ಯ ಉದ್ದೇಶ. ಈ ಸ್ಪರ್ಧೆಯು ಕೇವಲ 'ಉತ್ತರ ಕ್ಯಾಲಿಫ಼ೋರ್ನಿಯ ಕನ್ನಡ ಕೂಟ'ದ ಸದಸ್ಯರಿಗೆ ಮಾತ್ರ ಸೀಮಿತವಾಗಿರದೆ, ಕ್ಯಾಲಿಫ಼ೋರ್ನಿಯ ರಾಜ್ಯದ ಸಮಸ್ತ ಕನ್ನಡಿಗರಿಗೂ ವಿಸ್ತರಿಸಲಾಗಿತ್ತು.

ಈ ಪ್ರಕಟಣೆಗೆ ಉತ್ತರವಾಗಿ ಬಹಳ ಉತ್ಸುಕತೆಯಿಂದ ೧೦ ಜನ ಪ್ರತಿಭಾನ್ವಿತ ಕತೆಗಾರರು ತಮ್ಮ ಕತೆಗಳನ್ನು ಕಳುಹಿಸಿದ್ದರು. ಸ್ಪರ್ಧೆಗಾಗಿ ಸಲ್ಲಿಸಲಾಗಿದ್ದ ಈ ಕತೆಗಳಲ್ಲಿ ಅತ್ಯುತ್ತಮವಾದುದನ್ನು ಆಯ್ಕೆಮಾಡುವ ಕ್ಲಿಷ್ಟಕರವಾದ ಕೆಲಸವನ್ನು, ಕನ್ನಡ ಸಂಸ್ಕೃತಿ ಹಾಗೂ ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಪರಿಣಿತಿ ಹೊಂದಿರುವ ಮೂವರು ಹೊರನಾಡ ಕನ್ನಡಿಗರಿಗೆ ವಹಿಸಲಾಗಿತ್ತು. ನಮ್ಮ ಕೂಟದವರೇ ಆದ ಕಥೆಗಾರ್ತಿ ಸಂಧ್ಯಾ ರವೀಂದ್ರನಾಥ್, 'ಅದುವೆಕನ್ನಡ – thatskannada.com' ನಲ್ಲಿ ಅಂಕಣಕಾರ್ತಿ ತ್ರಿವೇಣಿ ಶ್ರೀನಿವಾಸ ರಾವ್ ಹಾಗೂ ಪ್ರಸಿದ್ಧ ಕಥೆಗಾರರಾದ ಡಾ. ಗುರುಪ್ರಸಾದ್ ಕಾಗಿನೆಲೆಯವರು ಈ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ತೀರ್ಪುಗಾರರಿಗೆ ಕಥೆಗಾರರಾರೆಂದು ತಿಳಿಯದಂತೆ ವ್ಯವಸ್ಥೆ ಮಾಡಲಾಗಿತ್ತು.

ಕತೆಗಳನ್ನು ಕೂಲಂಕುಶವಾಗಿ ವಿಮರ್ಶಿಸಿದ ಮೇಲೆ ತೀರ್ಪುಗಾರರ ಅನಿಸಿಕೆ ಹೀಗಿದೆ: ***"ಇಲ್ಲಿನ ಹತ್ತೂ ಕತೆಗಳನ್ನು ಓದಿದಾಗ ಕತೆ ಬರೆದ ಎಲ್ಲರಿಗೂ ಬರೆಯಬೇಕೆನ್ನುವ ಅದಮ್ಯ ಉತ್ಸಾಹ ಎದ್ದು ಕಾಣುತ್ತದೆ. ತಮ್ಮ ಬಾಲ್ಯದಲ್ಲಾದ ಘಟನೆಗಳು, ತಮ್ಮ ವೃತ್ತಿ ಬದುಕಿನ ಗೊಂದಲಗಳು, ಹದಿಹರೆಯದ ಪ್ರೀತಿಯ ನೆನಪುಗಳು ಇವೇ ಮುಂತಾದುವು ಕಥಾವಸ್ತುವಾಗಿ ಹೊರಹೊಮ್ಮಿವೆ. ತಮ್ಮ ಬಿಡುವಿಲ್ಲದ ಉಸಿರುಗಟ್ಟುವ ದೈನಿಕದ ಜತೆಜತೆಗೂ ಇಂತಹ ಪ್ರಯತ್ನವನ್ನು ಮಾಡಿರುವ ಗೆಳೆಯ-ಗೆಳತಿಯರೆಲ್ಲರಿಗೂ ನಮ್ಮ ಮೆಚ್ಚುಗೆಯಿದೆ."***

ತೀರ್ಪುಗಾರರು ಬಹುಮಾನಕ್ಕಾಗಿ ಆಯ್ಕೆಮಾಡಿದ ೩ ಕತೆಗಳು ಹಾಗು ಅವರ ಅಭಿಪ್ರಾಯವನ್ನು ನಿಮ್ಮೆಲ್ಲರೊಡನೆ ಹಂಚಿಕೊಳ್ಳಲು ನಮಗೆ ಬಹಳ ಸಂತಸವಾಗುತ್ತದೆ.

**ಮೊದಲನೆಯ ಬಹುಮಾನ – ಕಾರ್ಮೋಡದಂಚಿನ ಬದುಕು (ಜ್ಯೋತಿ ಶೇಖರ್)**

*''ಲೇಖಕರು, ಬಾಣಂತಿ ಸನ್ನಿ ಎನ್ನುವ ಮಾನಸಿಕ ದುರ್ಬಲತೆಗೆ ಪೂರಕವಾದ ಸ್ಥಿತಿಯನ್ನು ತಂದು, ಅದನ್ನು ಮನಮುಟ್ಟುವಂತೆ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದು ಬಾಣಂತಿ ಹೆಣ್ಣಿಗೆ ಯಾವ ರೀತಿಯ ಸಾಮಾಜಿಕ ಅಥವಾ ಮಾನಸಿಕ ಬೆಂಬಲವಿರದ ಅಮೆರಿಕಾದಂತಹ ಮುಂದುವರೆದ ದೇಶದಲ್ಲಿ ಕಾಣಿಸಿಕೊಳ್ಳುವ ವಿಶೇಷ ಸ್ಥಿತಿ. ನೇರವಾದ ನಿರೂಪಣೆ, ಸರಳವಾದ ಭಾಷೆ ಇದರಿಂದ ಕತೆ ಗಮನ ಸೆಳೆಯುತ್ತದೆ.''*

**ಎರಡನೆಯ ಬಹುಮಾನ – ಗೃಹಪ್ರವೇಶ (ವಿಶ್ವನಾಥ್ ಹುಲಿಕಲ್)**

*"ಪ್ರತಿ ಮಧ್ಯಮ ವರ್ಗದವನ ಅಪೇಕ್ಷೆಯಾದ ತಲೆಯಮೇಲೊಂದು ಸೂರು – ಈ ಕಥೆಯ ಕಥಾವಸ್ತು. ಸುಲಲಿತವಾದ ಭಾಷೆ ಈ ಕತೆಯ ಶಕ್ತಿ.''*

**ಮೂರನೆಯ ಬಹುಮಾನ – ಕವಲುದಾರಿ (ಮಂಗಳಾ ಕುಮಾರ್)**

*''ಇದು ಜನಸಾಮಾನ್ಯರ ಆಸಕ್ತಿ ಕೆರಳಿಸುವ ಕಥಾವಸ್ತು. ಸೂರ್ಯಚಂದ್ರರಷ್ಟೇ ಹಳೆಯದು. ಇಲ್ಲಿ ಬರಹಗಾರರ ಚಾಲೆಂಜ್ ಇರುವುದು, ಓದುಗರ ಗಮನವನ್ನು ಹಿಡಿತದಲ್ಲಿಟ್ಟು, ಕುತೂಹಲ ಕೆರಳಿಸುತ್ತಾ ಹೋಗುವುದು. ಇದನ್ನು ಹೆಣೆದಿರುವ ರೀತಿ ಚೆನ್ನಾಗಿದೆ. ಸರಳವಾದ ಭಾಷೆ, ಸಮಕಾಲೀನ ದೇಶ, ವಾತಾವರಣ ವಸ್ತುವಿಗೆ ಹೊಸತನವನ್ನು ತಂದಿದೆ.''*

ತೀರ್ಪುಗಾರರಿಗೆ, ಉತ್ತರ ಕ್ಯಾಲಿಫ಼ೋರ್ನಿಯ ಕನ್ನಡ ಕೂಟದ ಪರವಾಗಿ ನಮ್ಮ ಅನಂತ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ವಿಜೇತರಿಗೆ ನಮ್ಮ ಅಭಿನಂದನೆಗಳು. ಭಾಗವಹಿಸಿದ ಎಲ್ಲ ಕಥೆಗಾರ-ಕಥೆಗಾರ್ತಿಯರಿಗೂ ನಮ್ಮ ಕೃತಜ್ಞತೆಗಳನ್ನು ತಿಳಿಸಲು ಬಯಸುತ್ತೇವೆ.

**ಸ್ವರ್ಣಸೇತು ಸಂಪಾದಕ ಸಮಿತಿ**



# ಕವಲು ದಾರಿ

*ಸ್ವರ್ಣಸೇತು ಯುಗಾದಿ ಕಥಾಸ್ಪರ್ಧೆಯಲ್ಲಿ*
*ಮೂರನೆಯ ಬಹುಮಾನ ಪಡೆದ ಕಥೆ*

**ಮಂಗಳಾ ಕುಮಾರ್**
ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ

ಬಾಗಿಲು ತೆರೆದು ಮನೆಯೊಳಗೆ ಹೊಕ್ಕ ತಕ್ಷಣ ಫೋನಿನ ರಿಂಗಣ ಕೇಳಿ ಎರಡೂ ಕೈತುಂಬ ಸಾಮಾನುಗಳನ್ನು ಹಿಡಿದು ಒಳಬಂದ ನಿಯತಿ ಎಲ್ಲವನ್ನೂ ಅಲ್ಲೇ ಡೈನಿಂಗ್ ಟೇಬಲಿನ ಮೇಲೆ ಕುಕ್ಕಿ, ರೋಹಿಣಿಯ ಕರೆಯಿರಬಹುದು ಎಂದುಕೊಳ್ಳುತ್ತ ಫೋನಿನೆಡೆಗೆ ಧಾವಿಸಿದಳು. ಆ ಕಡೆಯಿಂದ ತೇಲಿಬಂದ ಮೃದುವಾದ ಧ್ವನಿ ತನ್ನನ್ನು ಗಾಯತ್ರಿ ಎಂದು ಪರಿಚಯಿಸಿಕೊಂಡು, ''ಲಲಿತಾ ಫೌಂಡೇಷನ್ನಿನ ಲಾಯರ್ ನಾನು. ಅದರ ಮಾಲೀಕ ಜಯಂತನ ವಿಲ್ ಪ್ರಕಾರ ನಿಮಗೆ ಬಿಟ್ಟು ಹೋಗಿರುವ.......'' ಮುಂದೆ ಅವಳೇನೋ ಪ್ರಶ್ನೆ ಕೇಳಿದಳು. ಯಾರೋ ಹೊಟ್ಟೆಗೆ ಬಲವಾಗಿ ಒದ್ದು ಮೈಯಿಂದ ರಕ್ತವೆಲ್ಲ ಇಳಿದುಹೋದಂತಾದ ನಿಯತಿ ಹಾಗೇ ಕುಸಿದು ಕುಳಿತಳು. ಅವಳಿಂದ ಉತ್ತರ ನಿರೀಕ್ಷಿಸುತ್ತಿದ್ದ ಆ ಕಡೆಯಿಂದಲೂ ಹಲವು ಕ್ಷಣಗಳ ದೀರ್ಘ ಮೌನ. ನಂತರ ''ಸಾರಿ. ನಿಮಗೆ ನೋವುಂಟು ಮಾಡುವ ಉದ್ದೇಶ ನನ್ನದಲ್ಲ. ಇಷ್ಟು ಹೊತ್ತಿಗೆ ನಿಮಗೆ ವಿಷಯ ತಿಳಿದಿದೆ ಎಂದುಕೊಂಡು ಕಾಲ್ ಮಾಡಿದೆ. ಆರ್ ಯೂ ಆಲ್ ರೈಟ್?'' ಎಂದ ಗಾಯತ್ರಿಯ ಧ್ವನಿ. ''ನನಗೆ ಈ ವಿಷಯ ಗೊತ್ತೇ ಇರಲಿಲ್ಲ.'' ಎಂದು ಅವಳ ಒಳಗಿನಿಂದ ಧ್ವನಿ ಹೇಗೆ ಬಂತೋ ಗೊತ್ತಿಲ್ಲ. ''ಕ್ಷಮಿಸಿ. ಇನ್ನೊಂದೆರಡು ದಿನ ಬಿಟ್ಟು ಮತ್ತೆ ಮಾತನಾಡೋಣ.'' ಎಂದು ವಿದಾಯ ಹೇಳಿ ಗಾಯತ್ರಿ ಫೋನ್ ಇಟ್ಟುಬಿಟ್ಟಳು.

ರೋಹಿಣಿ ನಿನ್ನೆ ನಿಯತಿಯೊಂದಿಗೆ ಮಾತಾಡಲು ಬಯಸಿದ್ದು ನಿಜ. ಆಗವಳು ಮನೆಯಲ್ಲಿಲ್ಲದ ಕಾರಣ ಆನ್ಸರಿಂಗ್ ಮೆಷೀನಿನಲ್ಲಿ ''ನಿನಗೆ ಒಂದು ವಿಷಯ ಹೇಳ ಬೇಕಾಗಿತ್ತು. ಆತಂಕ ಪಟ್ಟುಕೊಳ್ಳುವಂಥದ್ದೇನಿಲ್ಲ. ಯೋಚಿಸಬೇಡ. ಮತ್ತೆ ಕಾಲ್ ಮಾಡುತ್ತೇನೆ.'' ಎಂದು ಸಂದೇಶ ಬಿಟ್ಟಿದ್ದೂ ನಿಜ. ಮನೆಗೆ ಬಂದ ನಂತರ ರೋಹಿಣಿಯೊಡನೆ ಮಾತನಾಡುವ ಆಸೆ ಇದ್ದರೂ, ತಮ್ಮೂರಿಗೂ ಅವಳೂರಿಗೂ ಇರುವ ಮೂರುಘಂಟೆಗಳ ಕಾಲವ್ಯತ್ಯಾಸವನ್ನು ಬೈದುಕೊಳ್ಳುತ್ತ ಸುಮ್ಮನಾಗಿ ಬಿಟ್ಟಿದ್ದಳು. ''ಆತಂಕ ಪಟ್ಟುಕೊಳ್ಳುವಂಥದ್ದೇನಿಲ್ಲ. ಯೋಚಿಸಬೇಡ.'' ಎಂದು ಹೇಳಿದ್ದ ಅವಳ ಧ್ವನಿ ಕೇಳಿ, ಮಾಮೂಲಾಗಿ ಯೋಗಕ್ಷೇಮ ವಿಚಾರಿಸಲು ಮಾಡಿದ ಕರೆ ಎಂದು ತಲೆಕೆಡಿಸಿಕೊಳ್ಳಲಿಲ್ಲ. ಈ ವಿಷಯವನ್ನು ಹೇಳಲೇ ಅವಳು ತನಗೆ ಕರೆ ಮಾಡಿದ್ದಳು ಎನ್ನುವುದರಲ್ಲಿ ಈಗ ಸಂಶಯವೇ ಇಲ್ಲ.


ಗೋಡೆಗೆ ಒರಗಿ ಹಾಗೇ ಕುಳಿತಿದ್ದ ಅವಳ ತಲೆಯಲ್ಲಿ ಗಾಯತ್ರಿ ಹೇಳಿದ ''ಸಾರಿ, ನಿಮಗೆ ನೋವುಂಟು ಮಾಡುವ ಉದ್ದೇಶವಲ್ಲ ನನ್ನದು.'' ಎನ್ನುವ ಮಾತೇ ಸುಳಿಯಲು ಶುರುವಾಯಿತು. ಆರು ವರ್ಷಗಳ ಹಿಂದೆ ಅಪರಾಧಿಯಂತೆ ಕ್ಷಮೆ ಕೇಳುತ್ತ ಅದೇ ಮಾತುಗಳನ್ನು ಹೇಳಿದ್ದ ಜಯಂತನ ಮುಖ ತೇಲಿಬಂತು. ತಡೆಹಿಡಿಯಲಾರದೆ ಉಕ್ಕಿ ಬರುತ್ತಿದ್ದ ಕಣ್ಣೀರು ಎದೆಯಲ್ಲಿ ಒಂದು ರಂಧ್ರವನ್ನು ಕೊರೆದ ವಿಚಿತ್ರ ಅನುಭವ. ಮಾತುಗಳಲ್ಲಿ ವರ್ಣಿಸಲಾರದಂತ, ಹಿಂದೆಂದೂ ತನ್ನ ಅನುಭವಕ್ಕೇ ಬಂದಿರದಿದ್ದ ಈ ರಂಧ್ರವು ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮಗಳಿಂದ ಉಂಟಾಗುವ ಭೌತಿಕ ವಸ್ತುಗಳ ಅನುಭವದಷ್ಟೇ ನೈಜತೆಯಿಂದ ಎದೆಯಲ್ಲಿ ಮೂಡಿದ ಅನುಭವವಾಗುತ್ತಿದೆ. ಯಾಂತ್ರಿಕವಾಗಿ ಎದ್ದು ಅತ್ತಿಂದಿತ್ತ ನಡೆದಾಡತೊಡಗಿದಳು. ಹೃದಯದ ರಂಧ್ರವೂ ತನ್ನ ದೇಹದ ಒಂದು ಅವಿಭಾಜ್ಯ ಅಂಗದ ಹಾಗೆನಿಸಿ, ''ನಾನು ಅಪೂರ್ಣಳಾಗಿಬಿಟ್ಟಿದ್ದೇನೆ.'' ಎನಿಸಿತು. ಇನ್ನೆಂದೂ ಏಳಲೇ ಆರೆ ಎನ್ನುವಂಥ ಸಂಕಟದ ಸುಸ್ತು. ಹಾಸಿಗೆಯ ಮೇಲೆ ಉರುಳಿದವಳು ಅದೆಷ್ಟು ಹೊತ್ತು ಹಾಗೇ ಮಲಗಿದ್ದಳೋ ಅರಿವೇ ಇಲ್ಲ.

ಫೋನು ರಿಂಗಣಿಸಿದಾಗ ಯಾರೆಂದು ನೋಡುವ ಆಸಕ್ತಿಯೂ ಇರಲಿಲ್ಲ. ರೋಹಿಣಿಯ ಧ್ವನಿ ಆನ್ಸರಿಂಗ್ ಮಷೀನಿನಲ್ಲಿ ತೇಲಿಬಂದಾಗ ಹಾಸಿಗೆಯ ಪಕ್ಕದಲ್ಲಿದ್ದ ಫೋನನ್ನು ಹಾಗೇ ಎತ್ತಿ ಕಿವಿಗಿಟ್ಟುಕೊಂಡಳು. ಅದು ರೋಹಿಣಿಗೂ ಗೊತ್ತಾಗಿ ಮಾಮೂಲಿನಂತೆ ಉಭಯಕುಶಲೋಪರಿ ಶುರು ಮುಗಿಸಿ, ''ಜಯಂತನ ವಿಷಯ ನಮಗೆ ಮೊನ್ನೆ ಗೊತ್ತಾಯಿತು. ಹೋಗಿಬಿಟ್ಟನಂತೆ. ಪಾಪ'' ಎಂದಳು. ನಿಯತಿ ಮೌನಿಯಾಗಿದ್ದಳು. ''ಇದೆಲ್ಲ ನಮ್ಮ ಕೈಯಲ್ಲಿ ಎಲ್ಲಿದೆ. ಹಣೆಬರಹ ತಪ್ಪಿಸಲು ಯಾರಿಗೆ ಸಾಧ್ಯ....'' ಅವಳ ಮಾತು ಹದಿನೈದು ನಿಮಿಷ ಹಾಗೇ ನಡೆದಿತ್ತು. ನಿಯತಿ ಹ್ಞೂಗುಟ್ಟುತ್ತಿದ್ದಾಳೋ ಇಲ್ಲವೋ ಎಂದೂ ಅವಳ ಗಮನಕ್ಕೆ ಬರಲಿಲ್ಲ. ಸದ್ದಿಲ್ಲದೇ ಕೆನ್ನೆಗಳ ಮೇಲೆ ಉರುಳುತ್ತಿದ್ದ ಕಣ್ಣೀರನ್ನು ನಿಯತಿ ಒರೆಸಿಕೊಳ್ಳುತ್ತಿದ್ದುದು ಅವಳಿಗೆ ಕಾಣುವಂತೆಯೂ ಇರಲಿಲ್ಲ. ಯಾರೋ ಹೀಗೆ ಪರಿಚಿತರೊಬ್ಬರು ಸತ್ತರು ಎನ್ನುವಷ್ಟೇ ಕೇವಲವಾಗಿ ಸುದ್ದಿ ಹೇಳಿ ಮಾತುಮುಗಿಸಿ ವಿದಾಯ ಹೇಳಿದಳು.

ನಿಯತಿ ಹಾಸಿಗೆಯಿಂದ ಮೇಲೇಳಲಿಲ್ಲ. ನಿಶ್ಚೇತನಳಾಗಿ ಹಾಗೇ ಮಲಗಿದ್ದ ಅವಳ ತಲೆಯಲ್ಲಿ ತನ್ನ, ಜಯಂತನ ನಡುವೆ ನಡೆದ ಸಂಭಾಷಣೆಗಳು, ಸನ್ನಿವೇಶಗಳೆಲ್ಲ ಸುರುಳಿ ಸುತ್ತಲು ಶುರು ಮಾಡಿದವು.

ರೋಹಿಣಿ ಒಬ್ಬಳೇ ಅಲ್ಲ. ಇಡೀ ಪ್ರಪಂಚದಲ್ಲಿ ಈಗ ಆ ಸಾಧ್ಯತೆಯೂ ಇಲ್ಲವಾಗಿರುವುದರಿಂದ, ಎದೆಯಲ್ಲಿ ಮೂಡಿರುವ ರಂಧ್ರವೇಕೆ ನನ್ನನ್ನು ಪೂರ್ತಿ ಒಳಗೆ ಸೆಳೆದುಕೊಂಡು ಮುಕ್ತಳನ್ನಾಗಿಸುತ್ತಿಲ್ಲ?

ಜಯಂತನನನ್ನು ರೋಹಿಣಿಯ ಮನೆಯಲ್ಲಿ ಸಂಧಿಸಿದ ಮೆಮೋರಿಯಲ್ ವೀಕೆಂಡ್ ನೆನಪು.




*ಚಿತ್ರ: ಸೌಜನ್ಯ ಕೇಣಿ*

ಯಾರೊಂದಿಗೂ ಹಂಚಿಕೊಂಡಿರದಿದ್ದ ರಹಸ್ಯಗಳು ನನಗೆ ಮತ್ತು ಜಯಂತನಿಗೆ ಮಾತ್ರ ಗೊತ್ತು. ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಿದ್ದ ನಾನೂ, ಜಯಂತನೂ ಒಂದು ರೀತಿಯಲ್ಲಿ ಬಹಳ ಅದೃಷ್ಟಶಾಲಿಗಳು. ಇನ್ನೊಂದು ರೀತಿಯಲ್ಲಿ ನತದೃಷ್ಟರು. ನಮ್ಮಿಬ್ಬರ ಪಥಗಳು ಎರಡು ಬಾರಿ ಸಂಧಿಸಿದ್ದವು. ಮುಂದಿನ ಪಥವು ಒಂದೇ ಆಗಿರಬಹುದಿತ್ತು. ಆದರೆ ಆಗ ನಮ್ಮಿಬ್ಬರ ಹೆಗಲ ಮೇಲಿದ್ದ ಹೊರೆಗಳನ್ನು ಇಳಿಸಲಾಗದೆ, ಒಂದೇ ದಾರಿಯಲ್ಲಿ ಮುಂದೆ ಪಯಣಿಸಲೂ ಆಗದೇ ಕವಲೊಡೆದ ದಾರಿಯಲ್ಲಿ ಒಬ್ಬೊಬ್ಬರು ಒಂದೊಂದು ದಾರಿ ಹಿಡಿದು ಹೋಗಿಬಿಟ್ಟೆವು. ಒಮ್ಮೆಯಲ್ಲ, ಎರಡು ಬಾರಿ. ಈಗ ಜಯಂತ ಆ ರಹಸ್ಯಗಳನ್ನು ತನ್ನೊಂದಿಗೆ ಕೊಂಡುಹೋಗಿ ನನ್ನ ಎದೆಯಲ್ಲಿ ಈ ರಂಧ್ರವನ್ನು ಕೊರೆದು ನನ್ನನ್ನು ಅಪೂರ್ಣಳನ್ನಾಗಿ ಮಾಡಿ ಹೋಗಿದ್ದಾನೆ. ಅವನಿಲ್ಲದೇ ನಾನು ಪರಿಪೂರ್ಣಳು ಎಂದು ನನಗೆ ಎಂದೂ ಅನಿಸಿರಲಿಲ್ಲ.

ಅವನ ಪರಿಚಯ ನಾಲ್ಕು ವರ್ಷಗಳ ಹಿಂದೆ ಮೊದಲ ಬಾರಿ ರೋಹಿಣಿಯ ಮದುವೆಯಲ್ಲಿ ಆಗಿತ್ತು. ಮದುವೆಯ ಓಡಾಟದ ನಂತರ ರೋಹಿಣಿಯನ್ನು ಅವರ ಅತ್ತೆಯ ಮನೆಯವರು ಮನೆತುಂಬಿಸಿಕೊಂಡಾಗ, ರೋಹಿಣಿ ಅನಂತನೊಂದಿಗೆ ಊರಿಗೆ ಹೊರಟಾಗ ಮತ್ತೆ ಹಲವು ಬಾರಿ ಇಬ್ಬರ ಭೇಟಿಯೂ ಆದಾಗ ಜಯಂತ್ ತನ್ನಿಂದ ಆಕರ್ಷಿತನಾಗಿದ್ದು ಅವಳ ಅರಿವಿಗೆ ಬಂದಿತ್ತು. ನಮ್ಮಿಂದ ಆಕರ್ಷಿತರಾದವರ ಸೂಕ್ಷ್ಮ ಸಂವೇದನೆ ನಮಗೆ ಮಾತ್ರ ಅರ್ಥವಾಗುತ್ತದಲ್ಲ ಹಾಗೆ. ಅವನಿಂದ ಅವಳೂ ಆಕರ್ಷಿತಳಾಗಿದ್ದಳು. ಆದರೆ ಆ ಮೊದಲ ದಿನಗಳ ಆಕರ್ಷಣೆಯನ್ನು ಮುಂದುವರೆಸಿ ಸ್ನೇಹ ಬೆಳೆಸುವ ಅವಕಾಶವೇ ಬರಲಿಲ್ಲ. ಓದು ಮುಂದುವರೆಸಲು ಅಮೇರಿಕಾಗೆ ಹೋಗುವ ತಯಾರಿಯಲ್ಲಿದ್ದ ಜಯಂತನ ಭೇಟಿಯೂ ಮತ್ತೆ ಆಗಲಿಲ್ಲ. ಮುಂದಿನ ನಾಲ್ಕೈದು ವರ್ಷಗಳಲ್ಲಿ ಅಕ್ಕಂದಿರ ಮದುವೆಯಾಗಿ, ನಿಯತಿಯ ಮದುವೆಯೂ ಆಗಿ ಅವಳು ಅಮೇರಿಕಾಗೆ ಬಂದಿದ್ದಾಗಿತ್ತು. ರೋಹಿಣಿ, ಅನಂತರೊಂದಿಗೆ

ಮೂರುದಿನದ ಮೆಮೋರಿಯಲ್ ವೀಕೆಂಡ್ ಕಳೆಯಲು ಬಂದಿದ್ದ ಜಯಂತನನ್ನು ನೋಡಿದಾಗ, ಮೊದಲ ಬಾರಿ ರೋಹಿಣಿಯ ಮದುವೆಯಲ್ಲಿ ಭೇಟಿಯಾದಾಗ ತಾವಿಬ್ಬರೂ ಅನುಭವಿಸಿದ್ದ ಪರಸ್ಪರ ಆಕರ್ಷಣೆಯ ನೆನಪು ಬಂದಿತ್ತು. ಜಯಂತ್ ಇನ್ನೂ ಅವಿವಾಹಿತನಾಗೇ ಇದ್ದ.

ರೋಹಿಣಿಯ ಮನೆಗೆ ಹೋಗಲು ನಿಯತಿಯ ಮುಂಗೋಪಿ ಗಂಡ ಸಂದೀಪನಿಗೆ ಮೊದಲೇ ಇಷ್ಟವಿರಲಿಲ್ಲ. ನಿಯತಿಯ ಬಲವಂತಕ್ಕೆ ಬಂದವನಿಗೆ ಮಾತುಮಾತಿಗೂ ಸಿಗುತ್ತಿತ್ತು ಮೊಸರಿನಲ್ಲಿ ಕಲ್ಲು. ಅದನ್ನು ಎಲ್ಲರೂ ಗಮನಿಸಿದವರೇ. ರೋಹಿಣಿಯೂ ನಿಯತಿಯಲ್ಲಿ ಹಲವಾರು ಬಾರಿ ಪಿಸುಗುಟ್ಟಿದ್ದಳು, ''ಇವನು ಯಾವಾಗಲೂ ಹೀಗೋ ಅಥವಾ ನಿಮ್ಮಿಬ್ಬರ ಮಧ್ಯೆ ಏನಾದರೂ ನಡೆದಿದೆಯೋ? ಈ ಮುಂಗೋಪಿಯನ್ನು ತಡಕೊಳ್ಳೋದಕ್ಕಾದರೂ ನಿನಗೆ ಹೇಗೆ ಸಾಧ್ಯ?''

ಸಂದೀಪನನ್ನು ಮದುವೆಯಾಗಿ ಕೇವಲ ಒಂದೇ ವರ್ಷವಾಗಿತ್ತು ಆಗ. ನನ್ನ ಇಡೀ ಇಪ್ಪತ್ತಮೂರು ವರ್ಷದ ಜೀವನದಲ್ಲಿ ಅತ್ಯಂತ ದೀರ್ಘವಾದ ವರ್ಷ ಅದು ಎಂದು ನಿಯತಿಗೆ ಎನಿಸುತ್ತಿತ್ತು. ಬರೀ ಮುಂಗೋಪವೊಂದೇ ಅವನಲ್ಲಿದ್ದ ನ್ಯೂನತೆಯಾಗಿದ್ದಿದ್ದರೆ ಸಹಿಸಿಕೊಂಡಿರುತ್ತಿದ್ದೆ. ನನಗೂ ಅವನಿಗೂ ಯಾವ ಹೊಂದಾಣಿಕೆಯೂ ಇಲ್ಲದ ದಾಂಪತ್ಯವನ್ನು ಜೀವನಪೂರ್ತಿ ಸಹಿಸಿಕೊಳ್ಳುವುದು ಹೇಗಪ್ಪ , ಎಂದು ತೋಚದೆ ಹೆಣಗಾಡುತ್ತಿದ್ದಳು. ಸಂದೀಪ ಅವಳೊಡನೆ ವರ್ತಿಸುತ್ತಿದ್ದ ರೀತಿಯಲ್ಲಿ ಯಾವ ಮುಚ್ಚುಮರೆಯೂ ಇರಲಿಲ್ಲ. ಸಣ್ಣಸಣ್ಣ ವಿಷಯಗಳಿಗೆ ತಾಳ್ಮೆ ಕಳೆದುಕೊಂಡು, ಹೊರಗಿನವರ ಎದುರು ಬೈಯುತ್ತ ಅವಳನ್ನು ಅವಮಾನಿಸುತ್ತಿದ್ದೇನೆ ಎಂದು ಅವನ ತಲೆಗೆ ಎಂದೂ ಬರುತ್ತಿರಲಿಲ್ಲ. ಹೆಂಡತಿಯನ್ನು ಆಳುವುದು ಗಂಡನಾದವನ ಹಕ್ಕು ಎಂಬಂತೆ ನಡೆದುಕೊಳ್ಳುತ್ತಿದ್ದ.

ಊರಹೊರಗಿದ್ದ ಸ್ಟೋನ್ ಮೌಂಟನ್ ಎನ್ನುವ ಜಾಗವನ್ನು ನೋಡಿಬರೋಣ ಎಂದು ರೋಹಿಣಿ, ಅನಂತ್ ಯೋಜನೆ ಹಾಕಿದ್ದರು. ಅಲ್ಲಿ ಹೋಗಿ ಸವಿಯಲು ಚಿತ್ರಾನ್ನ, ಮೊಸರನ್ನಗಳ ತಯಾರಿಯೂ ಆಗಿತ್ತು. ಸಂದೀಪನಿಗೆ ಅವರೊಡನೆ ಹೋಗುವ ಉತ್ಸಾಹವಿರಲಿಲ್ಲ. ಅದೇ ಊರಿನಲ್ಲಿದ್ದ ತನ್ನ ಹಳೆಯ ಕಾಲೇಜು ಗೆಳೆಯನನ್ನು ನೋಡಲು ಹೋಗುವೆ ಎಂದು ಹೇಳಿ ಹೊರಟೇ ಹೋಗಿದ್ದ. ಸ್ಟೋನ್ ಮೌಂಟನ್ ತುಂಬ ಸುಂದರವಾದ ಸ್ಥಳ. ಹೊಸದಾಗಿ ಮದುವೆಯಾದ, ಮದುವೆಯಾಗದ ಪ್ರೇಮಿಗಳು ಕೈಕೈಹಿಡಿದು ಓಡಾಡುತ್ತಿದ್ದನ್ನು ನೋಡಿ ತನ್ನಂತವರಿಗೆ ದುಃಖವನ್ನೂ ತರುವಂತಹ ಸ್ಥಳ ಎಂದು ನಿಯತಿ ಯೋಚಿಸುತ್ತಿದ್ದಳು. ರೋಹಿಣಿ, ಅನಂತರನ್ನು ಸ್ವಲ್ಪ ಹಿಂದೆ ಬಿಟ್ಟು ನಿಯತಿಯೂ, ಜಯಂತನೂ ಮುಂದೆ ನಡೆಯುತ್ತಿದ್ದರು. ಅನ್ಯಮನಸ್ಕಳಾಗಿ ನಡೆಯುತ್ತಿದ್ದ ಅವಳನ್ನು ಉದ್ದೇಶಿಸಿ ''ಸಂದೀಪ್ ಬರಲಿಲ್ಲ ಎಂದು ಬೇಜಾರು ಮಾಡಿಕೋಬೇಡಿ....'' ಎಂದು ಹಾಸ್ಯವಾಗಿ ಏನೋ ಹೇಳಿದ ಜಯಂತ್. ಅವಳಿಗೇ ಅರಿವಿಲ್ಲದಂತೆ ಕೆನ್ನೆಗಳ ಮೇಲೆ ಹರಿದ ಕಣ್ಣೀರನ್ನು ಒರೆಸಿಕೊಂಡಳು ನಿಯತಿ. ಅನಿರೀಕ್ಷಿತವಾಗಿ ಹರಿದ ಅವಳ ಕಣ್ಣಿರು ಅವನನ್ನು ಅಧೈರ್ಯನನ್ನಾಗಿಸಿತು. ''ಸಾರಿ. ನಿಮ್ಮನ್ನು ನೋಯಿಸುವ ಉದ್ದೇಶದಿಂದಲ್ಲ ಹೇಳಿದ್ದು...'' ಮೌನವಾಗಿ ದುಃಖಿಸುತ್ತಿದ್ದ ಅವಳಿಗೆ ಅವನು ಮುಂದೇನು ಹೇಳಿದನೋ ನೆನಪಿಲ್ಲ.

ಮೆಮೋರಿಯಲ್ ವೀಕೆಂಡ್ ಮುಗಿಸಿ ಮನೆಗೆ ಬಂದ ನಂತರ ಜಯಂತನಿಂದ ಆಗಾಗ ಕರೆ ಬರುತ್ತಿತ್ತು. ನೂರಾರು ಮೈಲುಗಳ ಅಂತರವಿದ್ದರೂ ದೂರವಾಣಿ ಅವರನ್ನು ಹತ್ತಿರ ತಂದಿತ್ತು. ಆಪ್ತ ಮಿತ್ರರಂತೆ ಇಬ್ಬರೂ ಬೇಕಾದಷ್ಟು ಹರಟೆ ಹೊಡೆಯುತ್ತ ಚರ್ಚಿಸದ ವಿಷಯಗಳೇ ಇರಲಿಲ್ಲ. ಸಂದೀಪನ ಅತಿರೇಕದ ವರ್ತನೆಯ ಬಗ್ಗೆ ಆಗೊಮ್ಮೆ ಈಗೊಮ್ಮೆ ಮಾತು ಬಂದು ನಿಯತಿ ದುಃಖಿಸುತ್ತಿದ್ದಳು. ತಾನು ಸಂದೀಪನೊಂದಿಗೆ ಸುಖವಾಗಿಲ್ಲ ಎಂದು ಜಯಂತನೊಡನೆ ಬಾಯಿಬಿಟ್ಟು ಹೇಳುವ ಅಗತ್ಯವಿರಲಿಲ್ಲ. ಒಂದು ದಿನ ಅವಳನ್ನು ಸಂತೈಸುತ್ತ ಜಯಂತ್ ಹೇಳಿದ ಮಾತು ಅವಳನ್ನು ಇಡೀ ದಿನ ದುಃಖಿಸುವಂತೆ ಮಾಡಿತ್ತು. ನಿಯತಿಯಿಂದ ಆಕರ್ಷಿತನಾಗಿದ್ದವನಿಗೆ ಅವಳೊಂದಿಗೆ ಸ್ನೇಹ ಬೆಳೆಸುವ ಆಸೆಯೇನೋ ಇತ್ತು. ಆದರೆ ಇನ್ನೂ ಓದುತ್ತಿದ್ದ, ಮದುವೆಯಾಗದ ಇಬ್ಬರು ಅಕ್ಕಂದಿರೂ ಇದ್ದವಳು ನಿಯತಿ. ಜೊತೆಗೆ, ಅವಿವಾಹಿತ ಮಗಳು ಅವಿವಾಹಿತ ಯುವಕನೊಬ್ಬನೊಡನೆ ಬೆಳೆಸಬಹುದಾದ ಸ್ನೇಹವನ್ನು ಯಾವ ಕಾರಣಕ್ಕೂ ಅನುಮೋದಿಸಲಾರದಂತ ಸಂಪ್ರದಾಯಸ್ಥ ತಾಯಿತಂದೆಯರು. ಕ್ಲಿಷ್ಟವಾದ ಪರಿಸ್ಥಿತಿ, ಇನ್ನೊಂದೆರಡು ವರ್ಷ ಕಳೆಯಲಿ ಎಂದು ಸುಮ್ಮನಾಗಿಬಿಟ್ಟನಂತೆ. ನಂತರ ಓದು ಮುಂದುವರೆಸಲು ಅಮೇರಿಕಾಗೆ ಬಂದು ಓದಿ, ಕೆಲಸ ಹುಡುಕಿಕೊಂಡು ನೆಲೆಸುವ ಯತ್ನದಲ್ಲಿದ್ದಾಗ ನಿಯತಿಯ ಮದುವೆ ಆಗಿಯೇ ಹೋಗಿತ್ತು. ''ನೀನೇ ನನ್ನ ಮೊದಲ ಪ್ರೇಮ'' ಎಂದು ಅವನು ಹಾಸ್ಯಮಾಡಿದ್ದರೂ ಅದು ಸುಳ್ಳಲ್ಲ ಎಂದು ನಿಯತಿಗೂ ಎನಿಸಿತ್ತು. ಅವಳಿಗೂ ಅವನ ಬಗ್ಗೆ ಹಾಗೇ ಎನಿಸಿತ್ತಲ್ಲ. ನಾನೇಕೆ ರೋಹಿಣಿಯ ಮೂಲಕ ಅವನನ್ನು ಸಂಪರ್ಕಿಸುವ ಯತ್ನ ಮಾಡಲಿಲ್ಲ ಎಂದುಕೊಂಡಳು. ಅದು ತಲೆಗೂ ಬಂದಿತ್ತು. ಆದರೆ ಅವನಿಗೆ ತನ್ನ ಬಗ್ಗೆ ಯಾವ ಭಾವನೆ ಇತ್ತು ಖಚಿತವಾಗಿ ಗೊತ್ತೇ ಆಗಿರಲಿಲ್ಲವಲ್ಲ. ದೇಶ ಬಿಟ್ಟು ಹೋಗಿಬಿಟ್ಟಿದ್ದವನು ನನ್ನ ಬಗ್ಗೆ ಎಲ್ಲಿ ಯೋಚಿಸುತ್ತಾನೆ. ಯಾರನ್ನೋ ಮದುವೆಯಾಗಿ ಸುಖವಾಗಿರಬಹುದು ಎಂದು ನಾನೂ ಸುಮ್ಮನಾಗಿಬಿಟ್ಟಿದ್ದೆನಲ್ಲ. ನನ್ನ ಹಣೆಯಲ್ಲಿ

ಸಂದೀಪನನ್ನು ಮದುವೆಯಾಗುವುದೇ ಬರೆದಿತ್ತೇನೋ ಎಂದು ಅವಳಿಗೆ ವಿಪರೀತ ದುಃಖವಾಗಿತ್ತು.

ತನ್ನ ಮದುವೆಯ ಮಾತು ಬಂದಾಗೆಲ್ಲ ಜಯಂತ್ ''ಮದುವೆಯಾಗಲು ನಾನಿನ್ನೂ ಮಾನಸಿಕವಾಗಿ ತಯಾರಿಲ್ಲ.'' ಎಂದು ಹೇಳುತ್ತಿದ್ದ. ನನ್ನವನಲ್ಲದಿದ್ದರೂ ಅವನು ಇನ್ನಾರವನೂ ಅಲ್ಲ ಎನ್ನುವ ಕನಸಿಗೆ ಜೋತುಬಿದ್ದ ನಿಯತಿಗೆ ಅದು ಒಂದು ರೀತಿಯ ಹಿತವನ್ನೇ ಕೊಡುತ್ತಿತ್ತು. ''ಸ್ನೇಹಿತೆಯಾದ ನಿನಗೆ ನನ್ನ ಜೀವನದಲ್ಲಿ ಯಾವಾಗಲೂ ಒಂದು ಸ್ಥಾನವಿದೆ.'' ಎಂದು ಹಲವಾರು ಬಾರಿ ಹೇಳಿದ್ದ ಜಯಂತ್. ಆದರೆ ಸಂದೀಪನನ್ನು ಬಿಟ್ಟು ಬಾ ಎಂದು ಯಾವ ಸಂದರ್ಭದಲ್ಲೂ ಹೇಳಿರಲಿಲ್ಲ. ಅವನಿಗೆ ನನ್ನ ಮೇಲೆ ಪ್ರೀತಿಯೋ, ಸ್ನೇಹವೋ ಎನ್ನುವುದು ನಿಯತಿಗೆ ಮುಖ್ಯವಾಗಿರಲಿಲ್ಲ. ಅವಳು ಜೋತುಬಿದ್ದ ಕನಸಿನಲ್ಲಿ ಜಯಂತನಿಂದ ಸಿಗುತ್ತಿದ್ದುದು ಯಾವ ಷರತ್ತೂ ಇಲ್ಲದ ನಿರ್ವ್ಯಾಜ ಪ್ರೇಮ. ಅದೇ ಕನಸು ಅವಳನ್ನು ಹಿಂಸಿಸುತ್ತಲೂ ಇತ್ತು. ಮದುವೆಗೆ ಮುನ್ನ ಸಂಪೂರ್ಣ ಅಪರಿಚಿತನಾಗಿದ್ದ ಸಂದೀಪ್ ಮದುವೆಯ ನಂತರ ನುಂಗಲಾರದ ತುತ್ತಾಗಿಬಿಟ್ಟಿದ್ದ. ಅವನ ಮೇಲೆ ಪ್ರೀತಿ ಹುಟ್ಟುವುದಿರಲಿ, ಸ್ನೇಹವೂ ಹುಟ್ಟಿರಲಿಲ್ಲ. ಈಗ ಜಯಂತನೆಡೆಗೆ ತಿರುಗಿ ಹೆಮ್ಮರವಾಗಿ ಬೆಳೆಯುತ್ತಿದ್ದ ಪ್ರೀತಿ, ಸ್ನೇಹಗಳು ಸಂದೀಪನನ್ನು ಬಿಟ್ಟು ಹೋಗುವ ಯೋಚನೆಯನ್ನು ಮೇಲಿಂದ ಮೇಲೆ ತಲೆಗೆ ಹಾಕುತ್ತಿದ್ದವು. ''ಧರ್ಮೇಚ, ಅರ್ಥೇಚ... '' ಎಂದೆಲ್ಲ ಹೇಳಿ ಸಂದೀಪನನ್ನು ಮದುವೆಯಾದ ನಾನು ಜಯಂತನ ಬಗ್ಗೆ ಏನೇನೋ ಕನಸು ಕಟ್ಟಿಕೊಳ್ಳುತ್ತಿರುವುದಲ್ಲದೇ, ಸಂದೀಪನನ್ನು ಬಿಟ್ಟು ಹೋಗಲು ನೆಪಗಳನ್ನೂ ಹುಡುಕುತ್ತಿದ್ದೇನೆ ಎನ್ನುವ ಅಪರಾಧ ಪ್ರಜ್ಞೆಯೂ ಕಾಡುತ್ತಿತ್ತು.

ಜಯಂತನೊಂದಿಗೆ ಬೆಳೆದಿದ್ದ ಸ್ನೇಹದ ಬಗ್ಗೆ ಯಾರಿಗೂ ಹೇಳುವ ಧೈರ್ಯವಿರಲಿಲ್ಲ ಎಂದಲ್ಲ. ತನ್ನ ಹೃದಯಕ್ಕೆ ಹತ್ತಿರವಾದ ಒಂದು ಕನಸಾದರೂ ಸಂಪೂರ್ಣ ನನ್ನದೇ ಆಗಿರಬೇಕು ಎನ್ನುವ ಆಸೆಯಿಂದ ರೋಹಿಣಿಯೊಂದಿಗಾಗಲೀ ತನ್ನ ಇನ್ನಾವ ಗೆಳತಿಯರೊಂದಿಗಾಗಲೀ ಜಯಂತನ ಬಗ್ಗೆ ಬಾಯೇ ಬಿಟ್ಟಿರಲಿಲ್ಲ. ದೂರವಾಣಿಯನ್ನು ಬಿಟ್ಟು ಇನ್ನಾವ ರೀತಿಯಲ್ಲೂ ಸಂಪರ್ಕಿಸುವ ಧೈರ್ಯ ಇಬ್ಬರಿಗೂ ಇರಲಿಲ್ಲ. ಆ ಬಗ್ಗೆ ಮಾತೂ ಆಡುತ್ತಿರಲಿಲ್ಲ. ಅದರ ಬಲದಿಂದಲೋ ಏನೋ, ಸಂದೀಪನ ಬಗ್ಗೆ ಅಪರಾಧ ಪ್ರಜ್ಞೆ ಒಮ್ಮೊಮ್ಮೆ ಕಾಡಿದರೂ, ಇದು ಕೇವಲ ಕನಸು. ಕನಸು ಕಾಣುವ ಹಕ್ಕೂ ಇಲ್ಲವೇ ನನಗೆ ಎಂದು ಅವಳ ಮನಸ್ಸು ಕ್ಷಮಾಪಣೆಯನ್ನು ಹುಡುಕಿಕೊಂಡುಬಿಡುತ್ತಿತ್ತು.

ಒಮ್ಮೆ ''ಮದುವೆಯಾಗಲು ಮಾನಸಿಕ ತಯಾರಿ ಎಷ್ಟಿದ್ದರೇನು. ನನ್ನ ಹಾಗೆ ವಿರಸದಾಂಪತ್ಯದಲ್ಲಿ ಸಿಕ್ಕಿಕೊಂಡು ಬಿಟ್ಟರೆ ಏನು ಮಾಡಲು ಸಾಧ್ಯ'' ಎನ್ನುತ್ತ ಅವಳ ಧ್ವನಿ ಭಾರವಾಯಿತು. ನಿಯತಿಯನ್ನು ಸಂತೈಸುತ್ತಿದ್ದ ಜಯಂತನ ಧ್ವನಿಯೂ ಭಾರವಾಗಿತ್ತು. ''ತಯಾರಿದ್ದೇನೆ ಎಂದು ನಿನಗೆ ಖಚಿತವಾಗಿ ಗೊತ್ತಾಗುವುದು ಯಾವಾಗ?'' ಎಂದು ಕೇಳಿದಳು ನಿಯತಿ. ಒಬ್ಬರ ಮುಖಭಾವ ಇನ್ನೊಬ್ಬರಿಗೆ ಕಾಣುವಂತಿರಲಿಲ್ಲ. ದೂರವಾಣಿಯ ರಕ್ಷಣೆಯನ್ನು ಬಯಸುವುದು ಇಂತಹ ಕ್ಷಣಗಳಲ್ಲಿಯೇ ಅಲ್ಲವೇ. ಒಂದೆರಡು ಕ್ಷಣಗಳ ಧೀರ್ಘ ಮೌನದ ನಂತರ ''ನಿನಗೊಂದು ಮಗುವಾದ ಮೇಲೆ'' ಎಂದ ಜಯಂತ್. ಆ ಮಾತುಗಳ ಅರ್ಥವನ್ನು ಜಯಂತ್ ಬಿಡಿಸಿ ಹೇಳುವ ಅಗತ್ಯವಿರಲಿಲ್ಲ. ನೋಡಲು ಆಕರ್ಷಕವಾಗಿದ್ದ, ವಿದ್ಯಾವಂತನಾಗಿದ್ದ ಅವನ ಸ್ನೇಹಕ್ಕೆ ಹಾತೊರೆಯುತ್ತಿದ್ದ ಸುಂದರವಾದ ಹುಡುಗಿಯರಿಗೆ ಕೊರತೆಯಿರಲಿಲ್ಲ. ವಿರಸ ದಾಂಪತ್ಯದಲ್ಲಿ ಸಿಕ್ಕಿ ಬಳಲುತ್ತಿದ್ದ ಒಬ್ಬ ವಿವಾಹಿತ ಹೆಣ್ಣಿನ ಪರಿಸ್ಥಿತಿಯಿಂದ ಲಾಭ ಪಡೆಯುವಂತಹ ಕೀಳಾದ ಯೋಚನೆಗಳು ಅವನ ತಲೆಗೆ ಎಂದೂ ಬರುತ್ತಿರಲಿಲ್ಲ. ಅವನು ಹೃದಯ ಬಿಚ್ಚಿ ತೋಡಿಕೊಂಡ ನಿಶ್ಚಯವು ಕೇವಲ ಮೊದಲ ನೋಟದ ಬಾಲಿಶ ಪ್ರೇಮದ ಆಕರ್ಷಣೆಯಿಂದ ಪ್ರೇರೇಪಿತವಾಗಿದ್ದೂ ಅಲ್ಲ. ವಿವಾಹಿತ ಹೆಣ್ಣೊಬ್ಬಳ ದಾಂಪತ್ಯದ ಅಳಿವು ಉಳಿವಿನ ತೀರ್ಮಾನವನ್ನು ಅವಳಿಗೇ ಬಿಟ್ಟು, ತನ್ನ ಯಾವ ಷರತ್ತನ್ನೂ ಹೇರದ, ಆಳವಾದ ಪ್ರೀತಿಯನ್ನು ಸೂಸುವ ಸಜ್ಜನಿಕೆ. ಅಣೆಕಟ್ಟು ಒಡೆದಂತೆ ಉಕ್ಕಿ ಬಂದ ಕಣ್ಣೀರಿನಿಂದ ತೋಯ್ದ ಧ್ವನಿಯಲ್ಲಿ ಹೇಳಿದಳು ನಿಯತಿ ''ನಿನ್ನಿಂದ ಇಂತಹ ವರವನ್ನು ಪಡೆಯುವ ಅರ್ಹತೆ ನನಗಿಲ್ಲ. ಈ ರೀತಿಯ ತ್ಯಾಗವನ್ನು ಬಯಸುವ ಅಧಿಕಾರವೂ ಇಲ್ಲ.'' ಜಯಂತನ ಧ್ವನಿಯಲ್ಲಿ ನವಿರಾದ ಹಾಸ್ಯ ''ಇದು ತ್ಯಾಗವೂ ಅಲ್ಲ, ವರವೂ ಅಲ್ಲ. ಮೆಮೋರಿಯಲ್ ವೀಕೆಂಡಿನಲ್ಲಿ ನೀನು ಕಣ್ಣೀರು ಹಾಕಿದ್ದು ನನ್ನ ಮೆಮೊರಿಯಲ್ಲಿ ಉಳಿದುಬಿಟ್ಟಿದೆಯಲ್ಲ.'' ಆ ದುಃಖದಲ್ಲೂ ನಗುಬಂತು ನಿಯತಿಗೆ. ''ನನ್ನ ಕಣ್ಣೀರಿಗೆ ಅಷ್ಟೊಂದು ಶಕ್ತಿ ಇದೆ ಎಂದು ಗೊತ್ತಿರಲಿಲ್ಲ. ಹಾಸ್ಯ ಬಿಡು. ಸಂದೀಪನೊಂದಿಗಿನ ಈ ವಿರಸದಾಂಪತ್ಯಕ್ಕೆ ಇನ್ನಾವ ಜೀವವೂ ಬಲಿಯಾಗುವುದು ಬೇಡ ಎಂದು ನಿರ್ಧರಿಸಿದ್ದೇನೆ. ಬ್ರಹ್ಮಚಾರಿಯಾಗೇ ಉಳಿದುಬಿಡುವುದು ನಿನ್ನ ಹಣೆಯಬರಹ ಎಂದು ನನಗೆ ದುಃಖವಾಗುತ್ತದೆ.'' ಅವಳ ಮಾತುಗಳ ಅರ್ಥವನ್ನು ಬಿಡಿಸಿ ಹೇಳುವ ಅಗತ್ಯ ಅವನಿಗೂ ಇರಲಿಲ್ಲ. ತನ್ನ ಪಾಲಿಗೆ ಬಂದಿದ್ದು ವಿಷವೇ ಆಗಿದ್ದರೂ ಇನ್ನೊಬ್ಬ ಹೆಣ್ಣಿನ ಪಾಲಿಗೆ ಸೇರಬಹುದಾದ ಪಂಚಾಮೃತವನ್ನು ಕಸಿದುಕೊಳ್ಳುವ ಸ್ವಾರ್ಥ ನಿಯತಿಯಲ್ಲಿಲ್ಲ ಎಂದು ಅವನಿಗೂ ಗೊತ್ತು. ಬೇರೆ ಬೇರೆ ದಾರಿಯಲ್ಲಿ ನಡೆಯುತ್ತ ಬಂದವರು ಮಧ್ಯದಲ್ಲೆಲ್ಲೋ ಸಂಧಿಸಿದ್ದರು. ಅವಳಿನ್ನೂ ತನ್ನ ಹೆಗಲ ಮೇಲಿನ ಭಾರವನ್ನು

ಇಳುಕಲು ತಯಾರಾಗಿರಲಿಲ್ಲ. ಕವಲೊಡೆದ ದಾರಿಯಲ್ಲಿ ಒಬ್ಬೊಬ್ಬರು ಒಂದೊಂದು ಕವಲಿನಲ್ಲಿ ಮುಂದೆ ನಡೆದರು.

ಮತ್ತೆರಡು ವರ್ಷಗಳು ಉರುಳಿದವು. ವಿವಾಹ ವಿಚ್ಛೇದನ ಕೇಳಿ ಸಂದೀಪನಿಂದ ಬೇರೆಯಾಗಲು ನಿಶ್ಚಯಿಸಿದ್ದಳು ನಿಯತಿ. ಜಯಂತನಿಗಿನ್ನೂ ಆ ವಿಷಯವನ್ನು ಹೇಳಿರಲಿಲ್ಲ. ಅಷ್ಟರಲ್ಲೇ ಜಯಂತನ ತಾಯಿ ಆಕಸ್ಮಿಕವಾಗಿ ಮೃತಳಾದಾಗ ಬೆಂಗಳೂರಿಗೆ ಹೋಗಿ ಒಂದು ತಿಂಗಳಿದ್ದು ವಾಪಸ್ ಬಂದ ಜಯಂತ್. ತಾಯಿಯ ಹೆಸರಿನಲ್ಲಿ 'ಲಲಿತಾ ಫೌಂಡೇಷನ್' ಎಂಬ ಸಂಸ್ಥೆಯನ್ನೂ ತೆರೆದ ಬಗ್ಗೆ ಹೇಳುತ್ತ ಇನ್ನೂ ಒಂದು ಗಂಭೀರವಾದ ವಿಷಯವನ್ನು ನಿನಗೆ ಹೇಳಬೇಕು ಎಂದ. ಅವನ ತಾಯಿ ಸತ್ತಿದ್ದು ಹೃದಯದ ಮೈಟ್ರಲ್ ವ್ಯಾಲ್ವಿಗೆ ಸಂಬಂಧಿಸಿದ ಒಂದು ರೀತಿಯ ಹೃದ್ರೋಗದಿಂದ. ಯಾವ ಕುರುಹೂ ಇಲ್ಲದಿರುವ ಆ ರೋಗ ವಂಶಪಾರಂಪರ್ಯವಾಗಿ ಬರುವ ಸಾಧ್ಯತೆಯಿರುವುದರಿಂದ ನೀವೂ ಎಲ್ಲಾ ಪರೀಕ್ಷೆಗಳನ್ನೂ ಮಾಡಿಸಿಕೊಳ್ಳಿ ಎಂದು ಅವನ ತಾಯಿಯ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ಡಾಕ್ಟರು ಬಲವಂತ ಮಾಡಿದ ಮೇಲೆ ಜಯಂತನೂ ಒಪ್ಪಿದ್ದ. ಅವನಿಗೂ ಅದೇ ಹೃದ್ರೋಗವಿದೆ ಎಂದು ಫಲಿತಾಂಶಗಳಿಂದ ಗೊತ್ತಾಗಿತ್ತು. ತಾಯಿಯ ಹಾಗೇ ಅವನೂ ಸಹ ಯಾವ ಕುರುಹುಗಳೂ ಇಲ್ಲದೇ, ಯಾವ ತೊಂದರೆಯೂ ಇಲ್ಲದೇ ಹಲವಾರು ವರ್ಷಗಳು ಬದುಕುವ ಸಾಧ್ಯತೆಯಿದೆ. ಆಕಸ್ಮಿಕವಾಗಿ ಹಾಗೇ ಯಾವಾಗ ಬೇಕಾದರೂ ಯಾವ ಎಚ್ಚರಿಕೆಯನ್ನೂ ಕೊಡದೆ ಬರುವ ಸಾವಿಗೆ ಬಲಿಯಾಗುವ ಸಾಧ್ಯತೆಯೂ ಇದೆ.

ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದ ನಿಯತಿಯನ್ನು ಸಂತೈಸುತ್ತ ಕ್ಷಮೆ ಬೇಡಿದ ಜಯಂತ್. "ಸಾರಿ. ನಿನಗೆ ನೋವುಂಟು ಮಾಡುವ ಉದ್ದೇಶ ನನಗಿಲ್ಲ. ಈ ವಿಷಯವನ್ನು ಹೇಳಿಕೊಳ್ಳಲು ನಿನಗಿಂತ ಆಪ್ತರು ಇನ್ಯಾರಿದ್ದಾರೆ." ಭವಿಷ್ಯವೇ ಅನಿಶ್ಚಿತತೆಯಿಂದ ಕೂಡಿರುವಾಗ ತಾನು ಯಾರನ್ನೂ ಮದುವೆಯಾಗುವ ಸಾಧ್ಯತೆಯಿಲ್ಲ ಎಂದು ಜಯಂತ್ ಹೇಳದಿದ್ದರೂ ಅದು ನಿಯತಿಗೆ ಅರ್ಥವಾಯಿತು. ಸಂದೀಪನಿಂದ ಬೇರೆಯಾಗಿದ್ದೇನೆ. ಅವನಿಂದ ವಿವಾಹ ವಿಚ್ಛೇದನೆ ಕೇಳಿದ್ದೇನೆ ಎಂದು ನಿಯತಿ ಜಯಂತನಿಗೆ ಹೇಳಲಿಲ್ಲ. ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಿದ್ದವರು ಮತ್ತೆ ಸಂಧಿಸಿದ್ದರು. ಕೊನೆಗೂ ಧೈರ್ಯ ಮಾಡಿ ಅವಳು ತನ್ನ ಹೆಗಲಿನ ಮೇಲಿನ ಹೊರೆಯನ್ನು ಕಳೆದುಕೊಂಡಿದ್ದಳು. ಅವನು ಇಳಿಸಲಾರದಂತ ಹೊಸದೊಂದು ಹೊರೆಯನ್ನು ಹೊತ್ತು ಬಂದಿದ್ದ. ಕವಲಾದ ದಾರಿಯಲ್ಲಿ ಒಬ್ಬೊಬ್ಬರು ಒಂದೊಂದು ಕವಲು ಹಿಡಿದು ಮತ್ತೆ ಬೇರೆಯಾಗಿ ನಡೆಯಲು ಶುರು ಮಾಡಿದರು.

ಲಲಿತಾ ಫೌಂಡೇಶನ್ ಮೂಲಕ ಏನೇನೋ ಸೇವಾಕಾರ್ಯಗಳನ್ನು ನಡೆಸುವ ಉದ್ದೇಶವಿದ್ದ ಜಯಂತ್ ಬೆಂಗಳೂರಿಗೆ ಹೋಗಿ ಕೆಲವು ವರ್ಷಗಳೇ ಆಗಿದ್ದವು. ಸಂದೀಪನಿಂದ ವಿವಾಹ ವಿಚ್ಛೇದನೆ ಪಡೆದು ತನ್ನ ಪಾಡಿಗೆ ತಾನಿದ್ದ ನಿಯತಿಯೂ ಸಂಗೀತ, ಸಾಹಿತ್ಯ, ಸ್ವಯಂಸೇವೆ ಎಂದು ಹಲವಾರು ಹವ್ಯಾಸಗಳನ್ನು ಹಚ್ಚಿಕೊಂಡಿದ್ದಳು. ವರ್ಷಕ್ಕೊಮ್ಮೆಯಾದರೂ ಬೆಂಗಳೂರಿಗೆ ಹೋಗಲು ಅವಳ ಮನಸ್ಸು ಹಾತೊರೆಯುತ್ತಿತ್ತು. ಅಲ್ಲಿದ್ದ ಬಹಳಷ್ಟು ಸಮಯವನ್ನು ಜಯಂತನೊಂದಿಗೇ ಕಳೆಯುತ್ತಿದ್ದಳು. ಕಳೆದುಹೋದ ದಿನಗಳ ಬಗ್ಗೆ ಇಬ್ಬರೂ ಮಾತಾಡುತ್ತಿರಲಿಲ್ಲ.

ಜಯಂತ್ ತನ್ನ ವೈಯುಕ್ತಿಕ ಆಸ್ತಿಯನ್ನೆಲ್ಲ ನಿಯತಿಯ ಹೆಸರಿಗೆ ಬರೆದು, ಲಲಿತಾ ಫೌಂಡೇಷನ್ನಿನ ಆಡಳಿತಾಧಿಕಾರವನ್ನೂ ಬಿಟ್ಟುಕೊಟ್ಟಿದ್ದ. ತನ್ನ ವಿಲ್ಲಿನೊಂದಿಗೇ ನಿಯತಿಗೆ ಬರೆದಿದ್ದ ಪತ್ರದಲ್ಲಿ "ನನ್ನ ನಿನ್ನ ಜೀವನದಲ್ಲಿ ಏನೆಲ್ಲ ನಡೆದಿರಬಹುದಾಗಿತ್ತು. ನಮ್ಮಿಬ್ಬರ ಮದುವೆಯೂ ಆಗಿ ಮಕ್ಕಳೂ ಆಗಬಹುದಿತ್ತೇನೋ. ಲಲಿತಾ ಫೌಂಡೇಷನ್ ನಿನಗೂ ನನಗೂ ಹುಟ್ಟಬಹುದಾಗಿದ್ದ ಮಗುವೆಂದೇ ತಿಳಿದುಕೋ. ನಿನ್ನೊಬ್ಬಳನ್ನೇ ಬಿಟ್ಟು ಹೋಗುವ ಕಠೋರ ಹೃದಯಿ ನಾನಲ್ಲ. ಗಟ್ಟಿಯಾಗಿಲ್ಲದ ಹೃದಯದ ಬಗ್ಗೆ ತಿಳಿಯುವ ಮೊದಲೇ ಅದನ್ನು ನಿನ್ನ ಮನೆಯಾಗಿ ಮಾಡಿದ್ದೆ. ಮನೆ ಎಲ್ಲೇ ಇದ್ದರೂ, ಹೇಗೇ ಇದ್ದರೂ ಅದಕ್ಕೊಂದು ಜೀವ ಕೊಡುವ ವ್ಯಕ್ತಿ ಇಲ್ಲದಿದ್ದರೆ ಮನೆ ಎಷ್ಟು ಗಟ್ಟಿಯಾಗಿದ್ದರೂ, ಎಷ್ಟೇ ಚೆಂದವಾಗಿದ್ದರೂ ಬೆಲೆಯಿರುತ್ತಿರಲಿಲ್ಲ. ಅರ್ಥವೂ ಇರುತ್ತಿರಲಿಲ್ಲ. ಮನೆಗೊಂದು ಜೀವ ಕೊಟ್ಟವಳು ನೀನು. ಸುಖವಾಗಿರು ಎಂದೇ ನನ್ನ ಆಶಯ."

"ಗಟ್ಟಿಯಾಗಿಲ್ಲದ ಹೃದಯದ ಬಗ್ಗೆ ತಿಳಿಯುವ ಮೊದಲೇ ಅದನ್ನು ನಿನ್ನ ಮನೆಯಾಗಿ ಮಾಡಿದ್ದೆ." ಎನ್ನುವ ವಾಕ್ಯವನ್ನು ಮೇಲಿಂದ ಮೇಲೆ ಓದಿದ ನಿಯತಿ ಯೋಚಿಸಿದಳು – ಜಯಂತ ತನ್ನ ಹೃದಯವನ್ನು ನನ್ನ ಮನೆಯಾಗಿ ಮಾಡಿದ್ದ ಎಂದು ಹೇಳುತ್ತಿದ್ದಾನೋ ಅಥವಾ ಅವನ ಹೃದಯವನ್ನು ನಾನು ಮನೆಯಾಗಿ ಮಾಡಿಕೊಂಡಿದ್ದೆ ಎಂದು ಹೇಳುತ್ತಿದ್ದಾನೋ. ಎರಡೂ ನಿಜವಲ್ಲವೇ. ಎದೆಯಲ್ಲಿ ಮೂಡಿದ್ದ ರಂಧ್ರದ ಅರಿವು ಇನ್ನೂ ಆಗುತ್ತಿತ್ತು. ಜಯಂತನಿದ್ದ ಜಾಗದಲ್ಲೇ ಅದು ಮೂಡಿರುವುದು ಎಂದು ಅವಳಿಗೆ ಯಾವ ಸಂಶಯವೂ ಇಲ್ಲ. ಅವಳೀಗ ಜೀವನವಿಡೀ ಜೋತುಬಿದ್ದಿದ್ದ ತನ್ನ ಕನಸಿನ 'ಆ ಇನ್ನೊಂದು ಕಡೆ'ಯನ್ನು ಕಾಣಲು ಶುರು ಮಾಡಿದ್ದಳು. ಅವಳಿಗೆ ಅಲ್ಲೊಂದು ಸುಂದರವಾದ ಮಳೆಬಿಲ್ಲು ಕಾಣುತ್ತಿತ್ತು. ತಾನೂ ಅಲ್ಲಿಗೆ ಹೋಗಿ ಜಯಂತನನ್ನು ಸೇರುವ ಹೊಸ ಕನಸಿಗೆ ಜೋತುಬೀಳುವುದರಲ್ಲೇ ಹಿತವಿದೆ ಎನಿಸಿತು. ◈



# ದಕ್ಷಿಣಾಪಥೇಶ್ವರ

**ರವೀಂದ್ರ ವಿಶ್ವನಾಥ್**
ಮಿಲ್ಪೀಟಸ್, ಕ್ಯಾಲಿಫೋರ್ನಿಯ

ನನ್ನ ಹೆಸರು ಸೂರ್ಯ ಶರ್ಮ. ಈ ಕತೆಯ ಪ್ರಾರಂಭದ ಕಾಲದಲ್ಲಿ ನಾನು ಕರ್ನಾಟ ದೇಶದ ವಾತಾಪಿನಗರಿಯಲ್ಲಿ ವಾಸವಾಗಿದ್ದೆ. ನಮ್ಮ ತಾತ ಮುತ್ತಾತಂದಿರು ವೈದಿಕ ಬ್ರಾಹ್ಮಣರಾಗಿದ್ದರಂತೆ. ಚಾಳುಕ್ಯವಂಶದ ಪುಲಿಕೇಶಿಯು ಕದಂಬರನ್ನು ಅವರ ರಾಜಧಾನಿಯಾದ ವೈಜಯಂತಿನಗರಿಯಲ್ಲಿ ಸೋಲಿಸಿ ಚಾಳುಕ್ಯ ಅರಸುತನವನ್ನು ಸ್ಥಾಪಿಸಿದ್ದನ್ನು ನಮ್ಮ ಅಜ್ಜ ಪ್ರತ್ಯಕ್ಷವಾಗಿ ಕಂಡಿದ್ದರಂತೆ. ನಮ್ಮ ಅಜ್ಜ ಕೊನೆಯವರೆಗೂ ಆ ಪಾಳುಬಿದ್ದ ವೈಜಯಂತಿನಗರದಲ್ಲೇ ಇದ್ದರಂತೆ. ನಮ್ಮ ತಂದೆ ಆ ಊರನ್ನು ಬಿಟ್ಟು ವಾತಾಪಿನಗರಕ್ಕೆ ಬಂದರಂತೆ.

ಆಗ ಹಿಂದಿನ ಮಹಾರಾಜನಾದ ಕೀರ್ತಿವರ್ಮನ ಮರಣದ ಸಮಯದಲ್ಲಿ ಯುವರಾಜ ಎರೆಯ ಬಹಳ ಚಿಕ್ಕವನಾದ ಕಾರಣ ಮಹಾರಾಜ ಕೀರ್ತಿವರ್ಮನ ತಮ್ಮನಾದ ಮಂಗಳೇಶ ರಾಜ್ಯವಾಳುತ್ತಿದ್ದ. ಗುರ್ಜರಪ್ರದೇಶದ ಕಳಚೂರಿನಗರದ ರಾಜ ಬುದ್ಧಿರಾಜ, ರೇವತೀ ದ್ವೀಪದ ಪಾಳೆಯಗಾರ ಸ್ವಾಮಿರಾಜ ಮತ್ತಿತರರನ್ನು ಪರಾಜಯ ಗೊಳಿಸಿ, ಅವರನ್ನು ಚಾಳುಕ್ಯರ ಆಧೀನರಾಗಿಸಿ, ಊರುರಣಪರಾಕ್ರಮ, ರಣವಿಕ್ರಮ, ಪರಮಭಾಗವತನೆಂಬ ಬಿರುದುಗಳನ್ನು ಹೊಂದಿ ವಾತಾಪಿನಗರಿಯಲ್ಲಿ ವೈಷ್ಣವ ದೇವಾಲಯವೊಂದನ್ನು ಕಟ್ಟಿಸಿದ ಮಂಗಳೇಶ ಮಹಾರಾಜನು ಯುವರಾಜ ಎರೆಯ ವಯಸ್ಸಿಗೆ ಬಂದಾಗ ಸಿಂಹಾಸನ ಬಿಟ್ಟುಕೊಡಬೇಕಾಗಿದ್ದರೂ, ಅಧಿಕಾರದ ಮದವು ಅವನ ತಲೆಗೇರಿ ತನ್ನ ಮಗನಾದ ಸುಂದರವರ್ಮನನ್ನು ಸಿಂಹಾಸನಕ್ಕೇರಿಸುವ ಕುಯೋಜನೆ ಹೂಡಿದ್ದು ಯುವರಾಜ ಎರೆಯನಿಗೆ ತಿಳಿದುಬಂದು, ಯುವರಾಜನು ತನ್ನ ಸ್ವಾಭಾವಿಕ ದಕ್ಷತೆಯಿಂದ ಅವರಿಬ್ಬರನ್ನೂ ನಿರ್ಮೂಲ ಮಾಡಿ, ಪುಲಿಕೇಶಿ ಎಂಬ ಬಿರುದನ್ನು ಹೊತ್ತು, ತಾನೇ ಸಿಂಹಾಸನವನ್ನೇರಿದ್ದು ಚಿರಪರಿಚಿತ ಕತೆಯಾಗಿತ್ತು.

ವಯಸ್ಸು ಸುಮಾರು ಏಳೆಂಟು ಆಗಿದ್ದಾಗ ಪರಂಪರೆಯಾನುಸಾರವಾಗಿ ನನ್ನನ್ನು ಗುರುಕುಲಕ್ಕಟ್ಟಲಾಯಿತು. ಅಲ್ಲಿ ನಮ್ಮ ಸಂಪ್ರದಾಯದಂತೆ ನನ್ನ ವಿದ್ಯಾಭ್ಯಾಸ ನಡೆಯಿತು. ಸಂಸ್ಕೃತ, ವೇದ–ಪುರಾಣಗಳು ಹಾಗು ವೇದಾಂತ–ಮೀಮಾಂಸೆಗಳ ವಿಷಯಗಳಲ್ಲಿ ಶಿಕ್ಷಣಪಡೆದೆ. ಹೀಗೇ ಹಲವಾರು ಸಂವತ್ಸರಗಳು ಕಳೆದವು. ಸುಮಾರು ಹದಿನಾರರವಯಸ್ಸಿರಬಹುದು; ಗುರುಗಳು ನಾನು ಗುರುಕುಲದಿಂದ ಹೊರಹೋಗಲು ಸಮರ್ಥನಾಗಿರುವೆ ಎಂದು ಹೇಳಿ ಕಳುಹಿಸಿಕೊಟ್ಟರು. ನಾನು ವಾತಾಪಿನಗರಕ್ಕೆ ಹಿಂತಿರುಗಿದೆ. ಬಾಲಕನಾಗಿದ್ದಾಗ ನೋಡಿದ್ದು ಬಿಟ್ಟರೆ, ನಾನು ಕಾಣದ ಊರದು, ಎಲ್ಲವೂ ಹೊಸದು. ನಮ್ಮ ತಂದೆಯವರಿಗೆ ನಾನೂ ಅವರಂತೆ ವೈದಿಕ ಕಾರ್ಯ ನಿರ್ವಹಣೆ ನಡೆಸಿಕೊಂಡು, ವಿವಾಹ ಮಾಡಿಕೊಂಡು ವಾತಾಪಿಯಲ್ಲೇ ನೆಲೆಸಬೇಕೆಂಬ ವಿಚಾರ. ಆಗ ನಾನಿನ್ನೂ ಯುವಕ, ಮೇಲಾಗಿ ನನಗೆ ತಲೆಮಾರುಗಳಿಂದ ಬಂದಿದ್ದ ಬ್ರಹ್ಮವಿದ್ಯೆಯನ್ನು ಮುನ್ನಡೆಸುವ ವಿಶೇಷ ಆಸೆಯೇನು ಇರಲಿಲ್ಲ. ದೇಶ ಸುತ್ತುವ ಸ್ವಾಭಾವಿಕ ಆಸೆ, ಏನಾದರೂ ಬೇರೆ ಕಾಯಕ ನಡೆಸಿ ಪದವಿ, ಹೊನ್ನು ಗಳಿಸುವ ಆಸೆ.

ಹೀಗೇ ಯೋಚಿಸುತ್ತ ಒಂದು ದಿನ ಊರಾಚೆ ಹೋಗಿ ಕಾಡಿನಲ್ಲಿ ಚಿಂತೆ ಮಾಡುತ್ತ ಕುಳಿತಿದ್ದೆ. ಹಾಗೆ ಕುಳಿತಿದ್ದಾಗ ಪ್ರಾಣಿಯೊಂದು ನಡೆದು ಹೋಗುತ್ತಿರುವ ಧ್ವನಿ ಕೇಳಿಸಿತು. ಕುಳಿತಲ್ಲೇ ಕುಳಿತು ಕತ್ತು ತಿರುಗಿಸಿ ನೋಡಿದರೆ ವ್ಯಾಘ್ರವೊಂದು ನೀರು ಕುಡಿಯಲು ಸರೋವರದ ಕಡೆ ಹೊರಟಿತ್ತು. ಅದರ ಸ್ವಲ್ಪ ಹಿಂದೆಯೇ ವ್ಯಕ್ತಿಯೊಬ್ಬ ಬಿಲ್ಲು ಬಾಣಗಳನ್ನು ಹಿಡಿದು ಅದರ ಮೇಲೆ ಗುರಿಯಿಟ್ಟು ಅದನ್ನೇ ಹಿಂಬಾಲಿಸಿ ಹೋಗುತ್ತಿದ್ದದ್ದು ಕಾಣಿಸಿತು.

ಗುರುಕುಲದ ವಿದ್ಯಾಭ್ಯಾಸದಲ್ಲಿ ನಾನು ಕಲಿತ ಒಂದು ಪಾಠವೆಂದರೆ ಪ್ರಕೃತಿಸೃಷ್ಟಿಗಳ ರಕ್ಷಣೆ. ಆ ಪಾಪದ ಪ್ರಾಣಿಯನ್ನು ಸಾಯಲು ಬಿಡುವವ ನಾನಾಗಿರಲಿಲ್ಲ. ನಾನು ಮರದ ಮರೆಯಲ್ಲಿದ್ದೆಯಾದ್ದರಿಂದ ಆ ಮನುಷ್ಯನ ಕಣ್ಣಿಗೆ ನಾನು ಕಾಣಿಸಿರಲಿಲ್ಲ. ವ್ಯಾಘ್ರ ನನ್ನ ಪಕ್ಕದಿಂದ ಸುಳಿದಾಗ ನಾನು ಅದರ ಮೇಲೆ ನೆಗೆದೆ. ಅದಕ್ಕೆ ಆಶ್ಚರ್ಯವಾಯಿತಾದರೂ ಅದು ಹೋರಾಡ ತೊಡಗಿತು. ಹೋರಾಟದಲ್ಲಿ ನನ್ನನ್ನು ಬಗರಿ ಓಡಿಹೋಯಿತು. ನೋವಿನಿಂದ ನರಳುತ್ತ ಬಿದ್ದಿದ್ದಲ್ಲೇ ಬಿದ್ದಿದ್ದೆನಾದರೂ ವ್ಯಾಘ್ರದ ಜೀವ ಉಳಿಸಿದ ತೃಪ್ತಿಯ ಭಾವ ನನ್ನಲ್ಲಿ ಹರಿಯಿತು. ಆದರೆ ನಾನು ಹುಲಿಯನ್ನು ಅಟ್ಟಿ ಬಂದ ಆ ಮನುಷ್ಯನನ್ನು ಗಮನಿಸಿರಲಿಲ್ಲ. ಕೋಪದಿಂದ ನನ್ನ ಬಳಿ ದುರುದುರನೆ ನಡೆದು ಬಂದ ಆತ ಬಹಳ ಎತ್ತರವಾಗಿದ್ದು, ತೆಳುವಾದ, ಎಲುಬು ಕಾಣುವಂತಹ ಮೈಕಟ್ಟು ಹೊಂದಿದ್ದ. ಅವನ ಮುಖದಲ್ಲಿ ಕಠಿಣ, ನಿಷ್ಠುರ ರೇಖೆಗಳಿದ್ದವು; ರಕ್ತದಂತೆ ಕೆಂಪಾಗಿದ್ದ ಗರುಡನಂಥಹ ಕಣ್ಣುಗಳು. ಅವನ ದಟ್ಟವಾದ ಒರಟಾದ ತಲೆಗೂದಲು ಅವನ ಮುಖದಸುತ್ತ ಚದುರಿ ಅವನಿಗೇ ವ್ಯಾಘ್ರನ ರೂಪ ಕೊಟ್ಟಿದ್ದವು. ಅವನ ಎದೆಯ

ಮೇಲೆ ಒಂದು ವರಾಹದ ಲಾಂಛನವಿತ್ತು. ಸಮೀಪ ಬಂದು ಘರ್ಜಿಸಿದ:

“ನಮ್ಮ ಬೇಟೆಯನ್ನು ತಪ್ಪಿಸಲು ಎಷ್ಟು ಧೈರ್ಯವೋ ನಿನಗೆ? ನಾವು ಯಾರೆಂದು ಬಲ್ಲೆಯಾ?”

ಹಾಗೂ ಗೋವಿಂದರೆಂಬ ದಂಗೆಯೆದ್ದ ಪಾಳೆಯಗಾರರನ್ನು ಸದೆಬಡೆದು ಅವರು ಕಪ್ಪ ಸಲ್ಲಿಸುವಂತೆ ಮಾಡಿದವ. ವೈಜಯಂತಿಯ ಕದಂಬರನ್ನು ಪೂರ್ಣ ನಿರ್ಮೂಲ ಮಾಡಿ, ನಂತರ ತಲಕಾಡಿನ ಗಂಗರನ್ನು ಹಾಗು ಕರಾವಳಿಯ ಆಳುಪರನ್ನು ಯುದ್ಧದಲ್ಲಿ ಸೋಲಿಸಿ ಸಾಮಂತರನ್ನಾಗಿಸಿದವ.

***ಚಿತ್ರ: ಸೌಜನ್ಯ ಕೇಣಿ***



ನಾನು ವಿನಯದಿಂದಾದರೂ ಸ್ವಲ್ಪ ಹೆಮ್ಮೆಯಿಂದ ಉತ್ತರಿಸಿದೆ “ನೀನು ಯಾರಾದರೇನು? ಆ ಮೂಕವ್ಯಾಘ್ರನನ್ನು ಕೊಲ್ಲುವ ಹಕ್ಕು ನಿನಗಿಲ್ಲ. ಆ ಕಾರಣದಿಂದ ನಾನು ಅದಕ್ಕೆ ಓಡಿಹೋಗಲು ದಾರಿ ಮಾಡಿಕೊಟ್ಟೆ.”

ಅವನಿಗೆ ಕೋಪ ಇನ್ನಷ್ಟು ಹೆಚ್ಚಾಯಿತು. ಅಷ್ಟು ಹೊತ್ತಿಗೆ ಕಾಡಿನಲ್ಲಿ ಯಾರೋ ಬರುತ್ತಿದ್ದ ಸದ್ದು ಕೇಳಿಸಿತು. ಆತ ಒದರಿದ “ಯಾರಲ್ಲಿ?”

ಕೆಲವೇ ಕ್ಷಣಗಳಲ್ಲಿ ಇಬ್ಬರು ರಾಜ ಭಟರು ಬಂದು ಆತನಿಗೆ ಬಾಗಿ ಆದರ ತೋರಿ “ಅಪ್ಪಣೆ ಮಹಾರಾಜ” ಎಂದರು. ಮಹಾರಾಜನ ತಂಡದ ಉಳಿದವರು ಒಬ್ಬೊಬ್ಬರಾಗಿ ಪ್ರತ್ಯಕ್ಷರಾಗಲು ಆರಂಭಿಸಿದರು.

ನನಗಾಗ ಹೊಳೆಯಿತು. ಈತ ಮಹಾರಾಜ ಪುಲಿಕೇಶಿ – ವ್ಯಾಘ್ರನ ಕೇಶ ಉಳ್ಳವನು. ಸಿಂಹಾಸನವನ್ನೇರಿದಮೇಲೆ ಈತ ಅಪ್ಪಾಯಿಕ

ಕೊಂಕಣ ಕರಾವಳಿ ಹಾಗು ಪುರಿ ಬಂದರನ್ನು ಸಮುದ್ರ ಕಾಳಗದ ನಂತರ ಗೆದ್ದವ. ಲಾಟರು, ಗುರ್ಜರರು ಹಾಗು ಮಾಳವರನ್ನು ಪೂರ್ಣ ಸದೆಬಡೆದು ದಕ್ಷಿಣಾಪಥಕ್ಕೇ ಅಧಿಪತಿಯಾದಂತವ. ಕೆಲವೇ ಸಂವತ್ಸರಗಳ ಹಿಂದೆ ಮಹಾರಾಜನು ಪಲ್ಲವ ಚಕ್ರವರ್ತಿ ಮಹೇಂದ್ರವರ್ಮನ ತಾಣವಾದ ಕಾಂಚೀಪುರಕ್ಕೆ ಧಾಳಿಯಿಟ್ಟು, ಪುಳ್ಳಲೂರಿನ ಯುದ್ಧದಲ್ಲಿ ಪಲ್ಲವರನ್ನು ಸೋಲಿಸಿ ಮಹೇಂದ್ರವರ್ಮನು ಕಾಂಚೀಪುರದ ಕೋಟೆಯೊಳಗೆ ಅಡಗಿಕೊಳ್ಳುವ ಪರಿಸ್ಥಿತಿ ಬಂದಾಗ, ಆ ಕೋಟೆಗೆ ಧಾಳಿಯಿಟ್ಟು, ಕಾಂಚೀನಗರದೊಳಗೆ ಹೊಕ್ಕು, ಅಲ್ಲಿ ಪಲ್ಲವರನ್ನು ಸದೆಬಡೆದು, ಅವರನ್ನೂ ಕಪ್ಪ–ಕಾಣಿಕೆ ಸಲ್ಲಿಸಲು ಒತ್ತಾಯ ಮಾಡಿದವ. ನಾನು ಇಂತಹ ಮಹಾರಾಜನ ಬೇಟೆ ತಪ್ಪಿಸಿದ್ದೆ! ನನಗೇನು ಕಾದಿತ್ತೋ ಯೋಚನೆ ಮಾಡಲು ಭಯವಾಗುತ್ತಿತ್ತು.

ಇಷ್ಟೆಲ್ಲ ಯೋಚನೆ ಮಾಡಲು ನನಗೆ ಕೆಲವೇ ಕ್ಷಣಗಳ ಸಮಯ ಬೇಕಾಗಿದ್ದದ್ದು. ನನಗಷ್ಟೂ ಸಮಯ ಕೊಡದೆ ಮಹಾರಾಜನು “ಇವನನ್ನು ಒಯ್ದು ಕಾರಾಗೃಹಕ್ಕೆ ತಳ್ಳಿ”

ಎಂದು ಹೇಳಿ ಹೊರಟು ಹೋದನು.

ಭಟರು ನನ್ನನ್ನು ಸರಪಣಿಗಳಿಂದ ಕಟ್ಟಿಹಾಕಿ ಒಂದು ಕತ್ತಲೆ ಕಾರಾಗೃಹಕ್ಕೆ ತಳ್ಳಿ ಬಾಗಿಲನ್ನು ಮುಚ್ಚಿದರು. ಆ ಕಾರಾಗೃಹದಲ್ಲಿ ಎಷ್ಟು ಹೊತ್ತು ಕಳೆಯಿತೋ ಏನೋ ಒಂದೂ ಹೇಳಲಾರೆ. ಆ ಕತ್ತಲೆ ಕೋಣೆಯಲ್ಲಿ ಹಗಲಿಲ್ಲ, ರಾತ್ರಿಯಿಲ್ಲ. ಮೂಷಕಗಳು ಎಲ್ಲೆಡೆ ಓಡಾಡುತ್ತಿದ್ದವು. ವ್ಯಾಘ್ರ ಮಾಡಿದ ಗಾಯಗಳಿಂದ ಪೀಡೆ ಹೆಚ್ಚಾಗಿತ್ತು. ಊಟ ಮಾಡಿದ್ದೇ ನೆನಪಿಲ್ಲ. ನನ್ನ ಯೋಜನೆಗಳು, ಸ್ವಪ್ನಗಳು ಭಂಗವಾದವೆಂದುಕೊಳ್ಳುತ್ತ ಅದೃಷ್ಟದೇವಿಯನ್ನು ದೂರತೊಡಗಿದೆ. ಕೊನೆಗೊಮ್ಮೆ ಭಟರು ಬಂದು ನನ್ನ ಕಣ್ಣುಗಳನ್ನು ಕಟ್ಟಿ ನನ್ನನ್ನು ಎಲ್ಲಿಗೋ ಕರೆದೊಯ್ದರು. ಯಾವುದೋ ಸುರಂಗ ಮಾರ್ಗಗಳಲ್ಲಿ ಹೋದ ಅನಿಸಿಕೆ. ಕೊನೆಗೆ ಮತ್ತಾವುದೋ ಸ್ಥಳದಲ್ಲಿ ನನ್ನನ್ನು ಕೂರಿಸಿ ಭಟರು ಹೊರಟು ಹೋದರು.ಸ್ವಲ್ಪ ಸಮಯದ ನಂತರ ನನ್ನ ಕಣ್ಣಿನ ಕಟ್ಟು ಬಿಚ್ಚಲಾಯಿತು. ದೀಪದ ಬೆಳಕಿದ್ದ ಒಂದು ವಿಶಾಲವಾದ ಕೋಣೆಯಲ್ಲಿದ್ದೆ. ಕೋಣೆಗೆ ಯಾವ ಬೆಳಕಿಂಡಿಗಳಿರುವುದು ಕಾಣಿಸಲಿಲ್ಲವಾದರೂ ರಾತ್ರಿ ಹೊತ್ತಿರಬಹುದೆನಿಸಿತು. ನೆಲಮಾಳಿಗೆಯ ಕೋಣೆ ಇರಬಹುದೆಂದುಕೊಂಡೆ. ರಾಜಸೇವಕರು ತಿನ್ನಲು ಒಂದಿಷ್ಟು ಫಲಗಳು ಹಾಗು ಬೇರೆ ಆಹಾರಗಳನ್ನು ನನ್ನ ಮುಂದೆ ಇರಿಸಿದರು. ಹೊಟ್ಟೆ ಹಸಿವಾದರಿಂದ ಆ ಫಲಗಳನ್ನು ಭಕ್ಷಿಸಿದೆ. ಏನು ನಡೆಯುತ್ತಿದೆಯೆಂದು ಯೋಚಿಸಬೇಕೆಂಬ ವಿಚಾರ ಇನ್ನೂ ನನ್ನ ಬುದ್ಧಿಗೆ ಹೊಳೆದಿರಲಿಲ್ಲ, ಅಷ್ಟುಹೊತ್ತಿಗೆ ಸ್ವತಃ ಮಹಾರಾಜನೇ ಮತ್ತೊಬ್ಬ ವಯಸ್ಸಾದ ವ್ಯಕ್ತಿಯೊಂದಿಗೆ ಅಲ್ಲಿಗೆ ಬಂದ. ಇಬ್ಬರು ನನ್ನೆದುರಿಗೆ ಕುಳಿತರು.ಮಹಾರಾಜ ಸ್ವಲ್ಪ ಶಾಂತವಾಗಿದ್ದರೂ ಇನ್ನೂ ಕೋಪದಿಂದಲೇ ಹೇಳಿದ "ನಮ್ಮ ಗುರಿ ಆ ವ್ಯಾಘ್ರನ ಮೇಲಿತ್ತು. ನೀನು ಅದರೊಡನೆ ಹೋರಾಡುತ್ತಿದ್ದಾಗಲೂ ನಿನ್ನನ್ನೂ, ಅದನ್ನೂ ಕೊಲ್ಲುವ ಸಾಮರ್ಥ್ಯವಿದೆ ನಮ್ಮಲ್ಲಿ."

ನಾನು ಪೆಚ್ಚಾದರೂ, ಉತ್ತರಿಸಲಿಲ್ಲ. ಮಹಾರಾಜನೇ ಮತ್ತೂ ಸ್ವಲ್ಪ ಶಾಂತನಾಗಿ ಹೇಳಿದ "ಮೈ ಮೇಲೆ ಒಂದು ಪಂಚೆ ಧರಿಸಿರುವ ನಿಃಶಕ್ತ ಬ್ರಾಹ್ಮಣ ನೀನು. ಆ ವ್ಯಾಘ್ರನ ಮೇಲೆ ಹಾರಲು ಭಯವಾಗಲಿಲ್ಲವೇ ನಿನಗೆ?"

ಈಗ ಸ್ವಲ್ಪ ಗತ್ತಿನಿಂದಲೇ ಹೇಳಿದೆ "ಭಯವಾಯಿತು. ಯಾರಿಗೆ ವ್ಯಾಘ್ರನ ಮೇಲೆ ಹಾರಿ ಅದರೊಡನೆ ಸೆಣೆಸಾಡಲು ಭಯವಾಗುವುದಿಲ್ಲ? ಆದರೂ ಅದನ್ನು ಬದುಕಿಸುವ ಹೊಣೆ ಆ ಕ್ಷಣದಲ್ಲಿ ನನ್ನದಾಗಿತ್ತು ಎನಿಸಿತು. "

ಮಹಾರಾಜ ಹೇಳಿದ "ನಮಗೆ ಭಯವಾಗುವುದಿಲ್ಲ. "

ಸ್ವಲ್ಪ ಹೊತ್ತು ಮೌನ. ಮತ್ತೆ ಮಹಾರಾಜನೇ ನುಡಿದ "ನಿನ್ನ ಧ್ಯೇಯದಲ್ಲಿ ನಿನಗಷ್ಟು ನಂಬಿಕೆಯೆ? "

ನಾನು ಹೇಳಿದೆ "ಮಹಾರಾಜ, ನನ್ನ ಜೀವನದಲ್ಲಿ ಕಲಿತಿರುವ ಒಂದು ಪಾಠ ನನ್ನ ಕೈಯಲ್ಲಿ ಸಾಧ್ಯವಾದಾಗ ಪ್ರಕೃತಿಯ ಸೊಬಗಿನ ರಕ್ಷಣೆ. "

ಮಹಾರಾಜ ಪ್ರತ್ಯುತ್ತರಿಸಿದ "ಆ ವ್ಯಾಘ್ರ ಪ್ರಕೃತಿಯ ಸೊಬಗೆ? ಅದಕ್ಕೆ ಸಾಧ್ಯವಾಗಿದ್ದಿದ್ದರೆ ನಿನ್ನನ್ನೂ ತಿಂದುಬಿಡುತ್ತಿತ್ತು. "

ನಾನು ಹೇಳಿದೆ "ಅದು ನನ್ನನ್ನು ತಿಂದಿದ್ದರೂ ಅದನ್ನು ಬದುಕಿಸಲು ಪ್ರಯತ್ನಿಸುತ್ತಿದ್ದೆ. ಅದನ್ನು ವಿನಾ ಕಾರಣ ಕೊಲ್ಲುವ ಅನುಮತಿ ಮನುಷ್ಯನಿಗಿಲ್ಲ. "

"ಮಹಾಮಂತ್ರಿಗಳೆ..." ಕೆಲವು ಕ್ಷಣಗಳ ಕಾಲ ಯೋಚಿಸಿ, ಮಹಾರಾಜ ನುಡಿದ.

ಪಕ್ಕ ಕುಳಿತಿದ್ದ ವ್ಯಕ್ತಿ ಈಗ ನುಡಿದರು "ಯುವಕ, ನಿನಗೆ ನಿನ್ನ ಮಾತೃಭೂಮಿಯಲ್ಲಿ ಎಷ್ಟು ಭಕ್ತಿ ಇದೆ? "

ನಾನು ಹೇಳಿದೆ "ನನ್ನ ಮಾತೃಭೂಮಿಗೆ ಪ್ರಾಣವನ್ನೂ ಕೊಡಬಲ್ಲೆ."

"ಆ ವ್ಯಾಘ್ರನನ್ನು ಕಾಪಾಡುವ ಧ್ಯೇಯದಲ್ಲಿದ್ದ ನಂಬಿಕೆಯೇ ಮಾತೃಭೂಮಿಯನ್ನು ಕಾಪಾಡುವುದರಲ್ಲೂ ಇದೆಯೆ? " ಎಂದು ಕೇಳಿದರು. ನಾನು ಇದೆ ಎನ್ನುವಂತೆ ತಲೆದೂಗಿದೆ. "ಹಾಗಾದರೆ ಮಹಾರಾಜನಿಗೆ ರಾಜ್ಯಾಡಳಿತ ಹಾಗು ರಾಜ್ಯ ಸಂರಕ್ಷಣೆಯಲ್ಲಿ ಸಹಾಯ ಮಾಡುವೆಯಾ? " ಎಂದರು.ನನಗೀಗ ನನ್ನ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಕಾಣಿಸತೊಡಗಿತು. "ಮಾಡುವೆ – ಏನು ಮಾಡಬೇಕು?" ಎಂದೆ.

ಈಗ ಮಹಾರಾಜ ನುಡಿದ "ಮಹಾಮಂತ್ರಿಗಳೇ, ನಾಳೆಯೇ ಈತನು ಮಹಾರಾಜರ ಬೇಟೆ ಅಡ್ಡಪಡಿಸಿದ ಕಾರಣ ಈತನ ಶಿರ ಕಡಿಸುವ ಶಿಕ್ಷೆ ವಿಧಿಸಲಾಗಿರುವುದನ್ನು ಡಂಗೂರ ಹೊಡೆಸಿ."

ನಾನು ತಬ್ಬಿಬ್ಬಾಗುತ್ತಿದ್ದಂತೆ ಮಹಾಮಂತ್ರಿಗಳು ನುಡಿದರು "ಹೆದರಬೇಡ ಯುವಕ, ನೀನು ಗೂಢಚಾರನಾಗಬೇಕಾದರೆ ನೀನು ಮಾಯವಾಗಬೇಕು. ಯಾರೂ ನಿನ್ನನ್ನು ಗುರುತಿಸಬಾರದು. ಇದಕ್ಕೆ ನಿನಗೆ ಮರಣದಂಡನೆ ವಿಧಿಸಲಾಗಿದೆ ಎಂದು ಡಂಗೂರ ಹೊಡೆಸುವುದಕ್ಕಿಂತ ಒಳ್ಳೆಯ ಉಪಾಯ ಬೇರಿಲ್ಲ."

ಮಹಾರಾಜ ನುಡಿದ "ಮಹಾಮಂತ್ರಿಗಳೇ, ನಾಳೆಯೇ ಈ

ಯುವಕನ ಗೂಢಚಾರ ಶಿಕ್ಷಣ ಪ್ರಾರಂಭವಾಗಲಿ."

ಇಬ್ಬರೂ ಕೋಣೆ ಬಿಟ್ಟು ಹೊರಟು ಹೋದರು. ನನ್ನನ್ನು ಮತ್ತೆ ಕಣ್ಣು ಕಟ್ಟಿ ನನ್ನ ಕಾರಾಗೃಹಕ್ಕೆ ಕಳುಹಿಸಲಾಯಿತು. ನಾನು ಬರುವ ಮುಂಜಾವನ್ನು ಕಾಯ್ದು ಕುಳಿತೆ. ನನ್ನ ದೇಶ ಸುತ್ತುವಾಸೆ ಈ ನೆವದಲ್ಲಾದರೂ ಪೂರೈಸಬಹುದೆಂದು ಯೋಚಿಸುತ್ತ ಕಾಲ ಕಳೆದುಹೋಯಿತು.

ಮರುದಿನ ಏನಾಯಿತೆಂಬುದು ನಾನು ಊಹಿಸಬಲ್ಲನಾಗಿದ್ದೆ. ನನಗೆ ಮರಣದಂಡನೆ ವಿಧಿಸಲಾಗಿರುವುದಾಗಿ ಡಂಗೂರ ಸಾರಿರಬೇಕು. ನೆರೆಹೊರೆಯವರೆಲ್ಲ ನಾನಿನ್ನು ಬದುಕಿಲ್ಲ ಎಂದುಕೊಂಡಿರಬೇಕು. "ಓಹ್! ಹೇಗಾದರೂ ಮನೆಗೆ ನನ್ನ ನಿಜ ಸಂಗತಿಯ ಬಗ್ಗೆ ಸಂದೇಶ ತಲುಪಿಸಬೇಕು" ನನಗೆ ನಾನೇ ಹೇಳಿಕೊಂಡೆ. ನನಗೆ ಮರಣದಂಡನೆ ವಿಧಿಸಲಿಲ್ಲವಾದರೂ ನನ್ನನ್ನು ಕರೆದೊಯ್ಯಲು ಯಾರೂ ಬರಲಿಲ್ಲ. ನನ್ನ ಕಾತರ ಹೆಚ್ಚಾಗತೊಡಗಿತು. ನಾನು ರಾಜ, ಮಹಾಮಂತ್ರಿಗಳೊಡನೆ ಮಾತನಾಡಿದ್ದು ಕನಸೋ ನನಸೋ ಎಂದು ಯೋಚಿಸತೊಡಗಿದೆ. ಎಷ್ಟು ಹೊತ್ತು ಕಳೆದಿತ್ತೋ ನನಗೆ ತಿಳಿಯದು. ಏನೊ ಸದ್ದು ಕೇಳಿಸಿತು. ನೋಡುತ್ತಿದ್ದಂತೆಯೇ ನನ್ನ ಕಾರಾಗೃಹದ ಕೋಣೆಯ ನೆಲದೊಳಗಿಂದ ಒಂದು ಚೌಕನೆಯ ಬೆಳಕು ಕಾಣಿಸಿತು. ನೆಲದೊಳಗೆ ಒಂದು ಬಾಗಿಲು ತೆರೆಯಿತು. ಇಬ್ಬರು ಭಟರು ಬಂದು "ನಡೆ ನಮ್ಮ ಜೊತೆ" ಎಂದಷ್ಟೆ ಹೇಳಿದರು. ನನಗೆ ಮಾತನಾಡಲು ಅವಕಾಶವಾಗಲಿಲ್ಲ. ಅವರೊಂದಿಗೆ ಆ ಬಾಗಿಲೊಳಗಿನಿಂದ ಸುರಂಗ ಮಾರ್ಗವಾಗಿ ಎಲ್ಲಿಗೋ ಕರೆದೊಯ್ದರು. ಹೀಗೆ ಸ್ವಲ್ಪ ಹೊತ್ತು ನಡೆದ ಮೇಲೆ ಸುರಂಗದಿಂದ ಆಚೆ ಹೋದೆವು. ಮೂರು ಕುದುರೆಗಳನ್ನು ಕುದುರೆ ಏರಿದ ಮತ್ತೊಬ್ಬ ಕಾಯ್ದು ನಿಂತಿದ್ದ.

"ಕುದುರೆ ಸವಾರಿ ಬಲ್ಲೆಯಾ?" ಭಟರಲ್ಲೊಬ್ಬ ಕೇಳಿದ. ಎಂದೂ ಕುದುರೆ ಏರದ ನಾನು . "ಇಲ್ಲ" ಎಂದು ಉತ್ತರಿಸಲು. "ಇಂಥವರನ್ನು ಎಲ್ಲಿಂದ ಹಿಡಿಯುತ್ತಾರೋ" ಎಂದು ಗೊಣಗುತ್ತ "ರಿಕಾಬಿನೊಳಗೆ ಎಡಗಾಲು ಹಾಕಿ ಬಲಗಾಲು ಕುದುರೆಯ ಬೆನ್ನಮೇಲೆ ಹಾಕು... ಹೀಗೆ" ಎಂದ ಒಬ್ಬ ಹೇಳಿದ ಮಾತಿಗೆ ಕ್ರಿಯೆ ತೋರಿಸುತ್ತ. ಅವರುಗಳ ಸಹಾಯದಿಂದ ಕುದುರೆ ಏರಿ ಹೊರಟೆ. ಮೊದಲಿಗೆ ಸ್ವಲ್ಪ ಕಷ್ಟವಾದರೂ ಸಾಗುತ್ತಿದ್ದಂತೆ ಅಳವಡಿಸಿಕೊಂಡು ಕೊನೆಗೆ ಸುಲಭವಾಗಿಯೇ ಸವಾರಿ ಮಾಡತೊಡಗಿದೆ. ಮಾರನೆಯ ದಿನ ಮಧ್ಯಾಹ್ನದವರೆವಿಗೂ ಹೀಗೆ ಅರಣ್ಯದೊಳಗೆ ಹೋಗುತ್ತಿದ್ದು, ಸೂರ್ಯ ನೆತ್ತಿಗೇರುವಷ್ಟು ಹೊತ್ತಿಗೆ ನಮ್ಮ ಗುರಿ ತಲುಪಿದೆವು. ಕಾಡಿನ ಮಧ್ಯೆ ಒಂದು ಸಣ್ಣ ಬಿಡಾರದಂತಿತ್ತು. ನನಗೀಗ ಅರ್ಥವಾಯಿತು. ಇದು ಗೂಢಚಾರ ಪಾಠಶಾಲೆ. ಗೂಢಚರ್ಯೆಯ ಶಿಕ್ಷಣಕ್ಕಾಗಿ ನನ್ನನ್ನು ಇಲ್ಲಿಗೆ ಕರೆತರಲಾಗಿತ್ತು. ಗೂಢಚರ್ಯೆ ಪ್ರಪಂಚದ ಎರಡನೇ ಹಳೆಯ ವೃತ್ತಿ. ವರುಣದೇವನೇ ಇದರ ಮೂಲ ಗುರುವಂತೆ. ಅಂತೆಯೇ ನನ್ನ ಗುರುವಿನ ಹೆಸರೂ ವರುಣಾಚಾರ್ಯ ಎಂದೇ ಆಗಿತ್ತು.

ಹಲವು ಮಾಸಗಳು ಕಳೆದವು. ಕಾಲ ಕಳೆದಂತೆ ನಾನು ಆ ಎಲ್ಲ ವಿಷಯಗಳಲ್ಲಿ ನಿಪುಣನಾಗತೊಡಗಿದೆ. ಒಂದು ದಿನ ವರುಣಾಚಾರ್ಯರು ನನ್ನನ್ನು ಅವರ ಬಳಿ ಕರೆದು ಹೇಳಿದರು "ಇಂದಿಗೆ ನಿನ್ನ ಶಿಕ್ಷಣ ಮುಕ್ತಾಯವಾಯಿತು. ನಾನು ಹೇಳಿರುವ ಎಲ್ಲ ವಿಷಯಗಳು ಯಾವಾಗಲೂ ನೆನಪಿರಲಿ." "ಹಾಗೆಂದರೆ..," "ನೀನು ಇಲ್ಲಿಂದ ಹೊರಡುವ ಕಾಲ ಬಂದಿದೆಯೆಂದು ಶಿಷ್ಯವೃತ್ತಿಯಿಂದ ನಾನು ಪ್ರಸನ್ನನಾಗಿದ್ದೇನೆ. ವಾತಾಪಿನಗರಕ್ಕೆ ಹಿಂತಿರುಗು. ಮಹಾಮಂತ್ರಿಗಳಿಗೆ ನೇರವಾಗಿ ವರದಿ ಒಪ್ಪಿಸುವ ರಾಯಭಾರ ಹೊತ್ತಿರುವ ಸಂಘದಲ್ಲಿ ನೀನೊಬ್ಬ ಪದಾತಿ. ಈ ಓಲೆ ತೆಗೆದುಕೊಂಡು ಸುರಂಗ ಮಾರ್ಗವಾಗಿ ಗುಪ್ತ ಸಂದರ್ಶನ ಸ್ಥಳಕ್ಕೆ ಹೋಗು. ಮುಂದಿನದನ್ನು ಅವರೇ ನೋಡುತ್ತಾರೆ," ಎಂದು ಹೇಳಿ ಒಂದು ಓಲೆ ನನ್ನ ಕೈಗಿತ್ತು, ನಾನು ಹೋಗಬೇಕಾಗಿರುವ ಸ್ಥಳದ ವಿವರಗಳನ್ನು ಕೊಟ್ಟರು.

ನಾನು ಅವರಿಗೆ ನಮಿಸಿ, ಪ್ರವರ ಹೇಳಿ ಹೊರಬಿದ್ದೆ. ವಾತಾಪಿನಗರವನ್ನು ಸೇರಿದಾಗ ಸಂಜೆಯಾಗಿತ್ತು. ಊರಿನಾಚೆ ಸ್ವಲ್ಪ ದೂರದ ಒಂದು ಸ್ಥಳದಲ್ಲಿ ನಿಂತು, ಕುದುರೆಗೆ ನೀರು, ಹುರುಳಿ ಕೊಟ್ಟೆ. ನಾನೂ ಬೆಳಗಿನಿಂದ ಏನೂ ತಿಂದಿರಲಿಲ್ಲ, ಹೊಟ್ಟೆ ಹಸಿದಿತ್ತು . ನಾನು ಗುಪ್ತ ಸಂದರ್ಶನ ಸ್ಥಳಕ್ಕೆ ಹೋಗಲು ಸ್ವಲ್ಪ ಸಮಯವಿತ್ತು. ಸ್ವಲ್ಪ ಕತ್ತಲಾಗುವವರೆಗೆ ಕಾಯ್ದು ಮನೆ ಕಡೆ ಕುದುರೆ ತಿರುಗಿಸಿದೆ. ಸ್ವಲ್ಪ ದೂರದಲ್ಲೇ ಕುದುರೆಯನ್ನು ಕಟ್ಟಿ ಹಾಕಿ ಮನೆಯವರೆಗೆ ನಡೆದೇ ಹೋದೆ. ಯಾರಿಗಾದರೂ ಕಾಣಿಸಿದರೆ? ನಾನು ಮಹಾರಾಜನ ಬೇಟೆ ತಪ್ಪಿಸಿದಾಗ ನನಗೆ ಗಡ್ಡ ಮೀಸೆಗಳಿರಲಿಲ್ಲ. ಈಗ ಪೂರ್ಣ ಗಡ್ಡ ಮೀಸೆಗಳಿದ್ದವು. ತಲೆಯ ಮೇಲಿದ್ದ ಜಟೆ ಈಗ ಹೋಗಿ ತಲೆ ತುಂಬ ಕೂದಲಿತ್ತು. ಎಂದೂ ತಲೆಗೆ ಪೇಟ ಧರಿಸದವ ಈಗ ಪೇಟ ಧರಿಸಿದ್ದೆ. ಯಾರೂ ನನ್ನನ್ನು ಗುರುತು ಹಿಡಿಯುವಂತೆ ಇರಲಿಲ್ಲ. ಆದರೂ ಮನೆಯೊಳಗೆ ಹೋಗಲು ಹೆದರಿ ಮರೆಯಲ್ಲೇ ಕಾಯ್ದು ನಿಂತೆ.ಸ್ವಲ್ಪ ಹೊತ್ತಿನಲ್ಲಿ ಮನೆಯ ಕದ ತೆರೆದು ಅಮ್ಮ ಆಚೆ ಬಂದರು. ನಾನು ಮರೆಯಿಂದ ಇಳಿದು ಅಮ್ಮನ ಕಡೆ ನಡೆದೆ.

"ಯಾರಲ್ಲಿ" ಅಮ್ಮ ಕೂಗಿದರು.

"ನಾನು... ಅಮ್ಮ" ಎಂದು ಹತ್ತಿರಹೋದೆ.

"ಯಾರಪ್ಪ ನೀನು.... ಸೂರ್ಯ! " ಅಮ್ಮ ಆಶ್ಚರ್ಯಪಟ್ಟರು.

"ಹೌದು, ನಾನೆ. " ನಾನು ಹೇಳಿದೆ.

"ಏನಾಯಿತು? ಹೇಗೆ ತಪ್ಪಿಸಿಕೊಂಡೆ? ಈಗ ಎಲ್ಲಿರುವೆ? ಏನೀ ವೇಷ?" ಒಟ್ಟಿಗೆ ಪ್ರಶ್ನೆಗಳ ಸುರಿಮಳೆ ಮಾಡಿದರು.

"ಒಂದೊಂದಾಗಿ ಹೇಳುವೆ. ನಾನು ತಪ್ಪಿಸಿಕೊಳ್ಳಲಿಲ್ಲ, ನನ್ನನ್ನು ಬಿಟ್ಟರು. ಇಷ್ಟು ದಿನ ಊರಿನಲ್ಲಿರಲಿಲ್ಲ. ಇಂದು ಬಂದೆ. ನನಗಾವ ಅಪಾಯವೂ ಇಲ್ಲ ಹೆದರಬೇಡ. ನನ್ನ ಕಾಯಕಕ್ಕಾಗಿ, ಯಾರಿಗೂ ಗುರುತು ಸಿಗಬಾರದೆಂದು ಈ ವೇಷ." ನಾನೂ ಎಲ್ಲ ಒಟ್ಟಿಗೆ ಉತ್ತರಿಸಿದೆ.

"ಕಾಯಕಕ್ಕೆ ವೇಷವೇ? ಏನು ಕಾಯಕ? ಕಳ್ಳನಾಗಿರುವೆಯಾ? " ಪ್ರಶ್ನಿಸಿದರು.

"ಇಲ್ಲ ಅಮ್ಮ, ನಾನು ಕಳ್ಳನಲ್ಲ. ದೇಶಸೇವೆಯ ಕೆಲಸ, ಆದರೆ ಗುಪ್ತ. ಈಗ ಹೇಳಲಾರೆ. " ಎಂದು ಉತ್ತರಿಸಿದೆ.

"ಇದೇಕೆ ಹೀಗೆ? ಒಳಗೆ ಬಾ. ಮನೆಯವರನ್ನೆಲ್ಲ ನೋಡುವುದಿಲ್ಲವೆ?" ಅಮ್ಮ ಕೇಳಿದರು.

"ನೋಡುವೆ, ಆದರೆ ಈಗಲ್ಲ. ನಾನು ಈಗ ಬೇರೆಲ್ಲೋ ಹೋಗಬೇಕು. ಯಾರಿಗೂ ನನ್ನ ಬಗ್ಗೆ ಹೇಳಬೇಡ." ಎಂದೆ.

"ಇಷ್ಟು ದಿನದ ಮೇಲೆ ಬಂದಿರುವೆ, ಇಷ್ಟು ಬೇಗ ಹೊರಟೆಯಾ?" ಎಂದರು. "ನಾನು ಕಳಿಸಿದ ಓಲೆ ಸಿಕ್ಕಿತೋ ಇಲ್ಲವೋ? " ನಾನು ಪ್ರತಿ ಪ್ರಶ್ನಿಸಿದೆ.

"ಸಿಕ್ಕಿತು, ಆದರೆ ಅದರಲ್ಲಿ ಏನೂ ವಿವರಣೆ ಇರಲಿಲ್ಲ. ಅದೊಂದೆ ನಮ್ಮಿಬ್ಬರಿಗೂ ಆಶಾಜನಕವಾಗಿತ್ತು. ಈಗಲಾದರೂ ನಿಜ ಸಂಗತಿ ಹೇಳು." ಎಂದು ಹೇಳಿದರು.

"ಅಮ್ಮ, ತುಂಬಾ ಹೊಟ್ಟೆ ಹಸಿವಾಗಿದೆ. ತಿನ್ನಲು ಏನಾದರೂ ಇದೆಯೆ? " ಎಂದು ಕೇಳಿದೆ ಮಾತು ಮರೆಸಲು.ಅಮ್ಮ ಒಳಗೆ ಹೋಗಿ ಬಟ್ಟೆಯಲ್ಲಿ ಕಟ್ಟಿ ಏನೋ ಬುತ್ತಿ ತಂದರು. ನಾನು ನಮ್ಮ ತಂದೆಯವರ ಬಗ್ಗೆ ವಿಚಾರಿಸಿದೆ. ಅಮ್ಮ ತಮ್ಮ ಕೈಯಿಂದಲೇ ತಿನ್ನಿಸಿದರು. ಇಬ್ಬರೂ ಸ್ವಲ್ಪ ಕಣ್ಣೀರು ಹಾಕಿದೆವು. ಸ್ವಲ್ಪ ಹೊತ್ತಿನ ಬಳಿಕ ಊಟ ಮುಗಿಸಿ ಕೈತೊಳೆದು "ಅಪ್ಪನಿಗೆ ತಿಳಿದರೂ ಯಾವಕಾರಣಕ್ಕೂ ಬೇರೆ ಯಾರಿಗೂ ತಿಳಿಯಬಾರದು. ನಾನಿನ್ನು ಹೊರಡಬೇಕು." ಎಂದು ಎದ್ದೆ.ಅಷ್ಟು ಹೊತ್ತಿಗೆ ಅಪ್ಪನೇ ದೀಪ ಹಿಡಿದು ಬಾಗಿಲಾಚೆ ಬಂದರು. ನಾನು ಅಮ್ಮನ ಚರಣ ಸ್ಪರ್ಶಿಸಿ, ಬೇಗನೇ ಅಪ್ಪನ ಬಳಿ ಹೋಗಿ "ನಾನು ಸೂರ್ಯ, ಅಮ್ಮನಿಗೆ ಎಲ್ಲ ವಿಷಯ ಹೇಳಿರುವೆ, ಯಾವಕಾರಣಕ್ಕೂ ನನ್ನ ಹೆಸರು ಕೂಗಬೇಡಿ ನಾನೀಗಲೇ ಹೋಗಬೇಕು." ಎಂದು ಹೇಳಿ, ಕುದುರೆಯ ಕಡೆ ಓಡಿ ಹೊರಟು ಹೋದೆ.

ಇಷ್ಟು ಹೊತ್ತಿಗೆ ಗುಪ್ತ ಸಂದರ್ಶನ ಸ್ಥಳಕ್ಕೆ ಹೋಗುವ ಸಮಯವಾಗಿತ್ತು. ಊರಾಚೆ ಪಾಳುಬಿದ್ದ ಗುಡಿಯ ಬಳಿ ಹೋದೆ. ಬಾಗಿಲ ಅಡ್ಡಕ್ಕೆ ಕಲ್ಲಿನ ಸ್ಥಂಭವೊಂದು ಬಿದ್ದಿತು. ಕುದುರೆಯ ಜೀನು ಬಿಚ್ಚಿ ಅದನ್ನು ತಿರುಗಿಸಿ ಅದರ ಬೆನ್ನ ಮೇಲೆ ಎರಡು ಏಟು ಕೊಟ್ಟೆ. ಕುದುರೆ ಲಾಯಕ್ಕೆ ಓಡಿತು. ನಾನು ಕೆಲ ಕ್ಷಣಗಳ ಕಾಲ ಮರೆಯಲ್ಲಿ ಕಾಯುತ್ತಿದ್ದೆ. ಎಲ್ಲವೂ ನಿಶ್ಯಬ್ದವೆನಿಸಿದಮೇಲೆ ನಿಧಾನವಾಗಿ ಎದ್ದು ಬಾಗಿಲ ಅಡ್ಡಕ್ಕೆ ಬಿದ್ದ ಸ್ಥಂಭದ ಕೆಳಗಿಂದ ನುಸಿದು ಗುಡಿಯೊಳಗೆ ಹೊಕ್ಕೆ.ಗುಡಿಯೊಳಗೆ ಒಂದು ಕಲ್ಲಿನ ಮೂರ್ತಿ. ಮೂರ್ತಿಯ ಹಿಂದೆ ನಡೆದು ಹೋದೆ. ಅಲ್ಲಿದ್ದ ಒಂದು ಸಣ್ಣ ಗುಬುಟನ್ನು ಒತ್ತಿದಾಗ ನನ್ನ ಕಾರಾಗ್ರಹದ ನೆಲದ ಮೇಲೆ ಬಾಗಿಲು ತೆರೆದಂತೆ ಇಲ್ಲೂ ನೆಲದಲ್ಲಿ ಒಂದು ಬಾಗಿಲು ತೆರೆಯಿತು. ಇಳಿದುಹೋಗಲು ಮೆಟ್ಟಲುಗಳಿದ್ದವು. ನಿಧಾನವಾಗಿ ಮೆಟ್ಟಲು ಇಳಿದು ಸುರಂಗದೊಳಗೆ ಹೊಕ್ಕೆ. ಒಂದು ಸಣ್ಣ ದೀಪ ಉರಿಯುತ್ತಿತ್ತು. ಒಳಗಿನಿಂದ ಬಾಗಿಲು ಮುಚ್ಚುವ ಗುಬುಟು ಒತ್ತಿದೆ. ಸದ್ದಿಲ್ಲದೆ ಬಾಗಿಲು ಮುಚ್ಚಿಕೊಂಡಿತು. ದೀಪವನ್ನೆತ್ತಿಕೊಂಡು ಸುರಂಗದಲ್ಲಿ ನಡೆದು ಹೊರಟೆ.ಕೊನೆಗೆ ಒಂದು ಬಾಗಿಲ ಎದುರಿಗೆ ಬಂದು ನಿಂತೆ. ಬಾಗಿಲನ್ನು ಗುಪ್ತ ಸಂಜ್ಞೆಯಲ್ಲಿ ತಟ್ಟಿದೆ. ಬಾಗಿಲು ತೆರೆಯಿತು; ಒಳಗೆ ಹೋದೆ. ಅಲ್ಲಿ ಹಲವಾರು ಜನ ಕೂಡಿದ್ದರೂ ನನ್ನೊಡನೆ ಮಾತನಾಡಲು ಯಾರೂ ಬರಲಿಲ್ಲ. ಮುಂದೇನೆಂದು ನಿರೀಕ್ಷಿಸುತ್ತಾ ಮೂಲೆಯೊಂದರಲ್ಲಿ ಕಾಯ್ದು ನಿಂತೆ.

"ಹಿಂದೆ ತಿರುಗಬೇಡ. ವರುಣಾಚಾರ್ಯರ ಓಲೆ ತೆಗೆದುಕೊಡು" ಎಂದು ನನ್ನ ಕಿವಿಯಲ್ಲಿ ಯಾರೋ ಹೇಳಿದಹಾಗಾಯಿತು. ಈ ಮೂಲೆಯಲ್ಲಿ ಯಾರಿರಬಹುದೆಂದು ಎಚಿದು ಯೋಚಿಸುತ್ತಾ ನನ್ನ ವಸ್ತ್ರಗಳೊಳಗಿಂದ ಓಲೆಯನ್ನು ತೆಗೆದು ಕೈಯಲ್ಲಿ ಹಿಡಿದೆ. ಒಂದು ಕ್ಷಣದಲ್ಲಿ ಮಾಯವಾಯಿತು, ಆದರೆ ಅಷ್ಟರಲ್ಲಿ ನಾನು ಗೋಡೆಯಲ್ಲಿದ್ದ ಸಣ್ಣ ಕಿಂಡಿಯ ಬಾಗಿಲು ಮುಚ್ಚುತ್ತಿರುವುದನ್ನು ನೊಡಿದೆ. ಅದರೊಳಗಿನಿಂದ ಯಾರೋ ಕೈ ಹಾಕಿ ಓಲೆ ತೆಗೆದುಕೊಂಡಿರಬೇಕು ಎಂದುಕೊಂಡೆ.

ಸ್ವಲ್ಪ ಹೊತ್ತಿನ ಬಳಿಕ, ಮಹಾಮಂತ್ರಿಗಳು ಸಭೆಯನ್ನು ಉದ್ದೇಶಿಸಿ ಈ ಮೊದಲು ಚಾಲುಕ್ಯ ಸೇನೆ ಮಾಡಿರುವ ಮಹಾಕೃತ್ಯಗಳನೆಲ್ಲ ಸ್ಮರಿಸಿ ಸೈನಿಕರನ್ನು ಹುರಿದುಂಬಿಸುತ್ತಾ "ಈಗ ಉತ್ತರಾಪಥೇಶ್ವರನಾದ ಹರ್ಷ ಚಕ್ರವರ್ತಿಯ ಕಡೆಯವರು ನರ್ಮದೆಯ ತೀರದಲ್ಲಿ ನಮ್ಮ ಮೇಲೆ ಧಾಳಿ ಮಾಡುವ ಯೋಜನೆ ಹೂಡುತ್ತಿದ್ದಾರೆಂಬ ಸೂಕ್ಷ್ಮ ಸುದ್ದಿ ತಿಳಿದು ಬಂದಿದೆ. ಹರ್ಷ ಚಕ್ರವರ್ತಿ ಧಾಳಿ ಮಾಡುವ ಮುನ್ನವೇ ನಾವು ಅವರ ಮೇಲೆ ಧಾಳಿ ಮಾಡಬೇಕೆಂಬುದೇ

ಮಹಾರಾಜ ಪುಲಿಕೇಶಿಯ ಇಚ್ಛೆ. ನಿಮ್ಮೆಲ್ಲರ ಸಹಕಾರದಿಂದ ಇದು ಸಾಧ್ಯವಾಗಿ ಮಹಾರಾಜ ಪುಲಿಕೇಶಿಗೆ ಜಯ ತರಿಸಿಕೊಡುವಿರಿ ಎಂಬ ನಂಬಿಕೆ ನನಗಿದೆ.'' ಎಂದು ನುಡಿದರು.ಇದಾದ ಮೇಲೆ ಮಹಾಮಂತ್ರಿಗಳು ಅಲ್ಲಿ ಸೇರಿದ್ದ ಒಬ್ಬೊಬ್ಬ ವ್ಯಕ್ತಿಗೆ ಒಂದೊಂದು ಕೆಲಸಕ್ಕೆ ನೇಮಿಸಿದರು. ವೈರಿಯ ಸೇನೆಯ ಸಂಖ್ಯೆಗಳನ್ನು ತಿಳಿಯಲು ಒಬ್ಬ, ಅವರ ಬಿಡಾರಗಳ ಸ್ಥಳಗಳನ್ನು ತಿಳಿಯಲು ಮತ್ತೊಬ್ಬ, ಅವರು ಯುದ್ಧ ಭೂಮಿಗೆ ನಡೆದು ಬರುವ ದಾರಿ ತಿಳಿಯಲು, ಅವರ ಶಸ್ತ್ರಾಸ್ತ್ರಗಳ ವರದಿಗೆ, ಅವರಲ್ಲಿ ಒಡಕುಂಟು ಮಾಡುವ ಸಾಧನಗಳನ್ನು ಹೂಡಲು, ಅವರ ರಾತ್ರಿಯ ಕಾವಲು ಪದ್ಧತಿ ಹಾಗು ಕಾವಲುಗಾರರು ಬದಲಾಗುವ ಸಮಯಗಳನ್ನು ತಿಳಿಯಲು, ಹೀಗೆ ನಾನೆಂದೂ ಯೋಚಿಸದಂತಹ ಹಲವು ಕಾರ್ಯಗಳಿಗೆ ಒಬ್ಬೊಬ್ಬರನ್ನು ನಿಯುಕ್ತಿಸಿದರು.ಎಲ್ಲರೂ ತಮ್ಮ ತಮ್ಮ ಆಜ್ಞೆಗಳನ್ನು ಪಡೆದು ಹೊರಟುಹೋದರು. ನಾನಿನ್ನೂ ಅಲ್ಲೇ ಇದ್ದೆ. ಕೊನೆಗೆ ಮಹಾಮಂತ್ರಿಗಳು ನನ್ನನ್ನು ನೋಡಿದರು. ''ಯುವಕ, ನಿನ್ನ ಶಿಕ್ಷಣ ಮುಗಿದಿದೆ. ವರುಣಾಚಾರ್ಯರು ಕೊಟ್ಟ ಓಲೆಯನ್ನು ನಾನು ಓದಿರುವೆ. ಅವರು ನಿನ್ನನ್ನು ಬಹಳ ಹೊಗಳಿದ್ದಾರೆ.'' ಎಂದರು.

''ನಾನು ಏನು ಬೇಕಾದರೂ ಮಾಡಲು ಸಿದ್ಧ'' ಎಂದೆ.

''ನೀನು ಬ್ರಾಹ್ಮಣ. ನಿನ್ನ ಕೈಯಲ್ಲಿ ಅವರುಗಳು ಮಾಡುವ ಕೆಲಸ ಮಾಡಲಾಗುವುದಿಲ್ಲ. ಅವರುಗಳು ತರುವ ಸೂಚನೆ ಸುದ್ದಿಗಳನ್ನು ಒಗ್ಗೂಡಿಸಿ, ಶೋಧಿಸಿ, ನಮಗೆ ಸಂಕ್ಷಿಪ್ತವಾಗಿ, ಯಾವ ವಿಷಯವೂ ಬಿಡದಂತೆ ಹೇಳುವುದು ನಿನ್ನ ಕೆಲಸ. ನೀನು ನಮ್ಮೊಡನೆ ನರ್ಮದಾ ತೀರದ ಯುದ್ಧ ಭೂಮಿಗೆ ಹೋಗುವ ಸಿದ್ಧತೆಗಳನ್ನು ಮಾಡಿಕೊ. ಇಂದು ರಾತ್ರಿ ಬೇಕಾದರೆ ಇಲ್ಲೇ ತಂಗುವ ಅವಕಾಶವಿದೆ. ನಾಳೆ ಬೆಳಗ್ಗೆ ಹೊರಡು.'' ಎಂದು ಹೇಳಿ ಹೊರಟುಹೋದರು.

ನನಗೀಗ ಮಲಗಲು ಹೆಚ್ಚು ಸಿದ್ಧತೆ ಬೇಕಾಗಿರಲಿಲ್ಲ. ಎಲ್ಲಿಯಂದರಲ್ಲಿ, ಮಲಗುವ ಸಾಮರ್ಥ್ಯ ಬೆಳೆಸಿಕೊಂಡಿದ್ದೆ. ಮಲಗಿದಾಗಲೂ ಒಂದು ಕಣ್ಣು ತೆರೆದೇ ಮಲಗಿರುತ್ತಿದ್ದೆ. ಮಾರನೆಯ ದಿನ ಬೆಳಗ್ಗೆ ಎದ್ದು ಸುರಂಗಮಾರ್ಗವಾಗಿ ಊರ ಹೊರಬಿದ್ದು ಮೊದಲೇ ನೇಮಿಸಿದ್ದ ಸ್ಥಳಕ್ಕೆ ಹೋದೆ. ಕುದುರೆ ಕಾದಿತ್ತು, ಜೊತೆಗೆ ಒಬ್ಬ ಭಟನೂ ಇದ್ದ. ಸ್ವಲ್ಪ ಪ್ರಯಾಣದ ನಂತರ ಮಹಾಮಂತ್ರಿಗಳೊಡನೆ ಕೂಡಿ ಅಲ್ಲಿಂದ ಒಟ್ಟಿಗೆ ಹೊರಟೆವು.ನಾವು ಸುಮಾರು ಹದಿನೈದು ಜನ ಒಟ್ಟು. ದಿನ ನಿತ್ಯ ಸಂಜೆ ಯಾವುದಾದರು ನದಿ, ತೊರೆ ಅಥವ ಸರೋವರದ ಬಳಿ ಬಿಡಾರ ಹೂಡುವುದು. ಮುಂಜಾವು ಎದ್ದು ಪ್ರಯಾಣ ಮುಂದುವರೆಸುವುದು. ಊರೂರುಗಳಲ್ಲಿ ಊಟ ಉಪಹಾರಗಳ ವ್ಯವಸ್ಥೆ ಹೇಗೋ ಅಗುತ್ತಿತ್ತು. ಮಾಳವ ಪ್ರದೇಶವನ್ನು ಹಾಯ್ದು ಕೊನೆಗೆ ನರ್ಮದೆಯ ತೀರವನ್ನು ತಲುಪಿದೆವು. ಇಷ್ಟು ಪ್ರಯಾಣ ಸುಮಾರು ಒಂದು ಮಾಸ ಸಮಯ ತೆಗೆದುಕೊಂಡಿತ್ತು. ನರ್ಮದೆಯ ತೀರದಲ್ಲಿ ಒಂದು ಸಣ್ಣ ಪಟ್ಟಣವಾದ ವರಾಹಪುರಿ ನಮ್ಮ ಗುರಿಯಾಗಿತ್ತು.

ಊರಿನಿಂದ ಹಲವು ಕ್ರೋಶಗಳ ಹಿಂದೆಯೇ ಪರ್ವತಗಳಲ್ಲಿದ್ದ ಒಂದು ಗುಹೆ ಹೊಕ್ಕೆವು. ಇಲ್ಲಿ ಊರು ಸೇರುವ ಯೋಜನೆಯೊಂದನ್ನು ಹೂಡಿದೆವು. ಇಬ್ಬಿಬ್ಬರಾಗಿ, ಸಾಧ್ಯವಾದರೆ ಯಾರಾದರೂ ಹೆಂಗಸರೊಡಗೂಡಿ ಇಲ್ಲವಾದರೆ ನಮ್ಮಲ್ಲೇ ಯಾರಾದರು ಹೆಣ್ಣು ವೇಷ ಧರಿಸಿ ರಾತ್ರಿ ಸಮಯಗಳಲ್ಲಿ ಊರು ತಲುಪುವ ಯೋಜನೆಯಾಗಿತ್ತು. ಅದೇ ಊರಿನಲ್ಲಿದ್ದ ನಮ್ಮ ಪಡೆಯ ಒಬ್ಬ ಗೂಢಚಾರನ ಮನೆ ನಮ್ಮ ಕೇಂದ್ರವಾಗುವುದಿತ್ತು.ಬಂದ ಹಲವು ದಿನಗಳಲ್ಲಿ ನಾವೆಲ್ಲರೂ ಈ ಕೇಂದ್ರವನ್ನು ಹೇಗೋ ತಲುಪಿದೆವು. ಗೂಢಚಾರರು ತಂದ ಸುದ್ದಿಗಳಿಂದ ಯಾರಿಗೂ ನಾವು ಬಂದ ವಿಚಾರ ತಿಳಿದಿಲ್ಲವೆಂಬುದು ಖಚಿತವಾಯಿತು. ನಾನು ನನ್ನ ವಿಶ್ಲೇಷಣಾ ಕಾರ್ಯವನ್ನು ಆರಂಭಿಸಿದೆ. ನನಗೆ ಕೆಲಸ ಮಾಡಲು ಮನೆಯ ನೆಲಮಾಳಿಗೆಯಲ್ಲಿ ಒಂದು ಸಣ್ಣ ಕತ್ತಲು ಕೋಣೆ ಕೊಡಲಾಗಿತ್ತು. ಮೇಲಿನಿಂದ ನೋಡಿದರೆ ಕಂಬಳಿ ಹಾಸಿದ್ದ ನೆಲ. ಕಂಬಳಿಯ ಕೆಳಗೆ ಒಂದು ಗುಪ್ತ ದ್ವಾರ. ಅದು ನನ್ನ ತಲೆಯ ಮೇಲೆ ತೆರೆಯುತ್ತಿತ್ತು. ಗಾಳಿ ಬರಲು ನಾಲ್ಕಾರು ಸಣ್ಣ ಕಿಂಡಿಗಳು ಬಿಟ್ಟರೆ ಹೊರ ಪ್ರಪಂಚಕ್ಕೆ ಸಂಪರ್ಕವೇ ಇರಲಿಲ್ಲ. ನನಗಾದರೋ ಬಿಡುವಿಲ್ಲದ ಕೆಲಸ.ಹತ್ತಾರು ಗೂಢಚಾರರು ಸಂದೇಶಗಳನ್ನು ತಂದು ಕೊಡುತ್ತಿದ್ದರು. ಎಲ್ಲವನ್ನೂ ದಿನಕ್ಕೆ ಎರಡು ಬಾರಿ ನನ್ನ ಗೂಡಿನೊಳಕ್ಕೆ ಮೇಲಿನಿಂದ ಹಾಕುತ್ತಿದ್ದರು. ಇವೆಲ್ಲವನ್ನೂ ಓದಿ, ಒಗ್ಗೂಡಿಸಿ, ಸತ್ಯಾಸತ್ಯಗಳನ್ನು ಬೇರ್ಪಡಿಸಿ, ವರದಿ ಬರೆದು, ಅದನ್ನು ಗುಪ್ತ ಲಿಪಿಗೆ ಬದಲಿಸಿ ಮೇಲಕ್ಕೆ ಹಿಂತಿರುಗಿಸುವುದು ನನ್ನ ಕೆಲಸ. ಮೇಲಿನವರು ಅದನ್ನು ನಾನಾ ಮಾರ್ಗಗಳಲ್ಲಿ ವಾತಾಪಿಗೆ ಕಳುಹಿಸುತ್ತಿದ್ದರು. ಹೀಗೆಯೇ ನಾಲ್ಕು ಮಾಸಗಳು ಕಳೆದವು. ಆರು ವರ್ಷಗಳ ಯುದ್ಧಾನಂತರ ಎಲ್ಲರನ್ನೂ ಸದೆಬಡೆದು ಇಡೀ ಉತ್ತರಾಪಥವನ್ನು ತನ್ನ ಆಧೀನಕ್ಕೆ ತಂದುಕೊಂಡು ಅರವತ್ತು ಸಹಸ್ರ ಆನೆಗಳು ಹಾಗು ಒಂದು ಲಕ್ಷ ರಥಗಳ ಸೈನ್ಯ ಮಾಡಿಕೊಂಡು ಉತ್ತರಾಪಥೇಶ್ವರನೆಂಬ ಬಿರುದು ಹೊಂದಿದ್ದ ಹರ್ಷರಾಜನು ಪುಲಿಕೇಶಿ ಅರಸನ ಮೇಲೆ ಯುದ್ಧಕ್ಕೆ ಸಿದ್ಧತೆ ನಡೆಸುತ್ತಿರುವ ಸುದ್ದಿಗಳೂ ತಲುಪಿದವು. ಆ ಅಪಾರ ಸೈನ್ಯವನ್ನು ಸಿದ್ಧಗೊಳಿಸಿ ದೇಶದ ಸೀಮೆಯಾದ ನರ್ಮದಾನದಿ ತೀರದಲ್ಲಿ ಬಿಡಾರ ಊರಿಸುವ ಪ್ರಯತ್ನಗಳು ನಡೆಯುತ್ತಿದ್ದವು. ಈ ವಾರ್ತೆಗಳೆಲ್ಲ ನಮಗೆ ತಿಳಿದುಬಂದ ಕ್ಷಣದಲ್ಲಿ ನಾನು ವಾತಾಪಿನಗರಕ್ಕೆ ಸಂದೇಶ ಕಳುಹಿಸಿದೆ. ಅಂತೆಯೇ ದಳಶಕ್ತಿಗಳು, ದೌರ್ಬಲ್ಯಗಳು ಹಾಗು ಸೈನ್ಯಕ್ಕೆ ಸಂಬಂಧಿಸಿದ ಇತರ ವಾರ್ತೆಗಳನ್ನೂ ಕಳುಹಿಸಿದೆ.

ನೋಡುತ್ತಿದ್ದಂತೆಯೇ, ಕೆಲವೇ ದಿನಗಳಲ್ಲಿ ಎರಡೂ ಸೈನ್ಯಗಳು ನರ್ಮದೆಯ ತೀರದಲ್ಲಿ ಬಂದು ಎದುರು ನಿಂತವು.

ದಕ್ಷಿಣ ತೀರದಲ್ಲಿ ಪುಲಿಕೇಶಿ ಅರಸನ ಸಮರ್ಥ ಧನುರ್ಧರರಿಂದ ಕೂಡಿದ ಅಪಾರ ಆನೆಯ ಸೈನ್ಯ, ಉತ್ತರ ತೀರದಲ್ಲಿ ನಿಪುಣ ಸೈನಿಕರೊಂದಿಗೆ ಕೂಡಿದ ಪ್ರಬಲ ರಥಗಳ ಸೈನ್ಯ.
ಘೋರ ಯುದ್ಧ ಆರಂಭವಾಯಿತು. ಹರ್ಷರಾಜನ ಕಡೆಯವರು ಕದನಕ್ಕೆ ನಾಂದಿ ಹಾಡುತ್ತ ನಮ್ಮನ್ನು ಈಟಿಗಳಿಂದ ಹಾಗು ದೊಡ್ಡ ದೊಡ್ಡ ಶಿಲೆಗಳನ್ನು ಎಸೆಯುವ ಆಯುಧಗಳಿಂದ ಆಕ್ರಮಣ ಮಾಡಿದರು. ಪುಲಿಕೇಶಿ ರಾಜನ ಧ್ಯೇಯ ನದಿಯನ್ನು ದಾಟಿ ಆಕ್ರಮಣ ಮಾಡುವುದಾಗಿತ್ತು. ಆದರೆ ವೈರಿಗಳು ಅದಕ್ಕೆ ಅವಕಾಶವೇ ಕೊಡಲಿಲ್ಲ. ನಮ್ಮ ಸೈನಿಕರು ನೀರಿಗಿಳಿದಂತೆ ಅವರು ಶಿಲೆಗಳನ್ನು ಎಸೆದು ನಮ್ಮವರನ್ನು ಕೊಲ್ಲುತ್ತಿದ್ದರು ಇಲ್ಲವಾದರೆ ಗಾಯಗೊಳಿಸುತ್ತಿದ್ದರು. ಹಲವಾರು ದಿನ ಹೀಗೆಯೇ ನಡೆಯಿತು. ನಮ್ಮ ಸೈನ್ಯದ ಉತ್ಸಾಹ ಕಿಂಚಿತ್ತು ಕುಂದತೊಡಗಿತು.

ಕೊನೆಗೆ ನಮ್ಮ ಕಡೆಯ ಸೇನಾಪತಿಗಳು ನಮ್ಮ ಬಳಿ ಇದ್ದ ವಿಶಿಷ್ಟ ದರ್ಪಣಾಸ್ತ್ರವನ್ನು ಪ್ರಯೋಗಿಸುವ ನಿರ್ಣಯ ಮಾಡಿದರು. ಅಂತೆಯೇ ಮಾರನೆಯ ದಿನ ಸೂರ್ಯನು ನೆತ್ತಿಗೇರಿದಾಗ ನಮ್ಮ ಸೈನಿಕರು ನದಿಯಬಳಿ ಹೋಗಿ ನಿಂತರು. ಅವಕಾಶ ಸಿಕ್ಕಿದ ಕೂಡಲೆ ಅವರು ನದಿಯನ್ನು ದಾಟಿ ಆಕ್ರಮಣಮಾಡುವುದಾಗಿತ್ತು. ಅವಕಾಶ ದೊರಕಿಸುವುದು ದರ್ಪಣಾಸ್ತ್ರದ ಗುರಿಯಾಗಿತ್ತು. ದರ್ಪಣಾಸ್ತ್ರ ಪ್ರಯೋಗ ಮಾಡುವವರು ತೀರದಲ್ಲಿ ದೊಡ್ಡ ದೊಡ್ಡ ದರ್ಪಣಗಳನ್ನು ಹಿಡಿದು ನಿಂತರು. ಸೇನಾಧಿಪತಿಯಿಂದ ಅಪ್ಪಣೆ ಬರುತ್ತಲೇ ಈ ರಾಕ್ಷಸಗಾತ್ರದ ದರ್ಪಣಗಳನ್ನು ನೆಟ್ಟಗೆ ನಿಲ್ಲಿಸಿ ಸೂರ್ಯನ ಕಿರಣಗಳು ಅವುಗಳಿಂದ ಪ್ರತಿಬಿಂಬಿಸಿ ಶತ್ರುಗಳ ಕಣ್ಣು ಕುಕ್ಕುವಂತೆ ಮಾಡಲಾಯಿತು. ಆ ಕೋಲಾಹಲದಲ್ಲಿ ನಮ್ಮ ಸೈನಿಕರು ನದಿಯೊಳಗೆ ಧುಮುಕಿ, ನದಿಯನ್ನು ದಾಟಿ ಶತ್ರುಗಳೊಡನೆ ಹೋರಾಡಲು ಆರಂಭಿಸಿದರು. ಸ್ವಲ್ಪವೇ ಕಾಲದಲ್ಲಿ ನಮ್ಮ ವೀರ ಸೈನಿಕರು ಹರ್ಷರಾಜನ ಸೈನ್ಯವು ದಿಕ್ಕಾಪಾಲಾಗಿ ಓಡುವಂತೆ ಮಾಡಿದರು.

ಕಂಗೆಟ್ಟ ಹರ್ಷರಾಜನ ಸೈನ್ಯವು ಪಲಾಯನ ಮಾಡಿತು. ಯುದ್ಧದ ಈ ಪಾದದಲ್ಲಿ ಹರ್ಷರಾಜನ ಸೈನ್ಯವು ಬಹಳಷ್ಟು ನಷ್ಟ ಹೊಂದಬೇಕಾಯಿತು. ನಮ್ಮಲ್ಲಿಯೂ ಸಾಕಷ್ಟು ಭಟರು ಹತರಾಗಿ ಮತ್ತಷ್ಟು ಜನ ಗಾಯಗೊಂಡಿದ್ದರೂ, ಯುದ್ಧದ ಈ ಹಂತ ನಮ್ಮದೆನಿಸಿತು. ಆದರೆ ಹರ್ಷರಾಜನು ಇನ್ನೂ ಸೋಲನ್ನೊಪ್ಪಿಲ್ಲವೆನ್ನುವುದನ್ನು ನಾವೆಲ್ಲ ಅರಿತಿದ್ದೆವು. ವೈರಿ ಸೈನ್ಯದ ಮುಂದಿನ ಸಂಚನ್ನು ಕಾಯ್ದು ನಮ್ಮ ತೀರದಲ್ಲಿಯೇ ಬಿಡಾರ ಮುನ್ನಡೆಸಿದೆವು. ಸ್ವಲ್ಪವೇ ಕಾಲದಲ್ಲಿ ಸ್ವತಃ ಹರ್ಷರಾಜನೇ ಮುಂದಾಳುತ್ವವಹಿಸಿಕೊಂಡು ವಿಶಾಲ ಕುಂಜರ ಸೈನ್ಯದೊಡನೆ ಯುದ್ಧಭೂಮಿಗೆ ಬರುತ್ತಿರುವ ಸುದ್ದಿ ಗೂಢಚಾರರಿಂದ ತಿಳಿಯಿತು.

ಮತ್ತೆ ಯುದ್ಧ ಪ್ರಾರಂಭವಾಯಿತು. ಮತ್ತೆ ತಕ್ಕಡಿಯ ಎರಡೂ ಕಡೆ ಒಂದೇ ಭಾರದಂತೆ ಯಾವ ಸೈನ್ಯಕ್ಕೂ ಏನೂ ಸಾಧಿಸಲಾಗಲಿಲ್ಲ. ದರ್ಪಣಾಸ್ತ್ರದ ನವ್ಯತೆ ಮುಗಿದುಹೋಗಿ ಈಗ ಅವರೂ ಆ ಅಸ್ತ್ರ ಪ್ರಯೋಗಕ್ಕೆ ಸಿದ್ಧರಾಗಿದ್ದರು. ಸಂತುಲನವನ್ನು ಮುರಿಯಲು ಹಾಗು ವೈರಿಯ ಮೇಲೆ ಜಯ ಸಾಧಿಸಲು ಪುಲಿಕೇಶಿ ಅರಸನು ನಮ್ಮ ಮತ್ತೊಂದು ವಿಶೇಷ ಅಸ್ತ್ರವಾದ ಆಗ್ನೇಯಾಸ್ತ್ರವನ್ನು ಪ್ರಯೋಗ ಮಾಡುವ ನಿಶ್ಚಯ ಮಾಡಿದನು.

ರಾತ್ರಿ ಕತ್ತಲಾಗಿ ಸುಮಾರು ಹೊತ್ತಾಗಿತ್ತು. ಆಗ ಸದ್ದಿಲ್ಲದೆ ನಮ್ಮ ಧನುರ್ಧರರನ್ನು ಸಾಲಾಗಿ ನದಿಯ ನಮ್ಮ ಕಡೆಯ ತೀರದಲ್ಲಿ ನಿಲ್ಲಿಸಿದೆವು. ಅಗ್ನಿ ಶರಗಳನ್ನು ಸಿದ್ಧಗೊಳಿಸಿ ಧನುರ್ಧರರಿಗೆ ಒದಗಿಸುವವರೂ ಸಿದ್ಧರಾದರು. ಈ ಶರಗಳ ವಿಶಿಷ್ಟತೆ ಏನೆಂದರೆ ಇವು ಸಾಮಾನ್ಯ ಶರಗಳಿಗಿಂತ ಹೆಚ್ಚು ಉದ್ದವಾಗಿದ್ದು ಇವುಗಳಿಗೆ ತೈಲದಲ್ಲಿ ಹಾಗು ಕೀಲೆಣ್ಣೆಯಲ್ಲಿ ಅದ್ದಿ ಸಿದ್ಧಪಡಿಸಿದ ಉದ್ದವಾದ ವಸ್ತ್ರಗಳನ್ನು ಸುತ್ತಲಾಗಿತ್ತು. ಸೇನಾಧಿಪತಿಯ ಆಜ್ಞೆ ಬಂದಂತೆ ಧನುರ್ಧರರು ಶರಗಳನ್ನು ಧನಸ್ಸಿಗೆ ಏರಿಸಿ ದೊರಕವನ್ನು ಕಿವಿಗೆಳೆದರು, ಅಗ್ನಿ ಕೊಡುವ ಭಟರು ಶರಗಳಿಗೆ ಅಗ್ನಿ ತಗುಲಿಸಿದರು, ಧನುರ್ಧರರು ಆ ಶರಗಳ ಪ್ರಯೋಗ ಮಾಡಿದರು. ಅಷ್ಟು ಹೊತ್ತಿಗೆ ಶರ ಒದಗಿಸುವವರು ಹೊಸ ಶರಗಳನ್ನು ಸಂಯೋಜಿಸುತ್ತಿದ್ದರು.ಆಗ್ನೇಯಾಸ್ತ್ರಗಳು ಹರ್ಷರಾಜನ ಸೈನ್ಯದ ಬಿಡಾರದ ಮೇಲೆ ಬಿದ್ದಂತೆ ಎಲ್ಲೆಡೆ ಕೋಲಾಹಲ. ವೈರಿಯ ಆನೆಗಳು ಕತ್ತಲಿನಲ್ಲಿ ಬಂದು ಬೀಳುತ್ತಿದ್ದ ಅಗ್ನಿ ಜ್ವಾಲೆಗಳನ್ನು ಕಂಡು ಬೆದರಿ ತಮ್ಮ ಸೈನ್ಯದವರನ್ನೇ ತುಳಿದು ಓಡತೊಡಗಿದವು. ಎಲ್ಲೆಡೆ ಬೆಂಕಿ; ಶಿಬಿರಗಳೆಲ್ಲ ಧೂಮವಾಗಿ ಹೋದವು. ಮಾರನೆಯ ದಿನ ಪ್ರಾತಃಕಾಲದಲ್ಲಿ ಎದುರು ತೀರವನ್ನು ನೋಡಿದಾಗ ಅಲ್ಲಿ ಕಂಡದ್ದು ಕೇವಲ ಹತವಾದ ಕುಂಜರಗಳು, ಭಟರು; ಅಲ್ಲಿಗೆ ಯುದ್ಧವು ಮುಗಿದಿತ್ತು.

ಹರ್ಷರಾಜನಿಗೀಗ ತಾನು ದಕ್ಷಿಣಾಪಥವನ್ನು ಜಯಿಸುವುದು ಅಸಾಧ್ಯವೆಂದು ಮನದಟ್ಟಾಗಿತ್ತು. ಪುಲಿಕೇಶಿ ಅರಸನು ಯುದ್ಧದಲ್ಲಿ ಜಯ ಹೊಂದಿದರೂ ಹರ್ಷರಾಜನ ಶಕ್ತಿ ಹಾಗು ಪ್ರಾಬಲ್ಯತೆಗಳನ್ನು ಅರಿತಿದ್ದನು. ಉತ್ತರಾಪಥವನ್ನು ತನ್ನದಾಗಿಸಿಕೊಳ್ಳುವುದು ಸುಲಭಕಾರ್ಯವಲ್ಲವೆಂಬುದನ್ನೂ ಅರಿತಿದ್ದನು. ಕೆಲವು ದಿನಗಳ ನಂತರ ವೈರಿಪಡೆಯ ಒಬ್ಬ ದೂತನು ಹರ್ಷರಾಜನ ಓಲೆಯೊಂದನ್ನು ತೆಗೆದುಕೊಂಡು ಬಂದನು. ದೂತನು ಪುಲಿಕೇಶಿ ಅರಸನಿಗೆ ತಲೆಬಾಗಿ ಕಾಣಿಕೆ ಸಲ್ಲಿಸಿ, ನಂತರ "ಮಹಾರಾಜ ಪುಲಿಕೇಶಿಗೆ ಜಯವಾಗಲಿ. ನನ್ನ ಒಡೆಯನಾದ ಹರ್ಷವರ್ಧನ ಮಹಾರಾಜನ ಕಡೆಯಿಂದ ಓಲೆಯೊಂದನ್ನು ತಂದಿರುವೆ. ಅದನ್ನು ಓದಿ ಹೇಳುವ ಅಪ್ಪಣೆ ಬೇಡುವೆ." ಎಂದು ಹೇಳಿದನು.

‘‘ಅಪ್ಪಣೆ ಇದೆ.’’ ಅರಸ ಉತ್ತರಿಸಿದನು.

‘‘ಹರ್ಷವರ್ಧನ ಚಕ್ರವರ್ತಿ ಚಾಳುಕ್ಯರ ಕಡೆ ಸಂಧಾನದ ಕೈ ಬೆಳೆಸಲು ಸಿದ್ಧರಾಗಿರುತ್ತಾರೆ. ಅವರು ಪುಲಿಕೇಶಿ ಮಹಾರಾಜರೊಡನೆ ಕೂಡಿ ಸಂಧಾನದ ವಿವರಗಳನ್ನು ಚರ್ಚಿಸುವ ಅನುಮತಿಯನ್ನು ಕೇಳುತ್ತಾರೆ. ಸಾಧ್ಯವಾದಷ್ಟು ಶೀಘ್ರವಾಗಿ ಪುಲಿಕೇಶಿ ಮಹಾರಾಜರು ಹರ್ಷ ಚಕ್ರವರ್ತಿಯ ಆತಿಥ್ಯವನ್ನು ಸ್ವೀಕರಿಸುತ್ತಾರೆಂಬ ನಂಬಿಕೆ ಹೊಂದಿರುತ್ತಾರೆ. ಪುಲಿಕೇಶಿ ಮಹಾರಾಜರು ದೂತರ ಮೂಲಕ ಉತ್ತರ ಕಳುಹಿಸಲೆಂದು ಕೋರುತ್ತಾರೆ.’’ ಎಂದು ದೂತನು ಓಲೆಯನ್ನೋದಿದನು.

‘‘ನಮ್ಮ ಮಂತ್ರಿಗಳ ಜೊತೆಯಲ್ಲಿ ಈ ವಿಚಾರವಾಗಿ ಚರ್ಚೆ ಮಾಡಿ ಉತ್ತರ ಕೊಡುವೆವು. ಅಲ್ಲಿಯವರೆಗು ಈ ದೂತನನ್ನು ನಮ್ಮ ಅತಿಥಿಯಾಗಿ ಕಾಣುವುದು. ’’ ಎಂದು ಹೇಳಿ ಪುಲಿಕೇಶಿ ಅರಸ ಸಭೆಯನ್ನು ಅಂತ್ಯ ಗೊಳಿಸಿದನು.

ಕಾಲ ಕ್ರಮೇಣವಾಗಿ ಸಂಧಾನ ಧೃಡವಾಯಿತು. ಅದರ ಪ್ರಕಾರ ಪುಲಿಕೇಶಿ–ಹರ್ಷವರ್ಧನರ ಸಾಮ್ರಾಜ್ಯಗಳ ಸೀಮೆ ನರ್ಮದಾ ನದಿಯೆಂದು ನಿಶ್ಚಯ ಮಾಡಲಾಯಿತು. ಯಾರೊಬ್ಬರೂ ಇನ್ನೊಬ್ಬರ ಮೇಲೆ ಯುದ್ಧ ಆರಂಭಿಸಬಾರದೆಂಬ ವ್ಯವಸ್ಥೆಯೂ ಆಯಿತು. ಇದರ ಬದಲಾಗಿ ಪುಲಿಕೇಶಿ ಅರಸನಿಗೆ ಹರ್ಷರಾಜನು ಐದು ಸಹಸ್ರ ಆನೆಗಳು ಹಾಗು ನೂರು ಮಣ ಬಂಗಾರ, ರತ್ನ ವಜ್ರ ವೈಢೂರ್ಯಗಳನ್ನು ಕಾಣಿಕೆಯಾಗಿ ಕೊಟ್ಟು, ದಕ್ಷಿಣಾಪಥೇಶ್ವರನೆಂಬ ಬಿರುದನಿತ್ತು ಸನ್ಮಾನಿಸಿದನು.ಪುಲಿಕೇಶಿ ಮಹಾರಾಜನು ಸಾಧಿಸಿದ ದಿಗ್ವಿಜಯದಿಂದ ಅವನು ತಲಾ ತೊಂಬತ್ತೊಂಬತ್ತು ಸಹಸ್ರ ಗ್ರಾಮಗಳ ಮೂರು ಮಹಾರಾಷ್ಟ್ರಕಗಳ ಒಡೆಯನಾಗಿದ್ದನು. ಇದರಿಂದಾಗಿ ಅರಸನು ಪರಮೇಶ್ವರನೆಂಬ ಬಿರುದನ್ನೂ ಹೊಂದಿದನು. ಕರ್ನಾಟ ದೇಶ, ಕೊಂಕಣದೇಶ , ಆಂಧ್ರದೇಶ ಕೂಡಿದಂತೆ ಇಡೀ ದಕ್ಷಿಣಾಪಥದ ಒಡೆಯನಾಗಿದ್ದನು.

ಮಹಾರಾಜ, ಮಹಾಮಂತ್ರಿ, ಸೇನಾಧಿಪತಿ ಸಮೇತರಾಗಿ ಎಲ್ಲ ಸಾಮಂತರೂ ಸೈನ್ಯಗಳೊಡನೆ ವಾತಾಪಿಗೆ ಹಿಂತಿರುಗಿದರು. ನಾನೂ ಅವರೊಡನೆಯೇ ವಾತಾಪಿನಗರಕ್ಕೆ ಹಿಂತಿರುಗಿದೆ. ನನ್ನ ಗೂಢಚಾರನ ವೇಷ ಯಾ ಅಜ್ಞಾತವಾಸದ ಅವಶ್ಯಕತೆಯೂ ಇನ್ನಿರಲಿಲ್ಲ. ನನ್ನ ಶ್ಮಶ್ರುಗಳನ್ನು ಕ್ಷೌರಿಕನಿಗೆ ಅರ್ಪಿಸಿ, ನನ್ನ ಕಂಚುಕ ಪಗಡಿಗಳನ್ನು ತ್ಯಜಿಸಿ, ಪುನಃ ನನ್ನ ಶ್ವೇತ ವರ್ಣದ ಕಚ್ಚೆ ಪಂಚೆ ಹಾಗು ಶಿರದಲ್ಲಿ ಜಟೆ ಧರಿಸಿದೆ. ಮನೆಗೆ ಹಿಂತಿರುಗಿ ಮಾತಾ–ಪಿತರನ್ನು ಮತ್ತೆ ಕಂಡು ಸಂತೋಷವಾಯಿತು. ಅಮ್ಮ ಬಿಕ್ಕಿ ಬಿಕ್ಕಿ ಅತ್ತರು. ನಾನೂ ಮನೆಯ ಜೀವನದ ಆನಂದವನ್ನು ಮತ್ತೆ ಕಾಣುವಂತಾಯಿತು.

ಈ ಸಮಯದಲ್ಲಿ ಪುಲಿಕೇಶಿ ಅರಸನು ಹರ್ಷರಾಜನ ಮೇಲೆ ತಾನು ಸಾಧಿಸಿದ ದಿಗ್ವಿಜಯ ಸ್ಮರಣೆಗೆಂದು ದೇವಾಲಯವೊಂದನ್ನು ನಿರ್ಮಿಸುವ ಸಂಕಲ್ಪವನ್ನು ಮಾಡಿದನು. ಅಂತೆಯೇ ಅರಸನ ವಂಶಜರ ಮೊದಲ ರಾಜಧಾನಿಯಾದ, ಹತ್ತಿರದಲ್ಲಿಯೇ ಮಲಪ್ರಭಾ ನದಿಯ ತೀರದಲ್ಲಿದ್ದ ಅಯ್ಯಾವೊಳೆ ನಗರದಲ್ಲಿ ದೇವಾಲಯವನ್ನು ಕಟ್ಟಿಸುವ ಯೋಜನೆ ಹೂಡಿದನು. ಇದನ್ನು ಕಾರ್ಯರೂಪಕ್ಕೆ ತರಲು ಅರಸನು ಮಂತ್ರಿ ಹಾಗು ಕವಿಯಾದ ರವಿಕೀರ್ತಿಯನ್ನು ಕರೆಸಿ ‘‘ಮಂತ್ರಿ ರವಿಕೀರ್ತಿ, ನಾವು ನಮ್ಮ ಮುದ್ರೆಯನ್ನು ಇತಿಹಾಸದಮೇಲೆ ಒತ್ತಲು ಇಚ್ಛಿಸಿದ್ದೇವೆ. ಅಂತೆಯೇ, ನಮ್ಮ ಮೂಲ ರಾಜಧಾನಿಯಾದ ಅಯ್ಯಾವೊಳೆಯಲ್ಲಿ ದೇವಾಲಯವೊಂದನ್ನು ನಿರ್ಮಿಸಿ. ಬರುವ ಪೀಳಿಗೆಗಳಿಗೆ ನಮ್ಮ ಶೌರ್ಯ, ಖ್ಯಾತಿ ಹಾಗು ವೈಭವಗಳನ್ನು ನೆನಪಿಗೆ ತರಿಸುವಂತಹ ಸ್ಮಾರಕವೊಂದನ್ನು ರಚಿಸಿ. ಈ ಮಂದಿರವು ನಮ್ಮ ದಿಗ್ವಿಜಯದ ಸಂಕೇತವಾಗಿರಲಿ. ಎಷ್ಟು ವೆಚ್ಚವಾದರೂ ಸರಿ, ನಮ್ಮ ಬೊಕ್ಕಸದಿಂದ ಕೊಡಲಾಗುವುದು. ಈ ಕಾರ್ಯವನ್ನು ಸಾಧಿಸಲು ನೀವೇ ಸಮರ್ಥರು’’ ಎಂದು ಹೇಳಿದನು.

ಮಂತ್ರಿ ರವಿಕೀರ್ತಿಯು ‘‘ಅಪ್ಪಣೆಯಂತಾಗಲಿ, ದೊರೆ. ಆದರೆ ನನ್ನದೊಂದು ಸಣ್ಣ ಕೋರಿಕೆ. ಸನಾತನಧರ್ಮದ ದೇವತೆಗಳೊಂದಿಗೆ ನನ್ನ ಮೆಚ್ಚಿನ ದೇವನಾದ ಜಿನೇಂದ್ರನ ಮೂರ್ತಿಯೊಂದನ್ನು ಆ ದೇವಾಲಯದಲ್ಲಿ ಇರಿಸುವ ಅನುಮತಿ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಇದು ನಿಮ್ಮ ಧಾರ್ಮಿಕ ಸಹಿಷ್ಣುತೆಗೂ ಸಂಕೇತವಾಗಲಿ.’’ ಎಂದರು. ಪುಲಿಕೇಶಿ ಅರಸನು ‘‘ಹಾಗೆಯೇ ಆಗಲಿ.’’ ಎಂದು ಸಮ್ಮತಿಸಿ ಎಂದು ಹೇಳಿ ರವಿಕೀರ್ತಿಯನ್ನು ಅಯ್ಯಾವೊಳೆಗೆ ಕಳುಹಿಸಿಕೊಟ್ಟನು.

ಆ ಸಮಯದಲ್ಲಿ ಪುಲಿಕೇಶಿ ಅರಸನು ಉತ್ತಮ ಪ್ರಶಾಸಕನಾಗಲು ಯತ್ನಿಸುತ್ತಿದ್ದನು. ರಾಜ್ಯವನ್ನು ವಿಷಯ, ರಾಷ್ಟ್ರ, ಭೋಗಕಾಂಪನ ಹಾಗೂ ಗ್ರಾಮಗಳಾಗಿ ವಿಭಜಿಸಲಾಗಿತ್ತು. ಅಲ್ಲಿಯ ಆಡಳಿತಕ್ಕೆ ಅರಸನು ಪ್ರಬಲ ಹಾಗು ಸಮರ್ಥ ಸಾಮಂತರನ್ನು ನೇಮಿಸಿದನು. ಇವರಲ್ಲಿ ಹಲವರು ಹೆಂಗಳೆಯರೂ ಇದ್ದರು. ನಾಡು ಸಮೃದ್ಧವಾಗಿದ್ದು ಜನರು ಸುಖಸಂತೋಷಗಳಿಂದ ಕೂಡಿದ್ದರು. ಸತ್ಯ, ಧರ್ಮ, ನ್ಯಾಯಗಳೇ ಚಾಳುಕ್ಯ ರಾಷ್ಟ್ರದ ಕಂಬಗಳಾಗಿದ್ದವು.

ಹೀಗೆ ಶ್ರೀಮುಖ ಸಂವತ್ಸರವು ಭವ, ಭವವು ಯುವ ಸಂವತ್ಸರಕ್ಕೆ ತಿರುಗಿದವು. ಮಂತ್ರಿ ರವಿಕೀರ್ತಿಯು ಸ್ಮಾರಕ ದೇವಾಲಯವು ಸಂಪೂರ್ಣವೆಂಬ ಸುದ್ದಿಯೊಂದಿಗೆ ವಾತಾಪಿನಗರಕ್ಕೆ ಹಿಂತಿರುಗಿದರು. ಎಲ್ಲ ಸಾಮಂತರಾಜರು ಹಾಗು ಪಾಳೆಯಗಾರರಿಗೆ ಓಲೆ ಕಳುಹಿಸಲಾಯಿತು. ದೇವಾಲಯದಲ್ಲಿ ದೇವರನ್ನು ಪ್ರತಿಷ್ಠಾಪಿಸುವ ಸಮಾರಂಭಕ್ಕೆ

ಎಲ್ಲರಿಗೂ ನಿಮಂತ್ರಣ ನೀಡಲಾಗಿತ್ತು. ಅಂತೆಯೇ ನಿಯಮಿತ ದಿನದಂದು ಎಲ್ಲರೂ ಅಯ್ಯಾವೊಳೆಯಲ್ಲಿ ನೆರೆದಿದ್ದರು.

ಮಂತ್ರಿ ರವಿಕೀರ್ತಿಯು ಯಾರೂ ಕಾಣದಂತಹ ಭವ್ಯ ದೇವಾಲಯವನ್ನು ನಿರ್ಮಿಸಿದ್ದರು.ದೇವಾಲಯವು ಒಂದು ಸಣ್ಣ ಗುಡ್ಡದಮೇಲೆ ನಿಂತಿದೆ. ಎತ್ತರಿಸಿದ ಜಗಲಿಯೊಂದರ ಮೇಲೆ ದೇವಾಲಯದ ಕಟ್ಟಡವನ್ನು ಕಟ್ಟಲಾಗಿದೆ. ಮೆಟ್ಟಲು ಹತ್ತಿ ಹೋದರೆ ಮುಖಮಂಟಪ. ವಿಶಾಲವಾದ ಮುಖಮಂಟಪದ ಛಾವಣಿಯನ್ನು ಕಂಬಗಳು ಎತ್ತಿ ಹಿಡಿದಿವೆ. ಗರ್ಭಗುಡಿಯಲ್ಲಿ ಜಿನೇಂದ್ರನ ಕಲ್ಲಿನ ಪ್ರತಿಮೆ ಇರಿಸಲಾಗಿದೆ. ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣಾಪಥವಿದೆ. ದೇವಾಲಯದ ಸುತ್ತಲೂ ಸುಂದರ ಕೆತ್ತನೆಗಳನ್ನು ಹೊತ್ತ ಕಂಬಗಳುಳ್ಳ ಜಗಲಿ ಇದೆ.

ಮುಖಮಂಟಪ ಹಾಗು ಗರ್ಭಗುಡಿಗಳ ಮಧ್ಯೆ ಒಂದು ವಿಶಾಲ ಅಂತರಾಳವಿದೆ. ಅಂತರಾಳದಲ್ಲಿ ಅರ್ಧ ಲಲಿತಾಸನದಲ್ಲಿ ಕುಳಿತ ಚಾಳುಕ್ಯ ಕುಲದೇವಿಯಾದ ಕೌಶಿಕಾಂಬಿಕೆಯ ಬಹುಸುಂದರ ಕಲ್ಲಿನ ವಿಗ್ರಹವಿದೆ. ಅಧಿಷ್ಠಾನದಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ದೇವಾಲಯದ ಎಲ್ಲ ಕಕ್ಷಗಳಲ್ಲಿ ಹಲವಾರು ದೇವದೇವಿಯರ ಸುಂದರ ಶಿಲಾ ಪ್ರತಿಮೆಗಳಿವೆ. ಮೆಟ್ಟಲು ಹತ್ತಿ ದೇವಾಲಯದ ಛಾವಣಿಯ ಮೇಲೆ ಹೋದರೆ ಗರ್ಭಗೃಹದ ಮೇಲೆ ಮತ್ತೊಂದು ಗರ್ಭಗುಡಿಯಲ್ಲಿ ತೀರ್ಥಂಕರನ ಮತ್ತೊಂದು ಪ್ರತಿಮೆಯನ್ನು ಕಾಣಬಹುದು. ಛಾವಣಿಯಿಂದ ಇಡೀ ಅಯ್ಯಾವೊಳೆ ಊರಿನ ನೋಟವನ್ನೂ ಕಾಣಬಹುದು. ಪುಲಿಕೇಶಿ ಅರಸನ ಪಿತಾಮಹ ಕಟ್ಟಿಸಿದ ದೇವಾಲಯಗಳು, ಹಾಗು ಹಿಂದಿನ ಕಾಲದ ಅರಮನೆ ಎಲ್ಲವೂ ಕಾಣಿಸುತ್ತವೆ.

ಪ್ರತಿಷ್ಠಾಪನೆಗೆ ಬ್ರಾಹ್ಮಣರ ಹಾಗು ಜೈನ ಶ್ರಾವಕರ ಮಂತ್ರಗಳು ಮೊಳಗುತ್ತಿದ್ದವು. ರಾಷ್ಟ್ರದ ಅಧಿಕಾರಿಗಳು ಮಾತ್ರವಲ್ಲದೆ, ಸಾಮಾನ್ಯ ಜನರೂ ಆ ದಿವ್ಯ ನೋಟವನ್ನು ಕಾಣಲೆಂದು ಅಂದು ಅಲ್ಲಿ ನೆರೆದಿದ್ದರು. ಆಡಂಬರ ಅಭಿಷೇಕಗಳೊಂದಿಗೆ ದೇವತೆಗಳ ಪ್ರತಿಷ್ಠಾಪನೆಯಾಯಿತು.

“ಜೈ ಕೌಶಿಕಾಂಬಿಕೆ, ಜೈ ಚಾಲುಕ್ಯೇಶ್ವರ” ಎಂಬ ಘೋಷಣೆಗಳು ಗಗನಕ್ಕೇರಿದವು. ◈

(*ಟಿಪ್ಪಣಿಗಳು:*
*ಅಯ್ಯಾವೊಳೆ, ವಾತಾಪಿ, ವೈಜಯಂತಿ* – ಐಹೊಳೆ, ಬಾದಾಮಿ, ಬನವಾಸಿ ಪಟ್ಟಣಗಳ ಹಳೆಯ ಹೆಸರುಗಳು;
*ದೊರಕ:* ಹೆದೆ ;
*ಶ್ಮಶ್ರು:* ಮೀಸೆ,ಗಡ್ಡ)


BEST WISHES TO KANNADA KOOTA

NEW YORK LIFE

The Company You Keep®

ANNAMALAI PALANI

39650 Liberty St. Suite 200

Fremont, CA 94538
T 510-624-4113
F 510-623-6836
apalani@ft.newyorklife.com
Ca. Ins. Lic #0688775

Registered Representative offering securities through NYLIFE Securities Inc. Member of NASD/SIPC



# ಕಾರ್ಮೋಡದಂಚಿನ ಬದುಕು

***ಸ್ವರ್ಣಸೇತು ಯುಗಾದಿ ಕಥಾಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಪಡೆದ ಕಥೆ***

**ಜ್ಯೋತಿ ಶೇಖರ್**
ಮಿಲ್ಪೀಟಸ್, ಕ್ಯಾಲಿಫೋರ್ನಿಯ

"ಐಯಾಮ್ ಸಾರಿ, ಸುಮ. ಯುವರ್ ಪ್ರೆಗ್ನೆನ್ಸಿ ಕ್ಯಾನ್ನಾಟ್ ಬಿ ಸೇವ್ಡ್", ಎಗ್ಸಾಮಿನಿಂಗ್ ರೂಮಿನಲ್ಲಿ ತನ್ನ ಕೈ ಗ್ಲವ್ಸ್ ತೆಗೆದು ಹಾಕುತ್ತಾ ಡಾ.ಕೂಪರ್ ನುಡಿದಳು. ಒತ್ತರಿಸಿ ಬಂದ ದುಃಖವನ್ನು ತಡೆಗಟ್ಟಿ ಸುಮ ಮೆಲ್ಲನುಸುರಿದಳು, "ಡಾಕ್ಟರ್, ವೆನ್ ಕೆನ್ ಐ ಹ್ಯಾವ್ ಮೈ ನೆಕ್ಸ್ಟ್ ಐ.ವಿ.ಎಫ಼್ ಪ್ರೊಸೀಜರ್?" "ಐ ವುಡ್ ಸಜೆಸ್ಟ್ ದಟ್ ಯು ಟೇಕ್ ಎ ಬ್ರೇಕ್, ಸುಮ." ಡಾ. ಕೂಪರ್ ಧ್ವನಿಯಲ್ಲಿ ಸಹಾನುಭೂತಿ ಉಕ್ಕಿ ಹರಿಯುತ್ತಿತ್ತು. "ದಟ್ ವಿಲ್ ಗಿವ್ ಯು ಸಮ್ ಟೈಮ್ ಟು ಕನ್ಸಿಡರ್ ಅದರ್ ಆಪ್ಶನ್ಸ್." "ಬಟ್ ಐ ಡೋನ್ಟ್ ವಾಂಟ್ ಅದರ್ ಆಪ್ಶನ್ಸ್, ಡಾಕ್ಟರ್!" ಸುಮಳಿಗೆ ಚೀರಬೇಕೆನ್ನಿಸಿತು, "ಐ ಜಸ್ಟ್ ವಾಂಟ್ ಎ ಬೇಬಿ, ದಟ್ಸ್ ಆಲ್!" ಆದರೆ ಮರುನುಡಿಯದೇ ಆಸ್ಪತ್ರೆಯ ಗೌನು ಬಿಚ್ಚಿ ತನ್ನ ಬಟ್ಟೆ ಧರಿಸಲನುವಾದಳು. ಸುಮಳ ಮನಸ್ಸಿನ ದುಗುಡ ಅರ್ಥವಾದಂತೆ ಡಾ.ಕೂಪರ್, "ಯು ಕೆನ್ ಟ್ರೈ ಐ.ವಿ.ಎಫ಼್ ಎಗೈನ್ ಇನ್ ೩–೪ ಮನ್ತ್ಸ ಟೈಮ್. ಯುವರ್ ಮೈಂಡ್ ಅಂಡ್ ಬಾಡಿ ಶುಡ್ ಹೀಲ್ ಬೈ ದೆನ್." ಎಂದರು.

ನೆಪಮಾತ್ರಕ್ಕೆ ಯಾವುದೋ ಮ್ಯಾಗಜ಼ಿನ್ ಮೇಲೆ ಕಣ್ಣೋಡಿಸುತ್ತಾ, ಹೊರಗೆ ಗಿರಿಧರ ಕಾತರದಿಂದ ಕಾಯುತ್ತಾ ಕುಳಿತಿದ್ದ. ಬೆಳಿಗ್ಗೆ ಸುಮ ಬಾತ್‌ರೂಮಿನಲ್ಲಿ ಚೀರಿದಾಗಲೇ ಅವನ ಎದೆ ನಡುಗಿತ್ತು. ಇನ್ನೂ ಮೂರು ತಿಂಗಳು ತುಂಬಿಲ್ಲ, ಆಗಲೇ ರಕ್ತಸ್ರಾವ ಶುರುವಾದರೆ, ಮಗು ಉಳಿಯುವ ಸಾಧ್ಯತೆ ಕಡಿಮೆ ಎಂಬ ಅರಿವಾಗಿ ಮನಸ್ಸು ಡೋಲಾಯಮಾನವಾಗಿತ್ತು. ಆದರೂ ಮನಃಕ್ಷೋಭೆಯನ್ನು ತೋರಗೊಡದೆ, ಸುಮಳಿಗೆ ಧೈರ್ಯ ತುಂಬಿ ಆಸ್ಪತ್ರೆಗೆ ಕರೆತಂದಿದ್ದ. ಡಾ.ಕೂಪರ್ ಸುಮಳನ್ನು ಪರೀಕ್ಷಿಸಿ, ಗರ್ಭಪಾತವಾಗಿದೆ ಎಂದು ಸ್ಪಷ್ಟಪಡಿಸಿದಾಗ, ಗಿರಿಧರ ಕುಸಿದುಹೋದ. ಜೊತೆಗೆ, ಸೂಕ್ಷ್ಮ ಮನಃಸ್ಥಿತಿಯ ತನ್ನ ಪತ್ನಿ ಈ ಆಘಾತ ತಡೆಯಬಲ್ಲಳೇ ಎಂಬ ಹೆದರಿಕೆ ಉಂಟಾಗಿತ್ತು. ಇನ್ನು ಮನೆಯಲ್ಲಿ ಅವಳಿಗೆ ಯಾವ ರೀತಿ ಸಮಾಧಾನ ನೀಡುವುದು ಎಂಬ ತೊಳಲಾಟ ಶುರುವಾಯಿತು.

ಆಸ್ಪತ್ರೆಯಿಂದ ಮನೆಗೆ ಬರುವಾಗ ದಾರಿಯಲ್ಲಿ ಗಿರಿ ಮತ್ತು ಸುಮಳ ನಡುವೆ ಅಸಹನೀಯ ಮೌನ ಗೋಡೆ ಕಟ್ಟಿತ್ತು. ಮನೆಯಲ್ಲೂ ಒಂದು ಮಾತಿಲ್ಲ. ಕೊನೆಗೆ ಗಿರಿಯೇ ಮೌನ ಮುರಿದು ಸಂತೈಸುವಂತೆ ನುಡಿದ, "ಸುಮ, ನೀನು ಹೀಗೆ ಕಷ್ಟ ಪಡುವುದು ನನ್ನಿಂದ ನೋಡಲಾಗುವುದಿಲ್ಲ. ಡಾಕ್ಟರು ಹೇಳಿದ ಹಾಗೆ ಲೆಟ್ಸ್ ಟೇಕ್ ಎ ಬ್ರೇಕ್. ಇಬ್ಬರೂ ರಜೆ ತೆಗೆದುಕೊಂಡು ಎಲ್ಲಾದರೂ ವೆಕೇಶನ್‌ಗೆ ಹೋಗೋಣ. ಇಷ್ಟಕ್ಕೂ ಹೀಗೆ ಯೋಚನೆ ಮಾಡುವುದಕ್ಕೆ ನಾವೇನು ಮುದುಕರೇ? ಈವತ್ತಲ್ಲಾ ನಾಳೆ ಮಗು ಆಗುತ್ತೆ."

ಶೂನ್ಯದತ್ತ ನಿಟ್ಟಿಸುತ್ತಾ ಕುಳಿತಿದ್ದ ಸುಮಳಿಗೆ ಅನ್ನಿಸಿತು. ಇವರ್ಯಾರಿಗೂ ನನ್ನ ಪರಿಸ್ಥಿತಿ ಅರ್ಥವಾಗುವುದಿಲ್ಲವೆ? ನನಗಾಗಲೇ ವಯಸ್ಸು ಮೂವತ್ತೈದಕ್ಕೆ ಕಾಲಿಟ್ಟಿದೆ. ನನ್ನ ಸ್ನೇಹಿತೆಯರಿಗೆಲ್ಲಾ ಆಗಲೇ ಎರಡು ಮಕ್ಕಳಿದ್ದಾರೆ. ಈಗ ಮೂರು ವರ್ಷದಿಂದಲೂ ನಾವು ಮಕ್ಕಳಿಗಾಗಿ ಪ್ರಯತ್ನಿಸುತ್ತಲೇ ಬಂದಿದ್ದೇವೆ. ಮೊದಲು ಗಂಡ ಹೆಂಡಿರಲ್ಲಿ ಏನೂ ನ್ಯೂನತೆ ಇಲ್ಲವೆಂದು ಇದೇ, "ಟೇಕ್ ಇಟ್ ಈಜ಼ಿ" ಎಂಬ ಸಲಹೆ ಕೊಟ್ಟಿದ್ದರು ವೈದ್ಯರು. ಒಂದು ವರ್ಷವಾದರೂ ಮಕ್ಕಳಾಗದಿದ್ದಾಗ ಇಬ್ಬರನ್ನೂ ಕೂಲಂಕಷವಾಗಿ ಪರೀಕ್ಷೆ ಮಾಡಿ ಸುಮಳ ಗರ್ಭಕೋಶದಲ್ಲಿರುವ ದೋಷವನ್ನು ಕಂಡು ಹಿಡಿದಿದ್ದರು. ನಂತರ, ಫ಼ರ್ಟಿಲಿಟಿ ಟ್ರೀಟ್‌ಮೆಂಟ್ ಶುರುಮಾಡಿದ್ದರು. ಮೊದಲು ಮಾತ್ರೆ, ಅದು ವಿಫಲವಾದಾಗ ಸೂಜಿಮದ್ದು. ತನ್ನ ಆಫ಼ೀಸಿನ ಕೆಲಸದ ಪ್ರಾಜೆಕ್ಟಿನ ಹಾಗೆ, ಪ್ರತಿ ತಿಂಗಳೂ ಗರ್ಭಧಾರಣೆಗೂ ಒಂದು ಸ್ಕೆಡ್ಯೂಲ್ ತಯಾರು ಮಾಡಬೇಕಾಯಿತು. ಹಾರ್ಮೋನುಗಳಿರುವ ಸೂಜಿಮದ್ದನ್ನು ತಾನೇ ತನ್ನ ದೇಹಕ್ಕೆ ಚುಚ್ಚಿಕೊಳ್ಳುತ್ತಿದ್ದಳು. ಅದರಿಂದ ಉಂಟಾಗುತ್ತಿದ್ದ ದೈಹಿಕ ಮತ್ತು ಮಾನಸಿಕ ಏರುಪೇರುಗಳು ಒಂದೇ ಎರಡೇ? ಇಷ್ಟೆಲ್ಲಾ ಸಹಿಸಿಕೊಂಡರೂ ಕುಡಿ ಚಿಗುರದಿದ್ದಾಗ ಪ್ರಣಾಳಶಿಶುವನ್ನು ತಯಾರಿಸುವ ಯೋಜನೆ – ಐ.ವಿ.ಎಫ಼್.ನ ಮೊರೆಹೊಕ್ಕಿದ್ದರು. ನಿಜಕ್ಕೂ ಎಲ್ಲವೂ ಎಷ್ಟು ಯಾಂತ್ರಿಕವಾಗಿ ನಡೆದಿತ್ತು! ತನ್ನ ಗರ್ಭಧಾರಣೆ ಗಿರಿಧರ ಮತ್ತು ತನ್ನ ಪ್ರೀತಿಯ ಫಲವಾಗಿರದೆ ಒಂದು ಪ್ರಯೋಗದಂತೆ ತೋರತೊಡಗಿತ್ತು. ಪ್ರತಿಹೆಜ್ಜೆಯಲ್ಲೂ ಮುಂದೆ ಏನಾಗುವುದೋ ಎಂಬ ಆತಂಕ. ಡಾಕ್ಟರು "ಕಂಗ್ರಾಟ್ಸ್, ಯುವರ್ ಎಂಬ್ರಿಯೊ ಇಂಪ್ಲಾಂಟೇಷನ್ ಇಸ್ ಎ ಸಕ್ಸೆಸ್!" ಎಂದಾಗಲೂ ಒಳಗೇ ಒಂದು ರೀತಿಯ ಭೀತಿ. ಇದೆಲ್ಲದರ ನಡುವೆಯೂ ಸಹ ಆಫ಼ೀಸಿನಲ್ಲಿ, ಬಂಧು ಮಿತ್ರರ ಮಧ್ಯೆ ನಗುಮುಖದ ಮುಖವಾಡ ಧರಿಸಿ ನಿಭಾಯಿಸುತ್ತಾ ಬಂದಿದ್ದೇನೆ. ಹೀಗಿರುವಾಗ, ಅಬ್ಬಾ! ಹೇಗೆ ಸುಲಭವಾಗಿ, "ನಾವೇನು ಮುದುಕರೇ, ಲೆಟ್ಸ್ ಗಿವ್ ಇಟ್ ಎ ಬ್ರೇಕ್" ಎನ್ನುತ್ತಾನೆ ಗಿರಿ. ಉಕ್ಕುತ್ತಿದ್ದ ಅಳುವಿನಲ್ಲೇ ನುಡಿದಳು,

“ಗಿರಿ, ನಮಗೆ ಇನ್ನು ಮಕ್ಕಳೇ ಆಗದಿದ್ದರೆ ಏನು ಮಾಡುವುದು? ಐ ಡೋಂಟ್ ವಾಂಟ್ ಟು ಲಿವ್ ಲೈಕ್ ದಿಸ್.” ಧಾವಿಸಿ ಬಂದ ಗಿರಿ ಅವಳನ್ನು ತಬ್ಬಿ ಹಿಡಿದು, “ಸಮಾಧಾನ ಮಾಡಿಕೋ ಸುಮ, ಪ್ಲೀಸ್” ಎಂದು ದಿನಗಳೆದಂತೆ ಸುಮಳಿಗೆ ತಾಯ್ತನ ಒಂದು ಮರೀಚಿಕೆಯಂತೆ ಭಾಸವಾಗತೊಡಗಿತ್ತು. ಗರ್ಭಪಾತಕ್ಕೆ ಯಾವುದೇ ಕಾರಣವನ್ನು ವೈದ್ಯರು ತಿಳಿಸಿರಲಿಲ್ಲ. ಗಿರಿಧರ ಅವಳಿಗೆ ಆಫೀಸಿನ ಕೆಲಸದ ಒತ್ತಡ ಕಾರಣವಿರಬಹುದೆಂದೂ, ಬೇಕಾದರೆ ಅವಳು ಕೆಲಸಕ್ಕೆ



*ಚಿತ್ರ: ಸೌಜನ್ಯ ಕೇಣಿ*

ರಮಿಸಲು ಯತ್ನಿಸಿದ. ಅವನ ಮನಸ್ಸೂ ಜರ್ಜರಿತವಾಗಿತ್ತು. ಎರಡು ವರ್ಷದ ಹಿಂದೆ ಇಲ್ಲಿನ ಪ್ರತಿಷ್ಠಿತ ಬಡಾವಣೆಯಲ್ಲಿ ಮನೆ ಕೊಂಡಾಗ ಒಂದು ಕೋಣೆಯನ್ನು ಮಗುವಿಗಾಗಿ ಕಾದಿರಿಸಿದ್ದ. ಆಫೀಸಿನ ಕೆಲಸದ ಮೇಲೆ ಊರುಗಳಿಗೆ ಹೋದಾಗಲೆಲ್ಲ ಯಾವುದಾದರೂ ಒಂದು ಪುಟ್ಟಬೊಂಬೆಯನ್ನು ಖರೀದಿಸಿ ತರದೇ ಇರುತ್ತಿರಲಿಲ್ಲ. ಮಗುವಿನ ಕೋಣೆಯಂತೂ ಬಣ್ಣಬಣ್ಣದ ಗೊಂಬೆಗಳಿಂದ ತುಂಬಿ ಹೋಗಿತ್ತು. ಗಿರಿಗೆ ಈ ನಡುವೇ ಆ ಕೋಣೆಯ ಕಡೆ ಹೋದರೆ, ಪುಟ್ಟ ಮಗುವೊಂದು ಆ ಬೊಂಬೆಗಳ ಮಧ್ಯೆ ಆಡುತ್ತಾ ಕೂತಂತೆ ಕಲ್ಪನೆಯೊಂದು ಮಿಂಚಿನಂತೆ ಸುಳಿದು ಮಾಯವಾಗುತ್ತಿತ್ತು. ಇನ್ನು ಅದು ಕನಸಿನ ಮಾತೇ ಸರಿ. ವಿಷಾದದ ನಿಟ್ಟುಸಿರೊಂದು ಹೊರಬಿತ್ತು.

ರಾಜೀನಾಮೆ ಕೊಡಬೇಕೆಂದೂ ಸೂಚಿಸಿದ್ದ. ಆದರೆ ಇರುವ ಕೆಲಸವನ್ನು ಬಿಟ್ಟು ಮನೆಯಲ್ಲಿ ಕೂತರೆ ತನಗೆ ಹುಚ್ಚೇ ಹಿಡಿಯಬಹುದೆಂದು ಅವಳಿಗನ್ನಿಸುತ್ತಿತ್ತು. ಜೊತೆಗೆ ಇನ್ನೊಂದು ಐ.ವಿ.ಎಫ್. ಯೋಜನೆಯನ್ನು ಶುರು ಮಾಡಿದರೆ ಮತ್ತೆ ಸುಮಾರು ಹದಿನೈದು ಸಾವಿರ ಡಾಲರಿನಷ್ಟು ಖರ್ಚು ಖಂಡಿತ. ಗಿರಿಯೊಬ್ಬನ ವೇತನದಲ್ಲಿ ಅದನ್ನು ಭರಿಸುವುದಾದರೂ ಹೇಗೆ? ಯೋಚನೆಗಳನ್ನು ಬದಿಗೊತ್ತಿ ಕೆಲಸದಲ್ಲಿ ಮುಳುಗಲು ಪ್ರಯತ್ನಿಸಿದ್ದಳು. ಆದರೆ ಮಗುವಿನ ಆಸೆ ಅವಳನ್ನು ಬೆಂಬಿಡದೆ ಕಾಡುತ್ತಿತ್ತು.

ವೈದ್ಯರ ಬಳಿ ತಪಾಸಣೆಗೆ ಹೋದಾಗ ಈ ವಿಷಯವನ್ನು ಮತ್ತೆ ಪ್ರಸ್ತಾಪಿಸಿದಳು. ಅವರ ಒಪ್ಪಿಗೆ ಪಡೆದು ಐ.ವಿ.ಎಫ್. ಮತ್ತೆ ಮಾಡಿಸಿಕೊಂಡು ಮುಂದುವರೆದರೂ ಮನದಲ್ಲಿ

ಹೇಳಲಾರದ ದುಗುಡ. ತಾನು ಮತ್ತೆ ಗರ್ಭವತಿಯೆಂದು ವೈದ್ಯರು ಹೇಳಿದಾಗ, ಈ ಬಾರಿಯಾದರೂ ಶಿಶುವನ್ನು ಉಳಿಸು ದೇವರೇ ಎಂದು ಮೊರೆಯಿಟ್ಟಿದ್ದಳು. ನಂತರದ ಒಂಬತ್ತು ತಿಂಗಳು ಒಂಬತ್ತು ಯುಗದಂತೆ ದಂಪತಿಗಳಿಬ್ಬರೂ ಕಳೆದರು. ಇದರ ಮಧ್ಯೆ ಸುಮಳ ತಂದೆ ತಾಯಿಯರಿಗೆ ಭಾರತದಿಂದ ಬರಲು ವೀಸಾ ಸಿಗದ ಕಾರಣ, ಬಾಣಂತನಕ್ಕೆ ಯಾರದೂ ಸಹಾಯ ಇರುವುದಿಲ್ಲವೆಂಬುದು ಖಾತ್ರಿಯಾಯಿತು. ಹೊಟ್ಟೆಯಲ್ಲಿರುವ ಮಗುವಿನ ಬೆಳವಣಿಗೆಯಲ್ಲಿ ಮೈಮರೆತಿದ್ದ ಸುಮಳಿಗೆ ಈ ಸುದ್ದಿಯಿಂದ ಬೇಜಾರಾದರೂ, ಸದ್ಯ, ಹೆರಿಗೆ ಸುಸೂತ್ರವಾಗಿ ಆದರೆ ಸಾಕು, ಆಮೇಲೆ ನಾವೇ ಭಾರತಕ್ಕೆ ಹೋಗಿ ಮಗುವನ್ನು ತೋರಿಸಿಕೊಂಡು ಬರಬಹುದು ಎಂದು ತನಗೆ ತಾನೇ ಸಮಾಧಾನ ಮಾಡಿಕೊಂಡಳು.

ಎಂಟನೇ ತಿಂಗಳು ತುಂಬುತ್ತಿದ್ದಂತೆ ಗಿರಿ ಅಡುಗೆ ಮತ್ತು ಮನೆಗೆಲಸಕ್ಕೆಂದು ಮಧ್ಯವಯಸ್ಸಿನ ಗುಜರಾತಿ ಹೆಂಗಸು ಚಾರುಬೆನ್ ಎಂಬುವವಳನ್ನು ಗೊತ್ತುಮಾಡಿದ್ದ. ಸುಮಳಿಗೆ ಯಾರಾದರೂ ಕನ್ನಡದವರು ಸಿಗಬಾರದಿತ್ತೇ ಎಂದು ನಿರಾಸೆಯಾಗಿತ್ತು. ಅಮ್ಮ ಖಾರಖಾರವಾಗಿ ಮಾಡುತ್ತಿದ್ದ ಮಜ್ಜಿಗೆಹುಳಿಯನ್ನು ನೆನೆಸಿಕೊಳ್ಳುತ್ತಾ ಚಾರುಬೆನ್ ಮಾಡಿದ ಗುಜರಾತಿ ಕಡಿಯನ್ನು ತಿನ್ನುವಳು. ಸಾರಿನ ರೂಪವಿರುವ ದಾಲ್‌ಗೆ ''ದಯವಿಟ್ಟು ಸಿಹಿ ಬೆರೆಸಬೇಡಿ'' ಎಂದು ಅವರನ್ನು ಬೇಡುವಳು. ಬೆಂಗಳೂರಿನಿಂದ ಅಮ್ಮ ಮಾಡಿದ ಗೊಜ್ಜು ಮತ್ತು ಚಟ್ನಿಪುಡಿಯನ್ನು ಕೊರಿಯರ್ ಮೂಲಕ ತರಿಸಿಕೊಂಡು, ಗಿರಿಗೂ ಕೊಡದೆ ಬಾಯಿ ಚಪ್ಪರಿಸುತ್ತಾ ಮೆಲ್ಲುವಳು. ಇದರ ಮಧ್ಯೆ ಸುಮಳಿಗೆ ಸುಮಾರು ಗರ್ಭವತಿಯರಿಗೆ ಬರುವ ಜೆಸ್ಟೇಷನಲ್ ಡಯಾಬಿಟಿಸ್ ರೋಗವೂ ತಗುಲಿತ್ತು. ಇದು ಹೈ ರಿಸ್ಕ್ ಪ್ರೆಗ್ನೆನ್ಸಿ ಎಂದು ಪರಿಗಣಿಸಿ ವೈದ್ಯರು, ಮಗು ತೀರಾ ದಪ್ಪಗಾಗದಿರುವಂತೆ ನೋಡಿಕೊಳ್ಳಲು ಸುಮಳ ಮೇಲೆ ಕಟ್ಟುನಿಟ್ಟಾದ ನಿಯಮಗಳನ್ನು ಹೇರಿದರು. ಸರಿ ಮತ್ತೆ ಸಮಯಾನುಸಾರವಾಗಿ ಮೈಯಿಗೆ ಇನ್ಸುಲಿನ್ ಚುಚ್ಚಿಕೊಳ್ಳುವುದು, ಅಳತೆ ಮಾಡಿ ರುಚಿಯಿಲ್ಲದ ಪ್ರೋಟೀನ್ ಮಿಶ್ರಿತ ಆಹಾರ ಬಾಯಿಗೆ ತುರುಕಿಕೊಳ್ಳುವುದು, ವ್ಯಾಯಾಮ ಬೇಕೆಂದು ಊಟವಾದ ಮೇಲೆ ಬಿಸಿಲಿರಲಿ ಮಳೆಯಿರಲಿ ಅರ್ಧ ಗಂಟೆ ನಡೆಯುವುದು. ಸುಮಳಿಗೆ ತನ್ನ ಬದುಕನ್ನು ಯಾರೋ ಮತ್ತೆ ಚಕ್ರದಲ್ಲಿ ಸಿಕ್ಕಿಸಿ ತಿರುಗಿಸುತ್ತಿರುವಂತೆ ಭಾಸವಾಗುತ್ತಿತ್ತು. ಜೀವನದ ಎಲ್ಲಾ ಏರುಪೇರುಗಳನ್ನೂ ತಾನೊಬ್ಬಳೆ ಭರಿಸುತ್ತಿರುವಂತೆ, ತನ್ನ ಪತಿ ಗಿರಿಧರ ಒಬ್ಬ ಮೂಕ ಪ್ರೇಕ್ಷಕನಾಗಿ ತನ್ನ ಬದಿಗಿರುವಂತೆ ಅನ್ನಿಸಿ ಅಸಾಧ್ಯ ಕೋಪ ಬರುತ್ತಿತ್ತು. ಹೆಂಡತಿಯ ಮಾನಸಿಕ ಕ್ಲೇಶ ಅರ್ಥವಾಗದೆ ಗಿರಿಧರ ತನ್ನ ಆಫೀಸಿನ ಕೆಲಸದಲ್ಲಿ ತನ್ನನ್ನು ಹುದುಗಿಸಿಕೊಂಡಿದ್ದ. ಕೊನೆಯಲ್ಲಿ ವೈದ್ಯರು ಮಗುವನ್ನು ಆಪರೇಷನ್ ಮಾಡಿ ಹೊರತೆಗೆದರೆ ಒಳ್ಳೆಯದೆಂದು ನಿರ್ಧರಿಸಿ ದಿನವನ್ನು ಗೊತ್ತು ಮಾಡಿದಾಗ ಸುಮ ಸಮಾಧಾನದ ನಿಟ್ಟುಸಿರೆಳೆದಿದ್ದಳು.

ಹಾಸ್ಪಿಟಲ್ ಕೋಣೆಯಲ್ಲಿ ಮಲಗಿದ್ದ ಸುಮಳಿಗೆ ತನ್ನ ಮಗುವನ್ನು ಕಣ್ಣಾರೆ ನೋಡುವ ದಿನ, ತನ್ನ ಎದೆಗವಚಿಕೊಂಡು ಮುದ್ದಾಡುವ ದಿನ ಕೊನೆಗೂ ಬಂದಿತೆಂದು ಸಂತಸ. ಅನಸ್ತೇಸಿಯಾ ತಜ್ಞರಾದ ಡಾ.ಚೆನ್ ನೋವು ಮರೆಸಲು ಅವಳ ಬೆನ್ನಿಗೆ ಎಪಿಡ್ಯೂರಲ್ ಹಚ್ಚಿದ್ದರು. ಕ್ರಮೇಣ ಅವಳಿಗೆ ನಿದ್ದೆಯ ಮಂಪರು ಸೆಳೆಯತೊಡಗಿತ್ತು. ಗಿರಿ ಅವಳ ಬದಿಯಲ್ಲಿ ಮಗುವಿನ ಹೆಸರುಗಳುಳ್ಳ ಪಟ್ಟಿ ಹಿಡಿದು ಕೂತು ಒಂದೊಂದೇ ಹೆಸರು ಉಚ್ಚರಿಸುತ್ತಿದ್ದರೆ ಅವಳಿಗೆ ಅವನ ತುಟಿಗಳ ಚಲನೆ ಮಂತ್ರಗಳನ್ನು ಹೇಳುತ್ತಿದ್ದ ಊರಿನ ಜೋಯಿಸರ ಜ್ಞಾಪಕ ತಂದಿತು. ಗಿರಿಗೆ ಅದನ್ನು ಹೇಳಲು ಹೋಗುತ್ತಿದ್ದಂತೆ ಮೇಲೆಲ್ಲೋ ತೇಲಿದಂತಾಗಿ ಅಪ್ರಯತ್ನವಾಗಿ ಕಣ್ಣು ಮುಚ್ಚಿದಳು. ''ಸುಮ! ಆರ್ ಯು ಓಕೆ?'' ಎಂಬ ನರ್ಸುಗಳ ಕೂಗಾಟ, ತನ್ನ ದೇಹಕ್ಕೆ ಸಿಕ್ಕಿಸಿದ್ದ ಯಂತ್ರಗಳ ''ಬೀಪ್! ಬೀಪ್!'' ಶಬ್ದಗಳ ನಡುವೆ ''ಪೇಜಿಂಗ್ ಡಾ.ಕೂಪರ್'' ಎಂದು ಆಸ್ಪತ್ರೆಯ ಧ್ವನಿವರ್ಧಕದ ಆತಂಕ ತುಂಬಿದ ದನಿ ಅಲೆ ಅಲೆಯಾಗಿ ಸುಮಳ ಕಿವಿಗೆ ಅಪ್ಪಳಿಸಿತು. ''ಸುಮ, ನನ್ನ ಕಂದ, ಹೆದರಬೇಡಮ್ಮ'' ಎಂದು ಸಾಂತ್ವನ ಹೇಳುವಂತಿದ್ದ ಅಮ್ಮನ ಮುಖ ಕಾಣಿಸುತ್ತಿದ್ದಂತೆಯೇ ಎಲ್ಲವೂ ಕತ್ತಲೆಯಾಯಿತು.

ಫಕ್ಕನೆ ಎಚ್ಚರಿಕೆಯಾಗಿ ಕಣ್ತೆರೆದಾಗ ಪಕ್ಕದಲ್ಲಿ ಡಾ.ಕೂಪರ್, ಡಾ.ಚೆನ್, ನರ್ಸುಗಳು ಮತ್ತು ಗಿರಿಧರ ಕಂಡರು. ಮನಸ್ಸೆಲ್ಲಾ ಗೋಜಲು ಗೋಜಲಾಗಿತ್ತು. ''ವಾಟ್ ಹ್ಯಾಪೆಂಡ್? '' ಎಂದು ಕೇಳಲು ಹೋದಾಗ ಅವಳ ಬಾಯಿ ತೊದಲಿ ಅಸ್ಪಷ್ಟ ಶಬ್ದಗಳು ಹೊರಬಂದವು. ಡಾ.ಕೂಪರ್ ಅವಳ ಕೈ ಹಿಡಿದು, ''ಸುಮ, ಯುವರ್ ಬಾಡಿ ಹ್ಯಾಡ್ ಎನ್ ಅನೆಕ್ಸ್ಪೆಕ್ಟೆಡ್ ರಿಯಾಕ್ಷನ್ ಟು ಎಪಿಡ್ಯೂರಲ್. ಸೋ, ವಿ ಹ್ಯಾಡ್ ಟು ಇಮ್ಮೀಡಿಯಟ್ಲಿ ಆಪರೇಟ್ ಆನ್ ಯು ಅಂಡ್ ಟೇಕ್ ಔಟ್ ಯುವರ್ ಬೇಬಿ.'' ಎಂದರು. ಗಿರಿ ತಕ್ಷಣ, ''ಹೆಣ್ಣು ಮಗು ಸುಮ, ಹುಷಾರಾಗಿದೆ. ಏನೂ ಯೋಚನೆ ಮಾಡಬೇಡ.'' ಎಂದು ತಲೆ ನೇವರಿಸಿದ. ಅವಳ ಪ್ರಶ್ನಾತ್ಮಕ ನೋಟಕ್ಕೆ ಉತ್ತರವಾಗಿ ಮಕ್ಕಳ ತಜ್ಞರಾದ ಡಾ.ವೆಲ್ಲರ್ ಮುಂದೆ ಬಂದು, ''ಯುವರ್ ಬೇಬಿ ಇಸ್ ಬೀಂಗ್ ಕೆಪ್ಟ್ ಇನ್ ಎನ್ ಇನ್ಕ್ಯುಬೇಟರ್ ಫಾರ್ ಸಮ್ಟೈಮ್ ಜಸ್ಟ್ ಟು ಮಾನಿಟರ್ ಇಟ್ಸ್ ವೈಟಲ್ ಸೈನ್ಸ್. ಆಸ್ ಸೂನ್ ಆಸ್ ಇಟ್ಸ್ ಸ್ಟೇಬಲ್, ವಿ ವಿಲ್ ಬ್ರಿಂಗ್ ಹರ್ ಟು ಯು.'' ಎಂದು ವಿವರಿಸಿದರು. ಸುಮಳಿಗೆ ತನ್ನ ದೇಹವು ಯಾವುದೋ ವಾಹನದ ಕೆಳಗೆ ಸಿಕ್ಕು ಜಜ್ಜಿಹೋದಂತೆ ನೋವು. ''ಪೇಯಿನ್'' ಎಂದು ಅವಳು ಮುಖ ಕಿವುಚಿದಂತೆ ವೈದ್ಯರು, ''ಟೇಕ್ ಸಮ್ ರೆಸ್ಟ್'' ಎಂದು

ನರ್ಸುಗಳಿಗೆ ಏನೋ ಅಣತಿ ನೀಡಿ ಹೊರನಡೆದರು. ಗಿರಿಧರನೆಡೆಗೆ ನೋಡಿದರೆ ಅವನ ಮುಖದಲ್ಲಿ ಗಾಭರಿ ಎದ್ದು ಕಾಣುತ್ತಿತ್ತು. ತನಗೆ ಏನಾಯಿತೆಂದು ಅವನಲ್ಲಿ ವಿಚಾರಿಸಬೇಕೆಂದು ಅಂದುಕೊಳ್ಳುತ್ತಿರುವಾಗಲೇ ಮತ್ತೆ ನಿದ್ದೆಯ ಮತ್ತು ಅವಳನ್ನು ಆವರಿಸಿದಂತಾಗಿ ಕಣ್ಣು ಮುಚ್ಚಿದಳು.

ಸುಮಳಿಗೆ ತುಸು ಚೈತನ್ಯ ಬಂದಮೇಲೆ ಗಿರಿಧರ ಮಗುವನ್ನು ತಂದು ತೋರಿಸಿದ. ಬಟ್ಟೆಯಲ್ಲಿ ಸುತ್ತಿದ ಕೆಂಪನೆಯ ಉಂಡೆಯ ಹಾಗೆ ಕಾಣಿಸಿತು ಮಗು. ಇವಳ ಬದಿಯಲ್ಲಿ ಮಲಗಿಸಿದ ತಕ್ಷಣ ಕೊಸರಾಡುತ್ತಾ ಚೀರತೊಡಗಿತು. ನರ್ಸು ಬಂದು ಮಗುವಿಗೆ ಹಾಲು ಕುಡಿಸಲು ಪ್ರಯತ್ನಿಸು ಎಂದಳು. ಸುಮ ಬಸುರಿಯಾಗಿದ್ದಾಗ ಸ್ತನ್ಯಪಾನದ ಬಗ್ಗೆ ಎಷ್ಟು ಪುಸ್ತಕಗಳನ್ನು ಓದಿದ್ದರೂ, ಎಷ್ಟು ವೀಡಿಯೋಗಳನ್ನು ವೀಕ್ಷಿಸಿದ್ದರೂ, ಅವುಗಳು ಈ ಗಳಿಗೆಗೆ ಅವಳನ್ನು ಸಿದ್ಧಪಡಿಸಿರಲಿಲ್ಲ. ಅವಳು ನಿಧಾನವಾಗಿ ಎದ್ದು, ದಿಂಬುಗಳಿಗೆ ಒರಗಿ ಕುಳಿತುಕೊಳ್ಳುವಷ್ಟರಲ್ಲಿ ಮಗುವಿನ ಚೀರಾಟ ಅವಳನ್ನು ಕಂಗಾಲಾಗುವಂತೆ ಮಾಡಿತ್ತು. ಜೊತೆಗೆ ಎರಡು ಕಣ್ಣೂ ಮುಚ್ಚಿ ಒಂದೇ ಸಮನೆ ಕಿರುಚುತ್ತಿದ್ದ ಮಗುವಿಗೆ ಮೊಲೆ ಚೀಪಲು ಹೇಳಿಕೊಡಲು ಇವಳಿಗೆ ಆಗಲೇ ಇಲ್ಲ. ಅಸಹಾಯಕತೆ ಮೈತುಂಬಿ ಸುಮಳಿಗೆ ಯಾರಾದರೂ ಹೇಗಾದರೂ ಮಾಡಿ ಮಗುವಿನ ಅಳು ನಿಲ್ಲಿಸಿದರೆ ಸಾಕು ಎನ್ನಿಸಿತ್ತು. ನರ್ಸು ಹಾಲಿನ ಬಾಟಲಿ ತಂದು ಮಗುವನ್ನು ಸಮಾಧಾನಪಡಿಸಿ, ಹಾಲು ಕುಡಿಸಿ ಮಲಗಿಸುವ ಹೊತ್ತಿಗೆ ಸುಮಳಿಗೆ ಸುಸ್ತಾಗಿ ಬವಳಿ ಬಂದಿತ್ತು. ಹತಾಶೆಯಿಂದ, ''ನನ್ನ ಕೈಲಿ ಇದು ಆಗುವುದಿಲ್ಲ.'' ಎಂದು ನುಡಿದಾಗ, ಗಿರಿಧರ ನಿಷ್ಠುರನಾಗಿ ಹೇಳಿದ್ದ,''ಸುಮ, ನೀನು ಯಾವಾಗಲೂ ಹೀಗೇನೇ, ಇಲ್ಲಾ ಅಂತಲೇ ಮಾತು ಶುರು ಮಾಡುತ್ತೀಯ! ಮಗುವಿಗೆ ತಾಯಿಯ ಹಾಲು ಬಹಳ ಮುಖ್ಯ. ಸ್ವಲ್ಪ ಕಷ್ಟವಾದರೂ ಮತ್ತೆ ಪ್ರಯತ್ನ ಮಾಡು.'' ಸುಮಳಿಗೆ ಹತ್ತಿರದಲ್ಲಿ ಸಿಕ್ಕ ವಸ್ತುಗಳನ್ನೆಲ್ಲ ಎತ್ತಿ ಗಿರಿಯ ಮೇಲೆ ಒಗೆಯುವಷ್ಟು ಕೋಪ ಉಕ್ಕಿ ಬಂತು. ಒಂದು ಮುಳ್ಳು ಚುಚ್ಚಿದರೂ ಆಕಾಶವೇ ತಲೆಯ ಮೇಲೆ ಬಿದ್ದಂತೆ ಆಡುವವನು ಗಿರಿ. ಅವನಿಗೇನಾದರು ನನ್ನ ದೇಹದ ಹಾಗೆ ಇಂಚಿಂಚೂ ಚುಚ್ಚಿ, ಹರಿದು, ಹೊಲಿದು, ಪೋಣಿಸಿದ್ದರೆ ಹೇಗೆ ಬೊಬ್ಬೆ ಇಡುತ್ತಿದ್ದನೋ? ಮಾತನಾಡದೆ ಪಕ್ಕಕ್ಕೆ ಮುಖ ತಿರುಗಿಸಿದಳು.

ಆಸ್ಪತ್ರೆಯಿಂದ ತಾಯಿ ಮಗುವನ್ನು ಮನೆಗೆ ಕರೆತಂದ ಮೇಲೆ ಗಿರಿಧರನಿಗೆ ಬಿಡುವಿಲ್ಲದಷ್ಟು ಕೆಲಸ. ಚಾರುಬೆನ್ ಅಡುಗೆಯೇನೊ ಮಾಡಿ ಹೋಗುತ್ತಿದ್ದಳು. ಅವಳ ಕೈಯಲ್ಲಿ ಮಗುವಿನ ಕೆಲಸ ಮಾಡಿಸಲು ಇಬ್ಬರಿಗೂ ಭಯ. ಪುಟ್ಟ ಪ್ರಭಾಳಿಗೆ ತಾಯಿಯ ಹಾಲು ಅಂಟಲೇ ಇಲ್ಲ. ಗಿರಿ ಡಬ್ಬಿ ತೆಗೆದು ಹಾಲು ಕಲೆಸಿ ಕೊಟ್ಟರೆ ಸುಮ ಅದನ್ನು ಕುಡಿಸಲು ಕೂಡ ಹೆಣಗುವಳು. ಅವಳಿಗೆ ಪ್ರತಿ ಬಾರಿ ಬಾಟಲಿ ಹಿಡಿದು ಹಾಲು ಕುಡಿಸುತ್ತಾ ಕೂತಾಗಲೂ ತಾನು ಏನೋ ಕಳೆದುಕೊಂಡಂತೆ, ಎಲ್ಲೋ ಸೋತಂತೆ ಭಾಸವಾಗುತ್ತಿತ್ತು. ಪ್ರಭಾಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ ಅವಳು ತನ್ನನ್ನು ಅಣಕಿಸಿ ನಕ್ಕಂತೆ ಅನ್ನಿಸುತ್ತಿತ್ತು. ಸುಮಳ ತಾಯಿ ಫೋನಿನಲ್ಲಿ, ''ಹೇಗಿದ್ದೀಯಮ್ಮ? ಹಸಿ ಬಾಣಂತಿ ನೀನು, ಹುಷಾರು.'', ಎಂದಾಗ ಓಡಿ ಹೋಗಿ ಅವರ ಎದೆಯಲ್ಲಿ ಮುಖ ಹುದುಗಿಸಿ ಮನಸಾರೆ ಅಳಬೇಕು ಎನ್ನಿಸುತ್ತಿತ್ತು. ಅಮ್ಮ! ನನ್ನನ್ನು ಹೆರಲು ನೀನು ಪಟ್ಟ ನೋವು ಏನೆಂದು ನನಗೆ ಈಗ ತಿಳಿಯಿತಮ್ಮ. ನನಗಂತೂ ಪ್ರಭಾ ಹುಟ್ಟಿದಾಗ ಪುನರ್ಜನ್ಮವೇ ಸಿಕ್ಕಿತಮ್ಮ. ಒಂದು ಗಳಿಗೆ ನಾನು ಸತ್ತೇ ಹೋಗಿದ್ದೆ ಗೊತ್ತಾ? ಆಗ ಕಡೆಯಲ್ಲಿ ನನಗೆ ನಿನ್ನ ಮೊಗವೇ ಕಂಡಿದ್ದು ಕಣಮ್ಮ, ಎಂದೆಲ್ಲ ಬಡಬಡನೆ ಹೇಳುವಾಸೆ. ಆದರೆ ಉಗುಳುನುಂಗಿ ನುಡಿಯುತ್ತಿದ್ದಳು, ''ನೀನೇನು ಯೋಚನೆ ಮಾಡಬೇಡಮ್ಮ, ನಾನು ಚೆನ್ನಾಗಿದ್ದೀನಿ. ಮಗು ಸ್ವಲ್ಪ ದೊಡ್ಡದಾಗುತ್ತಲೂ ನಾವು ಅಲ್ಲಿಗೆ ಕರೆದು ತರುತ್ತೀವಿ.'' ಹೀಗೆ ಹೇಳುತ್ತಿರುವಾಗಲೇ ಅವಳಿಗೆ ತಾನು ವಿಮಾನದಲ್ಲಿ ಕುಳಿತು ಹೋಗುತ್ತಿರುವಾಗ ಸತ್ತು ಹೋಗುತ್ತೀನೇನೊ ಎಂಬ ಅಳುಕು ಉಂಟಾಗುತ್ತಿತ್ತು. ಮರುಕ್ಷಣವೇ, ಛೆ! ಏನಿದು ಹುಚ್ಚು ಹೆದರಿಕೆ ಎಂದು ತನ್ನನ್ನು ತಾನೇ ಹಳಿದುಕೊಂಡು ಮಾತು ಮುಂದುವರೆಸುತ್ತಿದ್ದಳು.

ಎರಡು ವಾರವಾಗುತ್ತಲೂ ರಜೆ ಮುಗಿದು ಗಿರಿಧರ ಕೆಲಸಕ್ಕೆ ಹೊರಟು ನಿಂತ. ಚಾರುಬೆನ್‌ಗೆ ಹೋಟೆಲಿನಲ್ಲಿ ಕೆಲಸ ಸಿಕ್ಕ ಕಾರಣ ಅವರು ಸಾಯಂಕಾಲ ಒಂದು ಹೊತ್ತು ಬಂದು ಅಡುಗೆ ಮಾಡಿಟ್ಟು ಹೋಗುತ್ತಿದ್ದರು. ಸುಮ ಬೆಳಗಿನ ಹೊತ್ತು ಮಗುವಿನ ಜೊತೆ ಒಂಟಿಯಾಗಿ ಕಾಲ ಕಳೆಯುವ ಬಗ್ಗೆ ಯೋಚಿಸಿ ಅಧೀರಳಾದಳು. ಪ್ರಭಾ ರಚ್ಚೆ ಹಿಡಿದು ಅತ್ತರೆ ಹೇಗೆ ಸಮಾಧಾನ ಮಾಡಲಿ? ಅವಳಂತೂ ತಾರಕ ಸ್ವರದಲ್ಲಿ ಅಳಲು ಶುರು ಮಾಡಿದರೆ ಸುಮಳಿಗೆ ಕೈಕಾಲು ಮರಗಟ್ಟಿದಂತಾಗುತ್ತಿತ್ತು. ಹೀಗಿರುವಾಗ ಅವಳನ್ನು ಒಬ್ಬಳೇ ನಿಭಾಯಿಸುವುದಾದರೂ ಹೇಗೆ? ಅವಳ ಆತಂಕವನ್ನು ''ಡೋನ್ಟ್ ವರಿ'' ಎಂದು ಒಂದೇ ಮಾತಿನಲ್ಲಿ ತಳ್ಳಿಹಾಕಿ ಗಿರಿಧರ ಆಫೀಸಿಗೆ ಹೊರಟುಹೋಗಿದ್ದ. ಮಗಳ ಪಕ್ಕದಲ್ಲಿ ಮಲಗಿದ್ದ ಸುಮಳ ಒಳಮನಸ್ಸು ಆತ್ಮನಿಂದನೆಯಲ್ಲಿ ಮುಳುಗಿತ್ತು. ನೀನೆಂಥ ತಾಯಿ! ಸ್ವಂತ ಮಗುವಿನ ಜೊತೆಯಿರಲು ಹೆದರುತ್ತೀಯೆ. ಇನ್ನು ಆರು ವಾರಕ್ಕೆ ಪುಟ್ಟ ಕಂದನನ್ನು ಬೇಬಿ ಸಿಟ್ಟರ್ ಬಳಿ ಬಿಟ್ಟು ಕೆಲಸಕ್ಕೆ ಮರಳಲು ಆಗಲೇ ಸಿದ್ಧಳಾಗುತ್ತಿದ್ದೀಯೆ. ಇದೇ ಏನು ನೀನು ನಿನ್ನ ಜೀವವನ್ನೇ ಒತ್ತೆಯಿಟ್ಟು ಹೆತ್ತ ಮಗಳನ್ನು ಪೋಷಿಸುವ ರೀತಿ? ದಿನಬೆಳಗಾದರೆ ಡಾಕ್ಟರ ಒತ್ತಡದಿಂದ ಮಗಳಿಗೆ

ಹಾಲೂಡಿಸುವ ವ್ಯರ್ಥ ಪ್ರಯತ್ನ ಮಾಡುತ್ತೀಯೆ. ಬಾಟಲಿ ಹಾಲನ್ನು ಲೊಚಲೊಚನೆ ಕುಡಿಯುವ ಮಗಳು ನಿನ್ನ ಹಾಲು ವಿಷದಂತೆ ತಿರಸ್ಕರಿಸುತ್ತಾಳೆ. ಛೀ! ನಿಜಕ್ಕೂ ಈ ಜನ್ಮ ವ್ಯರ್ಥ! ಆ ದಿನ ಆಸ್ಪತ್ರೆಯಲ್ಲಿ ನೀನು ಸಾಯಬಾರದಿತ್ತೆ? ತಾಯಿಯಾಗಿ ಮಗಳ ಬೇಕು ಬೇಡಗಳನ್ನು ಅರ್ಥ ಮಾಡಿಕೊಳ್ಳದ ನಾನು ಬದುಕಿದ್ದೂ ಪ್ರಯೋಜನವೇನು? ಹೀಗೇ ಕಣ್ಣೀರು ಸುರಿಸುತ್ತಾ ಮಲಗಿದ್ದ ಸುಮಳಿಗೆ, ಪ್ರಭಾ ಕೊಸರಾಡುತ್ತಾ ಅಳುತ್ತಿರುವುದು ಅರಿವಿಗೆ ಬಂತು. ಕಣ್ಣೀರೊರೆಸಿಕೊಂಡು, "ಪಾಪ್ಪೂ, ನೋಡಿಲ್ಲಿ, ನಾನು ನಿನ್ನ ಅಮ್ಮ, ಇಲ್ಲಿದ್ದೀನಿ. ಹಸಿವಾಗಿದೆಯಾ?" ಎಂದು ಹಾಲು ಕುಡಿಸಲು ಪ್ರಯತ್ನಿಸಿದಳು. ಪುಟ್ಟ ಪ್ರಭಾ ಸ್ವಲ್ಪ ಕುಡಿದಂತೆ ಮಾಡಿ ಮತ್ತೆ ಮುಖ ತಿರುಗಿಸಿ ಚೀರತೊಡಗಿದಳು. ಸುಮಳ ಮನಸ್ಸು, ಏನು ಮಾಡಲಿ? ಏನು ಮಾಡಲಿ? ಎಂದು ಗಿರಗಿಟ್ಟಲೆಯಂತೆ ಸುತ್ತತೊಡಗಿತು. ಕೊನೆಗೆ ದಾರಿಗಾಣದೆ ಮಗುವನ್ನು ಗಟ್ಟಿಯಾಗಿ ಹಿಡಿದು, "ಸ್ಟಾಪ್ ಇಟ್! ಸ್ಟಾಪ್ ಇಟ್!!" ಎಂದು ಅರಚಿದಳು. ತಟಕ್ಕನೆ ಮಗು ಸ್ತಬ್ದವಾಗಿ ಕಣ್ಣು ಬಿಟ್ಟು ಇವಳನ್ನೇ ನೋಡತೊಡಗಿತು. ಮಗಳ ನೋಟದಲ್ಲಿ ನೋಟ ಬೆರೆಸಿದೊಡನೆ ಸುಮಳಿಗೆ ಎದೆ ಝಿಲ್! ಎಂದಿತು. ಆ ನೋಟ ಅವಳಿಗೆ "ಅಮ್ಮಾ! ನಿನ್ನ ತಲೆಯಲ್ಲಿ ನಡೆಯುತ್ತಿರುವುದೆಲ್ಲ ನನಗೆ ಗೊತ್ತು. ನನ್ನಿಂದ ನೀನು ಏನೂ ಮುಚ್ಚಿಡಲಾರೆ" ಎನ್ನುವಂತಿತ್ತು. ಇನ್ನೊಂದು ನಿಮಿಷ ಇಲ್ಲಿದ್ದರೂ ಅನಾಹುತ ನಡೆದುಹೋಗುತ್ತೆ ಎನ್ನಿಸಿ, ಮಗಳನ್ನು ಹಾಸಿಗೆಯಲ್ಲಿ ಮಲಗಿಸಿ, ಪಕ್ಕದ ರೂಮಿಗೆ ಬಂದು, ಗಿರಿಧರನಿಗೆ ತಕ್ಷಣ ಮನೆಗೆ ಬರುವಂತೆ ಫೋನು ಮಾಡಿದಳು.

ಮನೆಗೆ ಧಾವಿಸಿದ ಗಿರಿಗೆ ಸುಮಳ ವರ್ತನೆ ಬಿಡಿಸಲಾಗದ ಕಗ್ಗಂಟು. ಮಕ್ಕಳಾಗದಿದ್ದರೆ ನಾನು ಬದುಕಲಾರೆ ಎಂದು ಕಣ್ಣೀರಿಡುತ್ತಿದ್ದ ಸುಮ, ಈಗ ಮುತ್ತಿನಂತಹ ಮಗಳು ಹುಟ್ಟಿದ್ದರೆ ಅವಳ ಬಳಿ ಸುಳಿಯುವುದೂ ಇಲ್ಲ. ಆದಷ್ಟು ಮಗುವಿನ ಕೆಲಸಗಳನ್ನು ನನ್ನ ಕೈಯಲ್ಲೇ ಮಾಡಿಸುತ್ತಾಳೆ. ಹೆರಿಗೆಯಾದಾಗಿನಿಂದ ಏನೋ ಸರಿಯಿಲ್ಲ. ಆದರೆ ಹೆರಿಗೆಯ ಸಮಯದಲ್ಲಿ ಅವಳಿಗೆ ಬಿದ್ದ ಪೆಟ್ಟಾದರೂ ಎಷ್ಟು ಭಾರಿಯದು? ಸತ್ತು ಬದುಕಿದವಳು ಅವಳು. ಪಾಪ! ಇನ್ನೂ ರಜೆ ಮುಂದುವರೆಸಿ ಮನೆಯಲ್ಲಿ ಚೇತರಿಸಿಕೋ ಎಂದು ಹೇಳಬೇಕು. ಬೇಕಾದರೆ ಕೆಲಸ ಬಿಡಲಿ. ಮನೆಯಲ್ಲಿ ಮಗಳ ಜೊತೆ ಹೆಚ್ಚಾಗಿ ಸಮಯ ಕಳೆದಷ್ಟೂ ಬೇಗ ತಾಯಿ ಮಗಳ ನಡುವೆ ಬಾಂಧವ್ಯ ಬೆಳೆಯುವುದು ಖಂಡಿತ. ಸುಮಳಿಗೆ ಮೊದಲಿಂದಲೂ ಆತ್ಮವಿಶ್ವಾಸ ಕಮ್ಮಿ. ಈಗಲೂ ಅದೇ ಕಾರಣಕ್ಕೆ ಹೆದರುತ್ತಿರಬಹುದು. ಅವಳಿಗೇ ಸ್ವತಃ ಪರಿಸ್ಥಿತಿಯನ್ನು ಎದುರಿಸಲು ಪ್ರೇರೇಪಿಸಿದರೆ ಎಲ್ಲಾ ಸರಿಹೋಗುತ್ತದೆ ಎಂದು ಗಿರಿಧರನಿಗೆ ಅನ್ನಿಸಿತು.

ಆದರೆ ಗಿರಿಧರ ಎಣಿಸಿದಂತೇ ಆಗಲೇ ಇಲ್ಲ. ದಿನಗಳೆದಂತೆ ಸುಮಳ ಚಿತ್ತಸ್ವಾಸ್ಥ್ಯ ಹದಗೆಡುತ್ತಾ ಹೋಯಿತು. ಗಿರಿಧರ ಒಮ್ಮೊಮ್ಮೆ ಕೆಲಸದಿಂದ ಹಿಂತಿರುಗುವ ವೇಳೆಗೆ ಸುಮ ಅಳುತ್ತಾ ಕುಳಿತಿರುತ್ತಿದ್ದಳು. ಇವತ್ತು ಪ್ರಭಾ ಎಷ್ಟು ಪ್ರಾಣ ತೆಗೆದಳು ಗೊತ್ತಾ ಎನ್ನುತ್ತಲೋ, ನನ್ನ ಕೈಯಲ್ಲಿ ಇನ್ನೊಂದು ದಿವಸ ಇವಳ ಜೊತೆ ಇರಲು ಆಗುವುದಿಲ್ಲ ಎನ್ನುತ್ತಲೋ ಅವನಿಗೆ ಮಗಳ ಮೇಲೆ ದೂರು ಹೇಳುವಳು. ಗಿರಿಧರ ಏನು ಮಾಡಲೂ ತೋಚದೆ ಕುಸಿದುಹೋಗಿದ್ದ. ಒಮ್ಮೆಯಂತೂ ಎಲ್ಲರೂ ಮಲಗಿದ್ದಾಗ ರಾತ್ರಿಯ ನೀರವತೆ ಸೀಳುವಂತೆ ಮಗು ಒಂದೇ ಸಮನೆ ಚೀರ ತೊಡಗಿತು. ಬೆಡ್‌ಲೈಟಿನ ಮಬ್ಬು ಬೆಳಕಲ್ಲಿ, ಎಡೆಬಿಡದೆ ಹೊಡೆಯುತ್ತಿದ್ದ ಮಗುವಿನ ಕೈಕಾಲುಗಳ ನೆರಳು ದೈತ್ಯಾಕಾರದ ನರ್ತನ ನಡೆಸಿದ್ದವು. ಅದನ್ನೇ ನಿಟ್ಟಿಸುತ್ತಾ ಸುಮ ಗರಬಡಿದವಳಂತೆ ಕೋಣೆಯ ಮೂಲೆಯಲ್ಲಿ ಕುಳಿತಿದ್ದಳು. ಮಗುವಿನ ಬೇಡಿಕೆಗೆ ಅವಳ ಮಾತೃತ್ವ, ಹೋಗು!, ಎಂದು ಮಗುವಿನೆಡೆಗೆ ನೂಕುತ್ತಿದ್ದರೆ, ಅವಳ ಮನೋವೇದನೆ, ಇಲ್ಲ, ಹತ್ತಿರ ಹೋಗಬೇಡ! ಎಂದು ಜಗ್ಗಿ ತಡೆಯುತ್ತಿತ್ತು. ಅಷ್ಟರಲ್ಲಿ ಗಿರಿಧರನಿಗೆ ಎಚ್ಚರವಾಗಿ, "ಸುಮ! ಸುಮ! ಮಗು ಅಳ್ತಾ ಇದೆ. ಎದ್ದು ಹಾಲು ಕುಡಿಸು" ಎಂದ. ಏಳಲು ಹೋದವಳಿಗೆ ಮಗುವಿನ ಆಕ್ರಂದನ ಕೋಣೆಯನ್ನೆಲ್ಲ ಸುತ್ತಿಕೊಂಡು ತನ್ನನ್ನು ಅಡಿ ಅಡಿಯಾಗಿ ನುಂಗತೊಡಗಿದೆ ಅನ್ನಿಸಿ ಅಲ್ಲೇ ದೊಪ್ಪನೆ ಕುಸಿದಳು. ಎದ್ದು ಕುಳಿತ ಗಿರಿಧರನಿಗೆ ತನ್ನ ಕಣ್ಣುಗಳನ್ನು ತಾನೇ ನಂಬಲಾಗಲಿಲ್ಲ. ತೊಟ್ಟಿಲಲ್ಲಿ ಮಗು ಒಂದೇ ಸಮನೆ ಅಳುತ್ತಿದೆ. ಹೆಂಡತಿ ಮೈಯೆಲ್ಲ ಹಿಡಿಯಾಗಿಸಿಕೊಂಡು, ತಲೆಬಾಗಿಸಿ, ಕಣ್ಮುಚ್ಚಿ ಮೂಲೆಯಲ್ಲಿ ಕೂತಿದ್ದಾಳೆ. "ಸುಮ, ಏನಾಯ್ತು?" ಹತ್ತಿರ ಹೋಗಿ ಭುಜ ಅಲ್ಲಾಡಿಸಿ ಕೇಳಿದ. "ನಂಗೊತ್ತಿಲ್ಲಾ", ತಲೆಯನ್ನು ತನ್ನ ಎರಡೂ ಕೈಗಳಿಂದ ಒತ್ತಿ ಹಿಡಿದು ಬಿಕ್ಕಿದಳು. ಒಂದು ಕ್ಷಣ ಗಿರಿಧರನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಹಾಗೇ ಸಾವರಿಸಿಕೊಂಡು ಮಗುವನ್ನು ಎತ್ತಿಕೊಂಡು ರಮಿಸಲೆತ್ನಿಸಿದ. ಡೈಪರ್ ಭಾರವಾಗಿದೆ ಎನ್ನಿಸಿ ಬದಲಿಸಿದ. ಮಗುವನ್ನು ಎದೆಗೊರಗಿಸಿಕೊಂಡು ಮೆಲ್ಲನೆ ತಟ್ಟತೊಡಗಿದ. ಎರಡೇ ನಿಮಿಷದಲ್ಲಿ ಮಗು ನಿದ್ರಾಲೋಕಕ್ಕೆ ಕಾಲಿಟ್ಟು ಲಯಬದ್ಧವಾದ ಉಸಿರಾಟದ ಶಬ್ದ ಕೇಳಿಸಿತು.

ಗಿರಿಯಂತೂ ಸುಮಳ ಈ ರೂಪ ನೋಡಿ ಕಂಗಾಲಾಗಿದ್ದ. ಇನ್ನು ತಾನು ಕಾದರೆ ತಾಯಿ ಮಗಳಿಬ್ಬರನ್ನೂ ಕಳೆದುಕೊಳ್ಳಬಹುದೆಂಬ ಜ್ಞಾನೋದಯ ಆಗತೊಡಗಿತ್ತು ಅವನಿಗೆ. ಮರುದಿನವೇ ಹೆಂಡತಿಯನ್ನು ಮನೋವೈದ್ಯರ ಬಳಿ ಕರೆದೊಯ್ದ. ಗಿರಿಧರನನ್ನು ಹೊರಗೆ ಹೋಗಲು ಹೇಳಿ ವೈದ್ಯರು ಸುಮಳನ್ನು ಹಲವಾರು ಪ್ರಶ್ನೆ ಕೇಳಿದರು. ಸುಮ ಮೊದಲ ಬಾರಿ ಮನಬಿಚ್ಚಿ ಅವರಲ್ಲಿ ತನ್ನ ಮನದಲ್ಲಿ ನಡೆಯುತ್ತಿರುವ ಘರ್ಷಣೆಯ ಬಗ್ಗೆ ಮಾತನಾಡಿದಳು. ನನ್ನ

ಬಂಧುಮಿತ್ರರ ಪ್ರಕಾರ ನನ್ನಷ್ಟು ಅದೃಷ್ಟಶಾಲಿ ಇನ್ನೊಬ್ಬರಿಲ್ಲ. ಹೌದು, ನನಗೆ ನಾನು ಪ್ರಾಣಕ್ಕಿಂತ ಹೆಚ್ಚಾಗಿ ಬಯಸಿದ್ದ ತಾಯ್ತನದ ಭಾಗ್ಯ ಸಿಕ್ಕಿದೆ. ಆದರೆ, ನನಗೇಕೆ ಅದನ್ನು ಸಂತೋಷದಿಂದ ಅನುಭವಿಸಲು ಆಗುತ್ತಿಲ್ಲಾ? ನಾನೇಕೆ ನನ್ನ ಮಗಳ ಜೊತೆಗಿನ ಅಮೂಲ್ಯ ಕ್ಷಣಗಳನ್ನು ಹೀಗೆ ಹಾಳು ಮಾಡಿಕೊಳ್ಳುತ್ತಿದ್ದೇನೆ? ಪದೇ ಪದೇ ನಾನು ಕೆಟ್ಟ ತಾಯಿ ಎಂದೇಕೆ ನನಗನ್ನಿಸುತ್ತೆ? ಎಂದು ತನ್ನ ಮನಸ್ಸಿನ ವ್ಯಥೆಯನ್ನು ಹೊರಚೆಲ್ಲಿದಳು. ಡಾಕ್ಟರಿಗೆ ಇಷ್ಟು ಹೊತ್ತಿಗಾಗಲೇ ಸುಮಳ ವಿಷಯ ತಕ್ಕಮಟ್ಟಿಗೆ ಅರ್ಥವಾಗಿತ್ತು. ಹೆರಿಗೆಯ ಸಮಯದಲ್ಲಿ ನಡೆದ ಘಟನೆಯಿಂದ ಅವಳ ದೇಹ ಗುಣಹೊಂದಿದ್ದರೂ ಮನಸ್ಸು ಇನ್ನೂ ಮಾಗಿರಲಿಲ್ಲ. ಬಾಣಂತಿಯರಿಗೆ ಸಾಮಾನ್ಯವಾಗಿ ತಗಲುವ ಪೋಸ್ಟ್ ಪಾರ್ಟಮ್ ಡಿಪ್ರೆಷನ್‌ನ ಚಿಹ್ನೆಗಳು ಅವಳಲ್ಲಿ ಕಂಡವು. ಮಾತ್ರೆಯನ್ನು ಬರೆದುಕೊಟ್ಟು ತಮ್ಮನ್ನು ಒಂದು ವಾರದಲ್ಲಿ ಮತ್ತೆ ಬಂದು ಕಾಣುವಂತೆ ತಿಳಿಸಿದರು. ಸುಮಳ ತಾಯಿ ಮತ್ತಿತರ ಆಪ್ತರು ಸಾವಿರಾರು ಮೈಲಿ ದೂರದ ಭಾರತದಲ್ಲಿದ್ದು, ಅವಳಿಗೆ ತನ್ನ ಸಹಾಯಕ್ಕೆ ಯಾರೂ ಇಲ್ಲ ಎಂಬ ಅಸಹಾಯಕತೆ ಮನೆ ಮಾಡಿರುವುದು ಎತ್ತಿ ಕಂಡಿತು ಅವರಿಗೆ. ಅವರು ಅವಳಿಗೆ ಹೊಸ ತಾಯಂದಿರಿಗಾಗಿಯೇ ಕಲ್ಪಿತವಾಗಿರುವ ಸಪೋರ್ಟ್ ಗ್ರೂಪು ಗಳ ವಿಷಯ ತಿಳಿಸಿ, ಅವಳಿಗೆ ಅವುಗಳ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ಕೊಟ್ಟರು.

ವೈದ್ಯರನ್ನು ಭೇಟಿ ಮಾಡಿ ಬಂದ ಮೇಲೆ ಸುಮಳ ಮನಸ್ಸು ಸ್ವಲ್ಪ ತಿಳಿಯಾಗಿತ್ತು. ಅವರು ಎಲ್ಲಿ ತನಗೆ ಹುಚ್ಚಿ ಎಂದು ಬಿರುದು ನೀಡಿ ಮಗುವಿನಿಂದ ದೂರ ಮಾಡುವರೋ ಎಂದು ಭಯವಿತ್ತು. ಆದರೆ ಅವರು ಇದು ಗುಣವಾಗುವ ಖಾಯಿಲೆ ಎಂಬ ಭರವಸೆ ನೀಡಿದ ಮೇಲೆ ಅವಳಿಗೆ ತಾನು ಸರಿಹೊಂದಬಲ್ಲೆ ಎಂಬ ವಿಶ್ವಾಸ ಬಂದಿತ್ತು. ಹೆಂಡತಿ ಮಗುವನ್ನು ಹಿಂದೆ ಕೂಡಿಸಿಕೊಂಡು ಮನೆಯ ಕಡೆ ಕಾರನ್ನು ಓಡಿಸುತ್ತಿದ್ದ ಗಿರಿಧರನಿಗೂ ತನ್ನ ತಪ್ಪಿನ ಅರಿವಾಗಿತ್ತು. ಈ ನಡುವೆ ಸುಮಳ ವರ್ತನೆ ಅರ್ಥವಾಗದೆ ಅವಳ ಮೇಲೆ ಹಲವಾರು ಬಾರಿ ಅಸಹನೆಯಿಂದ ಸಿಡುಕಿದ್ದ. ಅವಳಿಗೆ ಬೇಕಾಗಿರುವುದು ತನ್ನ ಸಂಪೂರ್ಣ ಬೆಂಬಲವೇ ಹೊರತು ದೂಷಣೆಯಲ್ಲ ಎಂದು ಅವನಿಗೂ ಮನವರಿಕೆಯಾಗಿತ್ತು.

ಸುಮಳ ಆರೋಗ್ಯದ ದೃಷ್ಟಿಯಲ್ಲಿ, ಅಂದು ಮನೋವೈದ್ಯರನ್ನು ಭೇಟಿ ಮಾಡಿದ್ದು ಮೊದಲ ಹೆಜ್ಜೆಯಾದರೂ ಬಹಳ ಮಹತ್ವಪೂರ್ಣ ಹೆಜ್ಜೆಯಾಯಿತು. ಕ್ರಮೇಣ ಸುಮಳಲ್ಲಿ ಅನೇಕ ಮಾರ್ಪಾಡುಗಳನ್ನು ಗಿರಿ ಕಾಣತೊಡಗಿದ. ಈ ನಡುವೆ ಅವಳ ಮೊಗ ಲವಲವಿಕೆಯಿಂದ ಕೂಡಿರುತ್ತಿತ್ತು. ಆಗಾಗ್ಗೆ ಮಗಳನ್ನು ಪಕ್ಕದ ಪಾರ್ಕಿನಲ್ಲಿ ಸುತ್ತಾಡಿಸುತ್ತಾ, ಅಲ್ಲಿ ಕೆಲವು ತಾಯಿಂದಿರ ಪರಿಚಯ ಮಾಡಿಕೊಂಡಿದ್ದಳು. ವಾರಕ್ಕೊಮ್ಮೆ ನೂತನ ತಾಯಿಂದಿರ ಗುಂಪಿಗೆ ಹೋಗಿ ಅಲ್ಲಿ ಸಮಯ ಕಳೆಯುತ್ತಿದ್ದಳು. ಅಲ್ಲಿನ ತಾಯಿಯರಲ್ಲಿ ಕೆಲವರು ಸುಮಳ ತರಹ ಹಲವಾರು ವಿಫಲ ಯತ್ನಗಳ ನಂತರ ಮಕ್ಕಳನ್ನು ಪಡೆದವರು. ಅವರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾಗ, ಅರೆ! ನನಗೂ ಹೀಗೇ ಆಯಿತಲ್ಲವೇ? ಎಂದು ಅವಳಿಗನ್ನಿಸಿ ಅವರೆಡೆಗೆ ಅನುಭೂತಿ ಮೂಡುತ್ತಿತ್ತು. ಬಂಧು, ಬಳಗ, ಕೊನೆಗೆ ಗಂಡಂದಿರ ಸಹಾಯವೂ ಇಲ್ಲದೆ ಕೆಲವರು ಮಕ್ಕಳನ್ನು ಬೆಳೆಸಲು ಹೆಣಗುತ್ತಿರುವುದನ್ನು ನೋಡಿ ಅವಳಿಗೆ ತಾನೇ ಪುಣ್ಯವಂತೆ ಎಂದೆನಿಸತೊಡಗಿತು.

ಜೀವನದ ಪ್ರತಿ ಕಾರ್ಯದಲ್ಲೂ ಗೆಲುವು ಸಾಧಿಸಿ 'ಪರ್ಫೆಕ್ಷನಿಸ್ಟ್' ಎನ್ನಿಸಿಕೊಂಡಿದ್ದ ಸುಮ, ಮೊದಲಲ್ಲಿ ತನ್ನ ತಾಯ್ತನವನ್ನೂ ಒಂದು ಸಾಧನೆಯೆಂದು ಪರಿಗಣಿಸಿದ್ದಳು. ಹಲವು ಸೋಲುಗಳ ನಂತರ ಕೊನೆಗೂ ಗರ್ಭ ಧರಿಸಿದಾಗ, ತಾನು ಎಲ್ಲರಿಗಿಂತಲೂ ಅತ್ಯುತ್ತಮವಾದ ತಾಯಿಯಾಗಬಲ್ಲೆನೆಂದು ನಂಬಿದ್ದಳು. ಆದರೆ, ಮಗು ಹುಟ್ಟಿದೊಡನೆ ನಡೆದ ಹಲವು ಘಟನೆಗಳಿಂದ, ಅವಳಿಗೆ ಮಗು ತನ್ನನ್ನು ತಿರಸ್ಕರಿಸುತ್ತಿದೆ ಎನ್ನಿಸಿ, ಅವಳ ಆತ್ಮವಿಶ್ವಾಸ ಕಂಗೆಟ್ಟಿತ್ತು. ಧೈರ್ಯ ತುಂಬಬಲ್ಲ ಅವಳ ತಾಯಿಯಂತಹ ಅನುಭವಿ ಹಿರಿಯರು ಯಾರೂ ಹತ್ತಿರ ಇರದಿದ್ದ ಕಾರಣ, ತನ್ನನ್ನು ತಾನೇ ಪದೇ ಪದೇ ಹಳಿದುಕೊಂಡು ಘಾಸಿಗೊಂಡ ಅವಳ ಮನಸ್ಸು ಪ್ರಪಾತದಂಚಿಗೆ ತಳ್ಳಿ ಹೋಗಿತ್ತು. ಈಗ ಬದಲಾದ ಅವಳ ಮನಸ್ಸು ಎಲ್ಲವನ್ನೂ ಹೊಸ ದೃಷ್ಟಿಯಲ್ಲಿ ಅಳೆಯತೊಡಗಿತು. ತಾನು ಅತ್ಯುತ್ತಮ ತಾಯಿಯಾಗಬೇಕಾಗಿಲ್ಲ. ತನ್ನ ಮಗಳಿಗೆ ಒಳ್ಳೆಯ ತಾಯಿಯಾದರೆ ಸಾಕು. ಅದು ಖಂಡಿತ ಆಗಬಲ್ಲೆ ಎಂಬ ಮನಃಸ್ಥೈರ್ಯ ಮೂಡಿ ಅವಳಲ್ಲಿದ್ದ ಒಂಟಿತನದ ಭಾವನೆ ತಾನಾಗಿ ಸರಿದುಹೋಯಿತು.

ಅಂದು ಆಕಸ್ಮಿಕವಾಗಿ ಸುಮಳನ್ನು ಹುಡುಕಿಕೊಂಡು ಗಿರಿಧರ ಕೋಣೆಗೆ ಹೋದಾಗ, ಸುಮ ತನ್ನ ಆರಾಮಕುರ್ಚಿಗೆ ಒರಗಿ, ಮಗುವನ್ನು ಎದೆಗವಚಿ ಹಾಲೂಡಿಸುತ್ತಿದ್ದಳು. ಮಗುವಿನ ಮುಂಗುರುಳು ನೇವರಿಸುತ್ತ, ''ನನ್ನ ಚಿನ್ನ, ನನ್ನ ಬಂಗಾರಿ'' ಎಂದುಸುರಿದಾಗಲೆಲ್ಲ ಅದು ಅರ್ಥವಾದಂತೆ ಚೀಪುವುದು ನಿಲ್ಲಿಸಿ, ಮುಗುಳ್ನಗೆ ಬೀರುತ್ತಿತ್ತು. ತಾಯಿ–ಮಗು ನಡುವಣ ಅಪೂರ್ವ ಬಂಧನದ ಈ ದೃಶ್ಯ ನೋಡುತ್ತ ನಿಂತಿದ್ದ ಗಿರಿಗೆ ಅರಿವಿಲ್ಲದಂತೆ ಕಣ್ಣು ತುಂಬಿ ಬಂತು. ಮೆಲ್ಲಗೆ ಹತ್ತಿರಕ್ಕೆ ಬಂದು, ಮಂಡಿಯೂರಿ ಕುಳಿತು, ಸುಮಳ ತೊಡೆಯ ಮೇಲೆ ತನ್ನ ತಲೆಯಿರಿಸಿದ. ಅವನ ತಲೆದಡುವುತ್ತಿದ್ದ ಸುಮಳಿಗೆ, ತನ್ನ ಬದುಕಿನ ಮೇಲೆ ಮುಚ್ಚಿದ್ದ ಕಾರ್ಮೋಡದ ಮುಸುಕು ಸರಿದು, ಬೆಳ್ಳನೆ ಬೆಳಕಾಗುತ್ತಿರುವಂತೆ ಭಾಸವಾಯಿತು. ◈

# Narmadha Travels

***Delivering Best Value to You Everyday***

---



At Narmadha travels we are constantly charting new courses and reaching new horizons to serve you better. We have proven record of excellence in service and dedicated presence at the time of need to numerous customers that you can count on. We value having fresh conversation with our clients, which gives you comfort and peace of mind.



**Narmadha Travels**
**Fremont, California**
**(510) 494-9149**
**www.narmadha.com**
**CST # 2073188-40**

***EmergencyWeekend Services Available***

Narmadha Travels has preferred rates with many travel suppliers, which ensures that you will pay the right price for all your travel needs. A stringent internal quality control on pricing and services offered constantly improves the caliber of service, endeavoring to provide a matchless travel experience to each and every customer.

We offer most competitive and best possible air fares at any given time for India, Pakistan, Bangladesh, Malaysia, Singapore, Srilanka and China.

Call us to experience excellence in getting you where you need to go, at the best price and in the most pleasant way possible.

***Please call to experience the best deals and excellence in service***

## Call Ritu Murugan at (510) 494-9149

SINGAPORE 800-742-3333

CATHAY PACIFIC 800-233-2742

Lufthansa 800-645-3880

malaysia AIRLINES Going beyond expectations 800-552-9264

KOREAN AIR 800-438-5000

CHINA AIRLINES 800-227-5118

UNITED AIRLINES 800-241-6522

BRITISH AIRWAYS 800-247-9297

AmericanAirlines 800-433-7300

AIR-INDIA 800-223-7776



# ಉಡುಗೊರೆ

**ಪೂರ್ಣಿಮಾ ರಾಮಪ್ರಸಾದ್**
ಮಿಲ್ಪೀಟಸ್, ಕ್ಯಾಲಿಫೋರ್ನಿಯ

ಫ್ರ್ಯಾಂಕ್‌ಫರ್ಟಿನಲ್ಲಿ ಪ್ಲೇನ್ ಹತ್ತಿದ ಶರ್ಮಿಳ ಮತ್ತು ಸುರೇಶ್ ತಮ್ಮ ಒಂದು ವರ್ಷದ ಮಗು ಶ್ರೇಯಳನ್ನು ಎಲ್ಲರಿಗೂ ಹೆಮ್ಮೆಯಿಂದ ತೋರಿಸಿ ಅವಳ ಹುಟ್ಟುಹಬ್ಬವನ್ನು ಮಾಡಬೇಕೆಂದು ಆಸೆಯಿಂದ ಬೆಂಗಳೂರಿಗೆ ಯಾವಾಗ ತಲುಪುತ್ತೀವೋ ಎಂದು ಕಾಯುತ್ತಿದ್ದರು. ವೀಸಾ ಸಿಗದ ಕಾರಣ ಶರ್ಮಿಳಳ ತಾಯಿ ಬಾಣಂತನಕ್ಕೂ ಬಂದಿರಲಿಲ್ಲ. ಹೀಗಾಗಿ ಶ್ರೇಯಳು ಯಾವ ಅಜ್ಜ ಅಜ್ಜಿಯರನ್ನೂ ನೋಡಿರಲಿಲ್ಲ. ಪ್ಲೇನ್ ಹತ್ತುತ್ತಿದ್ದಂತೆ ಹಾಲು ಕುಡಿದ ಮಗುವನ್ನು ಹಾಗೇ ಮಲಗಿಸಿ ಒಂದು ಪುಸ್ತಕ ಹಿಡಿದು ಕುಳಿತಳು ಶರ್ಮಿಳ. ಅದೇಕೋ ಅಂದು ಅವಳ ಮನ ಕದಡಿ ಹೋಗಿತ್ತು, ಓದು ಮುಂದುವರೆಯಲಿಲ್ಲ. ಹಳೆಯ ಕಥೆ ಎಲ್ಲ ಮನಸ್ಸಿನ ಮುಂದೆ ಬಂದು ಹೋಗಲು ಶುರುವಾಯಿತು.

***************

ಮೈಕ್ರೋಬಯಾಲಜಿ ಎಮ್.ಎಸ್.ಸಿ. ಕೊನೆಯ ಪರೀಕ್ಷೆ ಮುಗಿದಿದ್ದ ದಿನ ಪ್ರಾಣ ಸ್ನೇಹಿತೆಯರಾದ ಶರ್ಮಿಳ ಮತ್ತು ಮಾಳವಿಕ ಸಂಜೆ ಭೇಟಿಯಾಗಿ ಇಬ್ಬರ ಮನಸ್ಸಿನ ಗುಟ್ಟನ್ನೂ ಒಬ್ಬರಿಗೊಬ್ಬರು ರಟ್ಟು ಮಾಡುವುದು ಮತ್ತು ಒಟ್ಟಿಗೆ ಬೆಂಗಳೂರೆಲ್ಲ ಸುತ್ತಾಡುವುದು ಎಂದು ಯೋಜನೆ ಹಾಕಿಕೊಂಡಿದ್ದರು.

ಮನೆಗೆ ಬಂದ ಶರ್ಮಿಳ ಮುಖ ತೊಳೆದು ಅಡುಗೆ ಮನೆಗೆ ಹೋಗುತ್ತಿದ್ದಂತೆ, ಅವಳ ತಾಯಿ ವಿಶಾಲಾಕ್ಷಿ "ಪರೀಕ್ಷೆ ಚೆನ್ನಾಗಿ ಮಾಡಿದ್ದೀಯೇನೆ ಶಮ್ಮು? ಸದ್ಯ ಮುಗಿಯಿತಲ್ಲ, ಇನ್ನು ನಿನ್ನ ಮದುವೆ ಮಾಡಿ, ಅಮೇಲೆ ಶಾಲಿನಿಗೂ ಮಾಡಿಬಿಟ್ಟರೆ ನಾನು ಅಣ್ಣ ನಿರಾಳವಾಗಿರಬಹುದು" ಎಂದಿದ್ದಕ್ಕೆ "ಏನಮ್ಮ ಮಿಕ್ಕಿಹೋಗುತ್ತಿದೆ? ಮದುವೆ ಆಗತ್ತೆ ಬಿಡು. ನಾನೇನು ಈಗಲೇ ಮಾಡಿಕೊಳ್ಳುವುದಿಲ್ಲ" ಎಂದು ರೇಗಿದ್ದಳು ಶರ್ಮಿಳ. "ಸಾಕು ಸುಮ್ಮನಿರೆ, ಇಪ್ಪತ್ನಾಲ್ಕು ವರ್ಷ ಆಯಿತು ನಿನಗೆ, ನಿನ್ನ ತಂಗಿಗೂ ಇಪ್ಪತ್ತೆರಡು, ಈ ವಯಸ್ಸಿಗೆ ನನಗೆ ಮದುವೆಯಾಗಿ ನೀನೂ ಹುಟ್ಟಿದ್ದೆ. ಅಣ್ಣನ ಸ್ನೇಹಿತರು ವೆಂಕಟೇಶ್ ಇದ್ದಾರಲ್ಲ, ಅವರ ಅಕ್ಕನ ಮಗ ಡಾಕ್ಟರ್ ಅಂತೆ. ಅವನು ಮದುವೆ ಮಾಡಿಕೊಂಡು ಮುಂದಕ್ಕೆ ಓದಲು ಲಂಡನ್ನಿಗೆ ಹೋಗುತ್ತಿದ್ದಾನಂತೆ. ಅವನೇನಾದರು ನಿನ್ನನ್ನು ಒಪ್ಪಿದರೆ ನಿನ್ನ ಪುಣ್ಯವೇ ಸರಿ. ಸದ್ಯದಲ್ಲೇ ನಾನು, ಅಣ್ಣ ಅವರ ಮನೆಗೆ ಹೋಗಿ ಮಾತಾಡಬೇಕೆಂದಿದ್ದೇವೆ, ನಂತರ ಹೆಣ್ಣು ನೋಡುವುದು" ಎಂದಿದ್ದರು. "ನೀನು ಅದ್ಯಾವುದೂ ಮಾಡುವುದು ಬೇಡ, ನನಗೆ ಡಾಕ್ಟರನ್ನು ಮದುವೆಯಾಗಲು ಇಷ್ಟವಿಲ್ಲ" ಎಂದು



ಹೇಳಿ ಶರ್ಮಿಳ ಹೊರಟು ಹೋಗಿದ್ದಳು. ಆದರೆ ಅವಳ ತಾಯಿ ಇದನ್ನೇನೂ ಕಿವಿಗೆ ಹಾಕಿಕೊಂಡಿರಲಿಲ್ಲ.

ಹೈಸ್ಕೂಲಿನಿಂದ ಜೊತೆಯಲ್ಲೇ ಓದುತ್ತಿದ್ದ ಮಧುಸೂದನ್ ಬಹಳ ಬುದ್ಧಿವಂತ. ಎಂ.ಎಸ್ಸಿ. ಮುಗಿಸಿ, ಜೆನೆಟಿಕ್ ಟೆಕ್ನಾಲಜಿಯಲ್ಲಿ ಪಿ.ಎಚ್.ಡಿ. ಮಾಡಲು ಅವನಿಗೆ ಮಂಗಳೂರಿನ ವೈದ್ಯಕೀಯ ಕಾಲೇಜಿನಲ್ಲಿ ಸೀಟ್ ಕೂಡ ಸಿಕ್ಕಿತ್ತು. ಅವನು ಹಲವಾರು ಬಾರಿ ಸಲಿಗೆಯಿಂದ ಶರ್ಮಿಳಳೊಡನೆ ಮಾತನಾಡಿ ಇಬ್ಬರಲ್ಲೂ ಪ್ರೇಮ ಹುಟ್ಟಿತ್ತು. ಆದರೆ ಇಬ್ಬರೂ ಓದು ಮುಗಿಯುವವರೆಗೂ ಅದರ ವಿಚಾರ ಬೇಡವೆಂದು ಸುಮ್ಮನೆ ಸ್ನೇಹಿತರಂತೆ ಇದ್ದರು. ತನ್ನ ಒಂದನೇ ತರಗತಿಯಿಂದ ಹಿಡಿದು ಇಲ್ಲಿಯವರೆಗಿನ ಅಚ್ಚುಮೆಚ್ಚಿನ ಸ್ನೇಹಿತೆಯಾದ ಮಾಳವಿಕಳಿಗೆ ಅದನ್ನು ಇಂದು ಹೇಳುತ್ತೇನೆ. ಮಾಲಿಗೆ ಸಂತೋಷವಾಗಬಹುದು ಎಂದುಕೊಳ್ಳುತ್ತಾ ಸುಂದರವಾಗಿ ಅಲಂಕರಿಸಿಕೊಂಡು "ನಾನು ಮಾಲಿ ಸುತ್ತಾಡಿಕೊಂಡು ಸ್ವಲ್ಪ ಲೇಟಾಗಿ ಬರ್ತೀವಿ ಅಮ್ಮ" ಎಂದು ಹೇಳಿ ತನ್ನ ಸ್ಕೂಟರ್ ಹತ್ತಿ ತಾವು ಭೇಟಿಯಾಗಲು ನಿರ್ಧರಿಸಿದ್ದ ಕ್ಯಾಸೆ ಪಿಕೋಲ ಹೋಟೆಲ್‌ನ ಕಡೆ ಹೊರಟಿದ್ದಳು. ಸಮಯಕ್ಕೆ ಸರಿಯಾಗಿ ಬಂದ ಸ್ನೇಹಿತೆಯರು ಪರಸ್ಪರ ರೂಪವನ್ನು ಹೊಗಳುತ್ತಾ ಇಬ್ಬರೂ ತಮಗೆ ಬೇಕಾದ ಪಾನೀಯ ಮತ್ತು ತಿನಿಸುಗಳನ್ನು ತರಿಸಿಕೊಂಡಿದ್ದರು. "ಹೇಳು ಮಾಲಿ, ನಿನ್ನನ್ನು ಪಡೆಯುವ ಆ ಅದೃಷ್ಟವಂತ ಯಾರೆ?" ಎಂದು ಶರ್ಮಿಳ ಕೇಳಿದ್ದಕ್ಕೆ ನೀ ಮೊದಲು, ತಾ ಮೊದಲು ಎಂದು ಕಚ್ಚಾಡಿ ಕೊನೆಗೆ ಮಾಳವಿಕಳೆ ಶುರುಮಾಡಿದ್ದಳು. "ಶಮ್ಮು, ಸುಮಾರು ಹೈಸ್ಕೂಲ್ ಓದುವಾಗಿನಿಂದ ನಾನು ಮಧುವನ್ನು ಬಹಳ ಮೆಚ್ಚಿಕೊಂಡಿದ್ದೀನಿ ಕಣೆ" ಎಂದು ಮಾಳವಿಕ ಶುರು ಮಾಡುತ್ತಿದಂತೆ, ಕೂತಲ್ಲೇ ಕುಸಿದು ಹೋದ ಶರ್ಮಿಳ "ಯಾರು, ಯಾವ ಮನು?" ಎಂದು ಬೇಕೆಂದೇ ಕೇಳಿದ್ದಳು. "ಮನು ಅಲ್ಲವೆ ಮಧು, ನಮ್ಮ ಕ್ಲಾಸ್‌ಮೇಟ್. ನಾನು ಅವನನ್ನು ಮನದಲ್ಲೇ ಪೂಜಿಸುತ್ತಿದ್ದೀನಿ. ಅವನನ್ನು ಒಪ್ಪಿಸುವ ಭಾರ ನಿನ್ನದು. ಅವನು ಒಪ್ಪದಿದ್ದರೆ ನನಗೆ ಮದುವೆ ಅನ್ನುವುದು ಈ ಜನ್ಮದಲ್ಲಿಲ್ಲ ಕಣೆ" ಎಂದು ತನ್ನ ಅಂತರಾಳದಲ್ಲಿದ್ದುದನೆಲ್ಲಾ ಹೇಳಿಯೇ ಬಿಟ್ಟಳು. "ಈಗ ನಿನ್ನ ವಿಷಯ ಹೇಳು ಶಮ್ಮು" ಎಂದು ಮಾಳವಿಕ ಹೇಳಿದ್ದಕ್ಕೆ "ನನ್ನದೇನೆ ಇದೆ, ನಾನು ಯಾರನ್ನೂ ಪ್ರೀತಿಸಿಲ್ಲಮ್ಮ, ಸುಮ್ಮನೆ ನಿನ್ನ ಬಾಯಿ ಬಿಡಿಸುವುದಕ್ಕಾಗಿ ಹಾಗೆ ಹೇಳಿದೆ ಅಷ್ಟೆ, ಅಮ್ಮ ಅದ್ಯಾವುದೋ ಗಂಡು ನೋಡುತ್ತಾರಂತೆ, ಅವನು ಒಪ್ಪಿದಲ್ಲಿ, ಮುಂದಿನ ವಿಷಯ" ಎಂದು ಹಾಗೆ ತೇಲಿಸಿಬಿಟ್ಟಿದ್ದಳು.

ಪರೀಕ್ಷೆಯ ಫಲಿತಾಂಶ ಬಂದಮೇಲೆ ಮಧು ಬಂದು ಇವಳನ್ನು ಮದುವೆ ವಿಷಯ ಕೇಳಿದಾಗ, ತನಗೆ ಅವನ ಬಗ್ಗೆ ಆ ಭಾವನೆ ಎಂದೂ ಬಂದಿಲ್ಲವೆಂದೂ, ತನಗೆ ಅಮ್ಮ ಗಂಡು ನೋಡಿ ಆಗಿದೆ ಎಂದೂ ಶರ್ಮಿಳ ಹೇಳಿದ್ದಳು. "ಮಧು, ಮಾಳವಿಕ ನಿನ್ನನ್ನು ಪೂಜಿಸುತ್ತಿದ್ದಾಳೆ. ಅವಳಂತಹ ಹೆಂಡತಿಯನ್ನು ಪಡೆಯಲು ನೀನು ಪುಣ್ಯ ಮಾಡಿರಬೇಕು" ಎಂದು ಹೇಳಿ ಕಣ್ಣಂಚಿನಲ್ಲಿ ಬಂದ ನೀರನ್ನು ತೋರ್ಪಡಿಸದೇ ಹೊರಟು ಹೋಗಿದ್ದಳು. ತಾನು ಮೋಸಹೋದೆ ಎಂಬ ಭಾವನೆಯಲ್ಲಿ ಅವನು ಮಾಳವಿಕಳಿಗೆ ಫೋನ್ ಮಾಡಿ, ಇಬ್ಬರೂ ತಿಂಗಳಲ್ಲಿ ಮದುವೆಯಾಗೇ ಬಿಟ್ಟರು. ಶರ್ಮಿಳ ಏನೂ ನಡೆದಿಲ್ಲವೆನ್ನುವಂತೆ ಹೋಗಿ ಭಾಗವಹಿಸಿದ್ದಳು.

ಶರ್ಮಿಳಳು ಜೀವನ ಇಷ್ಟೆ ಅಲ್ಲ, ಅಮ್ಮ ಅಣ್ಣನಿಗೆ ಬೇಜಾರು ಮಾಡಬಾರದು ಎಂದು ಸಮಾಧಾನ ತಂದುಕೊಂಡು, ಅಮ್ಮ ಕರೆಸಿದ ಲಂಡನ್ ಹುಡುಗ ಶ್ರೀಕಾಂತನನ್ನು ನೋಡಲು ಒಪ್ಪಿ ತಯಾರಾಗಿದ್ದಳು. ಶ್ರೀಕಾಂತನು ಬಂದು ನೋಡಿಕೊಂಡು ಹೋದ ಶಾಸ್ತ್ರವಾಯಿತು. ಅವನ ತಂದೆ ಫೋನ್ ಮಾಡುವುದಾಗಿ ಹೇಳಿ ಹೊರಟಿದ್ದರು. ಒಪ್ಪಿಗೆ ಇದೆ ಎಂದು ಫೋನ್ ಬಂದೇ ಬರುತ್ತದೆ ಎಂದು ವಿಶಾಲಾಕ್ಷಿ ಆಸೆಯಿಂದಿದ್ದರು. ಒಪ್ಪಿಗೆ ಎಂಬ ಫೋನ್ ಏನೋ ಬಂದಿತು. ಆದರೆ ಹುಡುಗ ಎಂಜಿನಿಯರ್ ಆಗಿದ್ದ ಅವರ ಎರಡನೇ ಮಗಳು ಶಾಲಿನಿಯನ್ನು ಒಪ್ಪಿದ್ದಾನೆ ಎಂದು ಹೇಳಿಬಿಟ್ಟರು. ಅಮ್ಮ ಈ ವಿಷಯವನ್ನು ಹೇಳಿದಾಗ, ಶಾಲಿನಿಯ ಮುಖ ರಂಗೇರಿ ಅವಳ ತುಟಿಯಂಚಿನಲ್ಲಿ ಅವಳಿಗೆ ತಿಳಿಯದಂತೆ ನಾಚಿಕೆಯ ನಗು ಮೂಡಿತ್ತು. ಇದನ್ನು ಗಮನಿಸಿದ ಶರ್ಮಿಳಳ ಮನದಲ್ಲಿ ನಿರಾಸೆಯಾದರೂ ಅಮ್ಮನಿಗೆ ಸಮಾಧಾನ ಹೇಳಿದ್ದಳು. "ಅಯ್ಯೋ ಅದಕ್ಕೇನಂತೆ ಅಮ್ಮ, ಶಾಲುಗೆ ಮದುವೆ ಮಾಡು, ನನಗೆ ಇನ್ನೊಂದು ವರ್ಷ ಬಿಟ್ಟು ಆಗಲಿ" ಎಂದು ಹೇಳಿ ಎಲ್ಲರನ್ನೂ ಒಪ್ಪಿಸಿ ತಂಗಿಯ ಮದುವೆಯಲ್ಲಿ ತಾನೇ ಮುಂದು ನಿಂತು ಓಡಾಡಿದ್ದಳು. ಎರಡು ಬಾರಿ ಘಾಸಿಗೊಂಡ ತನ್ನ ಮನಸ್ಸಿನ ದುಗುಡವನ್ನು ತನ್ನ ಅಂತರಾಳದಲ್ಲೇ ಹುದುಗಿಸಿ ತಾನು ಮುಂದಕ್ಕೆ ಓದಬೇಕೆಂದುಕೊಂಡಿದ್ದೇನೆ ಎಂದು ತನ್ನ ತಂದೆ ತಾಯಿಯ ಬಳಿ ಹೇಳಿದ್ದಳು. ಒಲ್ಲದ ಮನಸ್ಸಿನಿಂದ ಅವಳ ತಾಯಿ ಅವಳನ್ನು ಅಮೇರಿಕದ ಬಾಸ್ಟನ್‌ಗೆ ಪಿ.ಎಚ್.ಡಿ ಮಾಡಲು ಕಳುಹಿಸಲೇ ಬೇಕಾಯಿತು.

*****************

ಪುಟ್ಟ ಶ್ರೇಯ ಕಣ್ಣು ಬಿಟ್ಟು ಕಿರುಚಿದಾಗ ಶರ್ಮಿಳ ವಾಸ್ತವಕ್ಕೆ ಬಂದಳು. ಅವರ ಲೆಕ್ಕದಲ್ಲಿ ರಾತ್ರಿಯಾಗಿದ್ದರಿಂದ ಮಗು ಹಾಗೆ ಹಾಲು ಕುಡಿದು ಮತ್ತೆ ಕಣ್ಣು ಮುಚ್ಚಿತು. ಅವಳ ಮನಸ್ಸು ಪುನಃ ಭೂತಕಾಲಕ್ಕೆ ಹೋಯಿತು.

ಪಿ.ಎಚ್.ಡಿ ಮಾಡಲು ಹೋದ ಅವಳು ವಿದ್ಯಾಭ್ಯಾಸದಲ್ಲಿ ತನ್ನನ್ನು ತಾನು ಬಹಳ ತೊಡಗಿಸಿಕೊಂಡಿದ್ದಳು. ಅಲ್ಲಿನ ಪ್ರೊಫೆಸರ್‌ಗಳಿಗೆ ಇವಳು ಅಚ್ಚುಮೆಚ್ಚಿನ ವಿದ್ಯಾರ್ಥಿನಿಯಾಗಿದ್ದಳು. ಹೀಗೆ ನಾಲ್ಕು ವರ್ಷಗಳುರುಳಿಹೋಗಿದ್ದವು. ತಂದೆ ತಾಯಿಗೆ ಮದುವೆಯ ವಿಷಯ ಈಗ ಬೇಡವೆಂದು ಹೇಳಿ ಸುಮ್ಮನಾಗಿಸಿಬಿಟ್ಟಿದ್ದಳು. ಅವರೂ ಅಸಹಾಯಕರಾಗಿ ಇವಳ ಮನಸ್ಸು ಬದಲಾಗಬಹುದು ಎಂದು ಆಸೆಯಿಂದ ಕಾಯುತ್ತಿದ್ದರು. ಜೊತೆಯಲ್ಲಿ ಓದುತ್ತಿದ್ದ ಸುರೇಶ್ ಇವಳ ಮೇಲೆ ಬಹಳ ಅಭಿಮಾನದ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದ. ಇಬ್ಬರ ಸ್ನೇಹ ಬೆಳೆದು, ಒಂದು ದಿನ ಸುರೇಶ್ ಇವಳ ಮುಂದಿನ ಯೋಚನೆ ಏನೆಂದು ಕೇಳಿದ್ದ. ಸ್ನೇಹ ಚೆನ್ನಾಗಿ ಬೆಳೆದಿದ್ದರಿಂದ, ತನ್ನ ಭಾವನೆಗಳಿಗೆ ಒಂದು ಔಟ್‌ಲೆಟ್ ಬೇಕೆಂದೆನಿಸಿ ಶರ್ಮಿಳ ತನ್ನ ಜೀವನದಲ್ಲಿ ನಡೆದ ಕಥೆ ಹೇಳಿದ್ದಳು. ಬಡ ಕುಟುಂಬದಲ್ಲಿ ಹುಟ್ಟಿದ್ದ ಸುರೇಶ್, ತಂದೆಯನ್ನು ಕಳೆದುಕೊಂಡು ಬಹಳ ಕಷ್ಟದಲ್ಲಿ ಬಂದಿದ್ದವನು. ಅವನ ಬುದ್ಧಿವಂತಿಕೆಯನ್ನು ಮೆಚ್ಚಿ, ಯೂನಿವರ್ಸಿಟಿಯವರು ಎಲ್ಲಾ ಖರ್ಚನ್ನೂ ವಹಿಸಿಕೊಂಡು ಅವನನ್ನು ಕರೆಸಿಕೊಂಡಿದ್ದರು. ಮುಂದೆ ಅವನಿಗೆ ಅದೇ ಯೂನಿವರ್ಸಿಟಿಯಲ್ಲಿ ಕೆಲಸವೂ ಖಾತ್ರಿಯಾಗಿತ್ತು. ಜೀವನದಲ್ಲಿ ಕಷ್ಟಪಟ್ಟು ಮುಂದೆ ಬಂದ ಸುರೇಶ್ ಸ್ನೇಹಿತೆಗಾಗಿ, ತಂಗಿಗಾಗಿ ತ್ಯಾಗಮಾಡಿ ದುಃಖವನ್ನು ನುಂಗಿಕೊಂಡ ಶರ್ಮಿಳಳನ್ನು ಬಹಳ ಮೆಚ್ಚಿಕೊಂಡ. ಅವಳು ಒಪ್ಪುವುದಾದರೆ ಇಬ್ಬರೂ ಜೀವನ ಸಂಗಾತಿಗಳಾಗಬಹುದು ಎಂದು ಹೇಳಿದ್ದ. ಶರ್ಮಿಳಳು ಬಹಳ ಯೋಚನೆ ಮಾಡಿ ಒಪ್ಪಿದ್ದಳು. ಇಬ್ಬರೂ ಓದಿನ ಮಧ್ಯದಲ್ಲಿದ್ದ ಕಾರಣ ಮತ್ತು ಅವರ ಗ್ರೀನ್‌ಕಾರ್ಡ್ ಬರುವುದರಲ್ಲಿದ್ದ ಕಾರಣ ಭಾರತಕ್ಕೆ ಹೋಗುವಂತಿರಲಿಲ್ಲ. ಒಂದು ದಿನ ಶರ್ಮಿಳ ತಾಯಿಗೆ ಫೋನ್ ಮಾಡಿ "ಅಮ್ಮ, ನೀನು ಯಾವಾಗಲೂ ಮದುವೆ ಮಾಡಿಕೊ ಎಂದು ಹೇಳುತ್ತಿದ್ದಿಯಲ್ಲ, ನನಗೆ ಕನ್ನಡದವರೇ ಆದ ಮೈಸೂರಿನ ಸುರೇಶ್ ಎಂಬವರ ಪರಿಚಯವಾಗಿ ಮದುವೆ ಮಾಡಿಕೊಳ್ಳಬೇಕೆಂದಿದ್ದೀನಿ" ಎಂದಾಗ ತಾಯಿಯ ಆನಂದಕ್ಕೆ ಕೊನೆಯೇ ಇರಲಿಲ್ಲ. "ಆದರೆ ನಮಗೆ ಈಗ ಭಾರತಕ್ಕೆ ಬಂದರೆ ಮರಳಿ ಬರಲು ವೀಸಾ ಸಿಗದ ಕಾರಣ, ನೀನು ಅಣ್ಣ ಇಲ್ಲೇ ಬಂದು ಮದುವೆ ಮಾಡಿಕೊಡಬೇಕು" ಎಂದಾಗ ಮಗಳ ಮದುವೆ ಅದ್ಧೂರಿಯಾಗಿ ಮಾಡಲಾಗುವುದಿಲ್ಲ ಎಂದು ಸ್ವಲ್ಪ ನಿರಾಸೆಯಾದರೂ ಒಪ್ಪಿದ್ದರು. ಸುರೇಶನ ತಾಯಿ ಹಾಗು ಇವಳ ತಂದೆ-ತಾಯಿ ಅಮೇರಿಕದಲ್ಲೇ ಮದುವೆ ಶಾಸ್ತ್ರವನ್ನು ಮಾಡಿಕೊಟ್ಟಿದ್ದರು. ಒಂದು ತಿಂಗಳು ಉಳಿದುಕೊಂಡು ವಿಶಾಲಾಕ್ಷಿ ಮಗಳ ಸಂಸಾರ ಹೂಡಿಸಿಕೊಟ್ಟು, ಅಳಿಯನ ಒಳ್ಳೇತನವನ್ನು ಮೆಚ್ಚಿಕೊಂಡಿದ್ದರು. ಮಗಳು ಕೊನೆಗೆ ಸರಿಯಾದ ದಡ ಸೇರಿದಳು ಎಂದು ಸಂತೋಷವಾಗಿ ಹಿಂದಿರುಗಿದ್ದರು. ಮುಂದೆ ಮೂರು ವರ್ಷಗಳಲ್ಲಿ ಶರ್ಮಿಳಳಿಗೆ ಶ್ರೇಯ ಹುಟ್ಟುವಾಗ ತಾಯಿಗೆ ಬರಲು ಹೇಳಿದ್ದಳು. ವೀಸಾ ಸಿಗಲಿಲ್ಲವೆಂದು ಹೇಳಿದ್ದ ಅವರು, ಶರ್ಮಿಳಳೇ ಆದಷ್ಟು ಬೇಗ ಮಗುವನ್ನು ಕರೆದು ಕೊಂಡು ಬಂದರೆ ಒಳಿತೆಂದು ಹೇಳಿದ್ದರು. ಹಾಗೇ ಸುರೇಶನೇ ಬಾಣಂತಿ ಮತ್ತು ಮಗುವನ್ನು ನೋಡಿಕೊಂಡಿದ್ದ. ಈಗ ಮಗುವಿಗೆ ಒಂದು ವರ್ಷದ ಹುಟ್ಟುಹಬ್ಬವನ್ನು ಎಲ್ಲರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಮಾಡುವ ಆಸೆ ಹೊತ್ತು ಹೊರಟಿದ್ದರು.

***************

"We will be landing at Bangalore International Airport in a few minutes, the local time is..." ಎಂಬ ಗಗನಸಖಿಯ ಧ್ವನಿಗೆ ಎಚ್ಚರಗೊಂಡು ಎಲ್ಲ ಸಾಮಾನುಗಳ ಮೇಲೂ ಕಣ್ಣಾಡಿಸಿಕೊಂಡಳು. "ಎಂಟು ವರ್ಷಕ್ಕೂ ಹೆಚ್ಚು ಆಯ್ತು ನಾನು ಈ ಬೆಂಗಳೂರು ಬಿಟ್ಟು. ಹೇಗಿದೆಯೋ ಎಲ್ಲ, ಮಾಲಿಗೆ ಮಕ್ಕಳಾಗಿರಬಹುದು. ಅವಳು ಮಂಗಳೂರಿಗೆ ಹೊರಟು ಹೋಗಿದ್ದರಿಂದ ಅಮ್ಮನಿಗೆ ಅವಳ ವಿಷಯ ಹೆಚ್ಚು ಗೊತ್ತಿರಲಿಲ್ಲ. ಈ ಸಲ ಮೂರು ತಿಂಗಳು ಇರುತ್ತೀನಲ್ಲ ಎಲ್ಲರನ್ನೂ ವಿಚಾರಿಸಿಕೊಳ್ಳಬೇಕು" ಎಂದು ಶರ್ಮಿಳ ಮನದಲ್ಲೇ ಅಂದುಕೊಂಡು ಪ್ಲೇನ್ ಇಳಿದು, ಮುಂದಿನ ಎಲ್ಲ ಪೇಪರ್ ವರ್ಕ್ ಮುಗಿಸಿ ತಮ್ಮ ಸಾಮಾನು ಎತ್ತಿಕೊಂಡು ಆಚೆ ಬಂದರು. ಹೊರ ಬರುತ್ತಿದ್ದಂತೇ ಶರ್ಮಿಳ ತನ್ನ ತಂದೆ-ತಾಯಿಯನ್ನು ನೋಡಿ ಹಿಗ್ಗಿ ಹೋದಳು. "ಶಮ್ಮೂ, ಚೆನ್ನಾಗಿದ್ಯೇನೇ? ಪುಟ್ಟಿ ಶ್ರೇಯೂ, ಅಜ್ಜಿ ಹತ್ತಿರ ಬಾ" ಎಂದು ಹೇಳಿದ ವಿಶಾಲಾಕ್ಷಿ ಮಗುವನ್ನು ಎತ್ತಿಕೊಂಡರು. ನಂತರ ಎಲ್ಲರೂ ಆಚೆ ನಡೆದರು. ಕಾರ್ ಹತ್ತಿ ಮನೆಗೆ ಬಂದು ಇಳಿದಾಗ ಪ್ರಯಾಣದ ಆಯಾಸ ಶರ್ಮಿಳ ಮತ್ತು ಸುರೇಶರಿಗೆ ಕಾಣತೊಡಗಿತ್ತು.

ಮನೆಯೊಳಗೆ ಕಾಲಿಡುತ್ತಿದಂತೆ ಶಾಲಿನಿ ಅಳುತ್ತಾ ಬಂದು ಅಕ್ಕನನ್ನು ಬಿಗಿಯಾಗಿ ತಬ್ಬಿಕೊಂಡಳು . "ಶಾಲು ನೀನಿಲ್ಲಿ? what a pleasant surprise! ಏರ್‌ಪೋರ್ಟಿಗೆ ಯಾಕೇ ಬರ್ಲಿಲ್ಲ? ಎಷ್ಟು ಸಣ್ಣಗಾಗಿ ಬಿಟ್ಟಿದ್ದೀಯಲ್ಲೇ, ಏನು ಭಾರಿ ಡಯೆಟಿಂಗಾ?" ಎಂದೆಲ್ಲ ತಮಾಷಿಯಾಗಿ ಶರ್ಮಿಳ ಕೇಳಿದ್ದಕ್ಕೆ ಅಳುವುದು ಬಿಟ್ಟು ಇನ್ನೇನು ಹೇಳಲಿಲ್ಲ ಶಾಲಿನಿ. "ಅಮ್ಮ, ಏನಾಯಿತು ಶಾಲುಗೆ? ಯಾಕೆ ಹೀಗಾಡುತ್ತಿದ್ದಾಳೆ" ಎಂದು ತಾಯಿಯನ್ನು ಕೇಳಿದ್ದಕ್ಕೆ ಅವರು "ಶಮ್ಮು ಈಗ ಅವಳನ್ನು ಬಿಟ್ಟು ನೀನು ಸುಧಾರಿಸಿಕೊ ನಂತರ ಅಕ್ಕ-ತಂಗಿಯರು ಮಾತಾಡಿಕೊಳ್ಳಿ" ಎಂದು ಮಾತು ಮರೆಸಿ ಇಬ್ಬರನ್ನೂ ಹೊರಡಿಸಿದರು. ಶರ್ಮಿಳ ಹೆಚ್ಚೇನೂ

ಮಾತಾಡದೆ, ಸಮಯ ಸುಮಾರು ಹತ್ತು ಘಂಟೆಯಾಗಿದ್ದರಿಂದ ಸ್ನಾನ ಮಾಡಿ ಅಮ್ಮ ಮಾಡಿಕೊಟ್ಟ ಮಸಾಲೆ ದೋಸೆ ತಿಂದು ಶ್ರೇಯಳನ್ನು ಅಜ್ಜಿ ಅಜ್ಜರ ಬಳಿ ಬಿಟ್ಟು, ಸುರೇಶನಿಗೂ ತನ್ನ ರೂಮಿನಲ್ಲಿ ಸುಧಾರಿಸಿಕೊಳ್ಳಲು ಹೇಳಿ, ತಾನು ತನ್ನ ತಂಗಿ ಶಾಲಿನಿ ಜೊತೆಗೆ ಮಹಡಿ ಮೇಲೆ ಹೋದಳು. "ಹೇಳು ಶಾಲು ಏನು ಸಮಾಚಾರ, ಯಾಕೆ ಹೀಗಿದ್ದೀಯ, ಏನು ಕಥೆ ಎಲ್ಲ ಹೇಳು" ಎಂದು ಆತಂಕದಿಂದ ಕೇಳಿದಳು. "ಅಕ್ಕ, ನಾನು ಮೋಸ ಹೋದೆ ಕಣೆ, ನಿನಗೆ ಅನ್ಯಾಯ ಮಾಡಿದ್ದಕ್ಕೆ ನನಗೆ ತಕ್ಕ ಶಾಸ್ತ್ರಿಯಾಯಿತು" ಎಂದು ಶರ್ಮಿಳಳನ್ನು ತಬ್ಬಿಕೊಂಡು ಗಟ್ಟಿಯಾಗಿ ಅಳತೊಡಗಿದಳು. "ನೀನು ಯಾವ ಮೋಸವೂ ಮಾಡಿಲ್ಲ ಕಣೆ, ಏನಾಯಿತು ಅಂತ ಹೇಳು" ಎಂದು ಶರ್ಮಿಳಾ ಕೇಳಿದ್ದಕ್ಕೆ, "ಶ್ರೀಕಾಂತ್ ನನ್ನನ್ನು ಡಿವೋರ್ಸ್ ಮಾಡಿಬಿಟ್ಟ ಕಣೆ. ಸುಮಾರು ನಾಲ್ಕು ವರ್ಷಗಳಿಂದ ಅವನು ನನ್ನನ್ನು ಹೆಚ್ಚು ಹಚ್ಚಿಕೊಂಡಿರಲಿಲ್ಲ, ಪ್ರತಿ ದಿನ ಲೇಟಾಗಿ ಬರುವುದು, ಕೆಲವು ಬಾರಿ ರಾತ್ರೋರಾತ್ರಿ ಬರುವುದೇ ಇಲ್ಲ, ಹೀಗೆಲ್ಲ ಮಾಡುತ್ತಿದ್ದ. ನಂತರ ಅವನಿಗೆ ಬೇರೊಂದು ಬಿಳಿಯ ಚರ್ಮದ ಲೇಡಿ ಡಾಕ್ಟರೊಡನೆ ಸಂಬಂಧವಿದೆ ಎಂದು ತಿಳಿದು ಬಂದು ಅವನನ್ನು ಕೇಳಿದಾಗ ಚೆನ್ನಾಗಿ ಬೈದು, ನನಗೆ ಮೆಡಿಕಲ್ ಪ್ರೊಫೆಶನ್‌ನಲ್ಲಿ ಇರುವ ಹೆಂಡತಿಯೇ ಬೇಕು ಎಂದು ನಿಷ್ಠುರವಾಗಿ ಹೇಳಿ, ಇಂದೇ ನಿನಗೆ ಡಿವೋರ್ಸ್ ಪೇಪರ್ ಕಳಿಸುತ್ತೀನಿ ಎಂದು, ಹಾಗೇ ತಿಂಗಳಲ್ಲಿ ನನ್ನನ್ನು ಕಳುಹಿಸಿಬಿಟ್ಟ. ನಾನು ಅಮ್ಮನ ಮನೆ ಸೇರಿ ವರ್ಷದ ಮೇಲಾಯಿತು. ಅಮ್ಮ ಬಸರಿಯಾಗಿದ್ದ ನಿನಗೆ ಹೇಳಿ ಇಲ್ಲದ ಸಂಕಟ ಕೊಡುವುದು ಬೇಡ ಎಂದು ಸುಮ್ಮನಾಗಿಸಿದ್ದಳು. ಅದೇ ಕಾರಣಕ್ಕೆ ಅಮ್ಮ ವೀಸಾ ಸಿಗದ ನೆಪ ಹೇಳಿ ನಿನ್ನ ಬಾಣಂತನಕ್ಕೂ ಬರಲಿಲ್ಲ" ಎಂದು ಹೇಳಿ ಬಿಕ್ಕಿ ಬಿಕ್ಕಿ ಅತ್ತಳು. ತಂಗಿಯ ಜೀವನದ ಕಥೆ ಕೇಳಿ ಶರ್ಮಿಳ ಬಹಳ ನೊಂದಳು. ಏನೂ ಹೇಳಲು ಅವಳಿಗೆ ತೋಚಲಿಲ್ಲ. ಇಬ್ಬರೂ ಸುಮಾರು ಹೊತ್ತು ಸುಮ್ಮನೆ ಕುಳಿತಿದ್ದರು. "ಹಾಗೆ ಮೋಸ ಮಾಡಿದನಾ ಆ ನೀಚ, ನೀನು ಯೋಚನೆ ಮಾಡಬೇಡ ಶಾಲು, ಏನಾದರೊಂದು ದಾರಿ ಹುಡುಕೋಣ. ನೀನು ಯಾಕೆ ಮತ್ತೆ ಮದುವೆಯಾಗಬಾರದು, ಯಾವುದಾದರೂ ಎರಡನೇ ಸಂಬಂಧವನ್ನೇ ನೋಡಿದರಾಯಿತು, ಆಗ ನಿನಗೂ ಯಾವ ಅಪರಾಧಿ ಭಾವನೆಯೂ ಬರುವುದಿಲ್ಲ" ಎಂದು ಶರ್ಮಿಳ ಹೇಳಿದ್ದಕ್ಕೆ ಶಾಲಿನಿ "ಇಲ್ಲ ಅಕ್ಕ, ಸದ್ಯದ ಪರಿಸ್ಥಿತಿಯಲ್ಲಿ ನನ್ನ ಮನಸ್ಸು ಅದಕ್ಕೆ ಒಪ್ಪುವಂತಿಲ್ಲ" ಎಂದು ಬಿಟ್ಟಳು. ಅಷ್ಟರಲ್ಲಿ ಶ್ರೇಯಳ ಸದ್ದು ಕೇಳಿಸಿ ಇಬ್ಬರೂ ಕೆಳಗಿಳಿದು ಹೋದರು. ಶಾಲಿನಿ ಕಣ್ಣೀರು ಒರೆಸಿಕೊಳ್ಳುತ್ತ "ಶ್ರೇಯು, ಚಿಕ್ಕಿ ಹತ್ತಿರ ಬಾ ಪುಟ್ಟಿ... " ಎಂದು ಮಗುವನ್ನು ಎತ್ತಿಕೊಂಡು ಹೋದಳು. ವಿಶಾಲಾಕ್ಷಿ ಬಂದು ಶರ್ಮಿಳಳ ಕೈ ಹಿಡಿದು ಗಟ್ಟಿಯಾಗಿ ಅತ್ತರು. "ನೋಡಿದ್ಯೇನೆ ಶಮ್ಮು, ಒಟ್ಟಿನಲ್ಲಿ ಇಳಿ ವಯಸ್ಸಿನಲ್ಲಿ ನಮಗೆ ನೆಮ್ಮದಿ ಇಲ್ಲದಂತಾಯಿತು. ನೀನು ಮದುವೆ ಮಾಡಿಕೊಂಡಿಲ್ಲ ಎಂಬ ಯೋಚನೆ ಕಳೆಯಿತು ಅಂತ ಸ್ವಲ್ಪ ದಿನ ಆನಂದವಾಗಿದ್ದೆವು. ಈಗಂತು ಅಣ್ಣನಿಗೆ ಬಿ.ಪಿ. ಕೂಡ ಹೆಚ್ಚಾಗಿ ಬಹಳ ಪಥ್ಯದ ಅಡುಗೆ ಮಾಡಬೇಕಾಗಿದೆ" ಎಂದು ಹೇಳಿ ಬಹಳ ಬೇಜಾರು ಮಾಡಿಕೊಂಡರು. ಯಾವಾಗಲೂ ಹೆಚ್ಚು ಉದ್ವೇಗಕ್ಕೆ ಒಳಗಾಗುವುದಿಲ್ಲ ಎಂದೇ ಹೆಸರು ಪಡೆದಿದ್ದ ಶರ್ಮಿಳ "ಅಮ್ಮ, ನೀನು ಯೋಚನೆ ಮಾಡಬೇಡ, ನಾನು ಬಂದಿದ್ದೀನಿ, ಎಲ್ಲ ಸರಿಪಡಿಸುವ ಪ್ರಯತ್ನ ಮಾಡುತ್ತೇನೆ" ಎಂದು ತಾಯಿಗೆ ಭರವಸೆ ಕೊಟ್ಟು ಕೆಳಗೆ ಕರೆದು ಕೊಂಡು ಹೋದಳು.

ಮಗಳು ಬಂದ ನಾಲ್ಕೇ ದಿನಗಳಲ್ಲಿ ಹುಟ್ಟುಹಬ್ಬ ಸಮಾರಂಭವಿದ್ದುದರಿಂದ, ಎಲ್ಲ ಏರ್ಪಾಟನ್ನೂ ವಿಶಾಲಾಕ್ಷಿ ಮಾಡಿಟ್ಟಿದ್ದರು. ಶ್ರೇಯಳ ಹುಟ್ಟುಹಬ್ಬಕ್ಕೆ ಎಲ್ಲ ನೆಂಟರಿಷ್ಟರು ಮತ್ತು ಸ್ನೇಹಿತರನ್ನೂ ಕರೆದಿದ್ದಳು ಶರ್ಮಿಳ. ಮಾಳವಿಕ ಮತ್ತು ಮಧು ಕೂಡ ಅಂದು ಬರುವವರಿದ್ದರು. "ಫೋನ್ ಮಾಡಿದ್ದಾಗ ಕೂಡ ಮಾಲಿ ಸಿಗಲಿಲ್ಲ ಅವಳಿಗೆ ಇನ್ವಿಟೇಶನ್ ತಲುಪಿರಬಹುದು, ಬರುತ್ತಾಳೆ ಎಂದುಕೊಂಡಿದ್ದೇನೆ" ಎಂದಳು ತಾಯಿಯನ್ನು ಕುರಿತು. ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡು ಎಲ್ಲರೂ ಸುಂದರವಾಗಿ ಅಲಂಕರಿಸಿಕೊಂಡಿದ್ದರು. ಸುಮಾರು ಆರು ಗಂಟೆಯ ಹೊತ್ತಿಗೆ ಮಧು ಮತ್ತು ಮಾಳವಿಕ ಬಂದರು. ಸ್ನೇಹಿತೆ ವಯಸ್ಸಾದಂತೆ ಕಾಣುತ್ತಿದ್ದಾಳೆ ಎಂದುಕೊಂಡ ಶರ್ಮಿಳ ನಗುಮುಖದಿಂದ ಸ್ವಾಗತಿಸಿದಳು. ಸುರೇಶನ ಕಡೆಯವರು ಎಲ್ಲರೂ ಬಂದಿದ್ದರು. ಕೇಕ್, ಊಟ, ಉಪಚಾರ ಮುಗಿದು ಅತಿಥಿಗಳು ಹೊರಟಾಗ, ಶರ್ಮಿಳ ಮಾಳವಿಕಳ ಕಡೆ ನೋಡುತ್ತ "ಯಾವಾಗ ಸಿಗ್ತೀಯೇ ನನಗೆ? ಅಮ್ಮನ ಮನೇಲಿ ಇರ್ತೀಯೋ ಹೇಗೆ? ನಾಳೆ ಬರ್ತೀನಿ, ನಿಧಾನವಾಗಿ ಮಾತಾಡೋಣ" ಎಂದಳು. ಅದಕ್ಕೆ ಮಧು "ಅವಳಿಗೆ ನಿನ್ನೊಡನೆ ಮಾತಾಡಲು ಒಂದು ದಿನ ಸಾಲಲ್ಲ ಶಮ್ಮು, ನಾಲ್ಕಾರು ದಿನ ಬೇಕು" ಎಂದು ತಮಾಷಿಯಾಗೇ ಹೇಳಿದ.

ಬೆಳಗಾಗೆದ್ದು ಸುರೇಶನ ತಾಯಿ ಮೈಸೂರಿಗೆ ಹೊರಟು ನಿಂತರು. "ಶಮ್ಮು, ಅಮ್ಮನ ಜೊತೆ ನಾನೂ ಮೈಸೂರಿಗೆ ಹೊರಡುತ್ತೀನಿ. ನೀನು ಬೇಕಾದರೆ ಎರಡು ದಿನ ಬಿಟ್ಟು ಸುಧಾರಿಸಿಕೊಂಡು ಬಾ" ಎಂದು ಹೇಳಿದ ಸುರೇಶ್. ಹಾಗೇ ಆಗಲೆಂದಳು ಶರ್ಮಿಳ. ಸ್ನಾನ ತಿಂಡಿ ಮುಗಿಸಿ ಅತ್ತೆ ಮತ್ತು ಗಂಡನನ್ನು ಬೀಳ್ಕೊಟ್ಟು ಸ್ನೇಹಿತೆಯ ಮನೆಗೆ ಹೋದಳು.

ಮಾಳವಿಕಳ ಮನೆ ಬಾಗಿಲ ಕರೆಗಂಟೆ ಬಾರಿಸಿ ನಿಂತಳು ಶರ್ಮಿಳ. ಬಾಗಿಲು ತೆರೆದವರು ಮಾಳವಿಕಳ ತಾಯಿ "ಬಾ

ಶರ್ಮಿಳ, ನೆನ್ನೆಯಂತೂ ನೀನು ಬಹಳ ಗಲಾಟೆಯಲ್ಲಿದ್ದೆ, ಮಾತಾಡಲಾಗಲಿಲ್ಲ. ಹೇಳು, ಏನು ಸಮಾಚಾರ" ಎಂದು ಮಾತಾಡಿಸಿದ ಅವರು ಪಾನಕ ಮತ್ತು ಕೋಡುಬಳೆ



ತಂದುಕೊಟ್ಟರು. "ಶಮ್ಮು ಕ್ಯಾಸೆ ಪಿಕೋಲಾಗೆ ಹೋಗೋಣವೇ?" ಎಂದು ಮಾಳವಿಕ ಕೇಳಿದಾಗ, ಶರ್ಮಿಳಳಿಗೆ ಎಲ್ಲೋ ಉಸಿರು ನಿಂತಂತಾಯಿತು. ಮಧು ತಾನೂ ಬರುವುದಾಗಿ ಹೇಳಿದ. ಮೂವರೂ ಹೋಗಿ ಕುಳಿತರು. "ಮಾಲಿ ನಿನಗೆ ಮಕ್ಕಳು...." ಎಂದು ನಿಲ್ಲಿಸಿದಳು ಶರ್ಮಿಳ. ಅದಕ್ಕೆ ಮಾಳವಿಕ ಏನೂ ಹೇಳಲಿಲ್ಲ ಬದಲಾಗಿ ಮಧು ಶುರು ಮಾಡಿದ "ಶಮ್ಮು, ನೀನು ನಿನ್ನ ಮನದಾಸೆಯನ್ನು ಬದಿಗೊತ್ತಿ ತ್ಯಾಗಮಾಡಿದ ವಿಷಯ ಮಾಲಿಗೆ ನೀನು ಹೊರಟ ಸ್ವಲ್ಪ ದಿನದಲ್ಲೇ ಹೇಗೋ ನಮ್ಮಿಬ್ಬರ ಮಾತಿನಲ್ಲಿ ತಿಳಿಯಿತು. ಅವಾಗಿನಿಂದ ಅವಳು ಪಟ್ಟ ಮನೋವೇದನೆ ಹೇಳತೀರದ್ದು. ನಮಗಿನ್ನೂ ಮಕ್ಕಳಾಗಿಲ್ಲ, ಅದಕ್ಕೂ ಕೊರಗು ಹಚ್ಚಿಕೊಂಡಿದ್ದಾಳೆ. ಡಾಕ್ಟರ್ ಬಳಿ ಹೋಗಿದ್ದೂ ಆಯಿತು, ಇಬ್ಬರಲ್ಲೂ ಯಾವ ಊನವೂ ಇಲ್ಲ, ಸ್ವಲ್ಪ ನೆಮ್ಮದಿಯಿಂದ ಇರಿ, ಎಲ್ಲ ಸರಿಹೋಗುತ್ತದೆ ಎನ್ನುತ್ತಾರೆ. ಆ ನೆಮ್ಮದಿ ಎನ್ನುವುದು ಮಾಲಿಗೆ ಇಲ್ಲವೇ ಇಲ್ಲ. ಅವಳನ್ನು ಒಮ್ಮೆ ನೋಡು, ಹೇಗಾಗಿದ್ದಾಳೆ. ಸರಿಯಾಗಿ ಊಟ, ತಿಂಡಿ, ನಿದ್ದೆ ಒಂದೂ ಇಲ್ಲ, ವಾರಕ್ಕೆ ಎರಡು ದಿನ ಚೆನ್ನಾಗಿರುತ್ತಾಳೆ, ಮಿಕ್ಕ ದಿನ ಏನಾದರೊಂದು ಹಚ್ಚಿಕೊಂಡು ಕೊರಗುತ್ತಾಳೆ ನೀನೇ ಅವಳಿಗೆ ಸಮಾಧಾನ ಪಡಿಸಬೇಕು" ಎಂದು ಉದ್ವೇಗದಿಂದ ಹೇಳಿದ. "ಶಮ್ಮು, ನಾನು ನಿನಗೆ ಮೋಸ ಮಾಡಿಬಿಟ್ಟೆ ಕಣೆ. ನಿನ್ನಂತಹ ತ್ಯಾಗಮಯಿಯ ಸ್ನೇಹಕ್ಕೆ ನನ್ನಂತಹ ಸ್ವಾರ್ಥಿ ಅರ್ಹಳಲ್ಲ ಎಂದೇ ನಾನು ನಿನ್ನ ಸಂಪರ್ಕ ಉಳಿಸಿಕೊಳ್ಳಲಿಲ್ಲ ಕಣೆ, ನನ್ನನ್ನು ಕ್ಷಮಿಸಿಬಿಡೆ" ಎಂದು ಹೇಳಿ ಬಹಳ ಅತ್ತಳು. "ಮಾಲಿ, ಮಧು, ನಾವು ಈಗ ಕಾಲೇಜ್ ಹುಡುಗರಲ್ಲ, ಈಗ ಯಾವ ಹಳೆಯ ವಿಷಯವೂ ನನ್ನ ತಲೆಯಲ್ಲಿಲ್ಲ. ಅಷ್ಟಕ್ಕೂ ನಾನು ಕ್ಷಮಿಸಲು ನೀವಿಬ್ಬರೂ ಯಾವ ತಪ್ಪೂ ಮಾಡಿಲ್ಲ. ನೆಮ್ಮದಿಯಿಂದಿದ್ದರೆ, ಡಾಕ್ಟರ್ ಹೇಳಿದಂತೆ ನಿಮ್ಮ ದಾಂಪತ್ಯ ಜೀವನ ಸರಿಹೋಗಿ ನಿಮ್ಮದೊಂದು ಪುಟ್ಟ ಮಗು ಬಂದು ಸಂಸಾರ ಶುರು ಮಾಡಬಹುದು. Now cheer up" ಎಂದು ಹೇಳಿ ಇನ್ನೂ ಬಹಳ ಹೊತ್ತು ಎಲ್ಲಾ ವಿಷಯ ಮಾತಾಡುತ್ತಾ ಕುಳಿತು, ನಂತರ ಮನೆಗೆ ಹೊರಟರು. "ಶಮ್ಮು, ನಿನ್ನ ಮಗಳನ್ನು ಒಂದು ಬಾರಿ ಕರೆದುಕೊಂಡು ಬಾರೆ" ಎಂದಳು ಮಾಳವಿಕ. "ನಾಳೆ ಮೈಸೂರಿಗೆ ಹೋಗುತ್ತಿದ್ದೀನಿ, ೨-೩ ದಿನ ಬಿಟ್ಟು ವಾಪಸ್ ಬಂದಮೇಲೆ ಬರುತ್ತೀನಿ" ಎಂದು ಹೇಳಿ ಬೀಳ್ಕೊಟ್ಟಳು.

*******************

ಇದೇನಿದು ತಾನು ಯಾರಿಗಾಗಿ ತ್ಯಾಗ ಮಾಡಿದೆ ಎಂದುಕೊಂಡಿದ್ದೆನೋ ಅವರಿಬ್ಬರೂ ಸುಖವಾಗಿಲ್ಲವಲ್ಲ ಎಂದು ಶರ್ಮಿಳಳ ಮನಸ್ಸಿಗೆ ಸ್ವಲ್ಪ ಬೇಜಾರಾಯಿತು. ಮೈಸೂರಿನಿಂದ ಬೆಂಗಳೂರಿಗೆ ಬರುತ್ತ ರೈಲಿನಲ್ಲಿ ಇದೇ ವಿಷಯವನ್ನು ಸುರೇಶನಿಗೂ ಹೇಳಿದಳು. ಯಾವುದೋ ವೈದ್ಯಕೀಯ ಪುಸ್ತಕದಲ್ಲಿ ಓದಿದ್ದನ್ನು ಮೆಲಕು ಹಾಕುತ್ತ ಅವಳಿಗೆ ಏನೋ ಹೊಳೆಯಿತು. ಮಾರನೇ ದಿನ ಮಗಳನ್ನು ಕರೆದುಕೊಂಡು ಸ್ನೇಹಿತೆಯ ಮನೆಗೆ ಹೋದಳು. "ಮಾಲಿ, ನಿನಗೆ ಶ್ರೇಯು ಜೊತೆ ಆಟವಾಡಲು ಇಷ್ಟವಾದಲ್ಲಿ ನೀನು

ಅವಳನ್ನು ಬೇಕಾದರೆ ಮಂಗಳೂರಿಗೆ ಸ್ವಲ್ಪ ದಿನ ಕರೆದುಕೊಂಡು ಹೋಗು. ಅವಳನ್ನು ನಿನ್ನ ಮಗಳೆಂದೇ ಭಾವಿಸು, ನಿನ್ನಲ್ಲಿರುವ ತಾಯಿ ಹೃದಯವನ್ನು ಎಚ್ಚರಗೊಳಿಸು" ಎಂದೆಲ್ಲ ಹೇಳಿ ಊಟ ಮಾಡಿಕೊಂಡು ಮಗಳನ್ನು ಅವಳಿಗೊಪ್ಪಿಸಿ ಹೊರಟು ಬಿಟ್ಟಳು.

ಶ್ರೇಯ ಹುಟ್ಟಿದಾಗಿನಿಂದ ಎಂದೂ ಶರ್ಮಿಳ ಮಗಳನ್ನು ಬಿಟ್ಟಿರಲಿಲ್ಲ. ಸುರೇಶನಿಗೂ ಅವಳಿಗೂ ಜೆಟ್‌ಲ್ಯಾಗ್ ಜೊತೆಗೆ ಮಗು ಪಕ್ಕದಲಿಲ್ಲ ಎಂಬ ಕೊರತೆಯಿಂದ ನಿದ್ದೆ ಬರಲಿಲ್ಲ. "ಶಮ್ಮು, ಮೈಸೂರಿನಲ್ಲಿ ನನ್ನ ಸ್ನೇಹಿತ ಒಬ್ಬನ ತಮ್ಮ, ಅವನು ಇಲ್ಲೇ ಒಳ್ಳೆ ಕೆಲಸದಲ್ಲಿದ್ದಾನಂತೆ; ಅವನ ಹೆಂಡತಿ ಕ್ಯಾನ್ಸರ್‌ನಿಂದ ತೀರಿಹೋದಳು ಎಂದು ಹೇಳಿದ ನನ್ನ ಸ್ನೇಹಿತ. ಅವನನ್ನು ನಿನ್ನ ತಂಗಿಗೆ ಸೂಚಿಸಿದರೆ ಹೇಗೆ?" ಎಂದ ಸುರೇಶ್. ಶರ್ಮಿಳಳಿಗೆ ತನ್ನ ತಂಗಿಯ ಬಗ್ಗೆ ಕಾಳಜಿ ವಹಿಸಿ ಹೇಳಿದ್ದ ಸುರೇಶನ ಮೇಲೆ ಬಹಳ ಅಭಿಮಾನ ಮೂಡಿತು. "ಸುರೇಶ್, ಅಷ್ಟು ಮಾಡಿದರೆ, ನನ್ನ ತಂಗಿಗೂ ಒಂದು ಜೀವನ ಸಿಗುತ್ತದೆ. ನೀನು ಆ ಹುಡುಗನನ್ನು ಭೇಟಿ ಮಾಡಿ ಹೇಗಾದರೂ ಒಪ್ಪಿಸು, ನಾನು ಶಾಲು ಹತ್ತಿರ ಮಾತಾಡುತ್ತೇನೆ" ಎಂದಳು.

ಮಾರನೇ ದಿನವೇ ಶರ್ಮಿಳ ತನ್ನ ತಾಯಿ ಮತ್ತು ತಂಗಿಯನ್ನು ಕರೆದುಕೊಂಡು ತಮ್ಮ ಹರಟೆಯ ಜಾಗವಾದ ಮಹಡಿ ಮೇಲೆ ಹೋದಳು. "ಶಾಲು, ಒಂದು ರೀತಿಯಲ್ಲಿ ನಿನ್ನ ಈ ಸ್ಥಿತಿಗೆ ನಾನೂ ಕಾರಣವಾಗಿದ್ದೀನೋ ಎಂದೆನಿಸುತ್ತಿದೆ ಆ ದಿನ ನಾನು ಒಂದು ಮಾತು ಸಿಟ್ಟು ಮಾಡಿಕೊಂಡಿದ್ದರೆ, ಅಮ್ಮ ಅಣ್ಣ ನಿನಗೆ ಅವನನ್ನು ಕಟ್ಟುತ್ತಿರಲಿಲ್ಲ" ಎಂದಳು. "ಛೇ, ಬಿಡ್ತು ಅನ್ನು, ನನ್ನ ಸ್ವಾರ್ಥಕ್ಕೆ ಸರಿಯಾಗಿ ಆಗಿದೆ ಅಷ್ಟೆ" ಎಂದಳು ಶಾಲಿನಿ. "ಶಾಲು, ಅಮ್ಮ, ಸುರೇಶನ ಸ್ನೇಹಿತನ ತಮ್ಮ ಒಬ್ಬನ ಹೆಂಡತಿ ತೀರಿ ಹೋಗಿದ್ದಾಳಂತೆ. ಅವನಿಗೂ ಇನ್ನು ಮೂವತ್ತನಾಲ್ಕು ವರ್ಷವಂತೆ. ಅವನನ್ನು ಶಾಲು ಮದುವೆ ಮಾಡಿಕೊಂಡಲ್ಲಿ, ಇಬ್ಬರಿಗೂ ಒಳ್ಳೆಯದಾಗುತ್ತದೆ ಅಲ್ವೇ" ಎಂದಳು ಶರ್ಮಿಳ. ಅದಕ್ಕೆ ಅವರು "ಹೌದು ಶಮ್ಮು, ನೀನೆ ಇವಳಿಗೆ ಬುದ್ಧಿ ಹೇಳಬೇಕು" ಎಂದಿದ್ದಕ್ಕೆ ಶರ್ಮಿಳ ಶಾಲಿನಿಗೆ ಸಾಕಷ್ಟು ಬುದ್ಧಿವಾದ ಹೇಳಿ "ಅವನನ್ನು ಒಮ್ಮೆ ಭೇಟಿ ಮಾಡಿ ಮಾತಾಡು, ನಂತರ ತೀರ್ಮಾನ ತೆಗೆದುಕೊಳ್ಳಬಹುದು" ಎಂದಳು. "ನನಗೆ ಸ್ವಲ್ಪ ಸಮಯ ಬೇಕು" ಎಂದಳು ಶಾಲಿನಿ.

ಬೆಂಗಳೂರಿಗೆ ಬಂದು ಮೂರು ತಿಂಗಳು ಅದು ಹೇಗೆ ಕಳೆಯಿತೋ ಗೊತ್ತಿಲ್ಲ, ಶ್ರೇಯು ಬೆಂಗಳೂರು, ಮೈಸೂರು ಮತ್ತು ಮಂಗಳೂರು ಅಂತ ಎಲ್ಲ ಕಡೆಯಲ್ಲೂ ಸ್ವಲ್ಪ ದಿನಗಳಿದ್ದು ಚೆನ್ನಾಗಿ ಏನೇನೋ ಮಾತೆಲ್ಲ ಕಲಿತಿದ್ದಾಳೆ ಎಂದು ಕೊಂಡಳು ಶರ್ಮಿಳ. ಸುರೇಶ್ ಹೊರಟಮೇಲೆ ಶರ್ಮಿಳ, ಶಾಲಿನಿ ಮತ್ತು ಅವರ ತಾಯಿ ಸಾಕಷ್ಟು ಸುತ್ತಾಡಿ ಅದು–ಇದು ಕೊಂಡುಕೊಂಡಿದ್ದೂ ಆಗಿತ್ತು. ಇನ್ನು ಹೊರಡುವ ದಿನ ಬಂದಿತ್ತು. ಮಂಗಳೂರಿಗೆ ಫ಼ೋನ್ ಮಾಡಿ "ಮಾಲಿ, ಸಂತೋಷವಾಗಿರು – ನನ್ನಂತೆ... ಮಧುಗೆ ನಾನು ಕೇಳಿದೆ ಎಂದು ಹೇಳು" ಎಂದು ಹೇಳಿದಳು. "ಶಾಲು ಬೇಗ ಒಂದು ನಿರ್ಧಾರ ತೆಗೆದುಕೊ ಎಣ್ಣೆ ಬಂದಾಗ ಕಣ್ಣು ಮುಚ್ಚ ಬೇಡ" ಎಂದು ತಂಗಿಗೆ ಹೇಳಿ ತಂದೆ ತಾಯಿಗೆ ಭರವಸೆ ಕೊಡುತ್ತ ಬಿಗಿಯಾದ ಅಪ್ಪುಗೆ ಕೊಟ್ಟು, ಮಗಳನ್ನು ಎತ್ತಿಕೊಂಡು ಹೊರಟಳು.

ಮತ್ತೆ ಬಾಸ್ಟನ್ ತಲುಪುವ ವರೆಗೂ ಈಗ ನಡೆದಿದ್ದೆಲ್ಲಾ ಅಲೆಅಲೆಯಾಗಿ ಕಣ್ಣಮುಂದೆ ಬಂದಿತು. "ಎಷ್ಟು ಬೇರೆ ಬೇರೆಯಾಗಿವೆ ಸನ್ನಿವೇಶಗಳು" ಎಂದು ನಿಟ್ಟುಸಿರು ಬಿಟ್ಟಳು ಶರ್ಮಿಳ.

********************

"ಹೆಲೋ ಅಮ್ಮ, ನಿನಗೆ ಅಣ್ಣನಿಗೆ ನಿಮ್ಮ ಮದುವೆಯ ಆನಿವರ್ಸರಿಗೆ ಶುಭಾಶಯಗಳು" ಎನ್ನುತ್ತಿದ್ದ ಶರ್ಮಿಳಳ ಧ್ವನಿ ಕೇಳುತ್ತಿದ್ದಂತೆ "ಶಮ್ಮು, ನೀನು ಕೊಡುತ್ತಿರುವ ಉಡುಗೊರೆ ಬಹಳ ದೊಡ್ಡದು ಕಣೆ. ಶಾಲು ಇಂದು ಮದುವೆಗೆ ಒಪ್ಪಿಗೆ ಕೊಟ್ಟಿದ್ದಾಳೆ. ಎಲ್ಲ ನಿನ್ನ, ಸುರೇಶನ ಸಮಯ ಪ್ರಜ್ಞೆಯಿಂದ ಆದದ್ದು" ಎನ್ನುತ್ತಿದ್ದ ಅವರಿಗೆ ಇನ್ನು ಹೆಚ್ಚು ಮಾತಾಡಲು ಆಗಲಿಲ್ಲ. ಶರ್ಮಿಳ ಈ ವಿಷಯವನ್ನು ಸುರೇಶನಿಗೆ ಹೇಳಿ "ಇವತ್ತು ನಾನು ಬಹಳ ಸಂತೋಷವಾಗಿದೀನಿ ಸುರೇಶ್. ಒಂದು ದಿನ ರಜೆ ತೆಗೆದುಕೊಂಡು ಮನೆಯಲ್ಲೇ ಶ್ರೇಯು ಜೊತೆ ಇರ್ತೀನಿ. ಹೋಗಿ ಪ್ರೊಫ಼ೆಸರ್‌ಗೆ ಒಂದು ಇ–ಮೈಲ್ ಕಳುಹಿಸುತ್ತೀನಿ" ಎಂದು ಹೊರಟಳು. ನೋಡಿದರೆ ಮಧು ಮತ್ತು ಮಾಲಿ ಇಂದ... ಎಂದು ಒಂದು ಇ–ಮೈಲ್. "ಪ್ರಾಣ ಸ್ನೇಹಿತೆ ಶಮ್ಮುಗೆ, ಶಮ್ಮು, ನಿನ್ನ ಶ್ರೇಯು ಬಂದು ನನ್ನಲ್ಲಿದ್ದ ತಾಯ್ತನವನ್ನು ಬಡಿದೆಬ್ಬಿಸಿದ್ದಾಳೆ. ನನಗೀಗ ಮೂರು ತಿಂಗಳು. ಗಂಡನನ್ನು ಅಂದು ಉಡುಗೊರೆಯಾಗಿ ಕೊಟ್ಟಿದ್ದೆ, ಮಗುವನ್ನು ಇಂದು ಕೊಡುತ್ತಿದ್ದೀಯ. ನಾನು ನಿನಗೆ ಏನು ಕೊಟ್ಟರೂ ಅದು ಕಡಿಮೆ. ನನ್ನ ಜೀವವಿರುವ ತನಕ, ನಿನ್ನ ಹೆಸರು ಹೇಳಿಕೊಂಡು ದೀಪ ಹಚ್ಚುತ್ತೇನೆ ಕಣೆ. ನನ್ನ ಮಗುವನ್ನು ನೋಡಲು ನನ್ನ ಶ್ರೇಯು ಜೊತೆ ಬರುತ್ತೀಯ ತಾನೆ? ಇಂತಿ ನಿನ್ನ ಪ್ರೀತಿಯ ಸ್ನೇಹಿತೆ – ಮಾಲಿ" ಓದುತ್ತಿದ್ದಂತೆ ಅವಳ ಕಣ್ಣಲ್ಲಿ ಧಾರಾಕಾರವಾಗಿ ನೀರು ಬಂದಿತು. ಕಂಪ್ಯೂಟರ್ ಪಕ್ಕದಲ್ಲಿದ್ದ ಸುರೇಶ ಮತ್ತು ಶ್ರೇಯಳ ಛಾಯಾಚಿತ್ರವನ್ನು ಕೈಗೆತ್ತಿಕೊಂಡು ಅವಳಿಗರಿವಿಲ್ಲದೇ ಮುತ್ತು ಕೊಟ್ಟಳು. ◈



# ಗೃಹಪ್ರವೇಶ

***ಸ್ವರ್ಣಸೇತು ಯುಗಾದಿ ಕಥಾಸ್ಪರ್ಧೆಯಲ್ಲಿ ಎರಡನೆಯ ಬಹುಮಾನ ಪಡೆದ ಕಥೆ***

**ವಿಶ್ವನಾಥ್ ಹುಲಿಕಲ್**
ಕುಪರ್ಟಿನೋ, ಕ್ಯಾಲಿಫೋರ್ನಿಯ

ಅವತ್ತಿನ ರಾತ್ರಿ ಶಾಂತಮೂರ್ತಿಗೆ ಎಷ್ಟು ಹೊತ್ತಾದರೂ ನಿದ್ರೆ ಬರಲಿಲ್ಲ. ಆ ದಿನ ಮಧ್ಯಾಹ್ನದಲ್ಲಿ ಜರುಗಿದ ಘಟನೆ ಅವನ ಅಸ್ತಿತ್ವವನ್ನೇ ಅಘೋಷಿತವಾಗಿ ಅಲುಗಾಡಿಸಿಬಿಟ್ಟಿತ್ತು. ಅದುವರೆಗೆ ಅವನು ಅಂತಹ ಅವಮಾನವನ್ನು ಅನುಭವಿಸಿರಲಿಲ್ಲ. ಮನಸ್ಸಿಗೆ ಘಾಸಿ ಮಾಡುವಂತಹ ಭಾವನೆಗಳನ್ನು ಕಿತ್ತೊಗೆದು, ನಿದ್ರಾದೇವಿಗೆ ವಶವಾಗಲು ಅವನು ಮಾಡಿದ ಪ್ರಯತ್ನಗಳಾವುವೂ ಫಲಕಾರಿಯಾಗಿರಲಿಲ್ಲ. ಊಹಿಸಿಕೊಳ್ಳಲೂ ಸಾಧ್ಯವಾಗದಂತಹ ಘಟನೆ ಘಟಿಸಿದ್ದು ಅವನ ಜಂಘಾಬಲವನ್ನೇ ಉಡುಗಿಸಿಬಿಟ್ಟಿತ್ತು. ತಾನು ಹೀಗೆ ಮನಸ್ಸಿನ ಬಂದಿಯಾಗಬಾರದು ಎಂದುಕೊಂಡು, ಹಜಾರಕ್ಕೆ ಬಂದು, ಟೀವಿಯ ಮಧ್ಯರಾತ್ರಿಯ ಕಾರ್ಯಕ್ರಮವನ್ನು ನೋಡುತ್ತಾ ಕುಳಿತುಕೊಂಡ. ಸ್ವಲ್ಪ ಹೊತ್ತಿನ ನಂತರ ಕಣ್ಣು ಉರಿದಂತಾಗಿ, ಟೀವಿ ಆರಿಸಿ ಮೇಲೆ ಹೋಗಿ ಮತ್ತೆ ಮಲಗಿದ. ಕಣ್ಣುಗಳು ಬಳಲಿ ನಿದ್ದೆಯನ್ನು ಬೇಡುತ್ತಿದ್ದರೂ, ಚಿತ್ತಕ್ಷೋಭೆಯಿಂದಾಗಿ ನಿದ್ರೆ ಹತ್ತಲಿಲ್ಲ. ಮನಸ್ಸು ಹುಚ್ಚು ಕುದುರೆಯಂತೆ ಎಲ್ಲೆಲ್ಲೋ ಓಡುತ್ತಿತ್ತು. ಹೀಗೆ ಓಡುತ್ತಿದ್ದುದು ಹತ್ತು ವರ್ಷಗಳ ಹಿಂದಿನ ಘಟನೆಯೊಂದರಲ್ಲಿ ಸ್ಥಾಯಿಯಾಯಿತು.

ಅದೊಂದು ದಿನ ಮಧ್ಯಾಹ್ನ. ಶಾಂತಮೂರ್ತಿ ತನ್ನ ಹೆಂಡತಿ ರುದ್ರಾಣಿ ಮತ್ತು ಮಗ ಕಿಶೋರನನ್ನು ಕರೆದುಕೊಂಡು ಸ್ಕೂಟರಿನಲ್ಲಿ ಬೆಂಗಳೂರಿನ ವೈಭವೋಪೇತ ಬಡಾವಣೆಯೊಂದರಲ್ಲಿ ಹಾದುಹೋಗುತ್ತಿದ್ದ. ಅವನ ಗಮನವೆಲ್ಲಾ ರಸ್ತೆಯ ಕಡೆ ಕೇಂದ್ರೀಕೃತವಾಗಿತ್ತು. ಆದರೆ, ರುದ್ರಾಣಿಯ ಕಣ್ಣುಗಳು ಮಾತ್ರ ಎವೆಯಿಕ್ಕದೆ ರಸ್ತೆಯ ಅಕ್ಕಪಕ್ಕದಲ್ಲಿರುವ ಮನೆಗಳನ್ನೇ ನೋಡುತ್ತಿದ್ದವು. ಆಗ ಅವಳ ಕಣ್ಣುಗಳಲ್ಲಿ ಜ್ವಲಿಸುತ್ತಿರುವ ಆಸೆಯನ್ನು ಮಾತ್ರ ಶಾಂತಮೂರ್ತಿ ಗಮನಿಸಲು ಸಾಧ್ಯವಿರಲಿಲ್ಲ. ಹೆಣ್ಣಿನ ಮನದಲ್ಲಿ ಆಕಾಂಕ್ಷೆ ಉದಯವಾದರೆ, ಅವಳು ಅದನ್ನು ಯಾರಿಗೂ ಹೇಳದೆ ಎಷ್ಟು ಕಾಲ ತಡೆದುಕೊಳ್ಳಬಲ್ಲಳು? ಸರಿ, ಗಂಡನನ್ನು ತಿವಿದು ಮಾತನಾಡಲಾರಂಭಿಸಿದಳು: "ರೀ, ಈ ಮನೆಗಳನ್ನು ನೋಡ್ತಿದೀರ? ಎಷ್ಟು ಚೆನ್ನಾಗಿದೆ ಅಲ್ವಾ?" ಅವನು ಉತ್ತರಿಸಿದ, "ಇದು ಹೊಸ ಬಡಾವಣೆ ಅಲ್ಲವ? ಹೀಗಾಗಿ BDAಯಿಂದ ಸೈಟು 'ಅಲಾಟ್' ಆದವರೆಲ್ಲರೂ ಮನೆ ಕಟ್ಟಿಸಿಕೊಳ್ಳೋಕೆ ಶುರುಮಾಡಿದಾರೆ." ಈ ಗಂಡಸರಿಗಂತೂ ಹೆಂಗಸರ ಮನಸ್ಸನ್ನು ಅರ್ಥಮಾಡಿಕೊಳ್ಳೋಕೇ ಬರಲ್ಲ! ಈ ಹೊಸಮನೆಗಳು ಚೆನ್ನಾಗಿವೆ ಎಂದು ಹೇಳೀದ್ದಕ್ಕೆ, ಆ ಮನೆಗಳ ಉದ್ಭವಕ್ಕೆ ಕಾರಣವಾದ ಸಾಮಾಜಿಕ ಹಿನ್ನಲೆಯನ್ನು ತನ್ನ ಗಂಡ ನೀಡುತ್ತಿದ್ದಾನೆ. ಇವರಿಗೆ ಹೀಗೆ ಹೇಳಿದರೆ ಪ್ರಯೋಜನವಿಲ್ಲ ಎಂದುಕೊಂಡು, ರುದ್ರಾಣಿ ತನ್ನ ನೇರವಾಗಿಯೇ ಬೇಡಿಕೆಯನ್ನು ಮುಂದಿಟ್ಟಳು: "ರೀ, ನಾವು ಒಂದು ಮನೆಯನ್ನು



ಕಟ್ಟಿಸೋಣವಾ? ಈ ಊರಿಗೆ ಬಂದು ಐದು ವರ್ಷಗಳಾಯಿತು. ಮನೆ ತೊಗೊಳೋದಿರಲಿ, ಇನ್ನು ಒಂದು ಸೈಟನ್ನೂ ಕೂಡಾ ತೊಗೊಂಡಿಲ್ಲ." ಆಸೆಯ ಬೇಡಿಕೆಯಿಂದ ಹೊರಟ ಮಾತು, ವಿಷಾದದ ಛಾಯೆಯಲ್ಲಿ ಮುಕ್ತಾಯವಾಗಿತ್ತು. ಈ ಮುಂಚಿನ ಮಾತಿನಲ್ಲಿ ಪರೋಕ್ಷವಾಗಿ ವ್ಯಕ್ತವಾದ ಆಸೆಯನ್ನೇ ಗುರುತಿಸದಿದ್ದವನಿಗೆ, ಈ ಮಾತಿನಲ್ಲಿ ಅಡಗಿದ ಬೇಸರ ಹೇಗೆ ತಿಳಿಯಬೇಕು? ಅವಳ ಮಾತಿಗೆ ಶಾಂತಮೂರ್ತಿ ಸಹನೆಯಿಂದಲೇ ಉತ್ತರಿಸಿದ, "ತೊಗೋಳಣ ಬಿಡೇ! ಈಗೇನೂ ಕಾಲ ಮಿಂಚಿಲ್ಲ. ನಿನ್ನ ಮನದಲ್ಲಿ ಆಸೆ ಉದ್ಭವವಾದ ಕ್ಷಣದಲ್ಲೇ ಅದನ್ನು ಈಡೇರಿಸಲು ನಾನೇನು ಆಗರ್ಭ ಶ್ರೀಮಂತನಲ್ಲ! ಎಲ್ಲದಕ್ಕೂ ಕಾಲ ಕೂಡಿ ಬರಬೇಕು. ಸಂಸ್ಕೃತದ ಸುಭಾಷಿತ ಕೇಳಿಲ್ಲವೆ? *'ಋಣಾನುಬಂಧ ರೂಪೇಣ ಪಶುಪತ್ನಿಸುತಾಲಯಃ'*. ನನಗೀಗ ಒಳ್ಳೇ ಹೆಂಡತಿ ಸಿಕ್ಕಿದ್ದಾಳೆ, ಮುದ್ದಾದ ಮಗನನ್ನು ಕೊಟ್ಟಿದ್ದಾಳೆ. ಇನ್ನುಳಿದಿರುವುದು ಮನೆ ಮತ್ತು ಪಶು ಮಾತ್ರ. ಅವೂ ಕಾಲಕ್ರಮೇಣ ಬರುತ್ತವೆ!" ಸರಿ, ಇವರ ವಾದಕ್ಕೊಂದು ಧಾರ್ಮಿಕ ಹಿನ್ನಲೆಯ ಸಮರ್ಥನೆ ಬೇರೆ. ರುದ್ರಾಣಿಗೆ ಕೋಪ ಉಕ್ಕಿ ಬರುತ್ತಿದ್ದರೂ, ಕಷ್ಟಪಟ್ಟು ತಡೆದುಕೊಂಡಳು.

ಸರಿ, ಅಂದಿನಿಂದ ರುದ್ರಾಣಿ ಗಂಡನ ಬೆನ್ನುಹತ್ತಿದಳು. ಅವಳಿಗೆ ಅದುವರೆಗಿನ ದಾಂಪತ್ಯದಿಂದ ಒಂದು ಸಂಗತಿ ವೇದ್ಯವಾಗಿತ್ತು: ತನ್ನ ಪಾಡಿಗೆ ತನ್ನನ್ನು ಇರಲು ಬಿಟ್ಟರೆ, ಶಾಂತಮೂರ್ತಿ ಮನೆಯನ್ನೇಕೆ, ಒಂದು ಸೈಟನ್ನು ಕೂಡಾ ಮಾಡಿಕೊಳ್ಳುವವನಲ್ಲ! ಸ್ವಂತ ಮನೆಯನ್ನು ಹೊಂದಬೇಕೆಂಬ ಬಹು ಜನರ ಕನಸು ಅವನನ್ನೆಂದೂ ಕಾಡಿರಲಿಲ್ಲ. ಕುವೆಂಪುರವರ *'ಮನೆಯನೆಂದೂ ಕಟ್ಟದಿರು, ಗುರಿಯನೆಂದೂ ಮುಟ್ಟದಿರು'* ಎಂಬ ಉಕ್ತಿಯನ್ನು ಅವನು ತನ್ನದೇ ಆದ ರೀತಿಯಲ್ಲಿ ಅರ್ಥೈಸಿಕೊಂಡಿದ್ದ. ವ್ಯಾವಹಾರಿಕ ಪ್ರಪಂಚದ ಬಗ್ಗೆ ಅವನೊಂದು ಬಗೆಯ ನಿರ್ಲಿಪ್ತ ಧೋರಣೆ ಬೆಳಸಿಕೊಂಡಿದ್ದ. ಮನೆಯನ್ನು ಕಟ್ಟಿ, ಅಂತಹ ಸ್ವಂತ ಮನೆಯಲ್ಲಿ ವಾಸಿಸುವ ಕಲ್ಪನೆಯನ್ನು ಕೂಡಾ ಅವನೆಂದೂ ಉನ್ನತ ಆದರ್ಶವನ್ನಾಗಿ ಪರಿಭಾವಿಸಿರಲಿಲ್ಲ. ಅವನ ಸಿದ್ಧಾಂತದ ಪ್ರಕಾರ, ಮನೆ ಎಂಬುದು ಇಹದ ಬಂಧನವನ್ನು ಇನ್ನಷ್ಟು ಜಟಿಲಗೊಳಿಸುವಂತಹುದು. ಬಾಡಿಗೆ ಮನೆಯ ನಿರಂಬಳ ಜೀವನ ಸ್ವಂತ ಮನೆಯಲ್ಲಿ ಸಿಗುವುದಿಲ್ಲ: ಬಾಡಿಗೆ ಮನೆಯ ನಲ್ಲಿಯಲ್ಲಿ ನೀರು ಬರದಿದ್ದರೆ, 'ವೈರಿಂಗ್' ದೋಷದಿಂದಾಗಿ ಲೈಟು ಹತ್ತದಿದ್ದರೆ, ಮನೆ ಮಾಲೀಕನಿಗೆ ತಿಳಿಸಿದರೆ ತನ್ನ ಕೆಲಸ ಮುಗಿಯಿತು; ಮನೆಯ ರಿಪೇರಿ ಮಾಲೀಕನ ತಲೆಬೇನೆ! ಅದೇ ಸ್ವಂತ ಮನೆಯಲ್ಲಿದ್ದರೆ, ಅದರ ಸುಸ್ಥಿತಿಯನ್ನು ಕಾಪಾಡಿಕೊಳ್ಳುವುದು ತನ್ನ ಹೊಣೆ; ಅನುಗಾಲವೂ ಅದನ್ನು ಜಾಗರೂಕತೆಯಿಂದ ಕಾಪಾಡಬೇಕು. ಅದೂ ಅಲ್ಲದೆ, ಸಮಯಕ್ಕೆ ಸರಿಯಾಗಿ ಆಸ್ತಿ ತೆರಿಗೆಯನ್ನು ಕಟ್ಟಬೇಕು. ಮನೆಗೆ ವಿಮೆ ಮಾಡಿಸಬೇಕು. ಇಂತಹ ಇಲ್ಲಸಲ್ಲದ ಯೋಚನೆಗಳನ್ನು ತನ್ನ ತಲೆಗೆ ಹಚ್ಚಿಕೊಳ್ಳುವುದು ಶಾಂತಮೂರ್ತಿಗೆ ಸುತರಾಂ ಇಷ್ಟವಿರಲಿಲ್ಲ.

ಮನೆಯನ್ನು ಹೊಂದದೆ ಇರಲು ಶಾಂತಮೂರ್ತಿಗೆ ಇನ್ನೊಂದು ಬಲವಾದ ಕಾರಣವೂ ಇತ್ತು: ಮನೆಯನ್ನು ಕಟ್ಟಿಸಬೇಕೆಂದರೆ ಅದಕ್ಕೆ ಅಗಾಧ ಖರ್ಚು. ಅವನ ಬಳಿ ಅಷ್ಟೊಂದು ದುಡ್ಡಿರಲಿಲ್ಲ. ಹೀಗಾಗಿ ದೊಡ್ಡ ಮೊತ್ತದ ಸಾಲವನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿತ್ತು. ಆಗ ಸಾಲ ಕೊಟ್ಟ ಬ್ಯಾಂಕಿಗೆ ತನ್ನ ಮನೆಯನ್ನು ಅಡ ಇಡಬೇಕು. ಸಾಲವನ್ನು ತೀರಿಸಲು ತಾನು ಜೀವನ ಪರ್ಯಂತ ತನ್ನ ಕೆಲಸಕ್ಕೆ ದಾಸನಾಗಿರಬೇಕು! ಅದುವರೆಗಿನ ತನ್ನ ಜೀವನವನ್ನು ಶಾಂತಮೂರ್ತಿ *'ಹಾಸಿಗೆ ಇದ್ದಷ್ಟು ಕಾಲು ಚಾಚು'* ಎಂಬ ಗಾದೆಯಂತೆ ನಿರ್ವಹಿಸಿಕೊಂಡು ಬಂದಿದ್ದ. ಆದ್ದರಿಂದಲೇ – ಸಾಲ ತೀರಿಸುವ ಚೈತನ್ಯ ಮತ್ತು ಆತ್ಮವಿಶ್ವಾಸ ತನಗಿದ್ದರೂ – ಸಾಲ ತೆಗೆದುಕೊಳ್ಳುವುದನ್ನು ಅವನು ತಾತ್ವಿಕ ನೆಲೆಗಟ್ಟಿನಲ್ಲಿ ವಿರೋಧಿಸುತ್ತಿದ್ದ. ಒಟ್ಟಿನಲ್ಲಿ ಜೀವನವನ್ನು ಸಾಧ್ಯವಾದಷ್ಟೂ ಸರಳೀಕೃತಗೊಳಿಸಿಕೊಂಡು, ಬದುಕಿನ ಜಂಜಾಟವನ್ನು ಕಡಿಮೆಮಾಡಿಕೊಳ್ಳುವುದರ ಮೂಲಕ ನಿರಾಂತಕ ಮತ್ತು ಶಾಂತ ಜೀವನವನ್ನು ಅನುಭವಿಸುವುದು ಶಾಂತಮೂರ್ತಿಯ ಮಹತ್ವಾಕಾಂಕ್ಷೆಯಾಗಿತ್ತು.

ಶಾಂತಮೂರ್ತಿಯ ಈ ಬಗೆಯ ಆಲೋಚನಾ ಸರಣಿ ರುದ್ರಾಣಿಗೆ ತಿಳಿಯದಿದ್ದರೂ, ಮನೆಯ ಒಡೆತನದ ಬಗ್ಗೆ ಅವನ ನಿರಾಸಕ್ತಿ ಮಾತ್ರ ಅರಿವಾಗಿತ್ತು. ಆದ್ದರಿಂದಲೇ ಅವಳೂ ಅವನ ಬೆನ್ನುಹತ್ತಿ, ತನ್ನ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಳ್ಳಲು ಕಾರ್ಯಪ್ರವೃತ್ತಳಾದದ್ದು. ತಮ್ಮಿಬ್ಬರ ಮೂಲಭೂತ ಧೋರಣೆಯಲ್ಲೇ ಭಿನ್ನಾಭಿಪ್ರಾಯವಿದ್ದುದರಿಂದ, ಅವನನ್ನು ಒಪ್ಪಿಸುವುದು ಅವಳಿಗೆ ಸುಲಭಸಾಧ್ಯದ ಸವಾಲಾಗಿರಲಿಲ್ಲ. ಸ್ವಂತ ಮನೆಯಲ್ಲಿ ವಾಸಿಸುವಾಗ ಸಿಗುವ ಸಂತೋಷವೇ ಅನನ್ಯವಾದುದು ಎಂಬುದನ್ನು ತಿಳಿಸಿ ಹೇಳಲು ಪ್ರಯತ್ನಿಸಿದಳು. ಆದರೆ, ಮನೆಯ ಒಡೆತನದಿಂದ ಎದುರಿಸಬೇಕಾದ ಸಮಸ್ಯೆಗಳ ಮುಂದೆ ಈ ಸಂತೋಷ ದೊಡ್ಡದು ಎಂದು ಅವನಿಗೆ ಮನವರಿಕೆಯಾಗಲಿಲ್ಲ. ಹೀಗಾಗಿ ಅವಳ ಆ ಪ್ರಯತ್ನ ವಿಫಲವಾಯಿತು. ಆಗ ಅವಳು ತಮಗೆ ಮನೆ ಅಂತ ಆಸ್ತಿಯೊಂದಿದ್ದರೆ, ಅದು ತಮ್ಮ ನಂತರ ಕಿಶೋರನಿಗೆ ಲಭ್ಯವಾಗುತ್ತದೆ; ಅದರಿಂದ ಅವನ ಬಾಳು ಅಷ್ಟರಮಟ್ಟಿಗೆ ಸುಲಭವಾಗುತ್ತದೆ ಎಂದು ಗಂಡನನ್ನು ಒಪ್ಪಿಸಲು ಯತ್ನಿಸಿದಳು. ಆದರೆ ಈ ವಾದವೂ ಸಹ ಶಾಂತಮೂರ್ತಿಯ ಧೋರಣೆಯನ್ನು ಬದಲಾಯಿಸಲು ಸಮರ್ಥವಾಗಲಿಲ್ಲ, ಏಕೆಂದರೆ ಅವರ ಅಪ್ಪ ಅವನಿಗೇನೂ

ಆಸ್ತಿಯನ್ನು ಬಿಟ್ಟು ಹೋಗಿರಲಿಲ್ಲ! ಹೀಗಾಗಿ ಪಿತ್ರಾರ್ಜಿತ ಆಸ್ತಿಯ ಮಹತ್ವ ಅವನಿಗೆ ತಿಳಿಯುವಂತಿರಲಿಲ್ಲ. ಅದೂ ಅಲ್ಲದೆ, ಶಾಂತಮೂರ್ತಿ ನಂಬಿದ್ದು ತನ್ನ ಕರ್ತೃತ್ವ ಶಕ್ತಿಯನ್ನು. ಮಗನಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿ, ತನ್ಮೂಲಕ ಅವನನ್ನು ಸ್ವಾವಲಂಬಿಯಾಗಿ ಮಾಡುವದು ಅವನ ಪ್ರಮುಖ ಆದ್ಯತೆಯಾಗಿತ್ತೇ ವಿನಃ, ಅವನಿಗಾಗಿ ಆಸ್ತಿಯನ್ನು ಮಾಡಿಟ್ಟು ಹೋಗುವುದಲ್ಲ.

ರುದ್ರಾಣಿಯೂ ಸುಲಭವಾಗಿ ಸೋಲನ್ನು ಒಪ್ಪುವವಳಲ್ಲ. ಅವಳು ವ್ಯಾವಹಾರಿಕವಾದ ಇನ್ನೊಂದು ವಾದವನ್ನು ಮಂಡಿಸಿದಳು: ಬೆಂಗಳೂರಿನಲ್ಲಿ ಮನೆ ಮಾಡಿಕೊಂಡರೆ, ವರ್ಷಗಳ ನಂತರ ಅದರ ಮುಖ ಬೆಲೆ ಹೆಚ್ಚುತ್ತದೆ. ಇದರಿಂದ ದೊರೆಯುವ ಲಾಭ ಮತ್ತು ಸಂಪತ್ತಿನ ಕ್ರೋಢೀಕರಣಕ್ಕೆ ಸರಿಸಾಟಿಯಾದುದು ಯಾವುದು? ಮೇಲ್ನೋಟಕ್ಕೆ ಈ ವಾದ ಸುಸಂಬದ್ಧವಾಗಿ ಕಂಡರೂ, ಅದು ಆ ಕಾಲಘಟ್ಟದಲ್ಲಿ ಬೆಂಗಳೂರಿಗೆ ಸರಿಹೊಂದುವಂತಿರಲಿಲ್ಲ. ಆಗ ಬೆಂಗಳೂರಿನ ಸೈಟು ಮತ್ತು ಮನೆಗಳ ಬೆಲೆಗಳು ಕುಸಿದು ಸಹಸ್ರಾರು ಜನರು ಕೈಸುಟ್ಟಿಕೊಂಡಿದ್ದರು. ಆ ಮುಂಚಿನ ವರ್ಷಗಳಲ್ಲಿ ಸೈಟು ಮತ್ತು ಮನೆಯನ್ನು ಹೆಚ್ಚಿನ ಬೆಲೆಯಲ್ಲಿ ಕೊಂಡುಕೊಂಡು, ಆಗ ನಷ್ಟವನ್ನುಭವಿಸಿದ ಅನೇಕರಲ್ಲಿ ಶಾಂತಮೂರ್ತಿಯ ಸಹೋದ್ಯೋಗಿಗಳು ಮತ್ತು ಮಿತ್ರರೂ ಸೇರಿದ್ದರು. ಅವರ ಜ್ವಲಂತ ಉದಾಹರಣೆಗಳನ್ನು ನೀಡುವ ಮೂಲಕ, ರುದ್ರಾಣಿಯ ಬಾಯನ್ನು ಮುಚ್ಚಿಸುವುದರಲ್ಲಿ ಅವನಾಗ ಯಶಸ್ವಿಯಾಗಿದ್ದ.

ಹೀಗಿರುವಾಗ ಒಂದು ದಿನ ಶಾಂತಮೂರ್ತಿಯ ಕೆಳಗೆ ಕೆಲಸ ಮಾಡುವ ಗುರುಸ್ವಾಮಿ ಎನ್ನುವವನು ಜೇಪಿ ನಗರದಲ್ಲಿ ಮನೆಯನ್ನು ಕಟ್ಟಿಸಿದ್ದ. ಅದರ ಗೃಹಪ್ರವೇಶದ ಕಾರ್ಯಕ್ರಮಕ್ಕೆ ಸಹಜವಾಗಿಯೇ ಶಾಂತಮೂರ್ತಿಗೂ ಆಮಂತ್ರಣ ಬಂದಿತ್ತು. ಆಗ ಶಾಂತಮೂರ್ತಿ, ರುದ್ರಾಣಿ ಮತ್ತು ಕಿಶೋರ್ ಎಲ್ಲರೂ ಗೃಹಪ್ರವೇಶಕ್ಕೆ ಹೋಗಿದ್ದರು. ಗುರುಸ್ವಾಮಿ 60 X 40 ಸೈಟಿನಲ್ಲಿ ಮನೆಯನ್ನು ಚೆನ್ನಾಗಿಯೇ ಕಟ್ಟಿಸಿಕೊಂಡಿದ್ದನು. ಅದು ಸುಮಾರು ಮೂವತ್ತು ಚದುರದ ಆಧುನಿಕ ಶೈಲಿಯ ಮಹಡಿ ಮನೆಯಾಗಿತ್ತು. ನೆಂಟರು ಇಷ್ಟರಿಂದ ಮನೆ ಕಿಕ್ಕಿರಿದಿತ್ತು. ಮನೆಯ ಹಾಲಿನಲ್ಲಿ ಹೋಮ ನಡೆದಿತ್ತು. ಹೆಣ್ಣುಮಕ್ಕಳ ಸಂಭ್ರಮದ ಓಡಾಟ ಕಲಾಪಕ್ಕೆ ಕಳೆ ಕಟ್ಟಿತ್ತು. ಮಕ್ಕಳ ಕಿರುಚಾಟದ ಮಧ್ಯೆ ವೇದಘೋಷ ಮಸುಕಾಗಿತ್ತು. ಮನೆಯ ಹೊರಗಡೆ ನಿಂತ ಗಂಡಸರ ವ್ಯಾವಹಾರಿಕ ಮಾತುಕತೆ ಅವ್ಯಾಹತವಾಗಿ ನಡೆದಿತ್ತು. ರುದ್ರಾಣಿ ಉತ್ಸಾಹದಿಂದ ಮನೆಯ ಮೂಲೆಮೂಲೆಗೂ ಹೋಗಿ ಎಲ್ಲವನ್ನೂ ಸೂಕ್ಷ್ಮಾವಲೋಕನ ಮಾಡಿಕೊಂಡು ಬಂದಳು. ವಿಧಿವತ್ತಾದ ಹೋಮ ಹವನಗಳ ನಂತರ ಭರ್ಜರಿ ಊಟ. ಗುರುಸ್ವಾಮಿ ಮತ್ತು ಅವರ ಪತ್ನಿಗೆ ಉಡುಗೊರೆಯನ್ನು ನೀಡಿ, ಶುಭಾಶಯಗಳನ್ನು ಅರ್ಪಿಸಿ, ಶಾಂತಮೂರ್ತಿ, ರುದ್ರಾಣಿ ಮತ್ತು ತಮ್ಮ ಮನೆಗೆ ವಾಪಸಾದರು.

ಮನೆಗೆ ಬಂದದ್ದೇ ತಡ, ರುದ್ರಾಣಿ ಕಾಳಿಯ ಅಪರಾವತಾರವಾದಳು. ಗಂಡನನ್ನು ಛೇಡಿಸಿ ಮಾತನಾಡತೊಡಗಿದಳು: "ನೋಡಿದಿರಾ, ನಿಮ್ಮ ಕೈಕೆಳಗಿನವನು ಎಂತಹ ಭವ್ಯವಾದ ಮನೆಯನ್ನು ಕಟ್ಟಿಸಿಕೊಂಡಿದ್ದಾನೆ? ನೀವೂ ಇದೀರ, ದಂಡಕ್ಕೆ! ಅವನ ಹೆಂಡತಿ ಒಡವೆಗಳನ್ನು ಹಾಕಿಕೊಂಡು, ಸಂಭ್ರಮದಿಂದ ಹೇಗೆ ಓಡಾಡುತ್ತಿದ್ದಳು? ಅಂತಹ ಸೌಭಾಗ್ಯ ನನಗೆ ಯಾವಾಗ ಬರುತ್ತೋ ನಾ ಕಾಣೆ. ಅಂತಹ ಭವ್ಯವಾದ ಮನೆಯನ್ನು ಕಟ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಗದೇ ಇದ್ದರೂ, ಒಂದು ಸಾಧಾರಣ ಮನೆಯನ್ನು ಕೊಂಡುಕೊಳ್ಳೋ ಯೋಗ್ಯತೆಯೂ ನಿಮಗಿಲ್ಲ! ..." – ಹೀಗೆ ಅವಳ ವಾಗ್ಬಾಣ ಅವ್ಯಾಹತಹಾಗಿ ನಡೆದಿತ್ತು. ನಂತರದ ಅವಳ ಯಾವ ಮಾತುಗಳೂ ಶಾಂತಮೂರ್ತಿಗೆ ಕೇಳಿಸುತ್ತಲೇ ಇರಲಿಲ್ಲ, ಏಕೆಂದರೆ ಅವಳು ತನ್ನ ಯೋಗ್ಯತೆಯನ್ನು ಪ್ರಶ್ನಿಸಿದ್ದು ಅವನನ್ನು ದಿಙ್ಮೂಢನನ್ನಾಗಿ ಮಾಡಿತ್ತು. ಅವಳ ಆ ಬ್ರಹ್ಮಾಸ್ತ್ರವೇ ಅವನನ್ನು ಮಣಿಸಿತ್ತು. ಒಂದೇ ಉಸಿರಿನಲ್ಲಿ ಜೋರಾಗಿ ಕಿರುಚಿ, ಹೆಂಡತಿಗೆ ಹೇಳಿದ, "ಸಾಕು ಸುಮ್ಮನಿರೆ, ಇನ್ನು ಒಂದು ಮಾತನ್ನೂ ಆಡಬೇಡ! ನಾನು ಮನೇನ ಕಟ್ಟಿಸ್ತೀನಿ." ರುದ್ರಾಣಿ ತನ್ನ ಕಿವಿಗಳನ್ನೇ ನಂಬದಾದಳು. ಅಪ್ರಜ್ಞಾಪೂರ್ವಕವಾಗಿ ಅವಳು ಬಿಟ್ಟ ಮಹಾಸ್ತ್ರ ನಿರೀಕ್ಷಿತ ಫಲವನೇ ಕೊಟ್ಟಿತ್ತು!

ಹಲವು ವರ್ಷಗಳ ಹಿಂದಿನ ತನ್ನ ಹೆಂಡತಿಯ ಕರ್ಣಕಠೋರವಾದ ನುಡಿಗಳು ತನ್ನ ಕಿವಿಯಲ್ಲಿ ಈಗಲೂ ಕಾದ ಎಣ್ಣೆಯನ್ನು ಸುರಿದಂತಾಗಿ, ಶಾಂತಮೂರ್ತಿ ಧಿಗ್ಗನೆದ್ದು ಕುಳಿತ. ಭೂತಕಾಲದ ನೆನಪಿನ ಮರುಕಳಿಕೆಯ ನಂತರ, ವರ್ತಮಾನಕಾಲಕ್ಕೆ ಹಿಂದುರಿಗಿದ. ಗಡಿಯಾರದ ಕಡೆ ನೋಡಿದಾಗ, ಆಗ ಬೆಳಗಿನ ಜಾವ 4:15 ಆಗಿತ್ತು.

೨

ಮಾರನೇ ದಿನ ಬೆಳಿಗ್ಗೆ ಎದ್ದಾಗ, ಶಾಂತಮೂರ್ತಿಗೆ ಸಣ್ಣಗೆ ತಲೆ ನೋಯುತ್ತಿತ್ತು; ಅದರ ಜೊತೆಗೆ ರಾತ್ರಿ ಸರಿಯಾಗಿ ನಿದ್ರೆ ಇಲ್ಲದೆ ಕಣ್ಣು ಸಹ ಉರಿಯುತ್ತಿತ್ತು. ಹಿಂದಿನ ದಿನದಂದು ಗೃಹಪ್ರವೇಶದ ಕಾರ್ಯಕಲಾಪಗಳು ನಡೆದ ತನ್ನ ಮನೆ ಆಗ ಭಣಗುಟ್ಟುತ್ತಿತ್ತು. ಆ ಮನೆಯನ್ನು ಕಟ್ಟಿಸಲು ತಾನು ಪಟ್ಟ ಶ್ರಮವೇನು ಕಡಿಮೆಯೆ? ಮೊದಲು ಮಲ್ಲೇಶ್ವರದ ವೈಯಾಳಿ ಕಾವಲ್ ಸೊಸೈಟಿಗೆ ಸೈಟಿಗೋಸ್ಕರ ಅರ್ಜಿ ಹಾಕಿ ದುಡ್ಡು ಕಟ್ಟಿದ್ದಾಯ್ತು. ವರ್ಷಗಳು ಉರುಳಿದರೂ ಸೈಟು ಸಿಗಲೇ ಇಲ್ಲ!

ಅಲ್ಲಿ ಸೈಟು ಸಿಗುವ ಆಸೆ ಕ್ಷೀಣಿಸುತ್ತಿರುವಾಗ, BDA ಗೆ ಅನೇಕ ಸಾಲ ಅರ್ಜಿ ಗುಜರಾಯಿಸಿದ್ದಾಯ್ತು. ಮಹಾನಗರದ ಸೈಟ್–ಆಕಾಂಕ್ಷಿಗಳ ಮಹಾಪೂರಕ್ಕೆ, BDA ದಯಪಾಲಿಸುವ ಸೈಟುಗಳು *'ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ'* ಎಂಬಂತಾಯ್ತು. ಕೊನೆಗೆ ಬೆಂಗಳೂರಿನ ಹೊರವಲಯದಲ್ಲಿರುವ ಕೋಣನ ಕುಂಟೆ ಗ್ರಾಮದ ಯಾವುದೋ ಒಂದು ರೆವಿನ್ಯೂ ಸೈಟನ್ನು ಕೊಂಡುಕೊಳ್ಳುವುದರಲ್ಲಿ ಶಾಂತಮೂರ್ತಿ ತೃಪ್ತನಾಗಬೇಕಾಯಿತು. ಬೆಂಗಳೂರು ಬೆಳೆಯುತ್ತಾ ಹೋದ ಹಾಗೆ, ಆ ಗ್ರಾಮ ಮಹಾನಗರ ಪಾಲಿಕೆಯ ಭಾಗವಾದಾಗ, ನಾಗರೀಕರ ಒತ್ತಾಯದ ಮೇರೆಗೆ ಅಂತಹ ರೆವಿನ್ಯೂ ಸೈಟುಗಳನ್ನು – ಅಭಿವೃದ್ಧಿ ಖರ್ಚನ್ನು ಕಟ್ಟಿಸಿಕೊಳ್ಳುವುದರ ಮೂಲಕ – ಅಧಿಕೃತಗೊಳಿಸಲಾಯಿತು.

ಸೈಟು ಕೈಗೆ ಬಂದಾದ ಮೇಲೆ, ಮನೆಯನ್ನು ಕಟ್ಟಿಸಲು ಹೋರಾಟ ಶುರುವಾಯಿತು. ಆರ್ಕಿಟೆಕ್ಟಿನಿಂದ ಮನೆಯ ಯೋಜನೆಯನ್ನು ಸಿದ್ಧಪಡಿಸುವುದು, ಆ ಯೋಜನೆಯನ್ನು ಮಹಾನಗರ ಪಾಲಿಕೆಯಿಂದ ಸ್ವೀಕೃತಗೊಳಿಸಿಕೊಳ್ಳುವುದು, ಇದ್ದುದುರಲ್ಲಿ ನಂಬಿಕಸ್ಥ ಕಂಟ್ರಾಕ್ಟರನ್ನು ಹಿಡಿದು ಮನೆ ಕಟ್ಟುವ ಕೆಲಸವನ್ನು ಗುತ್ತಿಗೆಗೆ ಕೊಡುವುದು, ಮನೆ ನಿರ್ಮಿಸಲು ಅಗತ್ಯವಾದ ಕಚ್ಚಾ ಸಾಮಗ್ರಿಗಳ ಸರಬರಾಜನ್ನು ಕಾಲಕಾಲಕ್ಕೆ ಮಾಡುವುದು, ಆಗಾಗ್ಗೆ ಹೋಗಿ ಮನೆ ಕಟ್ಟುತ್ತಿರುವುದನ್ನು ನೋಡಿಕೊಂಡು ಬರುವುದು, ಗುಣಮಟ್ಟ ಕಾಪಾಡಿಕೊಳ್ಳುವುದಕ್ಕಾಗಿ ಕಂಟ್ರಾಕ್ಟರನ ಜೊತೆ ಹೊಡೆದಾಡುವುದು – ಹೀಗೆ ಈ ಎಲ್ಲಾ ಪ್ರಕ್ರಿಯೆಗಳ ನಂತರ, ಕೊನೆಗೊಂದು ದಿನ ಒಂದು ಸುಂದರ ಮನೆ ತಲೆ ಎತ್ತಿ ನಿಂತಿತು.

ಹಿಂದಿನ ದಿನ ಬೆಳಿಗ್ಗೆ ಗೃಹಪ್ರವೇಶಕ್ಕೆ ತಮ್ಮ ಬಂಧು ಮಿತ್ರರೆಲ್ಲಾ ಬಂದಿದ್ದರು. ಶಾಂತಮೂರ್ತಿಯ ತಂದೆ–ತಾಯಿ, ರುದ್ರಾಣಿಯ ಪಾಲಕರು, ತನ್ನ ಅಕ್ಕ–ಭಾವ, ಅವಳ ಅಣ್ಣ–ಅತ್ತಿಗೆ – ಹೀಗೆ ಆಗಮಿಸಿದ ಆಮಂತ್ರಿತರಲ್ಲಿ ಸಮೀಪದ ರಕ್ತ ಸಂಬಂಧಿಗಳೂ ಸೇರಿದ್ದರು. ತಮ್ಮ ಆ ಸಂತೋಷದ ಸಮಾರಂಭದಲ್ಲಿ ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ನೆಂಟರು–ಇಷ್ಟರು ಭಾಗವಹಿಸಲು ಅನುಕೂಲವಾಗುವಂತೆ ಕಾರ್ಯಕ್ರಮವನ್ನು ಭಾನುವಾರದಂದು ಆಯೋಜಿಸಲಾಗಿತ್ತು. ಮನೆಯ ಹೊರಗಡೆ ರಂಗುರಂಗಿನ ಶಾಮಿಯಾನ ಹಾಕಿದ್ದರಿಂದ, ಸಮಾರಂಭಕ್ಕೆ ಒಂದು ಬಗೆಯ ವಿಶೇಷ ಕಳೆ ಕಟ್ಟಿತ್ತು. ಒಂದು ಕಡೆ ಅಡಿಗೆಯವರು ಬಂದವರಿಗೆಲ್ಲಾ ಉಪಹಾರ ಬಡಿಸುತ್ತಿದ್ದರು; ಉಪ್ಪಿಟ್ಟು, ಕಾಶಿ ಹಲ್ವದ ಕಂಪು ಎಲ್ಲೆಲ್ಲೂ ಹರಡಿತ್ತು. ಇನ್ನೊಂದು ಕಡೆ ಪುರೋಹಿತರು ಮತ್ತು ಋತ್ವಿಕರು ನವಗ್ರಹ ಹೋಮ, ಶಾಂತಿ ಹೋಮಗಳಿಗಾಗಿ ಸಕಲ ಪರಿಕರಗಳನ್ನೂ ಸಿದ್ಧಪಡಿಸಿಕೊಳ್ಳುತ್ತಿದ್ದರು. ಆಮಂತ್ರಿತರು ಶಾಂತಮೂರ್ತಿ–ರುದ್ರಾಣಿಯವರು ಇದ್ದಲ್ಲಿಗೇ ಬಂದು, ಮನೆಯ ಒಡೆಯರಾದ ಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದರು. ತನ್ನ ಇದುವರೆಗಿನ ಜೀವನದ ಸಕಲ ಪರಿಶ್ರಮ, ಹೋರಾಟ ಮತ್ತು ಸಾಧನೆಯ ಉತ್ತುಂಗ ಶಿಖರವೇ ಆ ಗೃಹಪ್ರವೇಶ ಎಂದು ಪರಿಭಾವಿಸಿ, ಆ ಸಂತೋಷ ಮತ್ತು ಸಾರ್ಥಕದ ಕ್ಷಣಗಳನ್ನು ಆಸ್ವಾದಿಸುತ್ತಾ, ಯಾವುದೋ ಒಂದು ಕಿನ್ನರ ಲೋಕದಲ್ಲಿ ಶಾಂತಮೂರ್ತಿ ವಿಹರಿಸುತ್ತಿದ್ದ.

ಆಗ ಸಮಯ ಮಧ್ಯಾಹ್ನ 12:30. ಹೀಗಿರುವಾಗ, ತನ್ನ ಅಸ್ತಿತ್ವದ ಸಮಗ್ರತೆಗೇ ಧಕ್ಕೆ ತರುವಂತಹ ಅತ್ಯಂತ ಆಘಾತಕಾರಕ ಘಟನೆ ಯಾವುದೇ ಮುನ್ಸೂಚನೆಯಿಲ್ಲದೆ ಘಟಿಸಿಯೇಬಿಟ್ಟಿತು! ಆಷ್ಟು ಹೊತ್ತಿಗೆ ಮೊದಲನೆಯ ಹಂತದ ಪೂಜೆ ಮತ್ತು ನವಗ್ರಹ ಹೋಮಗಳು ಮುಗಿದಿದ್ದವು. ಆಗ ತಾನೇ ಆಗಮಿಸಿದ ತನ್ನ ಕಚೇರಿಯ ಸಹೋದ್ಯೋಗಿಗಳ ಅಭಿನಂದನೆಗಳನ್ನು ಸ್ವೀಕರಿಸುತ್ತ ಶಾಂತಮೂರ್ತಿ ಒಂದು ಕಡೆ ನಿಂತಿದ್ದ. ಮನೆಯ ಒಳಗಡೆ ಬಂಧು–ಮಿತ್ರರು ಕಿಕ್ಕಿರಿದು ನೆರೆದಿದ್ದರು. ಇನ್ನೊಂದೆಡೆ ರುದ್ರಾಣಿ ಹೋಮಕುಂಡದ ಬಳಿ ಇದ್ದಳು. ಅಡುಗೆಯವರು ಅವಳಲ್ಲಿಗೆ ಬಂದು ಪಚ್ಚಕರ್ಪೂರವನ್ನು ಬೇಡುತ್ತಿದ್ದರು. ಪುರೋಹಿತರು ಮುಂದಿನ ಶಾಂತಿ ಹೋಮಕ್ಕೆ ಇನ್ನಷ್ಟು ತುಪ್ಪ ಮತ್ತು ಸಮಿತ್ತನ್ನು ಕೇಳುತ್ತಿದ್ದರು. ಇದರ ಮಧ್ಯದಲ್ಲಿ ಮನೆಗೆ ಆಗಮಿಸಿದ ತನ್ನ ಗೆಳತಿಯರ ಅಭಿನಂದನೆಗಳ ಸರಮಾಲೆ. ಅವರಲ್ಲಿ ಕೆಲವರು, ತಾವು ಬೇಗ ವಾಪಸಾಗಬೇಕೆಂದು ಆತುರಪಡಿಸುತ್ತಿದ್ದರು; ಹೊರಡುವವರಿಗೆ ಅರಿಶಿನ, ಕುಂಕುಮ, ಉಡುಗೊರೆ ಕೊಡಬೇಕು. ಮಕ್ಕಳ ಕಿರುಚಾಟದಿಂದ ಯಾರ ಮಾತು ಯಾರಿಗೂ ಕೇಳದಂತಹ ಸ್ಥಿತಿ ನಿರ್ಮಾಣವಾಗಿತ್ತು. ಇಷ್ಟೂ ಸಾಲದೆಂಬಂತೆ, ಆಷ್ಟರಲ್ಲಿ ಕಿಶೋರ್ ಅಲ್ಲಿಗೆ ಬಂದು ಬೆಲೂನ್ ಕೊಂಡುಕೊಳ್ಳುವುದಕ್ಕೆ ತನಗೆ ಹತ್ತು ರೂಪಾಯಿ ಕೊಡಬೇಕೆಂದು ಅಮ್ಮನನ್ನು ಪೀಡಿಸತೊಡಗಿದ. ಅದುವರೆವಿಗೆ ತಡೆದುಕೊಂಡಿದ್ದ ರುದ್ರಾಣಿಯ ಸಹನೆಯ ಕಟ್ಟೆ ಆಗ ಒಡೆಯಿತು. ಅತಿಯಾದ ಭಾವಾವೇಶಕ್ಕೆ ಒಳಗಾದ ರುದ್ರಾಣಿ ಒಮ್ಮಿಂದೊಮ್ಮೆಲೇ ಸ್ಫೋಟಿಸಿದಳು: "ಏ ಕಿಶೋರ್, ಈ ಸಂಸಾರಕ್ಕೆ ಎಲ್ಲವನ್ನೂ ನಾನೊಬ್ಬಳೇ ಮಾಡುತ್ತೀನೆಂದು ಬರೆದುಕೊಟ್ಟಿಲ್ಲ! ಅಲ್ಲಿ ಹೋಗಿ ನಿಮ್ಮ ಅಪ್ಪನನ್ನು ಕೇಳು!" ಅಷ್ಟಕ್ಕೆ ಕಿಶೋರ್ ಹೊರಟುಹೋಗಿದ್ದರೆ, ಆ ಘಟನೆ ಜರುಗುತ್ತಿರಲಿಲ್ಲವೇನೋ! ಆದರೆ, ಈ ವೇಳೆಗಾಗಲೇ ಕಿಶೋರನ ಗೆಳೆಯರೆಲ್ಲರೂ ಬೀದಿಯಲ್ಲಿ ಮಾರಲು ಬಂದವನಿಂದ ಬಣ್ಣ ಬಣ್ಣದ ಬೆಲೂನುಗಳನ್ನು ತೆಗೆದುಕೊಂಡಿದ್ದರು. ಅದೆಲ್ಲವನ್ನೂ ನೋಡಿದ ಕಿಶೋರನಿಗೆ ತನ್ನ ಆಸೆಯನ್ನು ಅದುಮಿಟ್ಟಕೊಳ್ಳುವುದು ಶಕ್ಯವಿರಲಿಲ್ಲ. ಅವನು ಅಮ್ಮನ ಕಂಚಿ ಸೀರೆಯ ಸೆರಗನ್ನು ಹಿಡಿದುಕೊಂಡು, ಆಸೆ ಪೂರಿತ ಕಣ್ಣುಗಳಿಂದ ಅಮ್ಮನನ್ನು ನೋಡುತ್ತಾ ಅಲ್ಲೇ

ನಿಂತಿದ್ದ. ಪುರೋಹಿತರು ಕೂಡ ಆಗ ಅತುರಪಡಿಸುತ್ತಿದ್ದರು. ಒಂದು ಕ್ಷಣ ಏನೂ ತೋಚದೆ ನಿಂತಾಗ, ತನ್ನ ಗಂಡ ಎಲ್ಲರೊಂದಿಗೆ ಹಾಯಾಗಿ ನಿಂತು ಮಾತಾಡಿಕೊಂಡು, ಜೋಕ್ಸ್ ಕಟ್ ಮಾಡುತ್ತಿರುವುದನ್ನು ನೋಡಿ ಅವಳಿಗೆ ಉರಿದು ಹೋಯಿತು. ಕೂಡಲೇ ಮಗನನ್ನು ಧರಧರ ಎಳೆದುಕೊಂಡು ಶಾಂತಮೂರ್ತಿ ಇದ್ದಲ್ಲಿಗೆ ಬಂದಳು. ರುದ್ರಾಣಿಯ ಮೈಮೇಲೆ ಆಗಲೇ ಕಾಳಿಯ ಆವಾಹನೆಯಾಗಿತ್ತು. ಗಂಡನನ್ನು ಉದ್ದೇಶಿಸಿ, ತಾರಕ ಸ್ವರದಲ್ಲಿ ಕಿರುಚಿದಳು: "ನಿಮಗೆ ಸ್ವಲ್ಪವೂ ಜವಾಬ್ದಾರಿ ಇಲ್ಲವೆ? ಇಲ್ಲಿ ನಿಂತು ಹರಟೆ ಹೊಡೆಯುತ್ತಿದ್ದೀರಿ! ಅಲ್ಲಿ



ತಲೆ ಹೋಗುವಷ್ಟು ಕೆಲಸವಿದೆ! ನಾನೊಬ್ಬಳೇ ಎಷ್ಟು ಅಂತ ತಲೆ ಚಚ್ಚಿಕೊಳ್ಳಲಿ? ನಿಮ್ಮನ್ನು ಕಟ್ಟಿಕೊಂಡ ಹಣೆಬರಹಕ್ಕೆ ನಾನೇ ಚಪ್ಪಲಿಯಲ್ಲಿ ಹೊಡೆದುಕೊಳ್ಳಬೇಕು! ನಿಮಗಂತೂ ತಿಳಿದುಕೊಂಡು ಕೆಲಸ ಮಾಡೋಕೆ ಬರಲ್ಲ.

ಕೊನೇ ಪಕ್ಷ ನನ್ನೊಂದಿಗಿದ್ದು, ನಾ ಹೇಳಿದ ಕೆಲಸವನ್ನಾದರೂ ಮಾಡಬಾರದೆ? ನಿಮ್ಮಂತಹವರು ಯಾಕಾದರೂ ಮದುವೆಯಾಗಬೇಕು? ನಿಮಗ್ಯಾಕೆ ಸಂಸಾರದ ಬಂಧನ? ಈಗಲೇ ಹೋಗಿ ಸನ್ಯಾಸಿಯಾಗಿಬಿಡಿ! ನಾನು ತಲೆಗೆ ನೀರು ಹಾಕಿಕೊಂಡು, ನೀವಿಲ್ಲವೆಂದುಕೊಂಡು, ಹ್ಯಾಗೋ ಈ ಸಂಸಾರಾನ ನಿಭಾಯಿಸ್ತೀನಿ. ಈ ಕ್ಷಣ ಹೊರಟು ಹೋಗಿ, ನನ್ನ ಕಣ್ಣೆದುರಿಗೆ ನಿಲ್ಲಬೇಡಿ!" ಎಂದು ಕಿರುಚಿ, ಏನಾಯಿತು ಎಂಬುದು ಶಾಂತಮೂರ್ತಿಯ ಮನಸ್ಸಿಗೆ ದಾಖಲಾಗುವ ಮೊದಲೇ, ರುದ್ರಾಣಿ ಬಿರುಗಾಳಿಯಂತೆ ಹೊರಟು ಹೋದಳು. ತನ್ನ ಕಛೇರಿಯ ಸಹೋದ್ಯೋಗಿಗಳ, ಅಪ್ಪ ಅಮ್ಮರ, ಅತ್ತೆ ಮಾವಂದಿರ ಮತ್ತು ಇತರ ಬಂಧುಮಿತ್ರರೆಲ್ಲರ ಸಮಕ್ಷಮದಲ್ಲಿ ಆದ ಹೀನಾಯವಾದ ಅವಮಾನದಿಂದ ಶಾಂತಮೂರ್ತಿ ಕುಗ್ಗಿಹೋಗಿ, ಹಾಗೆಯೇ ಕುಸಿದ. ಒಂದು ಕ್ಷಣದ ಹಿಂದೆ ಯಾವುದೋ ಮಾಯಾಲೋಕದಲ್ಲಿ ಸಾರ್ಥಕದ ಕ್ಷಣಗಳನ್ನು ಅನುಭವಿಸುತ್ತ, ಸಂತೋಷದಲ್ಲಿ ವಿಹರಿಸುತ್ತಿದ್ದವನು, ಆಗ ಭೂಲೋಕದ ಚರಂಡಿಯಲ್ಲಿ ಬಂದು ಬಿದ್ದಿದ್ದ! ಅಂತಹ ಆಘಾತಕರ ಅವಮಾನ ತನ್ನನ್ನು ಗೌರವಿಸುವವರ ಎದುರಿನಲ್ಲೇ ಧುತ್ತೆಂದು ನಡೆದುಹೋಗಿತ್ತು! ತನ್ನ ಜೀವನದಲ್ಲಿ ಅದುವರೆವಿಗೆ ಅವನು ಅತ್ತಿರಲಿಲ್ಲ. ಆದರೆ ಆಗ ಅವನ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ನಂತರ ಅಂದು ಜರುಗಿದ ಯಾವುದೇ ಘಟನೆಗಳು ಮತ್ತು ನಡೆದ ಕಲಾಪಗಳು ಅವನ ಮನಃಪಟಲದಲ್ಲಿ ಉಳಿಯಲಿಲ್ಲ.

೩

ಹೊಸ ಮನೆಯ ಗೃಹಪ್ರವೇಶದ ಸಮಾರಂಭ ಮುಗಿದು ಕೆಲವು ವಾರಗಳೇ ಕಳೆದವು. ಆದರೂ, ಆ ದಿನದ ಅವಮಾನದ ಆಘಾತ ಶಾಂತಮೂರ್ತಿಯ ಮನಸ್ಸಿನಿಂದ ಅಳಿದಿರಲಿಲ್ಲ. ಮನದ ನೋವು ಕೊಂಚ ಉಪಶಮನವಾದ ಮೇಲೆ, ಆ ಘಟನೆಯನ್ನು ವಸ್ತುನಿಷ್ಠ ದೃಷ್ಟಿಕೋನದಿಂದ ನೋಡಿ, ಅದಕ್ಕೆ ಕಾರಣವನ್ನು ಹುಡುಕಲು ಅವನು ಪ್ರಯತ್ನಿಸಿದ್ದುಂಟು. ರುದ್ರಾಣಿಯ ಆ ದಿನದ ಅನುಚಿತ ವರ್ತನೆಗೆ, ಕಾರ್ಯಕ್ರಮ ನಿರ್ವಹಣೆಯ ಒತ್ತಡವೇ

ಕಾರಣವಿರಬಹುದು ಎಂದು ಅವನಿಗೆ ತೋರಿತು. ಅದೂ ಅಲ್ಲದೆ, ಆ ದಿನ ಅವಳು ಹೇಳಿದ್ದು ನಿಜವೆಂದನಿಸಿತು: ತಾನು ಆ ದಿನ ಅವಳ ಜೊತೆಯೇ ಇದ್ದು, ಕೆಲಸಗಳಲ್ಲಿ ಅವಳೊಂದಿಗೆ ಭಾಗಿಯಾಗಬೇಕಿತ್ತು! ಅಷ್ಟೊಂದು ಕೆಲಸವಿರುವಾಗ, ಕಛೇರಿಯ ಸಹೋದ್ಯೋಗಿಗಳ ಜೊತೆ ಮಾತಾಡುತ್ತಾ ನಿಂತಿದ್ದು ತನ್ನ ತಪ್ಪು. ಇದನ್ನು ಒಪ್ಪಿಕೊಂಡರೂ, ಅವಳು ಹಿಂದೆಂದೂ ತನ್ನನ್ನು ಎಲ್ಲರ ಎದುರಿನಲ್ಲಿ ಅವಮಾನ ಮಾಡಿಯೇ ಇರಲಿಲ್ಲ ಎಂಬುದನ್ನು ಗಮನಿಸಿದಾಗ, ಅವಳೇಕೆ ಆ ದಿನ ಹಾಗೆ ವರ್ತಿಸಿದಳು ಎಂಬುದು ಅವನಿಗೆ ಒಗಟಾಗಿಯೇ ಉಳಿಯಿತು. ರುದ್ರಾಣಿ ಸಮಾಧಾನದಿಂದಿದ್ದಾಗ, ಅವಳೊಂದಿಗೆ ಇದರ ಬಗ್ಗೆ ಅವನು ಮಾತನಾಡಿದರೂ, ಆ ದಿನ ಅವಳೇಕೆ ಚಾಮುಂಡಿಯ ಅಪರಾವತಾರವಾದಳು ಎಂಬುದು ಅವಳಿಗೇ ತಿಳಿದಂತಿಲ್ಲವೆಂದು ಅವನಿಗೆ ಅರಿವಾಯಿತು. ತನ್ನ ಹೆಂಡತಿಯ ವಿವರಿಸಲಾಗದ ವರ್ತನೆಯ ಹಿಂದಿನ ಮೂಲಭೂತ ಕಾರಣ ತಿಳಿಯುವವರೆಗೂ ಮನದ ತಳಮಳ ನಿಲ್ಲದು ಎಂದು ಅವನಿಗೆ ಅನ್ನಿಸಿತು. ಆಗಲೇ ಅವನು ಒಬ್ಬ ಮನಃಶಾಸ್ತ್ರಜ್ಞನನ ಜೊತೆ ಆಪ್ತ ಸಮಾಲೋಚನೆ ಮಾಡಲು ನಿರ್ಧರಿಸಿದ್ದು.

ಚಿದಾನಂದರು ಜ್ಞಾನಭಾರತಿಯಲ್ಲಿ ಮನಃಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರು ಶಾಂತಮೂರ್ತಿಯ ಆಪ್ತ ಮಿತ್ರರಲ್ಲೊಬ್ಬರಾಗಿರುವುದಷ್ಟೇ ಅಲ್ಲದೆ, ಅವನ ಮನೆಯ ಗೃಹಪ್ರವೇಶಕ್ಕೂ ಬಂದಿದ್ದರು. ಒಂದು ಭಾನುವಾರ ಸಂಜೆ ಶಾಂತಮೂರ್ತಿ ಅವರ ಮನೆಗೆ ಹೋಗಿ, ಅವರ ಜೊತೆ ವಾಕಿಂಗ್ ಹೊರಟನು. ಅವರ ಜೊತೆ ಮುಕ್ತ ಮನಸ್ಸಿನಿಂದಲೇ ಸಂಭಾಷಣೆಯನ್ನು ಶುರುಮಾಡಿದ: ''ಪ್ರೊಫೆಸರ್, ಗೃಹಪ್ರವೇಶದಂದು ನನ್ನ ಹೆಂಡತಿ ಆಹ್ವಾನಿತರೆಲ್ಲರ ಸಮಕ್ಷಮದಲ್ಲಿ ನನಗೆ ಅವಮಾನ ಮಾಡಿದ್ದು ತಮಗೆ ತಿಳಿದೇ ಇದೆ. ಅವಳು ಏಕೆ ಹಾಗೆ ಮಾಡಿದಳು ಎಂಬುದನ್ನು ತಿಳಿಯಲು ನನಗೆ ನಿಮ್ಮ ಸಹಾಯ ಬೇಕು.'' ಎಂದು ಹೇಳಿ ಪೀಠಿಕೆ ಹಾಕಿದ. ಅದಕ್ಕೆ ಚಿದಾನಂದರು ನಿರ್ವಿಕಾರಚಿತ್ತರಾಗಿ ಹೇಳಿದರು, ''ಶಾಂತಮೂರ್ತಿ, ನಿಮ್ಮಿಬ್ಬರ ದಾಂಪತ್ಯ ಸಂಬಂಧ ಹೇಗಿದೆ ಅಂತ ನನಗೆ ಪ್ರಾಮಾಣಿಕವಾಗಿ ಹೇಳಿ.'' ಈ ಪ್ರಶ್ನೆಗೆ ಉತ್ತರಿಸಲು ಅವನಿಗೆ ಹೆಚ್ಚು ಕಾಲ ಬೇಕಾಗಲಿಲ್ಲ. ''ನಿಮಗೆ ತಿಳಿಯದೆ ಇರುವುದು ಇದರಲ್ಲೇನಿದೆ? ನಮ್ಮಿಬ್ಬರ ದಾಂಪತ್ಯ ಒಟ್ಟಾರೆ ಸುಮಧುರ ಹಾಗೂ ಸೌಹಾರ್ದಯುತವಾಗಿಯೇ ನಡೆಯುತ್ತಿದೆಯೆನ್ನಬಹುದು. ನಾನು ಅವಳನ್ನು ತುಂಬಾ ಪ್ರೀತಿಸ್ತೀನೆ. ಅವಳು ಕೂಡಾ ನನ್ನನ್ನು ಪ್ರೀತಿ ಮತ್ತು ಗೌರವದಿಂದ ಕಾಣುತ್ತಾಳೆ. ಆದ್ದರಿಂದಲೇ, ನಾನು ಗೊಂದಲಕ್ಕೆ ಬಿದ್ದಿರುವುದು – ಅವಳೇಕೆ ಹಾಗೆ ನನಗೆ ಅವಮಾನ ಮಾಡಿದಳು ಅಂತ.'' ಚಿದಾನಂದರು ಸ್ವಲ್ಪ ಹೊತ್ತು ಮೌನಿಗಳಾದರು. ವಿಷಯ ಗಹನವಾದ್ದರಿಂದ, ಶಾಂತಮೂರ್ತಿಯೂ ಅವರನ್ನು ಆತುರಪಡಿಸಲಿಲ್ಲ. ಅವರು ಮತ್ತೆ ಕೇಳಿದರು: ''ರುದ್ರಾಣಿಯವರ ಬಾಲ್ಯ ಹೇಗಿತ್ತು? ಅವರೇನಾದರೂ ತಮ್ಮ ಬಾಲ್ಯದ ಕಹಿ ಅನುಭವಗಳ ಬಗ್ಗೆ ನಿಮ್ಮ ಹತ್ತಿರ ಹೇಳಿಕೊಂಡಿದ್ದಾರೆಯೇನು?'' ಅದಕ್ಕೆ ಶಾಂತಮೂರ್ತಿ ಉತ್ತರಿಸಿದ: ''ಅವಳ ಬಾಲ್ಯ ಸಂತೋಷಮಯವಾಗಿತ್ತೆಂದೇ ನನ್ನ ನಂಬಿಕೆ. ರುದ್ರಾಣಿಯನ್ನು ಅವಳ ತಂದೆ ತಾಯಿಯರು ಪ್ರೀತಿಯಿಂದ ಬೆಳೆಸಿದ್ದಾರೆ. ಅವರದೂ ಕೂಡಾ ಅನ್ಯೋನ್ಯ ದಾಂಪತ್ಯ.'' ನಂತರ ಅವರು ಇನ್ನೊಂದು ಪ್ರಶ್ನೆಯನ್ನು ಹಾಕಿದರು, ''ಮನೆಯನ್ನು ಕಟ್ಟಿಸುವುದರ ಅಥವಾ ಕೊಂಡುಕೊಳ್ಳುವುದರ ಬಗ್ಗೆ ನೀವು ಹಿಂದೆ ಎಂದಾದರೂ ಖಾರವಾಗಿ ಮಾತನಾಡಿ, ಅವರ ಮನ ನೋಯಿಸಿದ್ದೀರ?'' ಶಾಂತಮೂರ್ತಿ ದೀರ್ಘವಾದ ಉಸಿರೆಳೆದುಕೊಂಡು ಉತ್ತರಿಸಿದ, ''ಈ ಮನೆ ಕಟ್ಟಿಸುವ ಬಗ್ಗೆ ನಮ್ಮಿಬ್ಬರ ದೃಷ್ಟಿಕೋನದಲ್ಲೇ ಮೂಲಭೂತ ಭಿನ್ನಾಭಿಪ್ರಾಯಗಳಿದ್ದವು. ಅವಳಿಗೆ ನಾವು ಬೇಗ ಮನೆ ಮಾಡಿಕೊಳ್ಳಬೇಕೆಂದು ಅನಿಸುತ್ತಿದ್ದರೆ, ನನಗೆ ಅದರ ಬಗ್ಗೆ ಅಷ್ಟೊಂದು ಉತ್ಸುಕತೆಯಿರಲಿಲ್ಲ. ಸಹಜವಾಗಿಯೇ ಅದರ ಬಗ್ಗೆ ಸಾಕಷ್ಟು ವಾದವಿವಾದಗಳು ಆಗಿತ್ತು. ಆಗ ನಾನು ಅವಳ ಮನ ನೋಯಿಸಿರಲು ಸಾಧ್ಯವಿದೆ.''

ಪ್ರೊಫೆಸರ್ ಕೊಂಚ ಸಮಯ ಆಲೋಚನಾಮಗ್ನರಾದರು. ನಂತರ ತರಗತಿಯಲ್ಲಿ ಪಾಠ ಮಾಡುವ ಧಾಟಿಯಲ್ಲಿ ಪ್ರಸ್ತುತ ವಿಷಯದ ಬಗ್ಗೆ ವಿಚಾರಮಂಡನೆ ಮಾಡತೊಡಗಿದರು: ''ದಾಂಪತ್ಯದಲ್ಲಿ ಗಂಡಹೆಂಡಿರು ಪ್ರೀತಿಯಿಂದ ಜೀವಿಸುತ್ತಿದ್ದಾರೆಂದು ಭಾವಿಸೋಣ. ಇಂತಹ ಪ್ರೀತಿಪೂರ್ವಕವಾದ ಸಂಬಂಧದಲ್ಲಿನ ವಿಪರ್ಯಾಸವೆಂದರೆ, ಯಾವಾಗ ನಾವುಗಳು ಪರಸ್ಪರ ಪ್ರೀತಿಸಲ್ಪಟ್ಟು ಎಲ್ಲವೂ ಸಂತೋಷದಾಯಕವಾಗಿದೆಯೆಂದು ಅಂದುಕೊಳ್ಳುತ್ತೇವೆಯೋ, ಆಗಲೇ ನಾವು ನಮ್ಮ ಸಂಗಾತಿಯಿಂದ ಭಾವನಾತ್ಮಕವಾಗಿ ದೂರ ಸರಿಯುತ್ತೇವೆ ಅಥವಾ ಅವರೊಂದಿಗೆ ಪ್ರೇಮರಹಿತವಾಗಿ ವರ್ತಿಸುತ್ತೇವೆ. ಒಂದು ದಿನ ನಾವು ಪ್ರೀತಿಯ ಸಮುದ್ರದಲ್ಲಿ ತೇಲುತ್ತಿರುತ್ತೇವೆ, ಆದರೆ ಮಾರನೆ ದಿನವೇ ಪ್ರೀತಿಯಲ್ಲಿ ನಂಬಿಕೆಯಿಡಲು ಅಂಜುತ್ತೇವೆ. ಪ್ರೀತಿಯ ಉತ್ಕಟತೆಯಲ್ಲಿ ತಿರಸ್ಕೃತಗೊಂಡ ನಮ್ಮ ಹಳೆಯ ನೆನಪುಗಳು ಮರುಕಳಿಸುತ್ತವೆ. ಇಂತಹ ನೆನಪುಗಳು ಮೇಲಕ್ಕೆ ಬಂದು ನಮ್ಮ ಪ್ರೀತಿಯ ಭಾವನೆಯನ್ನು ತಾತ್ಕಾಲಿಕವಾಗಿ ಮರೆಮಾಡುತ್ತವೆ. ಆಗ ಅಂತಹ ಅತೃಪ್ತ ಭಾವನೆಗಳಿಗೆ ಉಪಶಮನ ಮತ್ತು ಬಿಡುಗಡೆ ಬೇಕಿರುತ್ತದೆ. ಹೀಗಾಗಿ ನಾವು ಕೂಡಲೇ ನಮ್ಮ ಸಂಗಾತಿಯ ಮೇಲೆ ಕೋಪಗೊಂಡು, ಕಟುಟೀಕೆ ಮಾಡುತ್ತಾ ನಮ್ಮ ಬೇಡಿಕೆಗಳನ್ನು ಆಗ್ರಹಿಸುತ್ತಾ

ಅವರ ಮನ ನೋಯಿಸಲು ಉದ್ಯುಕ್ತರಾಗುತ್ತೇವೆ. ನಮ್ಮ ಜೀವನದಲ್ಲಿ ಹಿಂದೆ ನಾವು ಯಾವ ಭಾವನೆಗಳನ್ನು ವ್ಯಕ್ತಪಡಿಸಲಾಗದೆ ತಡೆಹಿಡಿದಿದ್ದೆವೋ, ಅಂತಹವುಗಳ ಮಹಾಪೂರವೇ ನಮ್ಮ ಪ್ರಜ್ಞಾವಸ್ಥೆಯಲ್ಲಿ ಮೇಲೇಳುತ್ತವೆ. ಹೀಗೆ ಮೇಲೆ ಬಂದೇ, ಅಂತಹ ಒತ್ತಿಹಿಡಿದ ಭಾವನೆಗಳು ಬಿಡುಗಡೆ ಹೊಂದಬೇಕು. ಅವು ಇಂತಹ ಕ್ಷಣಕ್ಕಾಗೇ ಕಾಯ್ದುಕೊಂಡು ಸುಪ್ತಮನಸ್ಸಿನಲ್ಲಿ ಅಡಗಿಕೊಂಡು ಕುಳಿತಿರುತ್ತವೆ. ಹೀಗೆ ನೀವು ಪ್ರೀತಿಯಲ್ಲಿ ಸಾರ್ಥಕದ ಕ್ಷಣಗಳನ್ನು ಅನುಭವಿಸಿದ ಸಂದರ್ಭದಲ್ಲೇ ಅವುಗಳಿಗೆ ಬಿಡುಗಡೆಹೊಂದಲು ಸಕಾಲ ಮತ್ತು ಸುರಕ್ಷಿತವೆನಿಸಿ, ಅವು ಮೇಲೆ ಬರುತ್ತವೆ.

ನಾವು ನಮ್ಮ ಅತೃಪ್ತ ಮತ್ತು ನೋವುಂಟುಮಾಡುವ ಭಾವನೆಗಳನ್ನು ಹಲವು ವರ್ಷಗಳ ಕಾಲ ತಡೆಹಿಡಿದಿರುತ್ತೇವೆ. ನಂತರ, ದಾಂಪತ್ಯದಲ್ಲಿ ಸಂತೋಷದಿಂದ ಜೀವಿಸುತ್ತಿರುವಾಗ, ಅಂತಹ ಭಾವನೆಗಳಿಗೆ ಒಂದು ಸುರಕ್ಷಿತ ವೇದಿಕೆ ದೊರಕಿದಂತಾಗುತ್ತದೆ. ನಮಗೆ ಯಾವಾಗ ಸುಖ, ಸಂತೋಷ, ಆನಂದ ಎಲ್ಲವೂ ಪ್ರಾಪ್ತವಾಗಿದೆಯೋ, ಆಗಲೂ ಅವು ಕಾಣಿಸಿಕೊಳ್ಳುತ್ತವೆ. ಇಂತಹ ಸಮಯದಲ್ಲೂ ದಂಪತಿಗಳು ವಿನಾಕಾರಣ ಜಗಳವಾಡುತ್ತಾರೆ. ಉದಾಹರಣೆಗೆ ಗೃಹಪ್ರವೇಶ, ಮದುವೆ, ಮುಂಜಿ ಇಂತಹ ಧಾರ್ಮಿಕ ಸಂದರ್ಭಗಳು ಅಥವಾ ಹೊಸ ಕಾರನ್ನು ಕೊಂಡಾಗ, ಕಛೇರಿಯಲ್ಲಿ ಬಡ್ತಿ ದೊರಕಿದಾಗ ಅಥವಾ ಧನಲಕ್ಷ್ಮಿ ಪ್ರಾಪ್ತವಾದಾಗಲೂ ದಂಪತಿಗಳು ಜಗಳ ಕಾಯಬಹುದು. ಇಂತಹ ವಿಶೇಷ ಸಂದರ್ಭಗಳಲ್ಲಿಯೇ ದಂಪತಿಗಳಲ್ಲೊಬ್ಬರು ಅಥವಾ ಇಬ್ಬರೂ ವಿವರಿಸಲಾಗದಂತಹ ಭಾವೋದ್ವೇಗಕ್ಕೆ ಒಳಗಾಗಬಹುದು. ಇದು ಸಮಾರಂಭದ ಮೊದಲು, ನಂತರ ಅಥವಾ ಅದೇ ಕಾಲದಲ್ಲಿ ಆಗಬಹುದು. ನಿಮ್ಮ ಮನೆಯಲ್ಲಿ ಆಗಿದ್ದು ಇದೇ!"

ಪ್ರೊಫೆಸರ್ ಅವರ ವಿದ್ವತ್‌ಪೂರ್ಣ ವಿವರಣೆಗಳನ್ನು ಅರ್ಥಮಾಡಿಕೊಳ್ಳಲು ಶಾಂತಮೂರ್ತಿಗೆ ಸ್ವಲ್ಪ ಕಾಲ ಬೇಕಾಯಿತು. ಆಷ್ಟಾದರೂ, ವಿಷಯ ಪೂರ್ತಿ ಅರ್ಥವಾಯಿತೆಂದು ಅವನಿಗನ್ನಿಸಲಿಲ್ಲ. ಆಗ ಅವನು ಚಿದಾನಂದರಿಗೆ ಪ್ರಶ್ನೆ ಮಾಡಿದ: "ಪ್ರೊಫೆಸರ್, ರುದ್ರಾಣಿಗೆ ಮನೆಯನ್ನು ಕಟ್ಟಿಸಬೇಕೆಂಬ ಮಹತ್ವಾಕಾಂಕ್ಷೆ ಇತ್ತು. ಆ ಕನಸು ಸಾಕಾರವಾದ್ದರಿಂದ, ಅವಳಿಗೆ ತುಂಬಾ ಸಂತೋಷವಾಗಿರಬೇಕು. ಗೃಹಪ್ರವೇಶದಂತಹ ಸಮಾರಂಭದಲ್ಲಿ, ಅಂತಹ ಸಂತೋಷದ ಉತ್ತುಂಗ ಕ್ಷಣಗಳನ್ನು ಅನುಭವಿಸುತ್ತಿರುವಾಗಲೇ ಅವಳೇಕೆ ರುದ್ರಕಾಳಿಯಾದಳು ಎಂದು ಈಗಲೂ ನನಗೆ ಅರ್ಥವಾಗುತ್ತಿಲ್ಲ." ಅದಕ್ಕೆ ಚಿದಾನಂದರು ಮಂದಸ್ಮಿತರಾಗಿ ಆತ್ಮವಿಶ್ವಾಸದಿಂದ ಉತ್ತರಿಸಿದರು: "ಇಲ್ಲಿ ನೋಡಿ ಶಾಂತಮೂರ್ತಿ. ಇದನ್ನೇ ನಾನು ಪ್ರೀತಿಪೂರ್ವಕ ಸಂಬಂಧದಲ್ಲಿನ ವಿಪರ್ಯಾಸ ಎಂದು ಕರೆದಿರುವುದು: ಯಾವಾಗ ನಾವು ಎಲ್ಲವೂ ಸರಿಯಾಗಿದೆಯೆಂದು ಭಾವಿಸುತ್ತೇವೆಯೋ, ಆಗಲೇ ನಾವು ನಮ್ಮ ಸಂಗಾತಿಯೊಂದಿಗೆ ನಿಷ್ಠುರವಾಗಿ ವರ್ತಿಸುತ್ತೇವೆ.

ನಾನು ಆಗಲೇ ಹೇಳಿದೆನಲ್ಲ, ನಮ್ಮ ಮನಸ್ಸಿನಲ್ಲಿ ನಾವು ಅರಗಿಸಿಕೊಳ್ಳಲಾಗದ ಅನೇಕ ಅತೃಪ್ತ ಭಾವನೆಗಳು ಇರುತ್ತವೆ. ಇಂತಹ ಕಹಿ ಭಾವನೆಗಳನ್ನು ಜಾಗೃತ ಮನಸ್ಸು ಸುಪ್ತ ಮನಸ್ಸಿಗೆ, ಅಂದರೆ ಮನಸ್ಸಿನ ಆಳಕ್ಕೆ ತಳ್ಳುತ್ತದೆ. ಆದರೆ, ಅವುಗಳು ಮನಸ್ಸಿನ ಮೇಲ್ಪದರಕ್ಕೆ ಬಂದು ಬಿಡುಗಡೆಯಾಗಲು ಅನುಗಾಲವೂ ತಹತಹಿಸುತ್ತಿರುತ್ತವೆ. ಸಾಮಾನ್ಯ ಸಂದರ್ಭಗಳಲ್ಲಿ, ಅವುಗಳು ಮನಸ್ಸಿನ ಮೇಲ್ಭಾಗಕ್ಕೆ ಬರಲು ಜಾಗೃತ ಮನಸ್ಸು ಬಿಡುವುದಿಲ್ಲ. ಆದರೆ ಯಾವಾಗ ನಮಗೆ ಸುಖ, ಸಂತೋಷ ಪ್ರಾಪ್ತವಾಗಿ ನಾವು ಪ್ರೀತಿಯಲ್ಲಿ ಸಾರ್ಥಕದ ಕ್ಷಣಗಳನ್ನು ಅನುಭವಿಸುತ್ತಿರುತ್ತೇವೋ, ಆಗ ನಾವು ವಿವರಿಸಲಾಗದಂತಹ ಭಾವೋದ್ವೇಗಕ್ಕೆ ಒಳಗಾಗುತ್ತೇವೆ. ಅಲ್ಲಿಯವರೆವಿಗೆ ತಡೆಹಿಡಿಯಲ್ಪಟ್ಟ ಅತೃಪ್ತ ಭಾವನೆಗಳಿಗೆ ಮನಸ್ಸಿನ ಮೇಲ್ಪದರಕ್ಕೆ ಬರಲು ಆಗ ಸಕಾಲ ಅನಿಸಿ, ಅವು ಮೇಲೆ ಬಂದು ರುದ್ರತಾಂಡವ ನರ್ತನವನ್ನು ಆರಂಭಿಸುತ್ತವೆ. ಏಕೆಂದರೆ, ಅಲ್ಲಿಯವರೆಗೆ ಗಸ್ತು ಕಾಯುತ್ತಿದ್ದ ಜಾಗೃತ ಮನಸ್ಸು ಆಗ ಸಂತೋಷದಲ್ಲಿ ಮೈಮರೆತಿರುತ್ತದೆ. ಆಗಲೇ ನಾವು ಆಸ್ಫೋಟಿಸಿ, ತಡೆಹಿಡಿದಿದ್ದ ವಿಷವೆಲ್ಲವನ್ನೂ ನಮ್ಮ ಸಂಗಾತಿಯ ಮೇಲೆ ಕಾರುತ್ತೇವೆ. ಗೃಹಪ್ರವೇಶದ ದಿನ ರುದ್ರಾಣಿಯೂ ಹೀಗೆಯೇ ನಿಮ್ಮ ಮೇಲೆ ಕೆಂಡ ಕಾರಿರುವುದು! ಗೊತ್ತಾಯಿತಾ, ಶಾಂತಮೂರ್ತಿ?"

ಶಾಂತಮೂರ್ತಿಗೆ ನಿಧಾನವಾಗಿ ಎಲ್ಲವೂ ಅರ್ಥವಾಯಿತು. ರುದ್ರಾಣಿಯ ಸಮಸ್ಯೆಯನ್ನು ಮನಃಶಾಸ್ತ್ರದ ಹಿನ್ನೆಲೆಯಲ್ಲಿ ತಿಳಿದುಕೊಂಡಮೇಲೆ, ಅವನ ಮನ ಶಾಂತವಾಯಿತು. ಅಷ್ಟೆ ಅಲ್ಲ, ತನ್ನ ಹೆಂಡತಿಯ ಬಗ್ಗೆ ಅಭೂತಪೂರ್ವವಾದ ಪ್ರೀತಿ, ಅನುಕಂಪ ಮತ್ತು ಸಹಾನುಭೂತಿ ಮೂಡಿತು. ತಮ್ಮಿಬ್ಬರ ನಡುವಿನ ಪ್ರೀತಿ ಮತ್ತು ಗೌರವ ಮಾಯವಾಗಿಲ್ಲ, ಬದಲಾಗಿ ನಿತ್ಯನೂತನವಾಗಿದೆ ಎಂದೆನಿಸಿ ಸಮಾಧಾನವಾಯಿತು. ತನಗೆ ಅವಮಾನ ಮಾಡಿದ ಅವಳ ಮೇಲೆ ಅದುವರೆಗಿದ್ದ ಅಸಮಾಧಾನ ಕ್ಷಣಾರ್ಧದಲ್ಲಿ ಮಾಯವಾಯಿತು. ಪ್ರೊಫೆಸರ್ ಅವರಿಗೆ ಹೃದಯಸ್ಪರ್ಶಿ ಧನ್ಯವಾದಗಳನ್ನರ್ಪಿಸಿ, ಅವರನ್ನು ಅವರ ಮನೆಯಲ್ಲಿ ಬಿಟ್ಟು, ಒಂದು ಬಗೆಯ ಅಲೌಕಿಕ ನೆಮ್ಮದಿಯೊಡನೆ ತನ್ನ ಹೊಸ ಮನೆಯನ್ನು ಸೇರಿದ. ◈




# Partner with us on your IT Projects.
## It will be your best business decision yet.

**A Strategic Focus on Emerging Technologies.**
**A laser-like vision on Customer Satisfaction.**
**An Array of delighted customers in the United States and India**

VentureSoftNet is a superior choice for your IT project engagement and resource needs. With an Integrated Project Management Approach and a global access to cutting-edge technologies and human capital. With thousands of man-years in successful project executions. With a focus on mission critical-consulting and applications. With projects implemented across most industry sectors – health, telecom, banking.

Find out, how we can partner you in:

- Project implementations: Onsite, Offsite, Offshore and Hybrid models
- Professional Staffing and Consulting Services
- Product Development and Support
- Business Process Outsourcing: E-Publishing, Medical Billing

Come, talk to us and we will assure you top-notch Quality, Timely delivery and Cost-Effective Solutions. It will be your best business decision ever

VentureSoftNet

**Building Value. Building Relationships**

Head Office: 3478 Buskirk Avenue, Suite 235, Pleasant Hill,CA 94523
Ph: (925)946-1112 www.venturesoftnet.com
Offices in Delaware, USA; Bangalore, Chennai India



# ವಿಭ್ರಾಂತಿ

**ಅಪರ್ಣಾ ಶಂಕರ್**

ಮೌಂಟನ್ ವ್ಯೂ,ಕ್ಯಾಲಿಫೋರ್ನಿಯ

“ಸರಿ ಹೊರಡು, ಇನ್ನು ಹೊತ್ತಾಗುತ್ತದೆ. ನಾವು ಸಮಯಕ್ಕೆ ಸರಿಯಾಗಿ ಪಾರ್ಟಿ ತಲುಪಬೇಕು. ಮಗುವನ್ನು ಬೇಗ ಕಾರ್‌ಸೀಟಿನಲ್ಲಿ ಕೂಡಿಸು. ಅಪೂರ್ವ, ನಡಿ ಪುಟ್ಟ ನೀನು ಕೂಡ ಕಾರಲ್ಲಿ ಕುಳಿತುಕೊ” ಎಂದು ವಿಕ್ರಂ ಒಂದೇ ಸಮನೆ ಆತುರಿಸುತ್ತಿದ್ದ. ರಾಧ ಮಕ್ಕಳ ಸಾಮಾನುಗಳನ್ನು ತೆಗೆದಿಡುವುದರಲ್ಲಿ ಮಗ್ನಳಾಗಿದ್ದಳು, ಏನಾದರೂ ಮರೆತುಬಿಟ್ಟರೆ ಸಣ್ಣ ಮಗುವಿಗೆ ಕಷ್ಟವಾಗುವುದೆಂದು! ಇದು ಅವರ ಗೆಳೆಯನ ಮಗನ ಹುಟ್ಟು ಹಬ್ಬಕ್ಕೆ ಹೊರಟಿರುವವರ ಸಂಭ್ರಮ. ಅಂತೂ ಮಕ್ಕಳನ್ನು ಕಾರಿನಲ್ಲಿ ಅವರವರ ಜಾಗದಲ್ಲಿ ಕೂಡಿಸಿಕೊಂಡು, ಮನೆಯ ರಸ್ತೆಯಿಂದ ಹೊರಬಂದರು. ಅಪೇಕ್ಷ ತನ್ನ ಆಟಿಕೆಗಳೊಂದಿಗೆ ಆಡಿಕೊಳ್ಳುತ್ತಿತ್ತು. ಅಪೂರ್ವ ತನ್ನ ಕತೆ ಪುಸ್ತಕ ಓದುವುದರಲ್ಲಿ ಮಗ್ನಳಾಗಿದ್ದಳು.

ಸ್ವಲ್ಪ ದೂರ ಹೋಗುವಷ್ಟರಲ್ಲಿ ಆತ, “ನೋಡು ಅದು ಯಾವುದೊ ಒಂದು ಗಾಡಿ, ಸುಮಾರು ಸಮಯದಿಂದಲೂ ನಮ್ಮ ಹಿಂದೆಯೇ ಬರುತ್ತಿದೆ. ” “ಹಾ, ಹೌದಲ್ಲಾ, ಅವನೇ ಯಾರನ್ನಾದರೂ ಕಳುಹಿಸಿರಬಹುದೆ ನಮ್ಮನ್ನು ಹಿಂಬಾಲಿಸಲು? ಅವನಾಗಲೇ ತನ್ನ ಕುತಂತ್ರವನ್ನು ಪ್ರಾರಂಭಿಸಿಬಿಟ್ಟನೇ? ” ಎಂದು ಆಕೆ ಚಿಂತಿಸಲಾರಂಭಿಸಿದಳು. “ಈಗ ಜೈಲಿನಿಂದ ಬಂದಮೇಲೆ ಆತ ಏನು ಹೊಂಚುಹಾಕುತ್ತಿರಬಹುದು? ನಮಗೆ ಮತ್ತೆ ಇನ್ನೇನು ಕಾದಿದೆಯೋ. ನಮ್ಮ ಮಕ್ಕಳಿಗೆ ಬೇರೆ ಇವೆಲ್ಲ ತಿಳಿಯದಂತೆ ನೋಡಿಕೊಳ್ಳಬೇಕು. ಅಪೂರ್ವಳಿಗೆ ಈಗ ಸ್ವಲ್ಪ ತಿಳುವಳಿಕೆ ಹೆಚ್ಚುತ್ತಿರುವ ವಯಸ್ಸು. ಅವಳಿಗೆ ಯಾವುದರ ಬಗ್ಗೆಯೂ ಹೆದರಿಕೆ ಮೂಡದಂತೆ ಕಾಪಾಡಬೇಕು. ಅವನೇನಾದರೂ ಮತ್ತೆ ನಮ್ಮ ಮೇಲೆ ಹಾರಿಬಂದರೆ, ಪೋಲೀಸರನ್ನೇನೋ ಕರೆಯಬಹುದು. ಆದರೆ, ಅದು ನಮಗೇನಾದರೂ ಅಪಾಯ ಸಂಭವಿಸಿದಮೇಲೆ ತಾನೆ. ಈಗ ನಾವು ಬಹಳ ಎಚ್ಚರವಾಗಿರಬೇಕು” ಎಂದು ಯೋಚಿಸುತ್ತಿರುವಾಗಲೇ, “ಅದೋ ಅಲ್ಲಿ ಮುಂದಿರುವ ಕಟ್ಟಡದಲ್ಲೇ ಪಾರ್ಟಿ ಇರುವುದು” ಎಂದು ವಿಕ್ರಂ ಹೇಳಿದ.

“ಅಬ್ಬ! ಸದ್ಯಕ್ಕೆ ಇಲ್ಲಿ ತಲುಪಿದೆವಲ್ಲ, ಇನ್ನು ಜನರ ಮಧ್ಯೆ ಇರುವುದರಿಂದ ಸ್ವಲ್ಪ ನೆಮ್ಮದಿ” ಎಂದುಕೊಂಡು ಆಕೆ

“ನಾವು ಕಾರಿನಿಂದಿಳಿಯುವಾಗ ಯಾರಾದರೂ ಜನರೊಟ್ಟಿಗೆ ಒಳಗೆ ಹೋಗುವುದೊಳ್ಳೆಯದು” ಎಂದು ಹೇಳಿದಳು.

“ನೀನು ಮಕ್ಕಳನ್ನು ಕರೆದುಕೊಂಡು ಒಳಗೆ ಹೋಗು. ಅಲ್ಲಿಯವರೆಗೂ ನಾನು ಇಲ್ಲಿಂದಲೇ ನಿಮ್ಮನ್ನು ಗಮನಿಸುತ್ತೇನೆ. ನಂತರ ನಾನು ಗಾಡಿ ನಿಲ್ಲಿಸಿ ಬರುತ್ತೇನೆ.”

ರಾಧಳಿಗೆ ಈ ಮಾತು ಹಿಡಿಸಿದಂತೆ ಕಾಣಲಿಲ್ಲ. “ಇಲ್ಲ ಹಾಗೆ ಮಾಡುವುದು ಬೇಡ. ಏನಾದರಾಗಲಿ, ನಾನು ನಿಮ್ಮನ್ನು ಒಬ್ಬರನ್ನೇ ಬಿಟ್ಟು ಹೋಗುವುದಿಲ್ಲ” ಆಕೆ ಖಡಾಖಂಡಿತವಾಗಿ ಎಂದಳು.

ಕೊನೆಗೆ ಆದಷ್ಟೂ ಹತ್ತಿರದಲ್ಲಿ ಕಾರು ನಿಲ್ಲಿಸಿ, ಸುತ್ತಮುತ್ತಲೂ ಗಮನಿಸುತ್ತಾ ನಡೆಯತೊಡಗಿದರು. ಇಂತಹ ಒಂದು ದಿನವೇ ತಾನೆ ಆತ ನಮ್ಮೊಂದಿಗೆ ಹಾಗೆ ನಡೆದು ಕೊಂಡದ್ದು! ಅದೇಕೆ ಹಾಗೆ ಮಾಡಿದನೋ? ಅಂದಿನಿಂದ ನಮ್ಮ ಜೀವನದ ರೀತಿ ಬದಲಾಗಿದೆ. ನಮ್ಮದೇನೂ ತಪ್ಪಿರದಿದ್ದರೂ ಕೂಡ ಹೆದರುವಂತಾಗಿದೆ ಎಂದು ಯೋಚಿಸುತ್ತಾ ಹುಟ್ಟುಹಬ್ಬ ನಡೆಯುತ್ತಿದ್ದ ಕೋಣೆಯೊಳಗೆ ನಡೆದರು. ರಾಧ ವಿಕ್ರಂಗೆ ಧೈರ್ಯ ಕೊಡಲು ಪ್ರಯತ್ನಿಸುತ್ತಿದ್ದರೂ ಕೂಡ, ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ಅದೇ ವಿಷಯದ ಬಗ್ಗೆ ಕೊರೆಯುತ್ತಿತ್ತು. ಅಂಥ ದಾರುಣವಾದ ದೃಶ್ಯವನ್ನು ತಾವೇ ಅನುಭವಿಸುವುದು, ಸುಶಿಕ್ಷಿತವಾದ, ಸಂಸ್ಕಾರವಂತರ ಮನೆಯಲ್ಲಿ ಬೆಳದುಬಂದ ಅವರುಗಳಿಗೆ ಜೀರ್ಣಿಸಿಕೊಳ್ಳುವುದು ಕಷ್ಟವಾಗಿತ್ತು.

ಅವನು ತಮ್ಮನ್ನು ಹಿಂಬಾಲಿಸುತ್ತಿರಬಹುದೆಂಬ ಸಂಶಯ ಬಂದ ಅವರುಗಳಿಗೆ, ಪಾರ್ಟಿಯಲ್ಲಿ ಪಾಲ್ಗೊಳ್ಳುವ ಹುಮ್ಮಸ್ಸು ಕುಗ್ಗಿತ್ತು. ಆದರೂ ಸ್ನೇಹಿತರಿಗೆ ತಿಳಿಯಗೊಡದಂತೆ ಮುಖದಮೇಲೆ ನಗುವಿನ ಮುಖವಾಡವನ್ನು ಧರಿಸಿಕೊಂಡರು. ಅಪೇಕ್ಷಳಂತೂ ಅಷ್ಟು ಜನರನ್ನು ಸಂತೋಷ, ಭಯ, ಆಶ್ಚರ್ಯಗಳಿಂದ

ನೋಡುತ್ತಿತ್ತು. ಅಪೂರ್ವ ಆಗಲೇ ತನ್ನ ಗೆಳತಿಯರೊಂದಿಗೆ ಬೆರೆತುಹೋಗಿದ್ದಳು.

"ಕತ್ತಲಾಗುವ ಮುನ್ನ ಹೊರಟು ಬಿಡುವ" ಎಂದು ವಿಕ್ರಂ ಜ್ಞಾಪಿಸಿದ ಕೂಡಲೆ, ಮರುಮಾತಿಲ್ಲದೆ ರಾಧ ಮಕ್ಕಳನ್ನು ಹೊರಡಿಸಿದಳು. ದಾರಿಯಲ್ಲಿ ದಣಿದಿದ್ದ ಮಕ್ಕಳು ನಿದ್ದೆಮಾಡತೊಡಗಿದವು.

ರಾಧ ಯೋಚನಾಲಹರಿಯಲ್ಲಿ ತೇಲಿಹೋದಳು. "ಇನ್ನೆಂದೂ ನಮ್ಮ ಜೀವನ ಮೊದಲಿನಂತಿರಲು ಸಾಧ್ಯವಿಲ್ಲವೇ? ಈ ಪೊಳ್ಳು ಹೆದರಿಕೆಗೆ ಕೊನೆಯಿಲ್ಲವೇ? ಎಲ್ಲರಂತೆ ನಾವು ಆರಾಮವಾಗಿರುವುದು ಇನ್ನೇಕೆ ಸಾಧ್ಯವಿಲ್ಲ? ಅವನು ಆ ರೀತಿ ನಮ್ಮೊಂದಿಗೆ ನಡೆದುಕೊಳ್ಳಲು ಕಾರಣವೇನಿರಬಹುದು? ಇನ್ನು ಮುಂದೆ ಅದೇ ರೀತಿ ನಡೆದುಕೊಳ್ಳುವುದಿಲ್ಲವೆಂದು ಹೇಗೆ ತಿಳಿಯುವುದು?" ಎಂದುಕೊಳ್ಳುತ್ತಾ ಆ ದುರ್ದಿನವನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದಳು.

ಅಂದು ಕೆಲವೇ ಕ್ಷಣಗಳಲ್ಲಿ ಏನೆಲ್ಲಾ ನಡೆದು ಹೋಯಿತು. ಆ ದಿನ ಆಗ ತಾನೆ ಅಪೂರ್ವಳನ್ನು ಅವಳ ಗೆಳತಿಯ ಮನೆಯಲ್ಲಿ ಬಿಟ್ಟು ಅಂಗಡಿಗೆ ಹೊರಟಾಗಲೇ ಆತ ನಮ್ಮ ಮೇಲೆ ಬುದ್ಧಿಭ್ರಮಣನಂತೆ ಹಾರಿಬಂದಿದ್ದ. ಏನೇನೋ ಮಾತನಾಡಲು ಪ್ರಾರಂಭಿಸಿದ. ವಿಕ್ರಂ ತಾಳ್ಮೆಯಿಂದ, ನಿನ್ನೊಂದಿಗೆ ಮಾತಾಡಲು ನಮಗೇನೂ ಇಲ್ಲ ಎಂದು ಮಗುವನ್ನು ಎತ್ತಿಕೊಂಡು ಮುಂದೆ ಹೊರಟರು. ಹಾಗೂ ಆತ ಬಿಡಲಿಲ್ಲ. ನಮ್ಮ ದಾರಿಗೆ ಅಡ್ಡ ಹಾಕಿ ನೀವು ಅದು ಹೇಗೆ ಇಲ್ಲಿಂದ ಹೋಗುವಿರೋ ನೋಡುತ್ತೇನೆ. ನಿಮ್ಮ ಜೀವನವನ್ನು ಹಾಳು ಮಾಡದೆ ಬಿಡುವುದಿಲ್ಲ. ಬೇರೆ ಮನೆಗೆ ಹೋದ ಮಾತ್ರಕ್ಕೆ, ನೀವು ಎಲ್ಲಿರುವಿರೆಂದು ನನಗೆ ತಿಳಿದಿಲ್ಲ ಎಂದುಕೊಳ್ಳಬೇಡಿ. ನಿಮ್ಮ ಮನೆಗೆ ಬಂದು ನಿಮ್ಮ ಸಂಸಾರವನ್ನು ಹಾಳು ಮಾಡುತ್ತೇನೆ ಎಂದು ಹೊಡೆಯಲು ಬರುವಂತೆ ಮೇಲೇರಿ ಬಂದುದನ್ನು ನೆನೆಸಿಕೊಂಡರೆ ಈಗಲೂ ಚಳಿ-ಜ್ವರ ಬಂದಂತಾಗುತ್ತದೆ. ಆಗಲೂ ವಿಕ್ರಂ ತನ್ನ ಕೋಪವನ್ನು ನಿಯಂತ್ರಿಸಿಕೊಂಡು, "ನೀನಿಲ್ಲಿಂದ ಹೊರಡದ ಪಕ್ಷದಲ್ಲಿ, ಪೋಲೀಸರನ್ನು ಕರೆಯಿಸುತ್ತೇನೆ" ಎಂದರೂ ಕೂಡ ಆವನು ಜಗ್ಗದೆ, ಕಾರಿಗೆ ಅಡ್ಡಬಂದು ನಿಂತ. ಅಲ್ಲಿಂದ ಮೆಲ್ಲಗೆ ಕಾರನ್ನು ಹಿಂತೆಗೆದುಕೊಂಡು, ಅವನಿಗೆ ತಿಳಿಯದಂತೆ ಒಂದೇ ಏಟಿಗೆ ಕಾರನ್ನು ಓಡಿಸಿಕೊಂಡು ವಿಕ್ರಂ ಮುಂದೆ ಹೊರಟರು. ಅವನು ಕಾರಿನ ಒಂದು ಚಕ್ರದ ಗಾಳಿಯನ್ನು ತೆಗೆದು ಪಂಕ್ಚರ್ ಮಾಡಿರುವನೆಂದು ಆಗ ತಿಳಿಯಿತು. ತಕ್ಷಣ ಗಾಡಿ ನಿಲ್ಲಿಸಿ ಮೊಬೈಲ್ ಫೋನಿನಿಂದ ಕರೆ ಮಾಡಿ ಪೋಲೀಸರಲ್ಲಿ ದೂರು ಕೊಡಲಾಯಿತು. ಅಬ್ಬಾ! ಇವನೆಂತಹ ನೀಚ ಮನುಷ್ಯನಿರಬೇಕು, ಅವನಿಗೆ ನಮ್ಮ ಕಾರಿನ ಲೈಸನ್ಸ್ ಪ್ಲೇಟ್ ಸಂಖ್ಯೆ ಕೂಡ ತಿಳಿದಿದೆ, ಎಂದು ಯೋಚಿಸುತ್ತಾ ಪೋಲೀಸರಿಗೆ ಕಾದರು. ಅವರು ಬಂದ ನಂತರ, ಅಪೂರ್ವಳ ಗೆಳತಿಯ ಮನೆಗೆ ಕರೆ ಮಾಡಿ, ಬರುವುದು ತಡವಾಗುತ್ತದೆಂದು ತಿಳಿಸಿ, ನಂತರ ಕಾರಿನ ಚಕ್ರ ಬದಲಿಸಿಕೊಂಡು ಅಪೂರ್ವಳನ್ನು ಅವರ ಮನೆಯಿಂದ ಕರೆದುಕೊಂಡು ಹೊರಟು ಮನೆ ತಲುಪಿದರು. ಅಲ್ಲಿಗೆ ಅವರಿಗೆ ಸಾಕು ಸಾಕಾಗಿತ್ತು. ಒಂದೇ ಒಂದು ಸಮಾಧಾನದ ಸಂಗತಿಯೆಂದರೆ, ಆ ಸಮಯದಲ್ಲಿ ಅಪೂರ್ವ ಇಲ್ಲದಿದ್ದುದು.

ವಿಕ್ರಂ ಗಾಡಿ ಓಡಿಸುತ್ತಾ, ಹಳೆಯ ಚಿತ್ರದ ಹಾಡುಗಳನ್ನು ಕೇಳುತ್ತಾ "ರಾಧ, ನಿನಗೂ ನಿದ್ದೆ ಹತ್ತಿತೆ?" ಎಂದು ಕೇಳಿದ. ನಡೆದುದನ್ನೆಲ್ಲಾ ಮೆಲುಕು ಹಾಕುತ್ತಿದ್ದ ರಾಧಳಿಗೆ ಅವನ ಪ್ರಶ್ನೆ ಕೇಳಿಸಲಿಲ್ಲ. ಅವಳ ಯೋಚನಾಲಹರಿ ಮುಂದುವರಿದಿತ್ತು.

ಈ ಮುಂಚೆ ಆತನನ್ನು ಸುಮಾರು ಸಲ ನೋಡಿದ್ದು ಉಂಟು. ಅದೂ ಕೂಡ ಬಹಳ ವರ್ಷಗಳ ಕೆಳಗೆ. ಆಗ ಆತ ಬಹಳ ಸಭ್ಯನಂತೆ ನಡೆದುಕೊಡಿದ್ದ. ಈಗೇಕೆ ಈ ರೀತಿಯಾಗಿ ನಡೆದುಕೊಂಡ? ನೊಂದು ಬಂದ ತಾಯಿಯ ವಯಸ್ಸಿನ ಮಹಿಳೆಗೆ ಮಾನಸಿಕವಾಗಿ ಬೆಂಬಲ ನೀಡಿದ್ದೇ ತಪ್ಪೇ? ಮಗನ ಬೇಜವಾಬ್ದಾರಿತನದಿಂದ ಬೇಸತ್ತು ಅಳುತ್ತ ಮನೆಯ ಬಾಗಿಲಿಗೆ ಬಂದ ಅವನ ತಾಯಿಯ ದುಃಖ ಕಡಿಮೆ ಮಾಡಲು ಹೆಗಲು ಕೊಡಬಾರದಿತ್ತೆ? ಆಕೆಗೆ ಆಸರೆಯಾದ ಜನರಲ್ಲಿ ನಾವೂ ಒಬ್ಬರಾದ ಕಾರಣಕ್ಕೆ, ಹೆತ್ತ ತಾಯಿಯನ್ನು ಕಾಡಿಸಿದ ಆತ ನಮ್ಮ ಮೇಲೆ ಹಾರಿಬರುವುದು ಏನು ನ್ಯಾಯ? ಬರಿದೆ ದುಶ್ಚಟಗಳನ್ನು ಮೈಗೂಡಿಸಿಕೊಂಡು, ಕಟ್ಟಿಕೊಂಡ ಹೆಂಡತಿಯನ್ನೂ ಸರಿಯಾಗಿ ನೋಡಿಕೊಳ್ಳದೆ, ಕೆಟ್ಟ ಗೆಳೆಯರೊಂದಿಗೆ ದಿಕ್ಕುತಪ್ಪಿ ತಿರುಗುತ್ತಿದ್ದ ಮಗನನ್ನು ಯಾವ ತಾಯಿ ತಾನೇ ಕ್ಷಮಿಸಲು ಸಾಧ್ಯ. ತಾಯಿ ಮತ್ತು ಪತ್ನಿಯ ಬುದ್ಧಿವಾದವನ್ನು ಕೇಳಿ, ತನ್ನನ್ನು ತಾನು ತಿದ್ದಿಕೊಳ್ಳಲು ಇಂತಿಷ್ಟೂ ಪ್ರಯತ್ನ ಪಡದ ಆತನಿಂದ ದೂರವಿರಲು ಅವರಿಬ್ಬರೂ ನಿರ್ಧರಿಸಿದ್ದರು. ಕೊನೆಗಾಲದಲ್ಲಿ ಮಗನನ್ನು ಬಿಟ್ಟು ಬೇರೆಯವರ ಸಹಾಯ ಪಡೆಯಲು ಆಕೆ ನಿರ್ಧರಿಸಿದುದಕ್ಕೆ ನಮ್ಮನ್ನು ದೂರಿದರೆ ಏನು ಪ್ರಯೋಜನ. ಬದುಕಿರುವಾಗ ತಾಯಿಯನ್ನು ಸರಿಯಾಗಿ ನೋಡಿಕೊಳ್ಳದೆ, ಈಗ ಬೇರೆಯವರ ನೆರವಿದ್ದುದರಿಂದಲೇ ತನ್ನ ತಾಯಿ ತನ್ನನ್ನು ತೊರೆದು ಹೋದಳು ಎಂದು ತಿಳಿದುಕೊಳ್ಳುವುದು ಎಷ್ಟು ಸರಿ? ಹೀಗೆ ನಮ್ಮ ಮೇಲೆ ಆಕ್ರಮಣ ಮಾಡಿದರೆ ಏನು ಸಾಧಿಸಿದಂತಾಯ್ತು? ತಾಯಿಯನ್ನು ಕಳೆದುಕೊಂಡ ನಂತರವೂ ತನ್ನ ತಪ್ಪನ್ನು ಅರಿತುಕೊಳ್ಳದೆ, ಯಾರಿಗೂ

ಉಪಯೋಗವಿಲ್ಲದ ಜೀವನ ನಡೆಸುವುದನ್ನು ಮೈಹತ್ತಿಸಿಕೊಂಡ ಅವನಿಗೆ ಬುದ್ಧಿಹೇಳುವವರಾರು?

ಅವನು ಮತ್ತೆ ನಮ್ಮೊಂದಿಗೆ ಈ ರೀತಿ ನಡೆದುಕೊಳ್ಳುವುದಿಲ್ಲವೆಂದು ಹೇಗೆ ನೆಮ್ಮದಿಯಿಂದಿರುವುದು? ಈ ಭಯ ನಮ್ಮಿಂದ ಎಂದಿಗೆ ದೂರವಾಗುವುದು? ಯಾವಾಗ ನಾವು ಮುಂಚಿನಂತೆ, ಯಾವ ಭಯವೂ ಇಲ್ಲದೆ ಹೊರಗೆ ಓಡಾಡುವುದು. ಇದಕ್ಕೆಲ್ಲಾ ಕೊನೆಯಿದೆಯೇ? ಎಂದು ರಾಧ ಯೋಚಿಸುತ್ತಿರುವಾಗಲೇ, ಮನೆ ಬಂದಿತ್ತು. ಮಕ್ಕಳನ್ನು ಕರೆದುಕೊಂಡು ಬೇಗ ಮನೆಯೊಳಗೆ ಸೇರಿಕೊಂಡರು.

ಭಯಕ್ಕೆ ಕೊನೆಯೆಲ್ಲಿ. "ಧೈರ್ಯಂ ಸರ್ವತ್ರ ಸಾಧನಂ" ಎನ್ನುವ ಸಾಲನ್ನು ಪ್ರತಿದಿನ ಜ್ಞಾಪಿಸಿಕೊಂಡ ಮಾತ್ರಕ್ಕೆ, ಧೈರ್ಯದಿಂದ ಜೀವನ ಮಾಡಲು ಸಾಧ್ಯವೆ?" ಎಂದು ಯೋಚಿಸುತ್ತ ರಾಧ "ಇವೆಲ್ಲ ಒಂದು ಕೆಟ್ಟ ಕನಸಾಗಿದ್ದರೆ ಎಷ್ಟು ಚೆನ್ನ" ಎಂದು ನಿದ್ದೆಗೆ ಜಾರಿದಳು. ◈


**ಸುಭಾಷಿತ**

ಮೂರ್ಖನಿಗೆ ಶಿಷ್ಯತ್ವ ಪಟ್ಟವನು ಕೊಟ್ಟ
ದುಷ್ಟ ಹೆಂಡತಿಯನ್ನು ಮನೆಯಲ್ಲಿ ಇಟ್ಟ
ಕೆಟ್ಟವರ ಗೆಳೆತನಕೆ ತನ್ನನ್ನೆ ತೆತ್ತ
ಪಂಡಿತನೆ ಆದರೂ ತಾ ದುಃಖತಪ್ತ!

ಬೀದಿಯಲಿ ನಡುಬಗ್ಗಿ ನಡೆದಿದ್ದಳಜ್ಜಿ
ಕೇಳಿದೆನು ಏನಜ್ಜಿ ಹುಡುಕುತಿಹೆ ಬಗ್ಗಿ
ಸಾಗಿ ಬರುತಿದ್ದಾಗ ಕಳೆದುಕೊಂಡಿದ್ದ
ತಾರುಣ್ಯ ಮೌಕ್ತಿಕವ ಹುಡುಕುವೆನು ಪೆದ್ದ

(ಸಂಸ್ಕೃತದಿಂದ ಅನುವಾದ – ರಾಮಚಂದ್ರ ತ್ಯಾಗಲಿ)





# ಕನ್ನಡಿ


**ಡಾ.ಮೈ ಶ್ರೀ ನಟರಾಜ**
ಪೋಟೋಮೆಕ್, ಮೇರಿಲ್ಯಾಂಡ್

''ಉಹ್ಞೂ, ನನ್ನಿಂದ ಇನ್ನು ಅನುಭವಿಸಲು ಸಾಧ್ಯವಿಲ್ಲ. ಈ ದಾಂಪತ್ಯವನ್ನು ಇಂದೇ, ಈ ಕ್ಷಣವೇ, ಕೊನೆಗಾಣಿಸಿಬಿಡಬೇಕು.'' ಪ್ರತಿಮಾ ನಿರ್ಧಾರಕ್ಕೆ ಬಂದಾಗಿತ್ತು. ಹಾಸಿಗೆ ಪಕ್ಕದ ದೀಪವನ್ನು ಹಚ್ಚಿ ಹಾಗೇ ದಿಂಬಿಗೆ ಒರಗಿ ಕುಳಿತಳು. ಗಡಿಯಾರ ಮೂರೂವರೆ ತೋರಿಸುತ್ತಿತ್ತು. ರಾತ್ರಿ ಹನ್ನೊಂದಕ್ಕೇ ಮಲಗಿದ್ದರೂ ಒಂದು ಕ್ಷಣವೂ ಕಣ್ಣುಮುಚ್ಚಿರಲಿಲ್ಲ. ಮಂಚದ ಬದಿಯಲ್ಲಿದ್ದ ಕನ್ನಡಿಯಲ್ಲಿ ತನ್ನ ಮುಖವನ್ನು ಕಂಡು ಪ್ರತಿಮಾಳಿಗೆ ಭಯವಾಯಿತು. ಮಹಾರಾಣೀ ಕಾಲೇಜಿನ 'ಬ್ಯೂಟಿ ಕ್ವೀನ್' ಪ್ರತಿಮಾಳ ಮುಖವೇ ಇದು? ಡ್ರೆಸ್ಸರ್ ಮೇಲಿದ್ದ ತನ್ನ ತಾಯಿಯ ಫೋಟೋ ನೋಡಿದಳು, ತನ್ನ ಪ್ರತಿಬಿಂಬವನ್ನೂ ನೋಡಿದಳು. ಅಮೇರಿಕಾಕ್ಕೆ ಬಂದ ಮೂರೇ ವರ್ಷಗಳಲ್ಲಿ ತನ್ನ ಮುಖ ಮುದಿಯಾದಂತೆ ಕಂಡಿತು. ಕಣ್ಣಿನ ಸುತ್ತಾ ಕರಿಯ ಉಂಗುರ, ಕೆನ್ನೆ ಎಲ್ಲಾ ಗುಳಿಬಿದ್ದಂತೆ ಕಂಡಿತು. ಎರಡೂ ಕೈಗಳಿಂದ ತನ್ನ ತುಂಡು ಕೂದಲನ್ನು ಹಿಂದಕ್ಕೆ ಸವರಿಕೊಂಡಾಗ, ತನಗಿಂತ ಇಪ್ಪತ್ತು ವರ್ಷಕ್ಕೆ ಹಿರಿಯವಳಾದ ತನ್ನ ತಾಯಿಯೇ ತನಗಿಂತ ಎಳೆಯ ಮತ್ತು ಹೆಚ್ಚು ಕಾಂತಿಯಿಂದಕೂಡಿದ ಮುಖದವಳು ಎಂಬ ಮಾತನ್ನು ಸಾರುತ್ತಿದ್ದ ಆ ಕನ್ನಡಿಯಮೇಲೆ ಎಲ್ಲಿಲ್ಲದ ಕೋಪ ಬಂತು. ಆ ಕನ್ನಡಿಯನ್ನು ನಾಶಮಾಡಬೇಕೆಂಬ ನಿರ್ಧಾರದಿಂದ ಕೈಗೆ ಸಿಕ್ಕ ಪದಾರ್ಥವೊಂದನ್ನು ರೊಯ್ಯನೆ ಬೀಸಿ ಎಸೆದಳು. ಫಳ್ ಎಂದು ಸೀಳಿದ ಕನ್ನಡಿಯ ಗಾಜಿನ ಚೂರುಗಳು ಕೊಠಡಿಯ ಸುತ್ತಾ ಹಾರಿದವು. ತನ್ನ ವೈವಾಹಿಕ ಜೀವನದ ಭವಿಷ್ಯವೂ, ತಾನು ಕಂಡಿದ್ದ ಸುಂದರ ಕನಸುಗಳೂ ಆ ಕನ್ನಡಿಯ ಜೊತೆಗೇ ಪುಡಿಯಾಗಿದ್ದವು.

ಪ್ರತಿಮಾ ಎದ್ದು ಬಾತ್‌ರೂಮಿಗೆ ಭೇಟಿಕೊಟ್ಟು, ಮುಖದಮೇಲೆ ಒಂದಿಷ್ಟು ತಣ್ಣೀರೆರಚಿಕೊಂಡಳು. ಆದರೆ, ಉರಿಯುವ ಬೆಂಕಿಯನ್ನು ಉದ್ಧರಣೆ ನೀರಿನಿಂದ ಶಮನ ಮಾಡಿಕೊಳ್ಳಲು ಸಾಧ್ಯವೇ? ಈ ತಕ್ಷಣವೇ ಭಾರತಕ್ಕೆ ಫೋನ್‌ಮಾಡಿ ತನ್ನ ನಿರ್ಧಾರವನ್ನು ಡ್ಯಾಡಿ–ಮಮ್ಮಿಗೆ ತಿಳಿಸಿಬಿಡಬೇಕು. ಇಲ್ಲಿ ಬೆಳಗಿನಝಾವದ ಮೂರೂವರೆ, ಅಂದರೆ, ಬೆಂಗಳೂರಿನಲ್ಲಿ ಮಧ್ಯಾಹ್ನ ಒಂದೂವರೆ ಇರಬೇಕು. ಅಂದರೆ, ಡ್ಯಾಡಿ ಆಫೀಸಿನಲ್ಲಿರುತ್ತಾರೆ. ಮಮ್ಮಿ ಫೋನೆತ್ತುತ್ತಾಳೆ. ಮಮ್ಮಿಯ ಹೃದಯದ ಸ್ಥಿತಿಯನ್ನು ನೆನೆಸಿಕೊಂಡರೆ ಭಯವಾಗುತ್ತೆ. ಈ ಸುದ್ದಿಯ ಆಘಾತದಿಂದ ಅವಳೇನಾದರೋ ಹಾಸಿಗೆ ಹಿಡಿದುಬಿಟ್ಟರೇ? ನಮ್ಮ ಕುಟುಂಬದ ವರ್ತುಲದಲ್ಲಿ, ನನಗೆ ತಿಳಿದಿರುವ ಮಟ್ಟಿಗೆ, ಯಾರೂ ವಿವಾಹ ವಿಚ್ಛೇದನ ಪಡೆದಿಲ್ಲ. ಡ್ಯಾಡಿ ಎಲ್ಲರ ಮುಂದೆ ಹೇಗೆ ತಲೆ ಎತ್ತಿಕೊಂಡು ನಡೆಯುತ್ತಾರೆ?

ಅಯ್ಯೋ, ಅದೆಷ್ಟು ಜನ ತನ್ನನ್ನು ಮದುವೆಯಾಗಲು ಮುಂದೆಬಂದಿದ್ದರು? ಅವರಲ್ಲನೇಕರು ಮೋಹನ್‌ಗಿಂತ ಲಕ್ಷಣವಂತರಾಗಿದ್ದರಲ್ಲ. ಎಲ್ಲರನ್ನೂ ಬಿಟ್ಟು ಮೋಹನನನ್ನೇ ಮದುವೆಯಾಗಲು ತಾನು ಹಟಮಾಡಿದ್ದಾದರೂ ಏಕೆ? ಅವನು ಅಮೇರಿಕಾದಲ್ಲಿ ಓದುತ್ತಿದ್ದಾನೆಂಬ ಒಂದೇ ಕಾರಣದಿಂದ ಅವನನ್ನು ಮದುವೆಯಾಗಬಾರದಿತ್ತು. ನನ್ನನ್ನು ಸಾವಿರಾರು ಮೈಲಿ ಕಳುಹಿಸಲು ಸ್ವಲ್ಪವೂ ಇಷ್ಟವಿಲ್ಲದ ಮಮ್ಮಿ ಎರಡು ದಿನ ಅನ್ನ–ನೀರು ಬಿಟ್ಟು ನಿರಶನ ಆಚರಿಸಿರಲಿಲ್ಲವೇ? ಡ್ಯಾಡಿ ನನ್ನ ಪಕ್ಷ ವಹಿಸದೇ ಇದ್ದಿದ್ದಿದ್ದರೆ ಖಂಡಿತಾ ಈ ಮದುವೆ ಆಗುತ್ತಿರಲಿಲ್ಲ. ಪದವಿಯೋತ್ತರ ಶಿಕ್ಷಣಕ್ಕೆಂದು ನಾನು ಮುಂಬಯಿಗೆ ಹೊರಟಾಗಲೂ ಮಮ್ಮಿ ಹಾಗೇ ನಿರಶನ ಮಾಡಿದ್ದಳು. ''ನಿಮ್ಮ ಮಗಳನ್ನು ನೀವು ಗಂಡು ಮಕ್ಕಳನ್ನು ಸಾಕುವ ಹಾಗೆ ಸಾಕಿದ್ದೀರಿ. ಇವಳು ಮದುವೆ ಮಾಡಿಕೊಂಡು ಮಕ್ಕಳು–ಮರಿಗಳೊಂದಿಗೆ ಸಂಸಾರಮಾಡುವ ಜಾತಿಯವಳಲ್ಲ, ಹೇಗೆ ನಿಭಾಯಿಸುತ್ತೀರೋ ನಾಕಾಣೆ'' ಎಂದು ಭವಿಷ್ಯ ನುಡಿದಿದ್ದಳಲ್ಲ. ಅದಕ್ಕೆ ಡ್ಯಾಡಿ, ''ಅಯ್ಯೋ ಮರುಳೇ, ಇದೇನು ನಿನ್ನ ಕಾಲವೆಂದುಕೊಂಡಿದ್ದೀಯಾ? ಗಂಡುಮಕ್ಕಳಿಗೂ, ಹೆಣ್ಣುಮಕ್ಕಳಿಗೂ ಈ ಕಾಲದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಪ್ರತಿಯೊಬ್ಬರೂ ಸ್ವತಂತ್ರವಾಗಿ, ತಮ್ಮತಮ್ಮ ಕಾಲುಗಳ ಮೇಲೆ ನಿಂತುಕೊಳ್ಳುವುದಕ್ಕೆ ತಯಾರಾಗಿರದಿದ್ದರೆ, ಏನಾದರೋ ಹೆಚ್ಚುಕಮ್ಮಿ ಆದರೆ ಏನು ಗತಿ?'' ಎಂದೆಲ್ಲ ಮುಂತಾಗಿ ತನ್ನ ಪರವಾಗಿ ವಾದಿಸಿ ಮುಂಬಯಿಗೆ ತನ್ನನ್ನು ಕಳಿಸಿಕೊಡಲು ತೀರ್ಮಾನಿಸಿದ್ದರಲ್ಲವೇ? ಹಾಗೆ ನೋಡಿದರೆ, ತಾನು ಬೆಂಗಳೂರಿನಲ್ಲಿದ್ದಾಗ ಅಮೇರಿಕದ ಕನಸು ಕಂಡೇ ಇರಲಿಲ್ಲ. ಮುಂಬಯಿಯಲ್ಲಿ ಓದುತ್ತಿದ್ದಾಗಲೇ ಅಲ್ಲವೇ ಅಮೇರಿಕಾ ಯಾತ್ರೆಯ ಎಲ್ಲಾ ತಯಾರಿಗಳನ್ನೂ ಮಾಡಿಕೊಂಡಿದ್ದು? ಆವಾಗಲೇ ತಾನೇ, ಮಮ್ಮಿ ಮತ್ತೊಮ್ಮೆ ಆಮರಣಾಂತ ಉಪವಾಸ ಹೂಡುವುದಾಗಿ

ಬೆದರಿಕೆ ಹಾಕಿದ್ದು? ‘‘ನೀನು ಖಂಡಿತಾ ಅಮೇರಿಕಾಕ್ಕೆ ಹೋಗಕೂಡದು, ಇನ್ನು ಓದಿದ್ದು ಸಾಕು. ಎಲ್ಲರಹಾಗೇ ಗಂಭೀರವಾಗಿ ಮದುವೆಮಾಡಿಕೊಂಡು ಸಂಸಾರ ಹೂಡಿಕೊಂಡಿರು. ನಿನ್ನ ಗಂಡನಾಗುವವನು ಒಪ್ಪಿದರೆ,



ಇಲ್ಲೇ ಯಾವುದಾದರೂ ಕೆಲಸ ಮಾಡಿಕೋ’’ ಎಂದೆಲ್ಲಾ ಖಡಾಖಂಡಿತವಾಗಿ ತೀರ್ಪಿತ್ತಿದ್ದಳು. ಕೊನೆಗೆ ಡ್ಯಾಡಿಯೂ ಮಮ್ಮಿಯೂ ಒಂದು ಒಪ್ಪಂದಕ್ಕೆ ಬಂದಿದ್ದರು. ಅಮೇರಿಕಾಕ್ಕೆ ಹೋಗುವುದೇ ಆದರೆ, ಖಂಡಿತಾ ಒಬ್ಬಳನ್ನೇ ಕಳಿಸಬಾರದು. ಮದುವೆ ಆದಮೇಲೆ ಅವರವರ ಇಷ್ಟ. ಗಂಡಹೆಂಡಿರು ಇಬ್ಬರೂ ಒಟ್ಟಿಗೆ ಹೋಗುವುದಾದರೆ, ನಮ್ಮದೇನೂ ಅಡ್ಡಿಯಿಲ್ಲ, ಹೀಗೆಂದು ಅಮೇರಿಕದಲ್ಲಿರುವ ಗಂಡುಗಳನ್ನೇ ನೋಡಲು ಪ್ರಾರಂಭಿಸಿದ್ದರು. ಆ ಸಂದರ್ಭದಲ್ಲೇ, ಡ್ಯಾಡಿಯ ದೂರದ ಸಂಬಂಧಿ, ಮೋಹನ್, ಎಂ. ಎಸ್. ಮುಗಿಸಿಕೊಂಡು ಭಾರತಕ್ಕೆ ಹಿಂದಿರುಗಿದ್ದ. ಮುಂದೆ ಪಿಎಚ್‌ಡಿ ಮಾಡಲು ಅಮೇರಿಕಾಕ್ಕೆ ಹಿಂದಿರುಗಬೇಕೆಂದಿದ್ದ ಮೋಹನ್ ಪ್ರತಿಮಾಳನ್ನು ನೋಡುವ ಶಾಸ್ತ್ರ ಮಾಡಿ, ಇದ್ದ ನಾಲ್ಕು ವಾರಗಳಲ್ಲಿ ಮದುವೆಯನ್ನೂ ಮಾಡಿಕೊಂಡೇ ಹಿಂದಿರುಗಬೇಕಾಗಿದ್ದಿದ್ದರಿಂದ ಎಲ್ಲವೂ ಆತುರದಲ್ಲೇ ನಡೆಯಬೇಕಾಯಿತು. ಕಾಲೇಜಿನ ಬ್ಯೂಟಿಕ್ವೀನೊಬ್ಬಳನ್ನು ಮದುವೆಯಾದೆನೆಂಬ ತೃಪ್ತಿ ಮೋಹನನದಾಗಿತ್ತು.

ಪ್ರತಿಮಾ ಮನಸ್ಸಿನಲ್ಲಿ ಆಗಿದ್ದುದು ಒಂದೇ ವಿಚಾರ. ‘‘ಶತಾಯ-ಗತಾಯ, ತಾನು ಅಮೇರಿಕಾಕ್ಕೆ ಹೋಗಲೇ ಬೇಕು, ತನ್ನ ಓದನ್ನು ಮುಂದುವರೆಸಲೇ ಬೇಕು. ಒಬ್ಬಳೇ ಹೋಗುವುದಕ್ಕೆ ಮಮ್ಮಿ ಬಿಡುವುದಿಲ್ಲ, ಮೋಹನನನ್ನು ಮದುವೆ ಆದರೆ, ಅವನ ಜೊತೆ ಹೋಗಲು ಯಾರ

ಅಡ್ಡಿಯೂ ಇರುವುದಿಲ್ಲ.'' ತನ್ನನ್ನು ನೋಡಲು ಬಂದಂದು ಮೋಹನ್ ಕೇಳಿದ್ದ, ''ನೀನು ನನ್ನನ್ನು ಮದುವೆ ಆಗುತ್ತಿರುವುದು ಅಮೇರಿಕಾಕ್ಕೆ ಹೋಗಬೇಕೆಂಬ ಕಾರಣವೊಂದರಿಂದಲೆಯೋ ಅಥವಾ...'' ಥಟ್ಟನೆ ಮಧ್ಯೆ ಬಾಯಿ ಹಾಕಿ, ''ಸುಮ್ಮನೆ ಅಮೇರಿಕಾಕ್ಕೆ ಹೋಗುವುದಕ್ಕಲ್ಲ, ಹೆಚ್ಚಿನ ವ್ಯಾಸಂಗಕ್ಕಾಗಿ'' ಎಂದು ಪ್ರತಿಮಾ ಉತ್ತರ ಕೊಟ್ಟಾಗ, ''ಹಾಗಾದರೆ, ವ್ಯಾಸಂಗ ಮುಗಿದ ಕೂಡಲೆ ಹಿಂದಿರುಗುವೆಯೋ ಅಥವಾ ಅಲ್ಲೇ ನೆಲಸುವ ಉದ್ದೇಶವಿದೆಯೋ'' ಎಂದು ಮೋಹನ್ ಕೇಳಿದ್ದ. ಅದಕ್ಕೆ ಪ್ರತಿಮಾ ಕೊಟ್ಟ ಉತ್ತರ? ''ಆ ವಿಚಾರವನ್ನು ಈಗಲೇ ಏಕೆ ತೀರ್ಮಾನಿಸಬೇಕು? ಮೊದಲು ಓದು ಮುಗಿಯಲಿ, ಆಮೇಲೆ ನೋಡೋಣ'' ಎಂಬ ಜಾಣತನದ ಮಾತು. ಆದರೆ ಮೋಹನ್ ಮಾತ್ರ, ಮದುವೆಯಾದ ಒಂದೆರಡು ವರ್ಷಗಳ ನಂತರ ಭಾರತಕ್ಕೆ ಹಿಂದಿರುಗಿ, ತನ್ನ ತಂದೆಯವರು ಪ್ರಾರಂಭಿಸಿ ಬೆಳೆಸಿದ್ದ ಕೈಗಾರಿಕೆಯಲ್ಲಿ ಸಹಭಾಗಿಯಾಗಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದ್ದ. ಹಾಗೆ ನೋಡಿದರೆ ಈಗ ಗಂಡಹೆಂಡಿರ ನಡುವೆ ಸರಿಪಡಿಸಲಾಗದ ಬಿರುಕನ್ನು ತಂದಿರುವುದು ಇದೇ ವಿಚಾರವೇ.

********

ಎರಡು ವಾರಗಳ ಕೆಳಗೆ, ಮೋಹನ್ ಗಂಟು-ಮೂಟೆ ಕಟ್ಟಿ ಭಾರತಕ್ಕೆ ಹೊರಟಾಗಲೂ, ಕೇವಲ ನಾಲ್ಕು ವಾರಗಳ ರಜೆಯಮೇಲೆ ಹೋಗುತ್ತಿದ್ದಾನೆಂದೇ ನಾನು ಭಾವಿಸಿದ್ದೆನಲ್ಲ. ''ನಾನಿನ್ನು ಈ ದೇಶದಲ್ಲಿ ಇರುವುದಿಲ್ಲ, ನನ್ನೊಡನೆ ಬರುವ ಇಚ್ಛೆಯಿದ್ದರೆ ಗಂಟು ಕಟ್ಟು, ಇಲ್ಲವಾದರೆ, ನೀನೊಬ್ಬಳೇ ಎಲ್ಲಿ ಬೇಕಾದರೂ ಇರು'' ಎಂದು ಅವನು ಹೇಳಿದಾಗಲೂ ಮೋಹನನ ಮಾತನ್ನು ನಾನು ನಂಬಲೇ ಇಲ್ಲವಲ್ಲ. ಬೆಂಗಳೂರು ತಲುಪಿದವನೇ ಫೋನ್ ಕೂಡ ಮಾಡಲಿಲ್ಲ. ''ಬರುವುದಾದರೆ ಈ ಕಾಗದ ತಲುಪಿದ ಎರಡು ವಾರಗಳೊಳಗೇ ಹಿಂದಿರುಗಿ ಬಾ, ಇಲ್ಲವಾದರೆ ನಮ್ಮಿಬ್ಬರ ಸಂಬಂಧ ತುಂಡಾದಂತೆಯೇ'' ಎಂದು ಕಡ್ಡಿ ತುಂಡುಮಾಡಿದಹಾಗೆ ಬರೆದಿದ್ದಾನಲ್ಲ. ಹಾಗಾದರೆ, ಈ ಮೂರು ವರ್ಷಗಳಲ್ಲಿ, ನನ್ನ ಬಗ್ಗೆ ಮೋಹನನಿಗೆ ಅರ್ಥಪೂರ್ಣವಾದ ಯಾವ ಸಂಬಂಧವೂ ಬೆಳೆಯಲಿಲ್ಲವೇ? ಅಥವಾ, ನಾನು ಅವನೊಂದಿಗೆ ಸ್ಪರ್ಧೆಗೆ ಇಳಿದಿದ್ದೇನೆಂದು ಹೆದರಿಬಿಟ್ಟನೇ? ಇಲ್ಲವಾದರೆ, ನನಗೆ ಐ.ಬಿ.ಎಂ ಕಂಪನಿಯಲ್ಲಿ ಮ್ಯಾನೇಜರ್ ಕೆಲಸ ಸಿಕ್ಕೊಡನೆಯೇ ಅವನು ಭಾರತಕ್ಕೆ ಹಿಂದಿರುಗುವ ನಿರ್ಧಾರವನ್ನು ಇದ್ದಕ್ಕಿದ್ದಂತೆ ಏಕೆ ಕೈಗೊಂಡ? ಬೆಂಗಳೂರಿನಲ್ಲಾದರೆ, ಅವನು ತನ್ನ ತಂದೆ-ತಾಯಿಯರನ್ನು ಕವಚವಾಗಿಟ್ಟುಕೊಂಡು ನನ್ನನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು ಎಂಬ ಕನಸು ಕಾಣುತ್ತಿದ್ದನೋ? ಅತ್ತೆ-ಮಾವಂದಿರ ಸೇವೆ ಮಾಡಿಕೊಂಡು ಮನೆಯಲ್ಲಿ ಬಿದ್ದಿರುವ 'ಸಾವಿತ್ರಿ' ನಾನು ಎಂಬ ಭ್ರಮೆಯಲ್ಲಿದ್ದಾನೋ ಹೇಗೆ?

********

''ಅಯ್ಯೋ, ನಾನು ಮದುವೆ ಮಾಡಿಕೊಂಡಿದ್ದೇ ದೊಡ್ಡ ತಪ್ಪು. ನನ್ನಂತಹ ಸ್ವಾತಂತ್ರ್ಯಪ್ರಿಯ ಹೆಣ್ಣುಗಳು ಮದುವೆಯಾಗಬಾರದು. ನನಗೂ ಸುಖವಿಲ್ಲ, ನನ್ನನ್ನು ಮೆಚ್ಚಿ ಮದುವೆಯಾದ ಮೋಹನನಿಗೂ ಸುಖವಿಲ್ಲ. ನಮ್ಮಿಬ್ಬರ ತಂದೆತಾಯಿಗಳಿಗೂ ಸುಖವಿಲ್ಲ.... ''. ಹೀಗೆ ಸಾಗಿತ್ತು ಪ್ರತಿಮಾಳ ಚಿಂತೆಯ ಅಲೆಗಳು. ಇಡೀ ರಾತ್ರಿ ನಿದ್ದೆ ಮಾಡಿರಲಿಲ್ಲ. ತಲೆ ಸಿಡಿದು ಹೋಗುತ್ತಿತ್ತು. ಬೆಳಗಾಗೆದ್ದು, ವಿಚ್ಛೇದನಕ್ಕೆ ಸಂಬಂಧ ಪಟ್ಟ ಕಾಗದ-ಪತ್ರಗಳಿಗೆ ಸಹಿ ಹಾಕಲು ವಕೀಲನನ್ನು ಬೇರೆ ಭೇಟಿಮಾಡಬೇಕಾಗಿದೆ. ನಾನು ಆತುರ ಮಾಡುತ್ತಿದ್ದೀನಾ? ತಂದೆತಾಯಿಗಳನ್ನು ಒಂದು ಮಾತೂ ಕೇಳದೇ, ಇಂಥಾ ಗಂಭೀರವಾದ ನಿರ್ಧಾರಕ್ಕೆ ನಾನು ಬರಬಹುದೇ? ಒಂದೇ ಒಂದು ಮಾತು ಡ್ಯಾಡಿಯನ್ನು ಕೇಳಿಬಿಟ್ಟರೆ ಹೇಗೆ? ಆದರೆ, ಡ್ಯಾಡಿ, ಮಮ್ಮಿಗೆ ತಿಳಿಸದೇ ಇರಲು ಸಾಧ್ಯವಿಲ್ಲ. ತಿಳಿಸಿದರೆ, ಮನೆಯಲ್ಲಿ ನಡೆಯುವ ರಂಪ-ರಾದ್ಧಾಂತವನ್ನು ಊಹಿಸಿಕೊಳ್ಳುವುದು ಕಷ್ಟವೇನಿಲ್ಲ. ಅಯ್ಯೋ ಡ್ಯಾಡಿ, ನನ್ನ ಬಗ್ಗೆ ಎಷ್ಟು ಹೆಮ್ಮೆ ಪಟ್ಟುಕೊಳ್ಳುತ್ತಿದ್ದಿರಿ? ಕಂಡಕಂಡವರಿಗೆಲ್ಲ, ನನ್ನನ್ನು ಪರಿಚಯಿಸುವಾಗ, 'ಮೀಟ್ ಮೈ ಸ್ಮಾರ್ಟ್ ಗರ್ಲ್' ಎಂದೇ ಪ್ರಾರಂಭಿಸುತ್ತಿದ್ದಿರಿ. 'ಇಡೀ ಕಾಲೇಜಿಗೇ ಮೊದಲಿಗಳು,' 'ಇಡೀ ಯೂನಿವರ್ಸಿಟಿಯಲ್ಲಿ ಆಯ್ಕೆಯಾದ ಮೂವರಲ್ಲಿ ಇವಳೂ ಒಬ್ಬಳು,' ಒಂದೇ, ಎರಡೇ, ನನ್ನ ಸಾಧನೆಗಳ ಗುಣಗಾನ? ಕೊನೆಕೊನೆಗಂತೂ, ಅಮ್ಮನಿಗೆ ಖಾಯಿಲೆ ಎನ್ನುವ ನೆಪದಿಂದ, ಎಲ್ಲಾ ಪಾರ್ಟಿಗಳಿಗೂ, ಕ್ಲಬ್ಬಿಗೂ ನನ್ನನ್ನೇ ಕರೆದೊಯ್ಯುತ್ತಿದ್ದಿರಿ. (ಅಮ್ಮನಿಗೆ ಇಂಗ್ಲಿಷ್ ಸರಿಯಾಗಿ ಬರುತ್ತಿರಲಿಲ್ಲವೆಂಬ ಕಾರಣವೂ ಸೇರಿದ್ದಿರಬಹುದೇ?) ಈಗ ನಾನು ಭಾರತಕ್ಕೆ ಹಿಂದಿರುಗಿದರೆ, ಕ್ಲಬ್ಬಿಗೆ ನಿಮ್ಮ ಜೊತೆ ಬಂದರೆ, ನನ್ನ ಪರಿಚಯ ಮಾಡಿಕೊಡುವಾಗ ಏನೆನ್ನುತ್ತೀರಿ ಡ್ಯಾಡಿ? 'ಇದೋ, ಇವಳೇ ನೋಡಿ ನನ್ನ ಸ್ಮಾರ್ಟ್ ಗರ್ಲ್, ಗಂಡನಿಗೆ ಸೋಡ್-ಚೀಟಿ ಕೊಟ್ಟವಳು' ಎಂದು ಜೋಕ್ ಮಾಡಿ ಕಣ್‌ಹೊಡೆದು ಗಹಗಹಿಸಿ ನಕ್ಕುಬಿಡುತ್ತೀರಾ ಡ್ಯಾಡಿ? ಅಯ್ಯೋ ದೇವರೇ, ನಾನು ಯಾರಿಗಾದರೂ ಮುಖತೋರಿಸಬಲ್ಲೆ, ಆದರೆ, ಡ್ಯಾಡಿ, ನಿಮ್ಮ ಮುಂದೆ

ಮಾತ್ರ ತಲೆ ಎತ್ತಿ ನಿಲ್ಲಲಾರೆ, ಐ ಹ್ಯಾವ್ ಲೆಟ್ ಯು ಡೌನ್..... ಹಾಳಾಗಿಹೋಗಲಿ, ಮೋಹನನೇ ಗೆಲ್ಲಲಿ, ಎರಡು ವಾರಗಳೊಳಗೇ ಹೊರಟುಹೋಗುತ್ತೇನೆ. ಡ್ಯಾಡೀ, ನಿಮಗೋಸ್ಕರವಾದರೂ ರಾಜಿ ಮಾಡಿಕೊಳ್ಳುತ್ತೇನೆ. ಹೀಗೇ ಯೋಚನೆಯ ಧಾಟಿ ಸಾಗುವಾಗ ಪ್ರತಿಮಾಳಿಗೆ ನಿದ್ದೆ ಯಾವಾಗ ಬಂತೋ ತಿಳಿಯಲಿಲ್ಲ.

********

ಗಡಿಯಾರ ಅಲಾರಂ ಬಡಿದುಕೊಳ್ಳುತ್ತಿದ್ದಾಗ, ಅದನ್ನು ಅವುಕಿ ನಿಲ್ಲಿಸಲು ಸುತ್ತಲೂ ಕೈ ಆಡಿಸಿದರೆ, ಅದು ಇರಬೇಕಾದ ಸ್ಥಳದಲ್ಲಿ ಇರಲಿಲ್ಲ. ಶಬ್ಧ ಬಂದಕಡೆಯನ್ನು ಹುಡುಕಿ ಅದರತ್ತ ಹೆಜ್ಜೆ ಇಟ್ಟಾಗ, ಎಲ್ಲೆಲ್ಲೂ ಗಾಜು, ಗಡಿಯಾರದ ಗಾಜೂ ಒಡೆದಿದೆ, ಕನ್ನಡಿಯಡಿ ಡ್ರೆಸ್ಸರ್ ಮೇಲೆ ಹೊಡೆದುಕೊಳ್ಳುತ್ತಾ ಬಿದ್ದುಕೊಂಡಿದೆ. ಈಗ ಪ್ರತಿಮಾಳಿಗೆ ನೆನಪಾಯಿತು, ಕನ್ನಡಿಯನ್ನು ಚೂರುಮಾಡಿದ ವಸ್ತು, ಅವಳು ಬೀಸಿ ಎಸೆದ ಗಡಿಯಾರವೇ! ರಾತ್ರಿಯೆಲ್ಲಾ ನಿದ್ರಿಸದೇ ಬೆಳಗಿನಝಾವ ಏಳುವುದು ಕಷ್ಟದ ಕೆಲಸ. ತಲೆಯೆಲ್ಲ ಸಿಡಿಯುತ್ತಿದೆ. ಇವತ್ತು ಕೆಲಸಕ್ಕೆ ಹೋಗದಿದ್ದರೆ ಹೇಗೆ? ಸಿಕ್ ಲೀವ್ ಹಾಕಿಬಿಟ್ಟರಾಯಿತು. ಹೀಗೆಲ್ಲ ಯೋಚಿಸುತ್ತಿರುವಾಗಲೇ, "ಈಗ ತಾನೆ ಮ್ಯಾನೇಜರ್ ಕೆಲಸ ಸಿಕ್ಕಿದೆ, ಹೀಗೆಲ್ಲಾ ಬೇಜವಾಬ್ದಾರಿ ಮಾಡಿದರೆ ಬಾಸ್ ಏನೆಂದುಕೊಂಡಾರು? ಹೆಂಗಸಾದರೂ, ಪರದೇಶದವಳಾದರೂ, ನನಗೆ ಈ ಕೆಲಸ ದೊರಕಿದೆ. ಅದನ್ನು ಕಳೆದುಕೊಳ್ಳುವುದು ಶುದ್ಧ ಮೂರ್ಖತನ. ಇತ್ತ ಗಂಡನನ್ನೂ ಕಳೆದುಕೊಳ್ಳುತ್ತೇನೆ, ಅತ್ತ ಕೆಲಸವೂ ಹೋಗಿಬಿಟ್ಟರೆ ಏನು ಗತಿ? ವ್ಯೆಯಕ್ತಿಕ ಸಮಸ್ಯೆಗಳು ನನ್ನ ಕೆಲಸಕ್ಕೆ ಅಡ್ಡಿ ಬಾರದಂತೆ ನೋಡಿಕೊಳ್ಳದಿದ್ದರೆ, ಮುಂದಿನ ಒಂದೆರಡು ವರ್ಷಗಳು ನನಗೆ ನರಕವಾಗುವುದರಲ್ಲಿ ಸಂದೇಹವಿಲ್ಲ. ಹಾಗೆ ನೋಡಿದರೆ, ನನ್ನ ಆಫೀಸಿನಲ್ಲಿ ನನ್ನೊಂದಿಗೆ ಸ್ಪರ್ಧಿಸುವ ಅನೇಕರು, ಇಲ್ಲ ಅವಿವಾಹಿತರು ಅಥವಾ ವಿಚ್ಛೇದನ ಪಡೆದವರು. ಅವರೆಲ್ಲಾ ಎಂತೆಂಥಾ ತೊಂದರೆಗಳ ನಡುವೆ ಏನೇನೂ ಆಗೇ ಇಲ್ಲ ಎನ್ನುವಹಾಗೆ ಮುಖವಾಡ ಹಾಕಿಕೊಂಡು ಹಗಲೂ ರಾತ್ರಿ ಆಫೀಸಿನಲ್ಲಿ ಕೊಳೆಯುತ್ತಾ ಬಿದ್ದಿರುವುದನ್ನು ನಾನು ಕಂಡಿಲ್ಲವೇ? ಒಟ್ಟಿನಲ್ಲಿ, ಇದು ನನ್ನ ಜೀವನದ ಪ್ರಶ್ನೆ. ನಾನು ಇನ್ನುಮೇಲೆ, ಡ್ಯಾಡಿ, ಮಮ್ಮಿ, ಮೋಹನ್ ಇವರಾರ ದೃಷ್ಟಿಯಿಂದಲೂ ಯೋಚಿಸಬಾರದು."

ಆದರೆ, ನನ್ನ ಮುಗ್ಧ ತಂಗಿ ಪ್ರಿಯಾ? ಹೌದು, ನಾನು ಒಮ್ಮೆಯೂ ಪ್ರಿಯಾಳ ಬಗ್ಗೆ ಯೋಚಿಸಿಯೇ ಇಲ್ಲ. ನಾನು ಮಾಡ ಹೊರಟಿರುವ ಈ ಕೆಲಸದಿಂದ ಅವಳ ಭವಿಷ್ಯದಮೇಲೆ ಏನು ಪರಿಣಾಮ ಆಗಬಹುದು? ಮೊದಲೇ, ಪ್ರಿಯಾ ನನ್ನ ಹಾಗೆ ಕೆರಿಯರ್ ಓರಿಯಂಟೆಡ್ ಅಲ್ಲ. ಆದ್ದರಿಂದ ಒಳ್ಳೆಯ ಕಡೆ ಅವಳ ಮದುವೆ ಆಗುವುದು ಬಹಳ ಮುಖ್ಯ. ನಾನೂ ಅವಳೂ ಶುದ್ಧ ವಿರುದ್ಧ ವ್ಯಕ್ತಿಗಳು. ನಾನು ಡ್ಯಾಡಿಯ ಹೆಮ್ಮೆಯ ಸ್ಮಾರ್ಟ್ ಗರ್ಲ್, ಅವಳು ಮಮ್ಮಿಯ ಮುದ್ದಿನ ಕ್ಯೂಟ್ ಗರ್ಲ್. ಮದುವೆ ಮಾಡಿಕೊಂಡು, ಮಕ್ಕಳನ್ನು ಹೆತ್ತು, ಮನೆಯಲ್ಲಿ 'ಯಜಮಾನರಿಗೆ' ಮಜ್ಜಿಗೆಹುಳಿ ಮಾಡಿ ಬಡಿಸುವುದೇ ಸ್ವರ್ಗವೆಂದು ಬಗೆದ ಗುಗ್ಗು ಅವಳು. ನನ್ನ ಕಾರಣದಿಂದಾಗಿ, ಅವಳನ್ನು ಮದುವೆಯಾಗಲು ಯಾರೂ ಮುಂದೆ ಬಾರದಿದ್ದರೆ? ನಾನು ಬೆಂಗಳೂರಿಗೆ ಫೋನ್ ಮಾಡಿದರೆ, ಡ್ಯಾಡಿ-ಮಮ್ಮಿ ಇಬ್ಬರೂ ಪ್ರಿಯಾಳ ಕಾರಣವನ್ನೇ ಕೊಟ್ಟು ನನ್ನನ್ನು ಕಟ್ಟಿಹಾಕಲು ಯತ್ನಿಸಿಯೇ ಯತ್ನಿಸುತ್ತಾರೆ. ಅಂದಮೇಲೆ, ನಾನು ಯಾರಿಗೂ ತಿಳಿಸದೇ ಲಾಯರ್ ನೋಟೀಸ್ ಕೊಡಿಸುವುದೇ ಸರಿಯಾದ ಮಾರ್ಗ ಎಂದುಕೊಂಡು ತಾನು ಈಗಾಗಲೇ ಮಾಡಿದ್ದ ನಿರ್ಧಾರವನ್ನು ಮತ್ತಷ್ಟು ಬಲಪಡಿಸಿಕೊಂಡಳು.

********

ಅವಳ ಮನಸ್ಸು ಈಗ ಕಲ್ಲಾಗಿತ್ತು. ಅವಳು ಎದ್ದು ನಿಂತಳು. ಮುಖವೊಡೆದ ಗಡಿಯಾರವನ್ನು ಮೊದಲು ಮೇಲೆತ್ತಿ ಪರೀಕ್ಷಿಸಿದಳು. ಗಾಜು ಒಡೆದಿದ್ದರೂ ಮುಳ್ಳು ನಡೆಯುತ್ತಲೇ ಇತ್ತು. ಕಾಲಿಗೆ ಸಿಕ್ಕುತ್ತಿದ್ದ ಗಾಜಿನ ಚೂರುಗಳಲ್ಲಿ ಕೆಲವು ದೊಡ್ಡ ಚೂರುಗಳನ್ನು ಅವುಗಳ ಸ್ವಸ್ಥಾನಗಳಲ್ಲಿ ಜೋಡಿಸಲು ಯತ್ನಿಸಿದಳು. ಹತ್ತಾರು ಸಣ್ಣ-ಪುಟ್ಟ ಚೂರುಗಳು ಕೈಗೆ ಸಿಕ್ಕದಾದವು, ಇನ್ನು ಕೆಲವು ಯಾವಸ್ಥಳಕ್ಕೆ ಸೇರಬೇಕೋ ತಿಳಿಯದೇ, ಜಿಗ್-ಸಾ-ಪಜ಼ಲ್ ಕೂಡಿಸುವಾಗ ಮುಂಗಾಣದೇ ಪರದಾಡುವ ಪುಟ್ಟ ಬಾಲಕಿಯಂತೆ ಒಡೆದ ಕನ್ನಡಿಯಲ್ಲಿ ತನ್ನ ವಿಕೃತರೂಪವನ್ನು ನೋಡಿಕೊಂಡಾಗ, ಎಷ್ಟು ಯತ್ನಿಸಿದರೂ ಚೀರದೇ ಇರಲು ಸಾಧ್ಯವಾಗದೇ, ಹಾಸಿಗೆಯಮೇಲೆ ಕುಳಿತು ಒಂದೆರಡು ನಿಮಿಷಗಳು ಮನಸಾರೆ ಅತ್ತು ಮನಸ್ಸನ್ನು ಹಗುರ ಮಾಡಿಕೊಳ್ಳಲು ಯತ್ನಪಟ್ಟಳು. ಇನ್ನು ಈ ಒಡೆದ ಗಾಜನ್ನು ಜೋಡಿಸುವುದರಲ್ಲಿ ಅರ್ಥವಿಲ್ಲವೆಂಬುದು ಅವಳ ಮನಸ್ಸಿಗೆ ಖಾತ್ರಿಯಾದಮೇಲೆ, ಇನ್ನು ಮರುಗಿ ಪ್ರಯೋಜನವಿಲ್ಲವೆಂದು ಮನ್ನಸ್ಸನ್ನು ಗಟ್ಟಿ ಮಾಡಿಕೊಂಡು ಹಲ್ಲುಜ್ಜಲು ಹೊರಟಳು.

********

ಕೆಲಸಕ್ಕೆ ಹೋಗುವಾಗ ಪ್ರತಿಮಾ ಯಾಂತ್ರಿಕವಾಗಿ ಕಾರು ನಡೆಸುತ್ತಿದ್ದಳು. ಇನ್ನೊಂದು ಬಾರಿ ಮೋಹನನೊಂದಿಗೆ ಮುಖತಃ ಮಾತನಾಡುವ ಅವಕಾಶ ಸಿಕ್ಕರೆ, ತಾನು ಅವನ

ಮನಸ್ಸನ್ನು ಬದಲಾಯಿಸಬಲ್ಲೆನೆಂಬ ಧೈರ್ಯ ಅವಳಿಗಿತ್ತು. ನಾನೇಕೆ ಅವನನ್ನು ಹೋಗಲು ಬಿಟ್ಟೆ? ಅವನಿಗೆ ಸ್ವಂತ ಬುದ್ಧಿ ಕಡಿಮೆ. ಅವರಮ್ಮನ ಸೆರಗಿನ ಹಿಂದೆ ಸೇರಿಬಿಟ್ಟರಂತೂ ಮಂಕು ಹಿಡಿದವನಂತೆ ಆಗಿಬಿಡುತ್ತಾನೆ. ಈ ಮೂರು ವರ್ಷಗಳಲ್ಲಿ ನಾನು ನನ್ನ ಮಮ್ಮಿಯನ್ನು ನೆನೆಸಿಕೊಂಡು ಮೂರುಸಾರಿ ಅತ್ತಿರಬಹುದು. ಅವನು? ದಿನಕ್ಕೆ ಮೂರು ಸಾರಿ ಅಮ್ಮನನ್ನು ನೆನೆಸಿಕೊಳ್ಳುವ 'ಮಾಮಾಸ್ ಬಾಯ್'. ನಮ್ಮ ಈ ವಿರಸ ದಾಂಪತ್ಯದಲ್ಲಿ ಅವನೇ ಹೆಣ್ಣು, ನಾನೇ ಗಂಡು. ಅದರಿಂದಲೇ ಹೆದರಿ ಓಡಿ ಹೋದನೇ? ರಸ್ತೆಗಳು ಕೂಡುವ ಸ್ಥಳದಲ್ಲಿ ಸಿಗ್ನಲ್ಲಿಗಾಗಿ ಕಾಯುತ್ತಿದ್ದಾಗ ದೀಪ ಹಸಿರುಬಣ್ಣಕ್ಕೆ ತಿರುಗಿದರೂ ಇವಳು ಆಳವಾದ ಚಿಂತನೆಯಲ್ಲಿ ತೊಡಗಿ ಚಲಿಸದೇ ನಿಂತೇ ಇದ್ದಳು. ಹಿಂದಿನ ಚಾಲಕರೆಲ್ಲಾ ಒಂದೇ ಸಮನೆ ಪಾಂ-ಪಾಂ ಮಾಡಿದಾಗ ಪ್ರತಿಮಾ ಘಾಬರಿಯಿಂದ ಗ್ಯಾಸ್ ಒತ್ತಿದಳು.

ಏಕೆ ಹೀಗಾಯಿತು? ವೈ ಮಿ? ಇಂಥಾ ಹೊಂದಾಣಿಕೆಯಿಲ್ಲದ ವಿವಾಹಕ್ಕೆ ನಾನೇ ಏಕೆ ತುತ್ತಾಗಬೇಕಿತ್ತು? ಮದುವೆ ಆದ ಹೊಸದರಲ್ಲಿ ಅಮೇರಿಕಕ್ಕೆ ಹೋಗುವುದೇ ಬೇಡವೆಂದು ಮೋಹನ್ ಸೂಚನೆಯಿತ್ತಾಗ, ನನಗೆ ಸಿಡಿಲೇ ಬಡಿದಂತಾಗಿತ್ತು, ನಿಜ. ಆದರೆ, ಆಗ, ಅವನ ಮಾತಿಗೆ ನಾನು ಹೇಗಾದರೂ ಒಪ್ಪಿಬಿಟ್ಟಿದ್ದಿದ್ದರೆ? ಮಮ್ಮಿ, ಮೋಹನ್ ಇಬ್ಬರೂ ಸುಖವಾಗಿರುತ್ತಿದ್ದರಲ್ಲವೇ? ಅಪ್ಪನಿಗೂ ಮನಶ್ಶಾಂತಿ ಇರುತ್ತಿತ್ತು. ಪ್ರಿಯಾಳಿಗೂ ಒಳ್ಳೇ ಕಡೆ ಮದುವೆ ಆಗಿಬಿಡುತ್ತಿತ್ತು. ಎಲ್ಲ ಸರಿ, ಆದರೆ, ನಾನು? ನಾನು ಸುಖವಾಗಿರುತ್ತಿದ್ದೆನೇ? ಖಂಡಿತಾ ಇಲ್ಲ. ನನ್ನಂತಹವಳು ಹುಟ್ಟುವುದೇ ಅಮೇರಿಕಾಕ್ಕೆ ಬರುವುದಕ್ಕಾಗಿ ಎಂಬ ನಂಬಿಕೆ ನನಗೆ ಮುಂಬಯಿನಲ್ಲಿದ್ದಾಗಲೇ ಬೆಳೆದುಬಿಟ್ಟಿತ್ತು. ಎಂತೆಂಥಾ ಹಳ್ಳಿ ಗುಗ್ಗುಗಳೆಲ್ಲಾ ಅಮೇರಿಕಾಕ್ಕೆ ಬಂದಿರುವುದನ್ನು ನೋಡಿದರೆ, ನನ್ನ ಹೊಟ್ಟೆ ಉರಿದುಹೋಗುತ್ತದೆ. ಕಾಲೇಜು ಸಹ ಓದದವರು, ನೋಡಲು ಗೂಬೆಗಳಂತಿರುವವರು, ಎಲ್ಲರೂ ಕೇವಲ ಗಂಡಂದಿರ ಕಾರಣದಿಂದ ಇಲ್ಲಿ ಬಂದು ಮೋಜು ಮಾಡುತ್ತಾರೆ, ದರ್ಪ ತೋರುತ್ತಾರೆ. ನಾನೆಂಥ ನತದೃಷ್ಟೆ, ಸ್ವಂತ ಶಕ್ತಿಯಿಂದ ಇಲ್ಲಿಗೆ ಬಂದರೂ ಗಂಡನ ಕಾರಣದಿಂದ ಹಿಂದಿರುಗುವ ದುರ್ಗತಿ ನನಗೇಕೆ ಬರಬೇಕು? ಮೋಹನ್ ಹೋದರೆ ಹೋಗಲಿ, ಬೇರೆ ಯಾರಾದರೂ ಕಾಲಿಗೆ ಬಿದ್ದು ನನ್ನನ್ನು ಮದುವೆಯಾಗಲು ಮುಂದೆ ಬರುತ್ತಾರೆ. ನಾನು ಏತರಲ್ಲಿ ಕಮ್ಮಿ? ವಿದ್ಯೆಯೇ, ರೂಪವೇ, ಸಂಬಳವೇ, ಅಥವಾ ಧೈರ್ಯವೇ? ನಾನು ಯಾವ ಕಾರಣಕ್ಕಾಗಿ ರಾಜಿ ಮಾಡಿಕೊಳ್ಳಬೇಕು? ನಾನು ಒಬ್ಬಳೇ ಇರುವುದಕ್ಕೆ ಹೆದರಿ ಅವನ ಹಿಂದೆ ಓಡುತ್ತೇನೆಂದುಕೊಂಡನೋ? ನಾನು ಮುಂಬೈನಲ್ಲಿ ಒಬ್ಬಳೇ ಇರಲಿಲ್ಲವೇ? ಹಾಗೆ ನೋಡಿದರೆ, ಅವನಿಗೇ ಒಬ್ಬನೇ ಇರುವುದು ಸಾಧ್ಯವಿಲ್ಲ. ಅವನಿಗೆ ಬೇಕಿರುವುದು ಹೆಂಡತಿಯಲ್ಲ, ತಾಯಿ. ಸಾಯುವ ತನಕ ತಾಯಿಯ ತೊಡೆಯಮೇಲೆ ಮಲಗಿ ಬೆರಳು ಚೀಪುವ ಆ ಬೇಬಿಯೊಂದಿಗೆ ನಾನು ಇಷ್ಟು ದಿವಸ ಅನುಭವಿಸಿದ್ದೇ ಸಾಕು. ಹೋಗಲಿ, ಯಾರು ಬೇಡವೆನ್ನುತ್ತಾರೆ? ಆ ಕೊಂಪೆಯಲ್ಲೇ ಕೊಳೆಯಲಿ. ಗೊಜ್ಜು-ಮಜ್ಜಿಗೆಹುಳಿ ಮಾಡಲು ಬರುವ ಗೊಡ್ಡಿಯೊಬ್ಬಳನ್ನು ಹುಡುಕಿ ಕಟ್ಟಿಕೊಳ್ಳಲಿ, ಹೀಗೆ ಮನಸ್ಸಿನಲ್ಲೇ ವಾಗ್ಯುದ್ಧ ನಡೆಸುತ್ತಿರುವಾಗಲೇ, ಅವಳಿಗೇ ಅರಿವಿಲ್ಲದಂತೆ, ಐ.ಬಿ.ಎಂ ಕಟ್ಟಡದ ಪಾರ್ಕಿಂಗ್ ಲಾಟಿನಲ್ಲಿ ಅವಳ ಸ್ವಸ್ಥಾನದಲ್ಲಿ ಅವಳ ಕಾರು ಬಂದು ನಿಂತಿತ್ತು.

********

ಯಾವುದೋ ವೈಯಕ್ತಿಕ ಕೆಲಸವಿರುವುದಾಗಿ ಬಾಸ್‌ಗೆ ತಿಳಿಸಿ, ಪ್ರತಿಮಾ ಸೀದಾ ಲಾಯರ್ ಆಫೀಸಿನತ್ತ ಬಂದಳು. ಅಟಾರ್ನಿ ವಿಲ್ಸನ್ ಪ್ರತಿಮಾಳ ಕೈಕುಲುಕಿ ಅವಳನ್ನು ಕೂರಲು ಹೇಳಿದ. ಪೂರ್ವಭಾವಿಯಾಗಿ ಫೋನಿನಲ್ಲಿ ಅನೇಕ ವಿಚಾರಗಳ ವಿವರಗಳನ್ನು ತಿಳಿಸಿಯಾಗಿತ್ತಾದ್ದರಿಂದ, ಕೆಲವು ಸಹಿಗಳನ್ನು ಹಾಕುವುದನ್ನು ಬಿಟ್ಟು ಮತ್ತೇನೂ ಹೆಚ್ಚಿನ ಕೆಲಸವಿರಲಿಲ್ಲ. ಮಿಕ್ಕಿದ್ದನ್ನೆಲ್ಲಾ ಯಥಾವಕಾಶ ಮಾಡುವುದಾಗಿ ತಿಳಿಸಿ, ಕೆಲವು ಖಾಲೀ ಫಾರಂಗಳ ಮೇಲೆ ವಿಲ್ಸನ್ ಸಹಿ ಹಾಕಿಸಿಕೊಂಡ. ವಿಚ್ಛೇದನಕ್ಕೆ ಏನು ಕಾರಣ ಕೊಡೋಣವೆಂದು ಯೋಚಿಸುತ್ತಿದ್ದೇನೆಂದು ವಿಲ್ಸನ್ ಹೇಳಿದ್ದಕ್ಕೆ, ಪ್ರತಿಮಾ, ''ಹಿ ಹ್ಯಾಸ್ ಡೆಸರ್ಟೆಡ್ ಮಿ. ವಾಟ್ ಅದರ್ ರೀಸನ್ ಡು ಯು ನೀಡ್?'' ಎಂದು ಗುಡುಗಿ ಎದ್ದು ನಿಂತಳು. ''ಡೋಂಟ್ ವರಿ ಮಿಸ್ಟರ್ ವಿಲ್ಸನ್, ದಿಸ್ ಕೇಸ್ ವಿಲ್ ನಾಟ್ ಬಿ ಕಂಟೆಸ್ಟೆಡ್. ಐ ನೋ ಮೋಹನ್. ಹಿ ಡಸ್ ನಾಟ್ ಫೈಟ್. ಹಿ ಈಸ್ ಎ ಕವರ್ಡ್. ಸೆಂಡ್ ಆಲ್ ದಿ ಪೇಪರ್ಸ್ ಟು ಹಿಸ್ ಬ್ಯಾಂಗಳೂರ್ ಅಡ್ರೆಸ್. ಯು ವಿಲ್ ಹ್ಯಾವ್ ದೆಮ್ ಬ್ಯಾಕ್ ವಿತ್ ಹಿಸ್ ಸಿಗ್ನೇಚರ್ ಇನ್ ಟು ವೀಕ್ಸ್'' ಎನ್ನುತ್ತ ಹೊರಟು ಹೋದಳು.

ಲಾಯರ್ ಆಫೀಸಿನಿಂದ ಹಿಂದಿರುಗುವಾಗ, ಫರ್ನೀಚರ್ ಅಂಗಡಿಗೆ ಭೇಟಿಕೊಟ್ಟು ತನ್ನ ಡ್ರೆಸ್ಸರ್‌ಗೆ ರೀಪ್ಲೇಸ್‌ಮೆಂಟ್ ಮಿರರ್ ಒಂದನ್ನು ಖರೀದಿಸುವುದನ್ನು ಮರೆಯಲಿಲ್ಲ. ◈



# ಆಕಸ್ಮಿಕ

**ಸತ್ಯವತಿ ರಾವ್**
ಸರಟೋಗಾ, ಕ್ಯಾಲಿಫ಼ೋರ್ನಿಯ

ತಮ್ಮ ಬೆಂಗಳೂರು ಬಸವನಗುಡಿಯಲ್ಲಿರುವ ದೊಡ್ಡಗಣೇಶನ ದೇವಸ್ಥಾನದ ಹೊರ ಜಗಲಿ ಮೇಲೆ ಕೂತು ಸರೋಜ ನೋಡುತ್ತ ಇರುವಂತೆಯೇ . . . . . ಗರ್ಭಗುಡಿಯ ಬಾಗಿಲು ತೆರೆಯುವುದಕ್ಕೂ, ಅದೇ ಸಮಯಕ್ಕೆ ಅವಳ ಮನಸ್ಸಿನ ಬಾಗಿಲೂ ಸರಿದು . . . ಮೋಡಗಳೆಲ್ಲಾ ಚದುರಿ, ನಕ್ಷತ್ರಗಳ ತೋಟದಿಂದ ಉರುಳಿ ಬಂದ ಒಂದು 'ಮಿನುಗುವ ತಾರೆ'ಯ ನೆನಪಿನ ಸುರುಳಿ ಬಿಚ್ಚಿ ಹರಡಿದಾಗ!

* * *

"ಸರೋಜ . . . ಬಾ ಇಲ್ಲಿ."

"ಏನಮ್ಮ ಕರೆದದ್ದು?"

"ಅಲ್ವೇ . . . ಇತ್ತೀಚೆಗೆ ನೀನು ಏನೋ ಬಹಳ ಯೋಚಿಸುತ್ತಾ ಇರೋ ಹಾಗೆ ಕಾಣುತ್ತೆ?"

"ಹಾಗೇನಿಲ್ಲಮ್ಮ . . ."

"ಇಲ್ಲ, ಇಲ್ಲ, ನೀನು ಮಂಕಾಗಿರೋದು ನೋಡಿದ್ರೆ . . . ಏನೋ ಮುಚ್ಚಿಡುತ್ತಿದ್ದೀಯಾ ಅನಿಸುತ್ತೆ. ಸರೋಜ, ನಿನ್ನ ವಯಸ್ಸಿನಲ್ಲಿ ಬಾಕಿ ಹುಡುಗಿಯರಿಗೆ ಇರೋ ಹಾಗೆ ಖುಷಿ ನಿನ್ನಲ್ಲಿ ಕಾಣೋಲ್ಲ. ವಯಸ್ಸಿನಲ್ಲಿ ಇರೋ ಹುಡುಗಿಯರು ಮದುವೆ, ಮಕ್ಕಳು ಅಂತ ಕನಸು ಕಾಣುತ್ತಾರೆ . . . ನಿನ್ನ ನೋಡಿದ್ರೆ 'ಆಕಾಶಾನೇ ತಲೆ ಮೇಲೆ ಕಳಚಿ ಬಿದ್ದ ಹಾಗೆ ಆಡುತ್ತೀಯಲ್ಲೆ?' ಮನಸ್ಸು ತಡೀಲಿಲ್ಲ, ಅಂತಹದ್ದು ಏನಾಗಿದೆ ಮಗೂ . . . ?"

"ಅಮ್ಮಾ, 'ಲೋಕೋ ಭಿನ್ನ ರುಚಿ:' ಅನ್ನೋ ಹಾಗೆ, ಆಸೇಲೂ ವ್ಯತ್ಯಾಸ ಇರಬೇಕು. ನೀನು ಹೇಳಿದ ಹಾಗೆ, ತಲೆ ಮೇಲೆ ಆಕಾಶ ಬಿದ್ದು ಎಲ್ಲಿ ನನ್ನ ಆಸೆ ಜಜ್ಜಿ ಹೋಗುತ್ತೋ ಅನ್ನುವ ಭಯಾನಮ್ಮ! ನನಗೆ ಅನ್ನಿಸುತ್ತೆ ಅಮ್ಮಾ. . . ಜೀವನವೇ ಒಂದು ಹೊಡೆದಾಟದ ಪರದಾಟ. ಈ ಬಡತನದ ಜೀವನ, ಸುಖ ದು:ಖದ ಪಯಣಗಳು, 'ಹೊಟ್ಟೆಗೆ ಹಿಟ್ಟು ಇಲ್ಲದಿದ್ರೂ ಮನೆ ತುಂಬ ಮಕ್ಕಳು' – ಇದೆಲ್ಲಾ ನೋಡುತಾ ಇದ್ರೆ ಮನಸ್ಸಿಗೆ ತುಂಬಾ ದು:ಖವಾಗುತ್ತೆ."

"ಸರೋಜ, ಮೊದಲೇ ನಿನ್ನದು ಬೆಣ್ಣೆಯಂತಹ ಹೃದಯ! ಬೇರೆಯವರ ಕಷ್ಟ ನಿನಗೇ ಆದಂತೆ ತೋರುವ ಅನುಕಂಪ ನಿನ್ನಲ್ಲಿರೋದು ನನಗೊತ್ತು. ಹಾಗಂತ, ನಾವು ಏನೆಲ್ಲ ಸರಿಪಡಿಸೋದಕ್ಕೆ ಆಗುತ್ತೆ ಹೇಳು?"

"ಅಮ್ಮಾ, ನೀನು ಏನೇ ಹೇಳು . . . ನಮ್ಮ ಕೈಲಿ ಸಾಸುವೆ ಕಾಳಷ್ಟಾದ್ರೂ ಸಹಾಯ ಮಾಡುವ ಅವಕಾಶವಿದ್ರೂ . . . ನಾವು ಮಾಡೋಕೆ ಪ್ರಯತ್ನ ಮಾಡೋಲ್ಲ. ಬರೀ ಬಾಯಿ ಮಾತಿನಿಂದಲೇ 'ಆದರ್ಶ'ದ ಮಾತಲ್ಲೇ ಮುಗಿಸುತ್ತೀವಿ. ಇದೆಲ್ಲಾ ಯೋಚಿಸುತ್ತಾ ಇದ್ರೆ . . . 'ಮುಂದೇನು? ಅರ್ಥವಾಗದ ಒಂದು ಆದರ್ಶದ ಹುಡುಕಾಟವೇ?' ಅನಿಸುತ್ತೆ."

"ಏನೋಮ್ಮ ಸರೋಜ, ಇದೆಲ್ಲ ಮಾತು ನನಗೆ 'ಕಬ್ಬಿಣದ ಕಡಲೆ'ಯಂತಿದೆ. ನೀನೂ ನಮ್ಮಗಳ ಹಾಗೆ ಸಹಜವಾದ ಆಸೆ–ಆಕಾಂಕ್ಷೆಗಳಿಂದ ಇದ್ದು, ಮದುವೆ ಮಾಡಿಕೊಂಡು ಸುಖವಾಗಿ ಬಾಳಲಿ ಅಂತ ಇದ್ರೆ! ಏನೆಲ್ಲಾ ಉದ್ಧಾರ ಮಡುವುದಕ್ಕೆ ಹೊರಟಿದೀಯೋ? ಒಂದೂ ಅರ್ಥವಾಗೋಲ್ಲಮ್ಮ."

"ಇದರಲ್ಲಿ ನಿನಗೆ ಅರ್ಥವಾಗದೇ ಇರೋದು ಏನಿದೆ? ಬಿಡಿಸಲಾಗದೆ ಒದ್ದಾಡೋಕ್ಕೆ . . . ಇದೇನು ಗಣಿತಶಾಸ್ತ್ರದ ಒಗಟೇ?" ಅಂತ ಕೀಟಲೆ ಮಾಡಿದ ಅಲ್ಲೇ ಇದ್ದ ಯಜಮಾನ್ರು, "ಮನಸ್ಸಿನ ಅಂತರಾಳದಿಂದ, ಕಣ್ಣು ಬಿಟ್ಟು ನೋಡಿದಾಗ ಆಗುವ ಉದ್ವೇಗ, ಅಸಹಾಯಕತೆ . . . ಮನಸ್ಸನ್ನು ಹಿಂಡಿ ಹಾಕುತ್ತಾ ಇದೆ, ನಿನ್ನ ಮಗಳಿಗೆ. ಅದು ನಿನಗೂ–ನನಗೂ ಅರ್ಥವಾಗೋಲ್ಲ ಬಿಡು," ಅಂತ ಒಗ್ಗರಣೆ ಹಾಕಿದ್ರು.

"ನಡಿಯಮ್ಮ ಸರೋಜ, ಸೂರ್ಯ ಮುಳುಗಿ ಹೋಗುತ್ತಾನೆ, ನಾಲ್ಕು ಹೆಜ್ಜೆ ಹಾಗೇ ಅಡ್ಡಾಡಿ ಬರೋಣ ಬಾ," ಎಂದು ತಂದೆ, ಮಗಳು ಹೊರಟ ದಿಕ್ಕನ್ನೇ ನೋಡುತಾ, "ಮೊದಲೇ ಉರೀತಾ ಇರೋ ನನ್ನ ಹೃದಯಕ್ಕೆ, ತುಪ್ಪ ಸುರಿದು ಇವರಾಡೋ ಸಮಾಧಾನದ ಮಾತು ಬೇರೆ ಕೇಳಬೇಕು."

ತಂದೆ, ಮಗಳು ಮಾತಿಲ್ಲದೆ ಬಹುದೂರ ನಡೆದಿದ್ರೂ, ಮನಸ್ಸು ಮಾತ್ರ ಮಾತಾಡುತ್ತಲೇ ಇತ್ತು. "ನಡಿಯಮ್ಮ,

ಕತ್ತಲಾಯ್ತು, ವಾಪಸ್ ಮನೆಗೆ ಹೋಗೋಣ," ಎಂದು ಹೇಳಿ ದಪದಪ ಹೆಜ್ಜೆ ಹಾಕುತ್ತಾ . . . ಬರುವಾಗ; ಒಬ್ಬರ ಮನೆಮುಂದೆ ಇದ್ದ ಕಸದ ತೊಟ್ಟಿಯಲ್ಲಿ, ಊಟ ಮಾಡಿ ಎಸೆದ ಎಲೆಗಳ ರಾಶಿ; ಅದರಲ್ಲಿ ಹುಡುಕುವ 'ಅನ್ನದ ಅಗಳಿಗೆ', ಬೀದಿ ನಾಯಿಗಳ ಜೊತೆಯಲ್ಲೂ ಹೆಣಗಾಡುವ ಮನುಷ್ಯನನ್ನು ನೋಡಿ . . . . ಧಿಗ್ಭ್ರಾಂತರಾದ್ರು. ಇಬ್ಬರ ಹೃದಯವೂ ಕರಗಿ ನೀರಾಯಿತು. "ಬಡತನ ಒಂದು ಶಾಪವೇ? ಅಥವಾ ಒಂದು ಸಮಾಜದ ಕಠೋರತೆಯ ಬಳುವಳಿಯೆ?" ಎಂದು ಸರೋಜ ಹಾಕಿದ ಪ್ರಶ್ನೆಗೆ ಉತ್ತರಿಸಲಾಗದೆ, ಮೂಕರಾಗಿ ನಿಂತ ತಂದೆಯ ಕಣ್ಣೀರೇ ಸಾಕ್ಷಿಯಾಗಿತ್ತು.

* * *

ಬಹಳ ದಿನಗಳ ಮೇಲೆ ಬಂದ ಸ್ನೇಹಿತನನ್ನು ನೋಡಿ ಶ್ರೀಪತಿಗೆ ವಿಪರೀತ ಸಂತೋಷವಾಯ್ತು. ಶ್ರೀಪತೀದು ಬಹಳ ಕೀಟಲೆ ಸ್ವಭಾವ. ಸ್ನೇಹಿತ, ಹರೀನ ಕೀಟಲೆ ಮಾಡೊದ್ರಲ್ಲಿ ಅವನಿಗೆ ಬಹಳ ಮಜಾ ಸಿಗುತ್ತಿತ್ತು.

"ಏನಯ್ಯಾ ಹರೀ? ಈಗ ನಿನ್ನ 'ಬುದ್ಧ, ಗಾಂಧಿಯವರ ತತ್ವ ವಿಚಾರಗಳ ಸಂದೇಶ ಹೊತ್ತು ಸಾರುತ್ತಾ, ದೇಶಾನೇ ಉದ್ಧರಿಸೋದಿಕ್ಕೆ ಹೊರಟ' ಪ್ರಯಾಣ ಎಲ್ಲಿಯವರೆಗೆ ಸಾಗಿದೆ? ಅಲ್ಲಯ್ಯಾ . . . ಮೊದಲೇ ನನ್ನ ಮಗಳು ಸರೋಜ ಏನೋ ಸಾಧಿಸಬೇಕು ಅಂತಾ ಭಾಷಣಾನೇ ಬಿಗೀತಾಳೆ – ಇನ್ನು ನಿನ್ನ ಮಾತನ್ನ ಕೇಳಿದ್ರೆ . . . ದೇವರೇ ಗತಿ!"

"ಅಲ್ಲವೋ ಶ್ರೀಪತಿ, ನಿನ್ನ ಸ್ನೇಹಿತನ ಧ್ಯೇಯಗಳನ್ನ ನೋಡಿ ಖುಷಿ ಪಡೋದಿರಲಿ, 'ಹಂಗಿಸಿ ಬೆನ್ನು ತಟ್ಟೋ ಬುದ್ಧಿ' ಇನ್ನೂ ಬಿಟ್ಟಿಲ್ಲ ನೀನು. 'ಒಳ್ಳೇ ಉದ್ದೇಶಗಳ ಹೋರಾಟ ಯಾವತ್ತೂ ಮುಗಿಯೋಲ್ಲ' ಮಾರಾಯ. ಬುದ್ಧ, ಗಾಂಧಿಯವರು ತೋರಿದ ಮಾರ್ಗದರ್ಶನದ ಹಾದಿಯಲ್ಲಿ, ಮನೇಲಿ ಒಬ್ರಾದ್ರೂ ನಡೆದು 'ಮನೆಯ ನಂದಾದೀಪ'ವಾದ್ರೆ ಬದುಕೇ ಸಾರ್ಥಕ ಎನಿಸುತ್ತೆ."

ಅಲ್ಲೇ ಇದ್ದ ಸರೋಜಳ ಕಿವಿಗೆ ಈ ಮಾತು ಬಿದ್ದು, ಮನುಷ್ಯಳಾಗಿ ತಾನು ಏನೆಲ್ಲಾ ಮಾಡಬಹುದು ಎಂದು ಎಚ್ಚರಿಸಿದ ಅವರಿಗೆ ಮನಸ್ಸಿನಲ್ಲಿಯೇ ವಂದಿಸಿದಳು. ಅವತ್ತು ಮುಗಿದ ವಾದ ಮುಂದುವರಿಯಲು ಹೆಚ್ಚು ಸಮಯ ಬೇಕಾಗಲಿಲ್ಲ.

* * *

ಕಾಲ ಉರುಳಿತು. ಸರೋಜ ಡಿಗ್ರೀ ಪಧವೀಧರೆಯಾದಳು. ತಾಯಿ–ತಂದೆ ಬಲವಂತಕ್ಕೆ ಹಾಗೂ "ತನ್ನ ಉದ್ದೇಶದ ಸಲುವಾಗಿ ಸಾಗಲು" ಮದುವೆಯೆಂಬ ಮುದ್ರೆ ಒತ್ತಿಸಿಕೊಂಡಳು.

ಶಂಕರ ಸರೋಜಳ ರೂಪಕ್ಕೆ ಮೆಚ್ಚಿ, ಅವಳ ಶರತ್ತಿಗೆ ಒಪ್ಪಿ ಮದುವೆಯಾದ. ಸರೋಜಳಿಗೆ ಇದರಿಂದ ಶಂಕರನ ಬಗ್ಗೆ ಅಭಿಮಾನ ಹೆಚ್ಚಾಯಿತು. ಶಂಕರ ಸರೋಜಳ ಆಸೆಗಳನ್ನೆಲ್ಲ ಸಂತೋಷದಿಂದಲೇ ನಡೆಸುತ್ತಿದ್ದ. ಅವರಿಬ್ಬರ ದಾಂಪತ್ಯದಲ್ಲಿ ಸರಸವಿತ್ತು, ಸುಖವಿತ್ತು; ಇದರಿಂದ ಸಂತೋಷ ಇಮ್ಮಡಿಸಿತ್ತು. ಶಂಕರನಿಗೆ "ಮೋಹದ ಹೆಂಡತಿ ಬಳಿ ಇರಲು . . ." ಎಲ್ಲಾ ಆನಂದವೂ ತನ್ನದೇ ಎಂದು ಭಾವಿಸಿದ್ದ. ಅವರಿಬ್ಬರ ಪ್ರೇಮ ಬೆಸೆದು ಪ್ರೀತಿ ಒಂದಾಗಿತ್ತು.

"ಅಲ್ವೋ ಶಂಕರ, ಊರ್ ತುಂಬಾ ಮಕ್ಕಳಿದ್ರೂ, ನಮ್ಮದೂ ಅಂತ ಒಂದು ಮುದ್ದಾದ ಮಗು ಬೇಡ್ವೇನೊ? 'ಸರೋಜಳ ತರಹದ್ದು ಒಂದೇ ಒಂದು ಇದ್ರೂ ಸಾಕು . . . !' ಅಂತ ಹಂಬಲಿಸೋದೂ ತಪ್ಪೇ? . . . . ಅಷ್ಟೇ ಬಿಡು, 'ಪಾಲಿಗೆ ಬಂದದ್ದೇ ಪಂಚಾಮೃತ' ಅಂತ ಸುಮ್ಮನಾಗಬೇಕು."

ಅಮ್ಮನ ಈ ಮಾತುಗಳು, ಶಂಕರನ ಏಕಾಗ್ರತೆಯ ಮನಸ್ಸನ್ನು ಅಲ್ಲಾಡಿಸಿತು . . . . "ಪರರ ಮಕ್ಕಳನ್ನೂ ತಮ್ಮ ಮಕ್ಕಳೆಂದೇ ಭಾವಿಸಿ ಪ್ರೀತಿಸಬೇಕು. ಇದೇ ನನ್ನ ಗುರಿ" ಎಂದಿದ್ದ ಸರೋಜಳ ಧೃಢಸಂಕಲ್ಪಕ್ಕೆ ಮಣಿದು ಮಡದಿಗೆ ಕೊಟ್ಟ ಭಾಷೆಯ ನೆನಪು ಮರುಕಳಿಸಿತು.

* * *

ಸ್ಕೂಲಿನಲ್ಲಿ ಸರೋಜ ಮಕ್ಕಳ ನೆಚ್ಚಿನ–ಅಚ್ಚಿನ ಮೇಡಂ. ಸಾಯಂಕಾಲ ಮನೆಯಲ್ಲಿ ಬಡ ಮಕ್ಕಳಿಗೆ ಉಚಿತ ಶಿಕ್ಷಣ, ಹಾಗೂ ಊಟದ ವ್ಯವಸ್ಥೆಯ ಏರ್ಪಾಡು ಮಾಡಿದ್ದಳು. ಇದರಿಂದ ಸರೋಜಳಿಗೆ ಸಿಗುತ್ತಿದ್ದ ಸಂತೋಷ ಅಪಾರವಾಗಿತ್ತು. ಸ್ಕೂಲಿನಲ್ಲಿ ತನ್ನ ಶಿಷ್ಯನಾದ ಸೀನುವಿನ ತಾಯಿಯೇ ಮನೆಯಲ್ಲಿ ಊಟದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಹೀಗಾಗಿ ಸೀನು ಮನೆಗೆ ಬರೋದು–ಹೋಗೋದು ಜಾಸ್ತಿಯಾಗಿತ್ತು. ದಿನಾ ಸಾಯಂಕಾಲ ಸ್ಕೂಲಿನಿಂದ ಮೇಡಂ ಮನೆಗೆ ಬಂದು, ಅಲ್ಲಿ ಅಮ್ಮನಿಗೂ ಸಣ್ಣಪುಟ್ಟ ಕೆಲಸದಲ್ಲಿ ಸಹಾಯ ಮಾಡುತ್ತಿದ್ದ. ಸರೋಜ ಮೇಡಂ ಅಂದ್ರೆ ಸೀನುವಿಗೆ ಒಂದು ರೀತಿಯ ಅಭಿಮಾನ ಬೆರೆತ ಪ್ರೀತಿ ಇತ್ತು.

ಹೀಗೇ ಇರುವಾಗ, ಒಂದು ದಿನ ಸಾಯಂಕಾಲ ವಿಪರೀತ ಮಳೆ ಸುರೀತಿತ್ತು. ಹೊರಗಡೆ ಚಳಿಚಳಿ. ಸೀನುವಿಗೆ ಥಟ್ಟನೆ ಸರೋಜ ಮೇಡಂಗೆ ಮೆಣಸಿನಕಾಯಿ ಬೋಂಡ ಇಷ್ಟ ಅಂತ ನೆನಪಿಗೆ ಬಂದು, ಅಮ್ಮನಿಗೆ ಬೋಂಡ ಮಾಡಲು ಹೇಳಿದ. "ಏ ಹೋಗೋ, ಅದನ್ನು ತಿಂದು ಅವರ ಕಣ್ಣಲ್ಲಿ ನೀರು ತರಿಸೋಕೆ ನನಗೆ ಇಷ್ಟವಿಲ್ಲ." "ಅಯ್ಯೋ . . ಅದೇನಮ್ಮ, ನಮ್ಮ ಮೇಡಂ ಅದನ್ನು ತಿನ್ನದೇನೇ ದಿನಾ ಕಣ್ಣೀರು ಸುರಿಸುತ್ತಾರೆ. ಹೋಕ್ಕೊಳ್ಳಿ, ಖಾರದ ನಾಲಿಗೆಗೆ ಸಿಹಿಯ ಲೇಪನ, ಸಜ್ಜಿಗೇನೂ ಮಾಡಿಬಿಡು." "ಸರಿ ಸರಿ ಹೋಗೊ, ಮೇಡಂ ಕೇಳಿಸಿಕೊಂಡ್ರೆ ನಕ್ಕಾರು!"

ಅಲ್ಲೇ ಇದ್ದ ಸರೋಜಳಿಗೆ ಸೀನುವಿನ ಬೆನ್ನು ತಟ್ಟಬೇಕು ಅನ್ನಿಸಿತು. ಸೀನು ಬಡ ಹುಡುಗನಾದ್ರೂ, ನಡವಳಿಕೆಯಲ್ಲಿ ಎಷ್ಟು ಶ್ರೀಮಂತ ಅಂದುಕೊಂಡಳು ಸರೋಜ.

ನೋಡಲು ಅಂದವಾಗಿದ್ದ ಸೀನು, ಸರೋಜಳ ತರಪೇತಿನಲ್ಲಿ ಓದಿನಲ್ಲೂ ಮುಂದುವರಿದು, ಅವಳ ಪ್ರೀತಿಯ ಶಿಷ್ಯನಾದ. ಕೆಲವೇ ಸಮಯದಲ್ಲಿ ಇವರಿಬ್ಬರ ಪರಿಚಯದ ಅಂಟು ನಂಟಾಯಿತು. ಸರೋಜಳ ಸಹಜವಾದ ಮಾತೃತ್ವದ ಒಲವು, ಗಟ್ಟಿಯ ಪ್ರೀತಿಯ ನೆಲೆಕಂಡಿತು. ಹೀಗೆಯೇ ಇಬ್ಬರ ನಡುವೆ ಬೆಳೆದಿತ್ತು ಪ್ರೀತಿಯ ಬಂಧ.

"ಬೇರೆಯವರ ಮಕ್ಕಳನ್ನೂ ನಮ್ಮದರಂತೆಯೇ ಪ್ರೀತಿಯಿಂದ ಕಂಡು ಪೋಷಿಸಿದರೆ, ಅವರು ತೋರುವ ಒಲವಿನಲ್ಲಿ ಅಡಗಿರುವುದು ಜೇನಿನ ಸಿಹಿ" ಎಂದು ಮೊದಲಿನಿಂದಲೂ ನಂಬಿದ ಸರೋಜಳ ಆಸೆ ನನಸಾಗುತ್ತಿರುವಂತೆಯೇ . . . . ನಡೆದ 'ಆಕಸ್ಮಿಕ ಘಟನೆ' ಸೀನುವಿನ 'ಜೀವ ಹಾರಿಸಿ', ನಕ್ಷತ್ರಗಳಲ್ಲಿ ಒಂದಾದ 'ಮಿನುಗುವ ತಾರೆ'ಯಾದದ್ದು ಕೇಳಿ, ತತ್ತರಿಸಿತು ಸರೋಜಳ ಹೃದಯ!! ಕಳಚಿ ಬಿದ್ದಿತ್ತು ಪ್ರೀತಿ ವಾತ್ಸಲ್ಯ!!!

ಇನ್ನಿಲ್ಲಮ್ಮಾ . . . ಸೀನು ಇನ್ನಿಲ್ಲಮ್ಮಾ . . . . .
ದು:ಖದ ಕಣ್ಣೀರು ಕಡಲಾಗಿ ಹರಿಯಿತು. ನೊಂದ ಹೃದಯಕ್ಕೆ ಎಲ್ಲಿಯ ತಮಣೆ?
"ತನ್ನ ಜೀವನ ಪಡೆದ ಮೊದಲ ತಿರುವು, ಪರಿಚಯದ ನೋವನ್ನು ತಂದಿತ್ತು."

* * *

"ಹೊತ್ತಾಯಿತು, ಬನ್ನಿ ಮಂಗಳಾರತಿ ತಗೊಳಿ!!" ಅರ್ಚಕರ ಮಾತು, ಸರೋಜಳನ್ನು ನೆನಪಿನ ಗುಂಗಿನಿಂದ ಹೊರತಂದಿತು. ಒಳಗೆ ಹೋಗಿ ಮಂಗಳಾರತಿಯನ್ನು ಕಣ್ಣಿಗೆ ಒತ್ತಿಕೊಂಡು . . ದೇವರ ಮೂರುತಿಯನ್ನು ನೋಡುತ್ತಾ, "ಆಸೆಯೇ ದು:ಖಕ್ಕೆ ಮೂಲ ಕಾರಣ; ಇದರಿಂದ ಹೊರಕ್ಕೆ ಬರುವ ಶಕ್ತಿ ಕೊಡು, ಭಗವಂತ" ಎಂದು ಹೇಳಿ, ನಮಸ್ಕರಿಸಿ ಹೊರಟ ಸರೋಜಳನ್ನು, "ನಮಸ್ಕಾರ ಮೇಡಂ" ಎಂಬ ಧ್ವನಿ ಆ ಕಡೆ ತಿರುಗುವಂತೆ ಮಾಡಿತು. ನೋಡುತ್ತಾಳೆ . . . . ಏನಾಶ್ಚರ್ಯ!!! ಸೀನುವಿನದೇ ಅಚ್ಚು . . . ಅಲ್ಲಿ ನಿಂತಿದ್ದ ಅವನ ತಮ್ಮ, ರಾಮು!!!

ದು:ಖದಲ್ಲೂ ಧ್ಯೇಯದ ಒಲವು ಮತ್ತೆ ಚಿಗುರಿಸಿದ . . . ರಾಮು . . . .. ತನ್ನ ಮನಸ್ಸಿನ ದ್ವಂದ್ವಕ್ಕೆ ಕಾರಣವಾದ 'ಆಸೆಯೇ ದು:ಖಕ್ಕೆ ಮೂಲ'ವೆಂಬ ಚಕ್ರವ್ಯೂಹದಿಂದ ಹೊರಬರಲು, ತನ್ನ ಧ್ಯೇಯದ ಸಾಧನೆದಿಂದಲೇ ಸಾಧ್ಯವೆಂಬ ನಂಬಿಕೆಯೊಡನೆ ಮತ್ತೆ ಹೆಜ್ಜೆ ಮುಂದಿಟ್ಟಳು, ಸರೋಜ. ಅದೇ ಹಳೆಯ ಉತ್ಸಾಹವನ್ನು ರಾಮುವಿನಲ್ಲೂ ತೋರತೊಡಗಿದಳು. ಸರೋಜಳಿಗೆ ರಾಮುವಿನಲ್ಲೂ ಪ್ರೀತಿ ಅಪಾರವಾಗಿ ಬೆಳೆದಿತ್ತು. ಕಳೆಯಿತು ಎಣಿಕೆಯಿಲ್ಲದ ದಿನಗಳು, ಮುಂದೂಡಿತು ಹರುಷದಲ್ಲಿ ವರುಷಗಳು. ಸರೋಜ ಒಳ್ಳೆಯ ಮಾರ್ಗದರ್ಶನ ನೀಡಿ ನಡೆಸಿದಳು ರಾಮುವನ್ನು. ರಾಮು ಜೀವನದಲ್ಲಿ ಯಶಸ್ವಿಯಾಗಿದ್ದಷ್ಟೇ ಅಲ್ಲದೆ ತನ್ನ ಜೀವನದಲ್ಲೂ ಆದರ್ಶವನ್ನು ಬೇರೂರಿಸಿಕೊಂಡಿದ್ದ. ಅವನು 'ಎಲೆಯ ಮರೆಯ ಕಾಯಾಗಿ' ಮಾಡಿದ ಅದ್ಭುತ ಕಾರ್ಯವನ್ನು ಮೇಡಂಗೆ ತೋರಿಸಲು ಕಾತರಿಸುತ್ತಿದ್ದ. ಅಂದು ಸರೋಜ ಮೇಡಂ ಮತ್ತು ಶಂಕರ್‌ರನ್ನು ಕರೆದುಕೊಂಡುಹೋಗಿ, ಅವನು ತೋರಿಸಿದ ಬೋರ್ಡಿನಲ್ಲಿ ಬರೆದದ್ದು, ಬರಿಯ ಕರೀ ಅಕ್ಷರಗಳಾಗದೆ, ಸುವರ್ಣಾಕ್ಷರಗಳಾಗಿದ್ದವು . . . ಕಟ್ಟಡದ ಮೇಲೆ ತೂಗಾಡುತ್ತಿದ್ದ ಬೋರ್ಡಿನಲ್ಲಿ '**ಸರೋಜ-ಶಂಕರ್ ಅನಾಥಾಲಯ**' ಕಂಗೊಳಿಸುತ್ತಿತ್ತು. "ಇದನ್ನು ನೋಡಲು ಎರಡು ಕಣ್ಣೇನು – ಸಾವಿರ ಕಣ್ಣಿನ ಹೃದಯವೂ ಸಾಲದು" ಎಂದುಕೊಂಡ ಸರೋಜ ಆನಂದದಿಂದ-ಪರಮಾನಂದದಿಂದ ಸಾರ್ಥಕತೆಯ ಭಾವ ಹೊಂದಿದಳು.

"ಕತ್ತಲು ಹರಿದ ಮೇಲೆ ಬರುವ ಬೆಳಕನ್ನು ಹಿಡಿಯಲಾರಿಗೆ ಸಾಧ್ಯ!!!" ◈

# Rajiv R Ahuja, MD

***Internal Medicine and Family Practice***

674 Mowry Avenue
Fremont, CA 94536
Ph : (510) 713-1000
Fax : (510) 745-8703

27001 Calaroga Ave Ste 3
Hayward, CA - 94545
Ph : (510) 782-0391



- Family Physician providing services for Adults and Children
- Women's Health
- Executive Physical
- Physical for Immigration, Life Insurance
- Travel Shots

**Specials for cash patient and elderly parents visiting from India. Our office helps in getting travel insurance for visitors from India.**

**Well equipped modern facility for**

- Major cardiac care
- Echocardiography
- Stress testing
- Stress echocardiography
- Carotid scanning
- Lipid Management
- Smoking Cessation plan
- Spirometry

***INS approved physician for Immigration Medical exams***

For appointments, Call
Dr. Rajiv Ahuja at:
(510) 713-1000
(510) 782-0391

- Open for new patients
- Same day and evening appointments available
- Convenient hours
- Hindi Spoken

Accept all major insurances
Member : Aetna, Blue Cross Blue Shield, California care, Cigna, Health Net, Pacific Care, Secure Horizon, United Health Care and all PPO and HMO plans.



# ಸಿಕ್ಕರೆ ಸಾಕು

**ಸುಧಿ ಬೆಂಗಳೂರು**
ಸ್ಯಾನ್ ಹೊಸೆ, ಕ್ಯಾಲಿಫ಼ೋರ್ನಿಯ

ಸಂಜೆ ಅಪ್ಪನ ಕಾರು ಬರುತ್ತಿದಂತೆಯೆ ರಂಜಿನಿ ಮನೆ ಎದುರುಗಡೆ ಆಡುತಿದ್ದುದನ್ನು ಎಂದಿನಂತೆ ಅಲ್ಲೇ ಬಿಟ್ಟು ಗರಾಜಿನಿಂದ ಅಪ್ಪನ ಕರೆ ಕೇಳಿಸುತಿದ್ದಂತೆ ಸ್ನೇಹಿತೆಯರಿಗೆ ಬೈ-ಬೈ ಹೇಳಿಕೊಂಡೇ ತನ್ನ ಮನೆಯ ಒಳಗೆ ಓಡಿದಳು. ಅಮ್ಮ ತಮ್ಮನಿಗೆ ಹೋಮ್-ವರ್ಕನ್ನು ಮಾಡಿಸುತ್ತಿದ್ದುದನ್ನು ನೋಡಿದ ಅವಳು, ಆ ಕಡೆ ತಿರುಗಿ ಅಮ್ಮ ಹಸಿವು ಎನ್ನುತ್ತಲೇ ತಟ ಪಟನೆ ಟೇಬಲ್ ಮೇಲೆ ನಾಲ್ಕು ತಟ್ಟೆಗಳು, ಉಪ್ಪು-ಮೆಣಸಿನ ಶೇಕರ್ರು, ಲೋಟಗಳಲ್ಲಿ ನೀರು ತುಂಬಿಸಿ ಜೊತೆಗೆ ಬಟರ್ ಮಿಲ್ಕಿನ ಡಬ್ಬ ಕೂಡ ತೆಗೆದಿಟ್ಟು ಊಟಕ್ಕೆ ಕುಳಿತಳು. ಉಪ್ಪಿನ ಕಾಯಿ ಕೂಡ ಇಡುವಂತೆ ಹೇಳಿದ್ದ ಅಮ್ಮ, ಬಿಸಿ ಮಾಡಿದ್ದ ಅನ್ನ ಸಾರು ಎಲೆ ಕೋಸಿನ ಪಲ್ಯದ ಪಾತ್ರೆಗಳನ್ನು ಟೇಬಲ್‌ಗೆ ತಂದಿಟ್ಟರು. ಅಮ್ಮ ಎಲ್ಲರಿಗೂ ಒಂದು ಬಾರಿ ಬಡಿಸಿ, ಒಟ್ಟಾರೆ ಕುಳಿತು ಊಟ ಮಾಡುತ್ತ, ಎಂದಿನಂತೆಯೆ ಅಂದಿನ ಶಾಲೆಯ ಆಟ ಪಾಟಗಳ ವರದಿಯಿಂದ ಮೊದಲಾಗಿ ಕಿವಿಗೆ ಬಿದ್ದ ದಿನದ ವಾರ್ತೆಗಳು, ಅಂತರ್ಜಾಲದ ಪತ್ರಿಕೆಗಳಲ್ಲಿ ಸ್ವತ: ಓದಿದ ವಾರ್ತೆಗಳ ಕುರಿತಾಗಿ ಮಾತುಕತೆಗಳಾಗಿತ್ತು. ಹೀಗೆ ರಾತ್ರೆಯ ಊಟ ನಡೆಯುತ್ತಿರುವಾಗ, ಅಪ್ಪ ಇದ್ನೋಡು, ಅಕ್ರಮವಾಗಿ ಅಮೇರಿಕಾಕ್ಕೆ ಬಂದವರಿಗೆ ಡ್ರೈವರ್ಸ್ ಲೈಸನ್ಸ್ ಬೇರೆ ಕೊಡೋಣ ಅಂತಿದ್ದಾರೆ, ಹಾಳು ನಮ್ಮ ರಾಜ್ಯ ಸರ್ಕಾರ, ಯಾಕೆ ಕೊಡ್ತಾರೋ ಅವರಿಗೆಲ್ಲ ಅರ್ಥವೇ ಅಗೋಲ್ಲ, ಸಿಕ್ಕಿದರೆ ಕತ್ತು ಹಿಡಿದು ದೇಶದಿಂದ ಹೊರಕ್ಕೆ ದಬ್ಬೊ (ಡಿಪೋರ್ಟ್) ಬದಲು ಇನ್ನೂ ಒಳಗೇ ತಂದಿಟ್ಟುಕೊಳ್ತಾಯಿದ್ದಾರಲ್ಲ, ನಾವೆಲ್ಲ ವೀಸ ತೊಗೊಂಡು ತಾನೆ ಬಂದಿದ್ದು ಅಂತ ಅಮ್ಮನ ಬಳಿ ಗೊಣಗಿದರು. ಅದಕ್ಕೆ ಅಮ್ಮ ಪ್ರತಿಕ್ರಯಿಸಿ ಮುಕ್ಕಾಲು ಪಾಲು ಹಾಗೆಲ್ಲ ಇಲ್ಲಿಗೆ ಬರೋರೆಲ್ಲ ಮೆಕ್ಸಿಕನ್ಸು ಕಣ್ರೀ, ಪಾಪ ಕೂಲಿ ನಾಲಿ ಮಾಡ್ಕೊಂಡು ಬದುಕೊ ಕಡು ಬಡಜನ ಬರೋದು, ಕೊಟ್ಟರೆ ಕೊಡಲಿ ಬಿಡಿ, ಅಂತದ್ದು ಏನಾಗಿಹೋಯಿತು ಅಂದಳು. ಅಪ್ಪ ಏನಾಗಿಹೋಯಿತಾ? ಅನ್ನುತ್ತಿದಂತೆಯೆ ತಲೆಬಗ್ಗಿಸಿ ತಿನ್ನುತ್ತಿದ್ದ ರಂಜಿನಿ, ಅಮ್ಮ ಹೇಳ್ತಾ ಇರೋದು ಸರಿ, ಕೊಟ್ರೇನಪ್ಪ ಪಾಪ ಅಂತ ಕಿರುದನಿಯಲ್ಲಿ ಅಪ್ಪನನ್ನು ತಲೆಯೆತ್ತಿ ನೋಡಿದಳು. ಇದನ್ನು ಕಂಡ ಅಮ್ಮನಿಗೆ ಎಂದೂ ಅಪ್ಪನ ಪರವೇ ವಾದಿಸುತಿದ್ದವಳು ಇಂದೇಕೊ ತನ್ನ ಪರ ದನಿ ಎತ್ತಿದ್ದ ಮಗಳನ್ನು ಕಂಡು ಒಂದು ಕಡೆ ಆನಂದವು ಇನ್ನೊಂದು ಕಡೆ ಆಶ್ಚರ್ಯವು ಆಗಿ ಹೋಗಿತ್ತು.

ರಂಜಿನಿ ಹೈಸ್ಕೂಲಿನ ವಿದ್ಯಾರ್ಥಿನಿ; ಎಡವಿ ಬಿದ್ದರೆ ಹತ್ತಿರದಲ್ಲೆ ಲಾಸ್ ಏಂಜೆಲ್ಸ್ಸಿನ ಆರೆಂಜ್ ಕೌಂಟಿಯ ಸರ್ಕಾರಿ ಪಾಠ ಶಾಲೆ, ಅಲ್ಲಿಗೆ ಹೋಗುತಿದ್ದಳು. ಆ ವರ್ಷದಲ್ಲಿ ಅವಳ ತರಗತಿಯಲ್ಲಿ ಮರಿಯ ಎಂಬ ಹೊಸಬಳ ಗುರುತಾಯಿತು, ಆಕೆ ಮೆಕ್ಸಿಕನ್ನಳು. ಮರಿಯ ಸರಿಯಾದ ವಲಸೆ ಪತ್ರಗಳಿಲ್ಲದೆ ಮೆಕ್ಸಿಕೊ ಇಂದ ಕಾನೂನಿಗೆ ವಿರುದ್ಧವಾಗಿ ಗಡಿ ದಾಟಿ ಅಮೇರಿಕಾಕ್ಕೆ ಬಂದಿದ್ದವಳು. ತನ್ನ ಅಪ್ಪ, ಅಮ್ಮನನ್ನು ಸೇರಲು, ಅಣ್ಣನ ಜೊತೆ ಮೆಕ್ಸಿಕೊ ಬಿಟ್ಟು ಆರು ತಿಂಗಳ ಹಿಂದೆ ಗಡಿ ರಕ್ಷಣ ಪೋಲಿಸರ ಬೆನ್ನ ಹಿಂದೇನೆ ಸ್ಯಾನ್‌ಡಿಯಾಗೊ ಮೂಲಕ ನೇರ ಅಪ್ಪನಿದ್ದ ಲಾಸ್ ಏಂಜಲೀಸ್‌ಗೆ ಬಂದಿದ್ದಳು. ಆದರೆ ಅವರುಗಳು ಅಂದುಕೊಂಡಂತೆ ಅವರ ತಾಯಿ ಸೋಫ಼ಿಯ ಇನ್ನೂ ಅಲ್ಲಿ ಕಂಡಿರಲಿಲ್ಲ. ಅವರ ಅಪ್ಪ ಹೋಸೆ ಸೋಫ಼ಿಯಾಳಿಗಾಗಿ ಎಲ್ಲಾ ಕಡೆ ತಾನೆ ಹುಡುಕಿ, ಎಲ್ಲೂ ಇನ್ನು ಸಿಗದೆ, ಹುಡುಕಿಸುತ್ತಿರುವುದಾಗಿ ಹೇಳಿದ್ದನು. ಇದೇ ಹದಿನೈದು ವರ್ಷಗಳ ಕೆಳಗೆ ಹೋಸೆ ತನ್ನ ಹುಟ್ಟೂರಲ್ಲಿ ಕೆಲಸ ಸಿಗದೆ ಊರ ರಸ್ತೆಯಲ್ಲ ಅಲೆದು, ಊರಿಂದೂರು ಸುತ್ತಿ ಉತ್ತರಕ್ಕೆ ಬರು ಬರುತ್ತಲೆ, ಕೊನೆಗೆ ಕಾನೂನು ಉಲ್ಲಂಘಿಸಿ ಅಪಾರ ಶ್ರಮ ಪಟ್ಟು ಕಷ್ಟ ಸಹಿಸಿ ಉತ್ತರ ಗಡಿಯನ್ನು ದಾಟಿ ಅಮೇರಿಕಾಕ್ಕೆ ಬಂದಿದ್ದ. ಹಾಗೆ ಬಂದವನು ಲಾಸ್ ಏಂಜಲೀಸ್‌ನಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿ ಬಂದಿದ್ದರಲ್ಲಿ ಒಂದು ಪಾಲು ವಾಪಸ್ಸು ಮನೆಗೆ ಅಂದರೆ ಮೆಕ್ಸಿಕೋಗೆ ಹೆಂಡತಿ ಸೋಫ಼ಿಯ ಹಾಗೂ ತನ್ನ ಇಬ್ಬರು ಮಕ್ಕಳಾದ ಮಾರ್ಕೋಸ್, ಮರಿಯಾ ಓದಿಗೆಂದು ಹಣವನ್ನು ವೈರ್ ಮಾಡುತ್ತಿದ್ದ. ಅಷ್ಟು ವರ್ಷಗಳಲ್ಲಿ ತಪ್ಪದೆ ದುಡ್ಡನ್ನು ವೈರ್ ಮಾಡುತ್ತಿದ್ದನಾದರೂ ಅದು ಸೊಫಿಯಾಗೆ ಸಂಸಾರ ಸಾಗಿಸಲು ಕಡಿಮೆಯಾಗ ತೊಡಗಿತು. ಕ್ರಮೇಣ ಹಣ ಬರುವುದೇ ವಿಳಂಬವಾಗಿ ಬಿಡುತಿತ್ತು. ಬರ ಬರುತ್ತಾ ಹಣ ಬರುವುದು ಎರ್ರಾ ಬಿರ್ರಿಯಾಗಿತ್ತು. ಹೋಸೆ ಕರೆ ಮಾಡಿದಾಗಲೆಲ್ಲ ತನ್ನ ಕೆಲಸ ಕಷ್ಟವಾಗುತ್ತಿದೆ, ಎಷ್ಟೋ ದಿನಗಳು ದಿನಗೂಲಿ ಸಿಗದೆ ಇದ್ದುದರಿಂದ ಹೀಗೆ ಆಗುತ್ತಿದೆಯೆಂದು ಸೋಫ಼ಿಯಗೆ ವಾಸ್ತವದ ಸಮಾಧಾನ ಹೇಳುತ್ತಿದ್ದ. ಆಕೆಯೂ ಅವನ ಪರಿಸ್ಥಿತಿ ಅರ್ಥಮಾಡಿಕೊಂಡು ಅವನು ಕಳಿಸುತ್ತಿರುವ ಹಣ ಕಡಿಮೆ ಅಥವ ಅದರ ವಿಳಂಬದ ಬಗ್ಗೆ ಒಂದಿಷ್ಟೂ ಹಚ್ಚಿಕೊಂಡಿರಲಿಲ್ಲ. ಅಲ್ಲಿ ಇಲ್ಲಿ ರಾತ್ರಿ-ಹಗಲೆನ್ನದೆ ತಾನೇ ಕೂಲಿ ಮನೆಗೆಲಸ ಮಾಡಿ ಸೋಫ಼ಿಯ ಹಣ ತರತೊಡಗಿದಳು. ಹೀಗೆ ಸುಮಾರು ದಿವಸಗಳೇ

ನಡೆದರೂ, ಎಷ್ಟು ದಿನ ಹೀಗೆ, ಅವರು ಅಲ್ಲಿ, ನಾವುಗಳು ಇಲ್ಲಿ ಎಂಬುದು ಅವಳಿಗೆ ನುಂಗಲಾರದ ತುತ್ತಾಗಿ ಬಿಟ್ಟಿತ್ತು. ಇದರ ಬಗ್ಗೆ ಗಂಡನಲ್ಲಿ ವಿಚಾರಿಸುತ್ತಿದ್ದಳಾದರೂ, ಅಷ್ಟೊಂದು ವರ್ಷಗಳಾದರೂ ಅದರ ಬಗ್ಗೆ ಅವನೇನನ್ನೂ ಮಾಡಿರದ ಕಾರಣ ಸೋಫ಼ಿಯ ಹೋಸೆಗೆ ತಿಳಿಸದೆಯೆ ತಾನು ಸಂಪಾದಿಸಿದ್ದ ಹಣದಲ್ಲಿ ಗಡಿ ದಾಟಿಸುವವರ ಸಹಾಯ ಕೋರಿದ್ದಳು. ಅವರುಗಳು ಮಕ್ಕಳ ಸಮೇತ ದಾಟಿಸಲು ಕಷ್ಟವೆಂದು, ಮಿಗಿಲಾಗಿ ಅವಳು ಕೊಡಲಿಚ್ಛಿಸಿದ್ದ ಹಣಕ್ಕೆ ಸದ್ಯಕ್ಕೆ ಅವಳೊಬ್ಬಳನ್ನು ಮಾತ್ರ ದಾಟಿಸಲು ಮುಂದೆ ಬಂದರು. ಇದನ್ನು ತುಂಬ ಯೋಚಿಸಿ, ಕಡೆಗೆ ಹೋಗುವ ನಿರ್ಧಾರಕ್ಕೇ ಬಂದು, ಅವಳು ಮಕ್ಕಳನ್ನು ಹತ್ತಿರವಿದ್ದ ನೆಂಟರಿಗೆ ಒಪ್ಪಿಸಿದಳು. ಮಕ್ಕಳಿಗೆ ಅಪ್ಪನನ್ನು ಸೇರಿ ನಿಮ್ಮಿಬ್ಬರನ್ನು ಕರೆಸಿಕೊಳ್ಳುವೆನೆಂದು ಪ್ರಮಾಣಿಸಿ, ಅಲ್ಲಿದ್ದ ಗಂಟು ಮೂಟೆ ಎಲ್ಲ ಹಿಂದೆ ಬಿಟ್ಟು ಅಮೆರಿಕಾಕ್ಕೆ ಒಂದೆರಡು ಬಟ್ಟೆ ಬರೆ ಒಂದಷ್ಟು ತಿಂಡಿ ನೀರಿನ ಚೀಲವನ್ನು ಹೆಗಲೇರಿಸಿ ಗಡಿ ದಾಟಿಸುವವರ ಜೊತೆ ಪ್ರಯಾಣ ಬೆಳಸಿದಳು.

ಇತ್ತ ಹೋಸೆ ಸೋಫ಼ಿಯ ಬಿಟ್ಟ ನಾಲ್ಕೈದು ವಾರಗಳ ನಂತರ ಇನ್ನೊಂದು ಕಂತು ಹಣ ವೈರ್ ಮಾಡಿ, ಮನೆಗೆ ಕರೆ ಮಾಡಿದ್ದ. ಸೋಫ಼ಿಯ ತನ್ನನ್ನು ಹುಡುಕಿಕೊಂಡು ಮೆಕ್ಸಿಕೊ ಬಿಟ್ಟ ವಿಷಯ ಮಕ್ಕಳಿಂದ ಕೇಳಲ್ಪಟ್ಟವನೆ ಸ್ವಲ್ಪ ಹೊತ್ತು ದಿಕ್ಕೇ ತೋಚದಂತಾಗಿ ಅದೆಂತ ಹುಚ್ಚು ಕೆಲಸ ಮಾಡಿಬಿಟ್ಟಳು, ನಾನೆ ಕರೆಸಿಕೊಳ್ಳುತ್ತಿದ್ದನಲ್ಲ ಎಂದು ಅಂದುಕೊಂಡು ಅವಳ ಬರುವಿಗೆ ಎದುರು ನೋಡ ತೊಡಗಿದ. ಆರು ತಿಂಗಳು ಉರುಳಿತು, ಇನ್ನೂ ಸೋಫ಼ಿಯ ಬಂದಿರಲಿಲ್ಲ, ಒಳಗೊಳಗೆ ಆತಂಕ ಹೆಚ್ಚುತಿತ್ತು. ಮಕ್ಕಳಂತೂ ಅವನು ಕರೆ ಮಾಡಿದಾಗಲೆಲ್ಲ ಅಮ್ಮ ಇನ್ನು ಬಂದಿಲ್ವ ಎನ್ನುತ್ತಿದ್ದರು, ತಮ್ಮನ್ನು ಬೇಗ ಕರೆಸಿಕೊಳ್ಳುವಂತೆ ಒತ್ತಾಯಿಸುತ್ತಿದ್ದರು. ಅವರು ಅಮ್ಮನ ಬಗ್ಗೆ ಕೇಳಿದಾಗಲ್ಲೆಲ್ಲ ಅವನಿಗೆ ಏನೂ ಹೇಳಲಾಗದೆ ಕಳ್ಳದಾರಿಯಲ್ಲಿ ಅಲ್ಲಿಂದ ಇಲ್ಲಿಗೆ ಬರಲು ಅಷ್ಟು ದಿನಗಳು ಆಗುವುದು ಸಹಜವೆಂದು ಹೇಳಿಬಿಡುತ್ತಿದ್ದನು. ಕೊನೆಗೆ ಮಕ್ಕಳ ಒತ್ತಾಯಕ್ಕೆ ಮಣಿದು ಮೇಲಾಗಿ ಅವರುಗಳು ಅಪ್ಪ ಅಮ್ಮ ಒಬ್ಬರ ಜೊತೆಯೂ ಇರದೆ ಬೆಳೆಯುತ್ತಿರುವ ಪರಿಸ್ಥಿತಿ ಕಂಡು, ಅವರುಗಳನ್ನು ಗಡಿ ದಾಟಿಸಲು ತಾನಿದ್ದ ಕಡೆಯಿಂದಲೆ ಏರ್ಪಾಟು ಮಾಡ ತೊಡಗಿದ. ಹದಿನೈದು ವರ್ಷಗಳ ದೀರ್ಘ ಕಾಲದ ನಂತರ ಇಬ್ಬರೂ ಮಕ್ಕಳು ಸುರಕ್ಷಿತವಾಗಿ ಗಡಿ ದಾಟಿ ಅಪ್ಪನನ್ನು ತಲುಪಿದರು; ಅವರ ಸಂತಸಕ್ಕೆ ಮಿತಿಯೇ ಇರಲ್ಲಿಲ್ಲ. ಹೋಸೆ ಮಕ್ಕಳನ್ನು ಕಂಡು ಆನಂದಪಟ್ಟನು. ಆದರೆ ಮಕ್ಕಳಿಗೆ ಬೇಜಾರಿನ ಸಂಗತಿ ಎಂದರೆ ಅಮ್ಮನ ಸುಳಿವೇ ಇರಲಿಲ್ಲ. ಹೋಸೆ, ಓದು ಹತ್ತಿಲ್ಲದ ಮಾರ್ಕೋಸ್ ಇಲ್ಲಿ ಬಂದು ಇನ್ನೆಲ್ಲಿ ಹಾಳಾಗುವನೋ ಎಂಬ ಭಯದಿಂದ ತಾನು ನಡೆಸುತ್ತಿದ್ದ ಮನೆ ಕಟ್ಟೊ ಕೆಲಸದಲ್ಲಿ ತೊಡಗಿಸಿಕೊಂಡು, ಮರಿಯಾಳನ್ನು ಮಾತ್ರ ಶಾಲೆಗೆ ಸೇರಿಸಿ ಬಿಟ್ಟಿದ್ದ. ಅಂತೂ ಹೋಸೆ ಆದಿಯಾಗಿ ನಾಲ್ಕೂ ಜನರು ತಮ್ಮ ಹುಟ್ಟೂರನ್ನು ಬಿಟ್ಟು ಅಮೆರಿಕಾಕ್ಕೆ ಬಂದಿದ್ದರು.

ಪದೇ ಪದೇ ಮಕ್ಕಳು ಹೋಸೆಯನ್ನು ಅಮ್ಮನ ಬಗ್ಗೆ ವಿಚಾರಿಸುತ್ತಿದ್ದರು. ಅವರಿಗೆ ಅವನ ಉತ್ತರ ಯಾವಾಗಲೂ ಸಮಾಧಾನ, ದಾಟಲು ಸಮಯ ಹಿಡಿಯುತ್ತೆ ಅಂತ ಒಂದೇ ಹಾಡಾಗಿತ್ತು. ಮಕ್ಕಳು ತಾವುಗಳು ಗಡಿ ದಾಟಿ ಬಂದಿದ್ದಕ್ಕೆ ಹೋಲಿಸಿಕೊಂಡು ಅವಳಾದ ಮೇಲೆ ಬಿಟ್ಟ ನಾವೇ ಇಲ್ಲಿರುವಾಗ ಅವಳಿಗೇಕೆ ಹೆಚ್ಚು ದಿನವಾಗುತ್ತಿದೆಂದು ಅಪ್ಪನನ್ನು ಮರು ಪ್ರಶ್ನಿಸುತ್ತಿದರು. ಸಲೀಸಾಗಿ ದಾಟಿ ಬಂದ ಅವರುಗಳಿಗೆ ಗಡಿ ದಾಟಲು ಅನೇಕರು ಪಡುವ ಪಾಡು ಗೊತ್ತಿರಲಿಲ್ಲ. ಗಡಿ ದಾಟುವುದು ಅಷ್ಟು ಸುಲಭದ ಕೆಲಸವಲ್ಲ; ತಿಂಗಳುಗಟ್ಟಲೆ ಉರಿಬಿಸಿಲಲ್ಲಿ ದಣಿದು, ಗಡಿಯವರೆಗೂ ಕಲ್ಲು ಮುಳ್ಳಿನ ಅಡ್ಡ ದಾರಿಯಲ್ಲಿ ತಲೆ ಮರೆಸಿ ನಡೆದು, ಒಂದೆಡೆ ಗಡಿಯಲ್ಲಿ ಪೊಲೀಸರಿಗೆ ಸಿಕ್ಕಿ ಬೀಳದಿರದಂತೆ ಅದೃಷ್ಟ ದೇವತೆಗೆ ಸದಾ ಜಪಿಸುತ್ತಿದ್ದರೆ, ಇನ್ನೊಂದೆಡೆ ತಮ್ಮ ಮನಸೋತು ಎಷ್ಟೋ ದಿವಸ ಸರಿಯಾಗಿ ಹೊಟ್ಟೆಗಿಲ್ಲದಾಗ ದಾರಿಯಲ್ಲಿ ದಾಟುವವರಿಗೆ ನೀರು, ಬಿಟ್ಟಿ ಬರಿಟೊಗಳನ್ನು ಎಸೆದು ದಾಟಲು ಉತ್ಸಾಹಿಸುವ ಸಾಮಾನ್ಯ ಬಡ ಅಪರಿಚಿತ ಮೆಕ್ಸಿಕನ್ನರು. ಹೀಗೆ ಒಂದೇ ಎರಡೆ ಇದಕ್ಕೆ ಪಡಬೇಕಾದ ಪಾಡುಗಳು; ಒಬ್ಬೊಬರದು ಒಂದೊಂದು ಕಥೆ, ಇದೊಂದು ಕಲ್ಪನೆಗೆಟುಕದ ವ್ಯಥೆ. ತಮ್ಮ ಸ್ವಂತ ಕಣ್ಣುಗಳಲ್ಲಿ ನೋಡಿದ್ದರೆ ದಾಟಿ ಅನುಭವಿಸಿದ್ದರೆ ಮಾತ್ರವೆ ಅರಿವಾಗುವುದು ನಿಜವಾದ ಕಷ್ಟ; ಎಲ್ಲೋ ಕೇಳಿದ್ದರೆ ಆಗದು, ಇನ್ನೊಬ್ಬರು ಹೇಳಿದ್ದರೆ ಆಗದು. ಹೋಸೆ ತಾನು ಹೀಗೆ ಹದಿನೈದು ವರ್ಷಗಳ ಹಿಂದೆ ದಾಟಿದ ದಿನಗಳು, ದಾಟಿದಾಗ ಆದಂಥ ಹೆಮ್ಮೆ ಇವೆಲ್ಲವನ್ನು ನೆನಪು ಮಾಡಿಕೊಳ್ಳುತ್ತಿದ್ದನಾದರೂ, ತನ್ನ ಹೆಂಡತಿ ಮಕ್ಕಳಿಗೆ ಹಾಗೆ ಆಗದೆ ಒಂದು ದಿನ ತುಂಬಾ ಹಣ ಕೊಟ್ಟಾದರೂ ಸುಲಭವಾಗಿ ಸುರಕ್ಷಿತವಾಗಿ ದಾಟಿಸಬೇಕು ಅನ್ನುವುದಿತ್ತು. ಮರಿಯಾಗೆ ಹಾಗು ಮಾರ್ಕೋಸ್‌ಗೆ ಗಡಿ ದಾಟುವುದರಲ್ಲೂ ಹಲವು ದರ್ಜೆಗಳಿರುತ್ತವೆ ಎಂಬ ಅಪ್ಪನ ಮಾತು ತಲೆಗೇ ಹೋಗಿರಲ್ಲಿಲ್ಲ. ಅಪ್ಪನು ತಮ್ಮನ್ನು ಅಮೇರಿಕಾಕ್ಕೆ ಕರೆಸಿಕೊಂಡು ಹೊಸ ಜಾಗದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಎನ್ನುವುದಿತ್ತಾದರೂ, ಅಮ್ಮನ ಮಾತು ಬಂದಾಗ ತಮಗೆ ಸರಿಯಾಗಿ ಅಪ್ಪ ಹೇಳುತ್ತಿಲ್ಲವೆಂಬಂತೆ ತೋರುತಿತ್ತು. ಅವನಲ್ಲಿ ಅವಳನ್ನು ಪತ್ತೆ ಮಾಡುವ ಹೊಣೆಗಾರಿಕೆಯ ಆತುರ ಅವರಿಗೆ ಕಂಡಿರಲಿಲ್ಲ. ಹೀಗಿರುವಾಗ ಒಮ್ಮೆ ಮಾರ್ಕೋಸ್‌ಗೆ ತನ್ನ ಅಪ್ಪನಿಗೆ ಲಾಸ್ ಏಂಜಲಿಸ್‌ನಲ್ಲಿ ಇನ್ನೋರ್ವ ಸಂಗಾತಿ ಹಾಗು ಸುಮಾರು ಮರಿಯಳಷ್ಟೆ ವಯಸ್ಸಿನ ಮಗಳಿರುವುದು ತಿಳಿದು ಬಂದಿತು. ಮಕ್ಕಳಿಬ್ಬರಿಗೂ ಅಪ್ಪನ ಮೇಲೆ ಕೋಪ ಬಂತಾದರೂ ಅಪ್ಪನೊಂದಿಗೆ ನೇರವಾಗಿ ಇದನ್ನು ಮಾತಾಡದೆ ನೊಂದಿದ್ದರು; ಅಮ್ಮನನ್ನು

ತಾವೇ ಹುಡುಕುವ ಯೋಜನೆ ಮಾಡುತ್ತಿದ್ದರು. ಹೋಸೆ, ತನ್ನ ಅಮೇರಿಕಾದ ಸಂಗಾತಿ ಹಾಗು ಅವರಿಬ್ಬರ ಮಗಳಾದ ಜಮಿಯನ್ನು ಮುಂಚೆಯಿಂದಲೂ ಬೇರೆ ಮನೆಯಲ್ಲಿಯೇ ಇಟ್ಟಿದ್ದರಿಂದ ಮಾರ್ಕೋಸಿಗೆ ಹಾಗು ಮರಿಯಾಗೆ ಇದರಿಂದಾಗಿ ದಿನ ನಿತ್ಯದಲ್ಲಿ ಬದಲಾವಣೆ ಏನೂ ಇರಲಿಲ್ಲ. ಅಪ್ಪನಿಂದ ಓಡಿ ಹೋಗುವ ಪ್ರಯತ್ನವೊಮ್ಮೆ ಇಬ್ಬರೂ ಮಾಡಿ ಕಡೆಗೆ ತಮ್ಮ ಅಸಹಾಯಕತೆಯನ್ನು ಅರಿತು ಅಪ್ಪನ ಆಶ್ರಯದಲ್ಲೇ ಇದ್ದುಕೊಂಡಿದ್ದರು. ಜಮಿ ಕೂಡ ಮರಿಯ ಓದುತ್ತಿದ್ದ ಶಾಲೆಯಲ್ಲೇ ಓದುತ್ತಿದ್ದಳು, ಹಾಗಾಗಿ ಅವರಿಬ್ಬರಿಗೂ ಪರಿಚಯವಾಗಿತ್ತು. ಅಪ್ಪನ ವಿಷಯ ಬಯಲಾದ ಮೇಲೆ ಒಬ್ಬರ ತಲೆ ಕಂಡರೆ ಇನ್ನೊಬರಿಗೆ ಆಗುತ್ತಿರಲಿಲ್ಲ, ಅದರಲ್ಲೂ ಮರಿಯಾಗಂತು ಜಮಿ ಹಾಗು ಅವಳ ಅಮ್ಮನ ಮೇಲೆ ಹೆಚ್ಚು ಕೋಪವಿತ್ತು. ಲಾಸ್ ಏಂಜಲಿಸ್‌ನ ಬೀದಿ-ಬೀದಿಗಳಲ್ಲಿ ಸಮಯ ಸಿಕ್ಕಾಗಲೆಲ್ಲ ಮಾರ್ಕೋಸ್ ಹಾಗೂ ಮರಿಯ ತಮ್ಮ ಅಮ್ಮನನ್ನು ಹುಡುಕುತಿದ್ದರು. ಅಮ್ಮ ಇಲ್ಲಿಗೆ ಬಂದ ಮೇಲೆ ಅಪ್ಪನು ಎಲ್ಲೋ ಇಲ್ಲೇ ಅವಳನ್ನು ಓಡಿಸಿ ಬಿಟ್ಟಿರ ಬಹುದು ಎಂದು ಶಂಕಿಸಿದ್ದರು. ಅಪ್ಪನು ಅವಳನ್ನು ಹುಡುಕುವುದರಲ್ಲಾಗಲಿ ಅಥವಾ ಹುಡುಕಿಸುವುದರಲ್ಲಾಗಲಿ ತೋರುತಿದ್ದ ನಿರುತ್ಸಾಹದಿಂದ ಮಾರ್ಕೋಸ್ ತಾನು ಒಂದು ದಿನ ಅಪ್ಪನ ಆಶ್ರಯ ತ್ಯಜಿಸಿ ಸ್ವಾವಲಂಬಿಯಾಗಿ ದುಡಿದು ತನ್ನ ತಂಗಿ ಮರಿಯಳ ಜೊತೆ ಅಮ್ಮನನ್ನು ಹುಡುಕುವ ಯೋಚನೆ ಮಾಡಿದ್ದ. ಅಷ್ಟು ಹೊತ್ತಿಗೆ ಅವರುಗಳಿಗೆ ಅಪ್ಪನ ಮೇಲಿದ್ದ ಪ್ರೀತಿ ಗೌರವ ಎಣ್ಣೆ ಮುಗಿದ ಹಣತೆಯಂತೆ ಆರಿಬಿಟ್ಟಿತ್ತು. ತಮ್ಮನ್ನು ಮನೆಗೆಲಸ ಕೂಲಿ ಮಾಡಿ ಓದಿಸಿ ಒಬ್ಬಳೆ ನೋಡಿಕೊಂಡ ಅಮ್ಮನ ನೆನಪುಗಳು ಅವಳು ಕರೆಸಿಕೊಳ್ಳುವೆನೆಂಬ ಮಾತುಗಳು ಕಂಬನಿಯ ಜೊತೆ ಬರುತಿತ್ತು. ಅವಳು ಇಲ್ಲೆ ಎಲ್ಲೊ ಇರಲೇಬೇಕು, ಹುಡುಕಿದರೆ ಸಿಕ್ಕುವಳು ಎನ್ನುವುದು ಅವರ ಮುಗ್ಧತೆಯಾಗಿತ್ತು.

ಹೀಗಿರುವಾಗ ಕಟ್ರೀನ ಚಂಡಮಾರುತದಿಂದ ಬಾರಿ ಪೆಟ್ಟು ತಿಂದಿದ್ದ ನ್ಯು ಆರ್ಲಿಯೆನ್ಸ್ ನಗರಕ್ಕೆ ನಿಧಾನವಾಗಿ ಜನರು ಮತ್ತೆ ತೆರಳುತ್ತಿರುವರೆಂದೂ, ವ್ಯಾಪಾರ, ಅಂಗಡಿಗಳು ಒಂದೊಂದೆ ಮತ್ತೆ ಶುರುವಾಗುತ್ತಿವೆಯೆಂದೂ, ಅಲ್ಲದೆ ಮುಖ್ಯವಾಗಿ ಅಲ್ಲಿ ಅನೇಕ ಕೆಲಸಗಳು ಖಾಲಿ ಇವೆ ಎಂದು, ಕೆಲಸದಾಳುಗಳು ಸಿಕ್ಕುವುದು ಕಷ್ಟವೆಂದು ಡಿಶ್-ವಾಷರ್‌ಗಳೂ ಕೂಡ ಗಂಟೆಗೆ ಒಂಬತ್ತು ಡಾಲರ್ ಮಾಡ್ತಾರೆಂದು ಮಾರ್ಕೋಸ್ ಕೇಳಿದ. ಅವನಿಗೆ ಅಲ್ಲಿಗೆ ತಾನು ಹೋದರೆ ತನಗೆ ಒಳ್ಳೆ ತಿರುವು ಸಿಗುವುದೆಂದು ಅನ್ನಿಸಿತು. ಅಲ್ಲದೆ ಅಪ್ಪನಿಂದ ದೂರದಲ್ಲಿ ಸ್ವಂತವಾಗಿ ಇರುವ ಕಾರಣ ಸಿಕ್ಕಿತು. ಇದಕ್ಕೆ ಅಪ್ಪನನ್ನು ಒಪ್ಪಿಸಿ ಬಸ್ಸು ಹಿಡಿದು ಅತ್ತ ಕಡೆಗೆ ಮರು ದಿನವೇ ಹೊರಟು ಬಿಟ್ಟ. ಇತ್ತ ಮರಿಯ ಒಬ್ಬಳೆ ಮನೆಯಲ್ಲಿ, ಶಾಲೆಗೆ ಹೋಗಿ ಬರುತ್ತಿದ್ದಳು, ಅಪ್ಪನು ಕೆಲಸದ ನಂತರ ದಿನ ಸಂಜೆ ಬಂದು ಹೋಗುತಿದ್ದ, ಊಟ ತರುತಿದ್ದ. ಬಿಡುವಾದಾಗಲೆಲ್ಲ ಮರಿಯಳನ್ನು ಹತ್ತಿರದಲ್ಲಿ ನೋಡಬೇಕಾದ ಸ್ಥಳಗಳಿಗೆ ಸ್ನೇಹಿತರೊಂದಿಗೆ ತನ್ನ ಹಳೆ ಟ್ರಕ್ಕಿನಲ್ಲಿ ಕರೆದು ಕೊಂಡು ಹೋಗುತ್ತಿದ್ದ.

ಅತ್ತ ನ್ಯು ಆರ್ಲಿಯೆನ್ಸಿನಲ್ಲಿ ಮಾರ್ಕೋಸ್ ಮನೆಕಟ್ಟುವ ಅನುಭವವಿದುದ್ದರಿಂದ ಬಿದ್ದ ಮನೆಗಳನ್ನು ನೋಡಿ ರಿಪೇರಿ ಮಾಡುವ ಕೆಲಸಕ್ಕೆ ಇಳಿದ. ಎಷ್ಟೋ ಮನೆಗಳು ರಿಪೇರಿಯಾಗುವಂತೆ ಅವನಿಗೆ ತೋರಲಿಲ್ಲ. ತಮ್ಮ ವಿಮೆಯ ಹಣದಿಂದ ಹಾಗು ಕೇಂದ್ರ ಸರ್ಕಾರದ ಸ್ಕೀಮದ ಹಣದಿಂದ ಕೆಲವರು ಮತ್ತೆ ಮನೆಗಳನ್ನು ಕಟ್ಟಲು ಮುಂದಾಗುತಿದ್ದರು, ಇದು ಮಾರ್ಕೋಸಿಗೆ ಸಂತಸದ ಸಂಗತಿಯಾಯಿತು. ರೋಗಿ ಬಯಸಿದ್ದು ಹಾಲು ಅನ್ನ ವೈದ್ಯ ಹೇಳಿದ್ದು ಹಾಲು ಅನ್ನ ಎಂದು ಅಲ್ಲೆ ಕಾಲೂರುವ ಯೋಚನೆ ಮಾಡಿದ. ಒಂದೆರಡು ಮನೆ ಕಟ್ಟುವ ಮೇಸ್ತ್ರಿಯ ಕೆಲಸವನ್ನು ಒಪ್ಪಿಕೊಂಡ. ಹೀಗೆ ದಿನ ಬೆಳಗಾದರೆ ಕಟ್ರೀನ ಬಂದು ನಗರ ತುಂಬ ತುಂಬಿಹೋಗಿದ್ದ ಉರುಳಿದ್ದ ಮನೆಗಳ ಕಸ ಬಿಸಾಡುವಾಗ, ಒಂದು ಮನೆಯ ಕೆಲಸಮಾಡುವಾಗ, ಪಕ್ಕದಲ್ಲಿ ನೆರೆಯವರ ಮನೆಯ ಮುಕ್ಕಾಲು ನೆಲಸಮವಾಗಿ ಉಳಿದು ನಿಂತಿದ್ದ ಕೊನೆಯ ಗೋಡೆಯೊಂದು ದಪ್ಪಕ್ಕನೆ ಉರುಳಿ ಬಿದ್ದಿತು. ಆ ಮನೆಯವರು ಅಲ್ಲಿ ಯಾರೂ ಇರಲಿಲ್ಲ, ಕಟ್ರೀನ ಬಂದು ಹೋದಮೇಲೆ ಇನ್ನು ಬಂದಿದ್ದ ಹಾಗಿರಲಿಲ್ಲ. ಒಂದು ನಿಮಿಷ ಮಾರ್ಕೋಸ್ ಅಲ್ಲಿಗೆ ತೆರಳಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಮರ ಹಲಿಗೆ, ಮೊಳೆಗಳು, ಮನೆ ಸಾಮಾನಿನ ಚೂರುಗಳನ್ನು ಹುಷಾರಾಗಿ ದಾಟುತ್ತಲೆ ಹೆಜ್ಜೆ ಹಾಕಿದ. ತನ್ನ ಕಾಲಿಗೆ ಸಿಕ್ಕಿಕೊಂಡ ಒಂದು ಚೀಲವನ್ನು ಎತ್ತಿದ. ಅದನ್ನು ಎಲ್ಲೋ ನೋಡಿದ್ದ ನೆನಪು ಮರುಕಳಿಸಿತು. ಒಳಗೆ ತೆಗೆದು ನೋಡಲು ಅವನಿಗೆ ನಂಬಲಾಗಲಿಲ್ಲ, ಆ ಚೀಲ ಅವನ ಅಮ್ಮನದಾಗಿತ್ತು! ಅದು ಇಲ್ಲಿ ಹೇಗೆ? ಅದರಲ್ಲಿ ಅವಳ ಬಟ್ಟೆಗಳು, ತಟ್ಟೆ ಲೋಟ, ಅಮ್ಮನಿಗೆಂದು ಮಕ್ಕಳು ಎಂದೋ ಬರೆದಿದ್ದ ಒಂದು ಕಾರ್ಡು ಹಾಗೂ ಚಿಕ್ಕ ಪರ್ಸಿತ್ತು. ಆ ಪರ್ಸಿನಲ್ಲಿ ಅಪ್ಪ-ಅಮ್ಮ -ಮಕ್ಕಳ ಒಂದು ಭಾವಚಿತ್ರ, ಅಪ್ಪನ ದೂರವಾಣಿ ಸಂಖ್ಯೆ, ಮೆಕ್ಸಿಕೊ ನೆಂಟರ ಹಾಗು ಗಡಿ ದಾಟಿಸುವವರ ದೂರವಾಣಿ ಸಂಖ್ಯೆಗಳು ಹಾಗು ಐವತ್ತು ಡಾಲರ್ರು ದುಡ್ಡಿತ್ತು. ತಕ್ಷಣವೆ ಅವರೆಲ್ಲರಿಗೂ ಜಂಗಮ ಕರೆ ಮಾಡಿದ, ಲೈನೇ ಹತ್ತಲಿಲ್ಲ. ಸ್ವಲ್ಪ ಹೊತ್ತಿನ ನಂತರ ಉರುಳಿ ಬಿದ್ದಿದ್ದ ಗೋಡೆಗಳನ್ನು ಸುತ್ತಲೂ ಒಮ್ಮೆ ನೋಡಿ ಅಳಲಾರಂಭಿಸಿದ. ತನ್ನ ಅಮ್ಮ ಕಟ್ರೀನಾಗೆ ಸಿಕ್ಕಿಹೋಗಿರಬಹುದೆಂಬ ಒಳ ಮಾತು ಬಿದ್ದಿದ್ದ ಗೋಡೆಗಳ ಪುಡಿ ಪುಡಿಯು ಕೂಗಿ ಸಾರಿದಂತಿತ್ತು. ಆ ಬೀದಿಯಲ್ಲಿ ವಾಪಸ್ ಬಂದಿದ್ದ ಅಕ್ಕ ಪಕ್ಕದವರನ್ನೆಲ್ಲ ಅವಳ ಬಗ್ಗೆ ವಿಚಾರಿಸಿದ. ಏನೂ ಪ್ರಯೋಜನವಾಗಲಿಲ್ಲ. ಎಲ್ಲರೂ ತಾವುಗಳು ಮನೆ ಬಿಟ್ಟ ರೀತಿ ಹೇಳಿಕೊಂಡರು. ಒಬ್ಬಾತ ಮಾತ್ರ ಅವಳು ಒಬ್ಬ ಮುದುಕಿಯನ್ನು ಆ ಮನೆಯಲ್ಲಿಯೇ ಇದ್ದು

ಇತ್ತೀಚೆಯಿಂದ ನೋಡಿಕೊಳ್ಳುತ್ತಿದ್ದಳು ಎಂದು ಗುರುತಿಸಿ ಆ ಮನೆಯವರು ಚಂಡಮಾರುತ ತಟ್ಟುವ ಮುನ್ನ ಬಿಡಲಿಲ್ಲವೆಂದು, ಮುದುಕಿ ಸತ್ತಳೆಂಬುದನ್ನು ಸರ್ಕಾರಿ ಅಧಿಕಾರಿಗಳಿಂದ ಕೇಳಿದೆ ಎಂಬುದಾಗಿ ನುಡಿದ. ಮಾರ್ಕೋಸ್ ಇದನ್ನು ಕೇಳಿ ಮತ್ತಷ್ಟು ನೊಂದು ಸರಿಯಾಗಿ ಊಟ ನಿದ್ರೆ ಮಾಡದೆ ಚೀಲದೊಡನೆ ಸೀದ ಬಸ್ಸು ಏರಿ ಮಾರನೆ ದಿನ ಲಾಸ್ ಏಂಜಲಿಸ್ ತಲುಪಿದ. ಅಂದು ಭಾನುವಾರ, ಹೋಸೆ ಮರಿಯಾಳ ಮನೆಗೆ ಮುಂಜಾವದಲ್ಲೆ ಬಂದ. ಬಾಗಿಲು ತಟ್ಟಿ ಒಂದಿಷ್ಟು ಊಟಕ್ಕೆ ಬೇಕಾದ ದುಡ್ಡು ಕೊಟ್ಟು, ತನ್ನ ಟ್ರಕ್ಕನ್ನು ಬಿಟ್ಟಿರುವೆನೆಂದು ನಾಳೆಗೆ ಕೆಲಸಕ್ಕೆ ಇಲ್ಲಿಂದಲೆ ಹೋಗುವುದಾಗಿ, ಬರುವುದು ರಾತ್ರಿಯಾಗುವುದೆಂದು ಹೇಳುತ್ತ ಸ್ನೇಹಿತರ ಟ್ರಕ್ಕನ್ನು ಏರಿ ಜಮಿ ಪಕ್ಕದಲ್ಲಿ ಕುಳಿತು ಸ್ಕೀಯಿಂಗ್ ಮಾಡಲು ಹೋಗುತ್ತಿರುವೆನೆಂದು ಸರ ಸರನೆ ನುಡಿದ ಅಪ್ಪನಿಗೆ ಅರೆ-ನಿದ್ದೆಯಲ್ಲಿ ಎದ್ದಿದ್ದ ಮರಿಯ ಬೈ ಹೇಳಿ ಬಾಗಿಲು ಮುಚ್ಚಿ ಮಲಗಿದಳು. ಅದಾದ ಕೆಲವೆ ಕ್ಷಣಗಳಲ್ಲಿ ಮತ್ತೆ ಯಾರೋ ಬಾಗಿಲು ಬಡಿದಂತಾಯಿತು. ಈಗ ನೋಡಿದರೆ ಮಾರ್ಕೋಸ್! ಮಾರ್ಕೋಸ್, ನನಗೆ ಕೆಲಸ ಸಿಕ್ಕಿ ನಿನ್ನನ್ನು ನ್ಯು ಆರ್ಲಿಎನ್ಸಿಗೆ ಕರೆದುಕೊಂಡು ಹೋಗಲು ವಾಪಸು ಬಂದಿರುವುದಾಗಿ ಮರಿಯಾಗೆ ಹೇಳುತ್ತಲೇ ಒಳ ಬಂದ. ಆಗ ಮರಿಯಾಳಿಗೆ ಪರೀಕ್ಷೆಯ ಸಮಯ. ಶಾಲೆ ಮುಗಿಸಿಯೇ ಬರುವುದಾಗಿ ಅವನಿಗೆ ಹೇಳಿ ಅಪ್ಪನ ಜೊತೆ ರಾತ್ರಿ ವಿಚಾರ ಮಾಡೋಣವೆಂದು ಹೇಳಿದಳು. ಅಪ್ಪನನ್ನು ಬಿಟ್ಟು ದೂರ ಹೋಗುವುದು ಕೂಡ ಅವಳಿಗೆ ಇಷ್ಟವಿರಲಿಲ್ಲ. ಮಾರ್ಕೋಸ್ ಮರಿಯಾಗೆ ಮುಂದೇನನ್ನು ಹೇಳದೆ ತನ್ನ ಜೊತೆಯಲ್ಲಿದ್ದ ಚೀಲವನ್ನು ಕೊಟ್ಟು, ನೆಲ ನೋಡಿ, ಅಮ್ಮ ಇನ್ನಿಲ್ಲವೆಂದು ಗೊಳೋ ಎಂದು ಅತ್ತು ಬಿಟ್ಟ. ಧಿಡೀರನೆ ಅಳಲು ಶುರುಮಾಡಿದ ಮರಿಯಾಳನ್ನು ಅಲ್ಲೆ ನಿಂತಿದ್ದ ಅಪ್ಪನ ಟ್ರಕ್ಕಿಗೆ ಬಲವಂತವಾಗಿ ಏರಿಸಿ, ಅಪ್ಪನ ಮನೆಗೆ ಕೋಪದಿಂದ ಗಾಡಿ ಬಿಟ್ಟ. ಅಲ್ಲಿ ಜಮಿ ಅವರ ಅಮ್ಮ ಬಾಗಿಲು ತೆಗೆಯಲು, ಜೋರಾಗಿ ಅಪ್ಪನನ್ನು ಕೂಗಿದ. ಅವನಿಲ್ಲವೆಂದು ಕಿವಿಗೆ ಬೀಳಲು ನಾಳೆ ಬರುವುದಾಗಿ ಕೆಂಪಾಗಿದ್ದ ಕಣ್ಣುಗಳಲ್ಲಿ ಕೂಗಿ ವೇಗದ ಗಾಳಿ ಬೀಸಿ ಹೋದಂತೆ ಹೊರಟೇಬಿಟ್ಟ. ಜಮಿಯವರ ಅಮ್ಮ ಮಾರ್ಕೋಸ್‌ನನ್ನು ಒಂದೆರಡು ಬಾರಿ ಕಂಡಿದ್ದಳಾದರೂ ಇಂದು ಕಂಡ ಮಾರ್ಕೋಸ್ ಅವಳಿಗೆ ಭಯ ತಂದಿದ್ದ. ಬಾಗಿಲು ಮುಚ್ಚುವಾಗ ಅವಳು ಬಿಕ್ಕಿ ಅಳುತ್ತಿದ್ದ ಮರಿಯಳನ್ನು ಕೂಡ ದೂರದಿಂದ ನೋಡಿದಳು.

ಮಾರ್ಕೋಸ್ ಮರಿಯಾಳನ್ನು ಸಮಾಧಾನ ಮಾಡಿ ಕಣ್ಣು ಮುಚ್ಚುವುದರಲ್ಲಿ ಬಾನಲ್ಲಿ ಬೆಳಕು ಹರಿಯಿತು. ಅಪ್ಪನನ್ನು ಕಂಡು ಬೈದು ಬರಲು ಟ್ರಕ್ಕೇರಿದನು. ನಿದ್ದೆ ಮಾಡಿದ್ದ ಮರಿಯಾಳನ್ನು ಎಬ್ಬಿಸಿ ಟ್ರಕ್ಕು ಹತ್ತಿಸಿದನು. ಸಾಮಾನ್ಯವಾಗಿ ಮಾರ್ಕೋಸ್ ಗಾಡಿ ಓಡಿಸುತ್ತಿರಲಿಲ್ಲ, ಲೈಸೆನ್ಸ್ ಇರಲ್ಲಿಲ್ಲ, ಅಪ್ಪ ಒಬ್ಬರೇ ಓಡಿಸುತ್ತಿದುದ್ದು. ಆದರೆ ಇಂದೇ ಬೇರೆಯಾಗಿತ್ತು. ಅಪ್ಪನ ಮನೆ ಬಂದು ಅಲ್ಲಿ ಮುಂದೆ ನಿಲ್ಲಿಸಲು, ಎಚ್ಚೆದ್ದ ಮರಿಯ ತೆರೆದಿದ್ದ ಮನೆಯ ಬಾಗಿಲಿಗೆ ಓಡಿದಳು, ಅಪ್ಪನಿಗಾಗಿ ಸುತ್ತ ನೋಡಿದಳು. ಆದರೆ ಅಲ್ಲಿ ಅಳುತಿದ್ದ ಜಮಿ ಹಾಗು ಅವರಮ್ಮ ಮಾತ್ರ ಕಾಣಿಸಿತು, ಅಪ್ಪ ಬಂದ್ರಾ ಸ್ಕೀಯಿಂಗಿಂದ, ನಮ್ಮ ಮನೆಗೇ ರಾತ್ರಿ ಬರ್ತೀನಿ ಅಂದಿದ್ದರು ಎಂದಳು ಜಮಿ ಕಡೆ ತಿರುಗಿ. ಅವರುಗಳು ತಲೆ ಅಲ್ಲಾಡಿಸಿ ಮತ್ತಷ್ಟು ಅಳತೊಡಗಿದರು. ಹೋಸೆ ಸ್ಕೀಯಿಂಗ್ ಮಾಡುವಾಗ ಕೊನೆಯಲ್ಲಿ ಸಂಜೆ ಮರಕ್ಕೆ ತಗುಲಿ ಸಿಕ್ಕಾ ಪಟ್ಟೆ ತಲೆಗೆ ಪೆಟ್ಟಾಗಿ ಆಸ್ಪತ್ರೆಗೆ ಹೊಗುವಾಗ ದಾರಿಯಲ್ಲಿ ಕೊನೆ ಉಸಿರೆಳೆದನೆಂದು ಹೇಳಿದರು. ಇಪ್ಪತ್ತನಾಲ್ಕು ಗಂಟೆಗಳ ಅಂತರದಲ್ಲಿ ಅಪ್ಪ ಅಮ್ಮ ಇಬ್ಬರನ್ನೂ ಕಳೆದು ಕೊಂಡಿದ್ದ ಮರಿಯಾಗೆ ಮಿಂಚು ಬಡಿದಂತಾಗಿ ಕುಸಿದು ಕುಳಿತಳು. ಮಾರ್ಕೋಸ್ ಅಪ್ಪನ ಮರಣ ಕೇಳಿ, ಅವನ ಕೋಪ ದುಃಖಕ್ಕೆ ತಿರುಗಿ ಮರಿಯಾಳ ಬಳಿ ಓಡಿ ತಲೆ ಬಗ್ಗಿಸಿ ನೊಂದ.

ಅಪ್ಪ ಅಮ್ಮ ಇಬ್ಬರು ಇಲ್ಲದಿರುವ ಲಾಸ್ ಏಂಜೆಲಿಸನ್ನು ಬಿಟ್ಟು ನ್ಯು ಆರ್ಲಿಯೆನ್ಸಿಗೆ ಹೊರಟರು. ಮನೆ ಖಾಲಿ ಮಾಡಿ ಬಾಡಿಗೆಯವಳಿಗೆ ಬೀಗದ ಕೈ ಕೊಟ್ಟ ಮೇಲೆ, ಅವರ ಪಾಲಿಗೆ ಮುಖ್ಯವಾಗಿ ಉಳಿದಿದ್ದು ಅಮ್ಮನ ಚೀಲ ಹಾಗು ಅಪ್ಪನು ಬಿಟ್ಟಿದ್ದ ಹಳೆ ಟ್ರಕ್ಕು. ಲೈಸನ್ಸ್ ಇರದೆ ಓಡಿಸಲು ಒಂದು ಕಡೆ ಭಯ ಇನ್ನೊಂದು ಕಡೆ ಅಪ್ಪನ ನೆನಪಲ್ಲಿ ಉಳಿದಿದ್ದ ಒಂದೇ ಒಂದು ಟ್ರಕ್ಕು. ಅಕ್ರಮವಾಗಿ ಲೈಸನ್ಸ್ ಕೊಡಿಸುವವರನ್ನು ವಿಚಾರಿಸಿ ಕೂಡ ಬಂದರು. ಲೈಸನ್ಸ್ ಕೈಗೆ ಬರುವುದು ತಡವಾಗುವುದೆಂದು ಅಷ್ಟು ಹಣ ಹವಣಿಸುವ ತಾಪತ್ರಯವೆಂದು, ಕಡೆಗೆ ಟ್ರಕ್ಕು ಜಮಿ ಅವರ ಬಳಿಯೆ ಬಿಟ್ಟು, ಅಣ್ಣ ತಂಗಿ ನ್ಯು ಆರ್ಲಿಯೆನ್ಸಿಗೆ ಬಸ್ಸು ಹತ್ತಿದರು. ಬಸ್ಸಿಳಿದು ನೇರವಾಗಿ ಮಾರ್ಕೋಸ್ ಅವರ ಅಮ್ಮನು ಇದ್ದ ಮನೆಯ ಬಳಿಗೆ ಮರಿಯಾಳನ್ನು ಕರೆದುಕೊಂಡು ಹೊರಟ. ದಾರಿಯಲ್ಲಿ ಕಟ್ರಿನ ಮಾಡಿಬಿಟ್ಟು ಹೋದ ವಿನಾಶವನ್ನು ತಂಗಿಗೆ ತೋರಿಸುತ್ತ ನಡೆದ. ಹೋದಂತೆ ಅಲ್ಲೆ ದೂರದಲ್ಲಿ ಒಂದು ಕಡೆ ಜನರು ದೊಡ್ಡ ಬಾಲದಂತೆ ಸಾಲಿನಲ್ಲಿದ್ದರು. ಹತ್ತಿರ ಹೋಗಿ ಏನೆಂದು ನೋಡೋಣವೆಂದರೆ ಅಲ್ಲಿ ಅಂದು ಕಟ್ರಿನಾಗೆ ಬಿದ್ದುಹೋಗಿದ್ದ ಒಂದು ಉಪಹಾರ ಗೃಹ ಮತ್ತೆ ಮೊದಲ ಬಾರಿಗೆ ತೆರೆದ ಸಂಭ್ರಮ, ತಿಂಡಿಗಳನ್ನು ಹಂಚುತ್ತಿದ್ದರು; ಅದನ್ನು ತಿಳಿದು ವಾಪಸ್ಸು ತಮ್ಮ ದಾರಿಗೆ ಬರುತ್ತಿರುವಾಗ ಹಿಂದೆಯಿಂದ ಜೋರಾಗಿ ಮಾರ್ಕೋಸ್, ಮರಿಯಾ ಅನ್ನುವ ಕೂಗು ಕೇಳಿಬಂದಂತಾಯಿತು. ನಮ್ಮನ್ನು ಇಲ್ಲಿ ಕರೆಯುವವರು ಯಾರಪ್ಪಾ ಎಂಬ ಕುತೂಹಲದಿಂದ ತಿರುಗಿದರು. ಅರೆ ಅಮ್ಮ! ಹೌದು ಸೋಫಿಯಾ! ಆ ಸಾಲಿನ ಬಾಲದಲ್ಲಿ ನಿಂತಿದ್ದವಳು ಇವರಿಬ್ಬರನ್ನು ನೋಡಿ, ಕೂಗಿ ಓಡಿ ಬಂದಿದ್ದಳ್ಳು. ತಮ್ಮ ಕಣ್ಣುಗಳನ್ನೇ ನಂಬಲಾರದೆ, ಇಬ್ಬರೂ ಅವಳ ಬಳಿ ಓಡಿದರು. ಸೋಫಿಯಾ ಕೂಡ ಇದು ನಿಜವೇ? ನನ್ನ ಮಕ್ಕಳು ಇಲ್ಲಿ, ಅಮೇರಿಕದಲ್ಲಿ? ಇದು ನಿಜವಾಗಿರಲಿ

ಅಂದುಕೊಂಡೇ ಓಡಿದಳು. ಅಮ್ಮ ಕಟ್ರಿನಾಗೆ ಸಿಕ್ಕಿ ಸತ್ತಿದ್ದಳು ಅಂದುಕೊಂಡು ಬಂದ ಮಕ್ಕಳಿಗೆ ಕುಣಿಯುವ ಹಾಗಾಯಿತು. ನಡೆದುದನ್ನೆಲ್ಲ ಅಮ್ಮನಿಗೆ ಹೇಳಿದರು. ಎಲ್ಲೆಲ್ಲಿ ನೋಡಿದರು ಕಾಣುತ್ತಿರುವ ವಿನಾಶದಲ್ಲೂ ಅವರುಗಳಿಗೆ ಚೈತನ್ಯದಿಂದ ಜೀವ ಎದ್ದು ಕಂಡಿತ್ತು ಮನದಲ್ಲಿ.

ರಂಜಿನಿ ತನ್ನ ಅಪ್ಪನಿಗೆ ಮರಿಯಾ ಹಾಗೂ ಅವಳಣ್ಣ ಹೀಗೆ ಅಪ್ಪ ಅಮ್ಮನನ್ನು ಸೇರಲು ಬಂದು, ಕೊನೆಗೆ ಸಿಕ್ಕರೆ ಸಾಕು ನಮ್ಮಮ್ಮ ಅಂತ ಅವರಿಗೆ ಒದಗಿದ ಕಷ್ಟ ಹೇಳಿ, ಅಪ್ಪ, ಅವರಿಗೆ ಲೈಸೆನ್ಸ್ ಇದ್ದಿದ್ದರೆ, ಇವಾಗ ಅವರಪ್ಪನು ಬಿಟ್ಟ ಟ್ರಕ್ಕನ್ನು ನ್ಯು ಆರ್ಲಿಯೆನ್ಸಿಗೆ ತೆಗೆದುಕೊಂಡು ಹೋಗಬಹುದಿತ್ತಲ್ಲ, ಬಿಟ್ಟು ಹೋಗೊ ಬದಲು ಅಂದಳು. ಅದಕ್ಕೆ ಅಪ್ಪನು ಅರೆಕ್ಷಣ ಯೋಚಿಸಿ ಲೈಸೆನ್ಸು ಇಲ್ಲದೆ ಅವರು ಡ್ರೈವ್ ಮಾಡ್ಕೊಂಡು ಹೋಗಲಿಕ್ಕೆ ಆಗದಿದ್ದರೆ ಏನಾಗಿತ್ತು ಮಹಾ, ನ್ಯು ಆರ್ಲಿಯೆನ್ಸಿಗೆ ಟೋ ಮಾಡಿಸ ಬಹುದಾಗಿತ್ತಲ್ಲ ಅಂದರು. ಇದನ್ನು ಕೇಳಿದ ರಂಜಿನಿ ಹಾಗು ಅವರಮ್ಮನಿಗೆ ಏನು ಮರು ಹೇಳಲು ಮನಸ್ಸು ಬಾರದೆ ಅಪ್ಪನ ಟೋಯಿಂಗ್ ಪರಿಹಾರಕ್ಕೆ ಮುಖದಲ್ಲೆ ಛೀಮಾರಿ ವ್ಯಕ್ತಪಡಿಸಿ ನಿಂತು ತಟ್ಟೆ ಹಿಡಿದು ಹೊರಟೇ ಬಿಟ್ಟರು. ◈


# *Cloves*

## *From Rasam to Rasmalai*

**Quality Catering for**

**South and North Indian, Chaat, Indian Chinese**

**Please contact for all your catering needs**

**Vidya**

**408-595-5957**

**Email: clovesindia@yahoo.com**

**www.clovesindia.com**



# ಹಕ್ಕಿ ಗೂಡಿಗೆ ಸೇರಿತು....

**ವಲ್ಲೀಶ ಶಾಸ್ತ್ರಿ**
ಚಿನೋ ಹಿಲ್ಸ್, ಕ್ಯಾಲಿಫೋರ್ನಿಯ

'ಬೇಕರ್ಸ್ ಹಾಸ್ಪಿಟಲ್' ಎಂದು ಬರೆದಿತ್ತು ಒಂದು ಫ್ಹೈಲ್ ಮೇಲೆ. ಕುತೂಹಲದಿಂದ ಫ್ಹೈಲನ್ನು ಕೈಗೆತ್ತಿಕೊಂಡು ಪುಟ ತಿರುಗಿಸತೊಡಗಿದ್ದಳು ಪೂಜಾ. ರಾಜೇಂದ್ರ ಪ್ರಸಾದ್ ಕೆ ಆರ್ ಎಂದು ಬರೆದಿದ್ದ ಒಂದೆರಡು ಮೆಡಿಕಲ್ ರೆಕಾರ್ಡ್‌ಗಳು ಇದ್ದವು. ಆದರೆ ಕಾಯಿಲೆಯ ವಿಷಯ ಮಾತ್ರ ಅರ್ಥವಾಗಲಿಲ್ಲ. ಇನ್ನೊಂದೆರಡು ಕಾಗದಗಳಲ್ಲಿ ಅಮ್ಮನ ಹೆಸರು ಬರೆದಿತ್ತು. ಯಾವುದೇ ಕಾಗದಗಳಿಂದ ಅವಳ ಅಪ್ಪ ಮತ್ತು ಅಮ್ಮನ ಸಾವಿನ ಬಗ್ಗೆ ಸುಳಿವು ಸಿಗಲಿಲ್ಲವಾದರೂ, ಅವಳಿಗೆ ತಿಳಿದಂತೆ ಯಾವತ್ತೂ ಅಪ್ಪ ಅಮ್ಮ ಈ ಹಾಸ್ಪಿಟಲ್ ಬಗ್ಗೆ ಮಾತನಾಡಿರಲಿಲ್ಲ. ಆದ್ದರಿಂದ ಇನ್ನೂ ಕುತೂಹಲ.



*ಚಿತ್ರ: ಸೌಜನ್ಯ ಕೇಣಿ*

ಅನಂತು ಚಿಕ್ಕಪ್ಪ ಫೋನ್ ಮಾಡಿ ``ಅಪ್ಪ ಅಮ್ಮನಿಗೆ ಹೃದಯಾಘಾತವಾಗಿದೆ'' ಎಂದು ಹೇಳಿದ ಪದಗಳನ್ನಂತೂ ಪೂಜಾಳಿಗೆ ನಂಬಲಿಕ್ಕೆ ಸಾಧ್ಯವೇ ಆಗಿರಲಿಲ್ಲ. ಅಮೇರಿಕೆಗೆ ಮಗಳಿಗೆ ಫೋನ್ ಮಾಡಿ ಅಪ್ಪ ಅಮ್ಮನಿಗೆ ಹೃದಯಾಘಾತವಾಗಿದೆ ಎಂದು ತಕ್ಷಣ ಬರಲು ಹೇಳಿದ್ದ ಅನಂತುವೊಬ್ಬನಿಗೆ ಮಾತ್ರ ಪೂಜಾಳ ಮದುವೆ ವಿಷಯ ತಿಳಿದಿದ್ದು. ಆದರೆ ವಿಷಯವನ್ನು ಅಪ್ಪನಿಗೆ ಹೇಳುವ ಮೊದಲೇ ಅವರಿಬ್ಬರೂ ಆತ್ಮಹತ್ಯೆ ಮಾಡಿಕೊಂಡಿದ್ದು, ಅನಂತುವಿಗೂ ಏನೂ ಮಾಡಲು ತೋಚದಾಗಿತ್ತು. ಕೆಲಸವೆಲ್ಲಾ ಮುಗಿದ ಮೇಲೆ ತಿಳಿಸೋಣವೆಂದು ಸುಮ್ಮನಾಗಿದ್ದ. ಪೂಜಾ ಬಂದಾಗ ಅವಳ ಮದುವೆಯ ವಿಷಯ ಯಾರಿಗೂ ಗೊತ್ತಿಲ್ಲವೆಂದು, ಅದನ್ನು ಸದ್ಯಕ್ಕೆ ಯಾರಿಗೂ ಹೇಳಬೇಡವೆಂದು ಪೂಜಾಳಿಗೆ ಅನಂತು ತಿಳಿಸಿದ್ದ. ಪೂಜಾಳಿಗೆ ಅಪ್ಪ ಅಮ್ಮ ತನ್ನ ಮದುವೆಯ ವಿಚಾರವಾಗಿ ಬಹಳ ಹಚ್ಚಿಕೊಂಡು ಹೃದಯಾಘಾತಕ್ಕೊಳಗಾದರೆ? ಎಂಬ ಅನುಮಾನವೂ ಬಂದಿತ್ತು. ಹೀಗೆ ಆಗುತ್ತದೆ ಎಂದಿದ್ದರೆ ತಾನು ಮದುವೆಯೇ ಬೇಡವೆನ್ನುತ್ತಿದ್ದನೇನೋ ಎಂಬ ಯೋಚನೆ ಬಂದಿತ್ತು ಮನಸ್ಸಿನಲ್ಲಿ. ಅವರಜ್ಜಿ, ``ಅಮೇರಿಕೆಯಲ್ಲಿ ಒಬ್ಬಳೇ ಏಕಮ್ಮ ಇರುತ್ತೀಯ? ಇಲ್ಲೇ ಬಾ. ನಾವೆಲ್ಲಾ ಇದ್ದೇವಲ್ಲ?'' ಎಂದಿದ್ದರು. ಕನ್ನಡ ಅಷ್ಟಾಗಿ ಬರದ ಅವಳಿಗೆ ಏನು ಹೇಳಬೇಕೆನ್ನಿಸಿತೋ ಅದನ್ನು ಹೇಳಲಿಕ್ಕಾಗದೇ ``ಹ್ಞೂಂ'' ಎಂದು ಸುಮ್ಮನಾಗಿದ್ದಳು ಪೂಜಾ. ತನ್ನ ಮದುವೆ ಆಗಿದೆ ಎಂದು ಹೇಳಲು ನಾಲಿಗೆ ತುದಿಗೆ ಬಂದಿದ್ದರೂ, ತನ್ನ ಚಿಕ್ಕಪ್ಪ ಹೇಳಿದ ಮಾತು ನೆನಪಾಗಿ ಸುಮ್ಮನಾಗಿದ್ದಳು. ಅಪ್ಪ ಅಮ್ಮ ಇಬ್ಬರನ್ನೂ ಒಂದೇ ದಿವಸ ಕಳೆದುಕೊಂಡ ನತದೃಷ್ಟ ಮಗಳು ಪೂಜಾ. ಸಾವಿನ ನಂತರದ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಅಮೇರಿಕೆಗೆ ಹೊರಟಿದ್ದ ಪೂಜಾಳಿಗೆ ವಿಮಾನ ನಿಲ್ದಾಣದಲ್ಲಿ ಅನಂತು ``ಪೂಜಾ, ನಿಮ್ಮಪ್ಪ ಸಾಯುವ ಹಿಂದಿನ ದಿವಸ ಎಲ್ಲಾ ವಿಷಯವನ್ನು ಹೇಳಿದ್ದಾನೆ. ಒಂದು ದಿವಸ ಅಮೇರಿಕೆಗೆ ಹೋದ ಮೇಲೆ ಫೋನ್ ಮಾಡು, ನಾನು ಎಲ್ಲ ವಿಷಯ ಹೇಳುತ್ತೇನೆ. ಈಗ ಹೇಳುವ ವಿಷಯವಲ್ಲ. ಸ್ವಲ್ಪ ದಿನಗಳು ಕಳೆಯಲಿ. ನಮ್ಮನ್ನು ಮರೆಯ ಬೇಡ. ಅಗಾಗ್ಗೆ ಫೋನ್ ಮಾಡುತ್ತಿರು.'' ಎಂದು ಹೇಳಿ ಬೀಳ್ಕೊಟ್ಟಿದ್ದ ಅನಂತು ಚಿಕ್ಕಪ್ಪನ ಮಾತು ಪೂಜಾಳ ತಲೆಯಲ್ಲಿ ಕೊರೆಯುತ್ತಿತ್ತು.

ನ್ಯೂಯಾರ್ಕ್ ಬಂದು ತಲಪಿದ ಪೂಜಾಳಿಗೆ ಅಪ್ಪ ಅಮ್ಮನ ಸಾವಿನ ಬಗ್ಗೆ ಏನೋ ಸಂಶಯ. ಯಾವತ್ತೂ ಬಿಪಿ ಎಂದು ನರಳಿದವರಲ್ಲ. ಒಂದು ದಿನವೂ ಎದೆ ನೋವೆಂದು ಬಳಲಿದವರಲ್ಲ. ಅದು ಹೇಗೆ ಇಬ್ಬರೂ ಒಂದೇ ದಿವಸ ಹೃದಯಾಘಾತದಿಂದ ಸತ್ತರು ಎಂಬುದೇ ಒಂದು ಗೂಢ ಪ್ರಶ್ನೆ. ಉತ್ತರಕ್ಕಾಗಿ ಅಪ್ಪ ಅಮ್ಮನ ನ್ಯೂಯಾರ್ಕ್ ಮನೆ ಶೋಧಿಸತೊಡಗಿದ್ದಳು.

ಅಪ್ಪನ ಮುದ್ದಿನ ಮಗಳು ಪೂಜಾ. ಅಪ್ಪ ಅಮ್ಮ ಒಬ್ಬಳೇ ಮಗಳನ್ನು ಬಹಳ ಮುದ್ದಿನಿಂದ ಸಾಕಿದ್ದರು. ಮಗಳ ಯಾವುದೇ ಆಸೆಗೆ ಅಡ್ಡಿಬಂದಿರಲಿಲ್ಲ. ಪೂಜಾ ಹುಟ್ಟಿದ್ದು ಆಗಸ್ಟ್ ೩, ೧೯೮೦. ಹುಟ್ಟಿದ್ದು ಬೆಂಗಳೂರಿನಲ್ಲಿ. ಮಹಾಗಣಪತಿಯ ಪೂಜಾ ಫಲದಿಂದ, ಹತ್ತು ವರ್ಷದ ನಂತರ ಹುಟ್ಟಿದ ಮಗುವಿಗೆ ಪೂಜಾ ಎಂದೇ ಹೆಸರಿಟ್ಟಿದ್ದರು. ಮಕ್ಕಳಿಲ್ಲದ ವರ್ಷಗಳಲ್ಲಿ ಮಾಡದ ಪೂಜೆಗಳಿಲ್ಲ, ವ್ರತಗಳಿಲ್ಲ. ಅಂತೂ ಮದುವೆಯಾದ ಹತ್ತು ವರ್ಷಕ್ಕೆ ಒಲಿದ ಲಕ್ಷ್ಮಿಯನ್ನು ಬಹಳ ಸಂತೋಷದಿಂದ ಬರಮಾಡಿಕೊಂಡಿದ್ದರು. ಪ್ರಸಾದ್‌ಗೆ ಗಂಡಾಗಿದ್ದರೆ ಚೆನ್ನಾಗಿತ್ತೇನೋ ಎಂದು ಸಣ್ಣ ಕೊರಗಿದ್ದರೂ, ತಮ್ಮ ಮಗಳು ಹುಟ್ಟಿದಾಗ ಆದ ಸಂತೋಷ ಅಷ್ಟಿಷ್ಟಲ್ಲ.

ಪ್ರಸಾದ್ ಜಯಶ್ರೀಯ ಕೈಹಿಡಿದಿದ್ದು ೧೯೭೦ರ ಜೂನ್ ೬ರಂದು. ಆಗಿನ್ನೂ ಪ್ರಸಾದ್‌ಗೆ ೨೮ ವರ್ಷ. ಜಯಶ್ರೀ ಅವರಿಗೆ ೨೨ ವರ್ಷ. ಮೂರು ವರ್ಷ ಮಕ್ಕಳು ಬೇಡ ಎನ್ನುವದರಲ್ಲೇ ಹಕ್ಕಿಗಳಂತೆ ಓಡಾಡಿ ಯೌವನ ಜೀವನ ಸಾಗಿತ್ತು. ನಂತರ ಮಕ್ಕಳಿಗಾಗಿ ನಡೆದ ಪ್ರಯತ್ನ ವಿಫಲವಾದಾಗ ವಿಷಯ ಸ್ವಲ್ಪ ಕಠಿಣವಾಗುತ್ತಾ ಬಂದಿತ್ತು. ದೊಡ್ಡವರು ಹೇಳಿದ ಎಲ್ಲ ಔಷಧಿಗಳನ್ನೂ ದೇಹದ ಮೇಲೆ ಪ್ರಯೋಗಿಸಲಾಗಿತ್ತು. ವಿವಿಧ ಕಾಮಕ್ರೀಡೆಗಳ ಪ್ರಯೋಗವೂ ಆಗಿತ್ತು. ಆದರೂ ಏನು ಫಲ ಬಂದಿರಲಿಲ್ಲ.

೧೯೭೯ ಡಿಸೆಂಬರ್ ೩೧. ಪ್ರಸಾದ್ ಅವರ ಮನೆಯಲ್ಲಿ ಪ್ರತಿವರ್ಷ ನಡೆಯುವ ನ್ಯೂ ಇಯರ್ ಡೇ ಪಾರ್ಟಿಗಿಂತ ಈ ವರ್ಷದ ಪಾರ್ಟಿ ಭಿನ್ನವಾಗಿತ್ತು. ಪ್ರಸಾದ್ ಮತ್ತು ಜಯಶ್ರೀಯವರ ಆನಂದಕ್ಕೆ ಪಾರವೇ ಇಲ್ಲ. ಅಂದು ತಮ್ಮೆಲ್ಲರ ಸ್ನೇಹಿತರಿಗೆ ಜಯಶ್ರೀ ಗರ್ಭವತಿಯೆಂದು ತಿಳಿಸಲು ಇಬ್ಬರಿಗೂ ಬಲು ಹರ್ಷವಾಗಿತ್ತು. ಅದೂ ಮದುವೆಯಾಗಿ ಹತ್ತು ವರ್ಷದ ನಂತರ. ದೇವರ ಪೂಜಾಫಲದಿಂದಲೇ ಎಂದು ನಂಬಿದ್ದ ಪ್ರಸಾದ್ ಮತ್ತು ಜಯಶ್ರೀ ಅವರಿಗೆ ದೇವರು ಕೈ ಬಿಡುವುದಿಲ್ಲವೆಂದು ನಂಬಿಕೆಯಿಟ್ಟಿದ್ದರು. ಪ್ರಸಾದ್ ಹೆಸರು ಪಡೆದ ದಂತ ವೈದ್ಯರು. ಚೆನ್ನಾಗಿ ಹಣ ಮಾಡಿದ್ದರು. ತಂದೆಯವರ ಆಸ್ಪತ್ರೆಯಿದ್ದರೂ ಸ್ವಂತ ಪ್ರ್ಯಾಕ್ಟೀಸ್ ಮಾಡುತ್ತಿದ್ದರು. ಹಣದ ಕೊರತೆಯಿಲ್ಲದ ಇವರಿಬ್ಬರೂ ಪ್ರತಿ ವರ್ಷ ತಪ್ಪದೆ ಒಂದಾದರೂ ಒಂದು ಸ್ಥಳಕ್ಕೆ ಹೋಗಿ ಒಂದು ತಿಂಗಳು ರಜೆಯನ್ನು ಕಳೆದು ಬರುತ್ತಿದ್ದರು. ಹೀಗೆ ಸಿಂಗಪೂರ್, ಮಲೇಷಿಯ, ಯೂರೋಪ್ ದೇಶಗಳನ್ನೆಲ್ಲಾ ಸುತ್ತಿದ್ದರು.

೧೯೮೦ರ ವರ್ಷ ಬಹಳ ಅದೃಷ್ಟದ ವರ್ಷ ಪ್ರಸಾದ್‌ರಿಗೆ. ಅವರಿಗೆ ಮುತ್ತಿನಂತ ಮಗಳು ಹುಟ್ಟಿದ್ದು ಅದೇ ವರ್ಷ ಮತ್ತು ಅಮೇರಿಕೆಯಲ್ಲಿನ ವಿಶ್ವ ದಂತ ವೈದ್ಯರ ಸಮ್ಮೇಳನಕ್ಕೆ ಬಂದಾಗ ನ್ಯೂಯಾರ್ಕಿನ ಒಂದು ಪ್ರಸಿದ್ಧ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಕರೆ ಬಂದಿದ್ದು ಅದೇ ವರ್ಷ. ಸಮ್ಮೇಳನಕ್ಕೆ ಬಂದಾಗ ನೋಡಿದ್ದ ಅಮೇರಿಕೆಯ ಮೇಲೆ ಬಹಳ ಪ್ರೀತಿ ಹುಟ್ಟಿತ್ತು. ಕೆಲಸದ ಕರೆ ಬಂದಾಗ, ತಮ್ಮ ಆಸೆ ಪೂರೈಸಿದಂತೆ ಮತ್ತು ಮುಂದೆ ತಮ್ಮ ಮಗಳಿಗೆ ಒಳ್ಳೆಯ ವಿದ್ಯಾಭ್ಯಾಸಕ್ಕೆ ಸಹಾಯವಾಗುತ್ತದೆ ಎಂದು ಯೋಚಿಸಿ, ಕೆಲಸಕ್ಕೆ ಒಪ್ಪಿದ್ದರು. ಅಮೇರಿಕೆಯಲ್ಲಿ ಬಂದು ತಮ್ಮ ಜೀವನ ವಿಧಾನದ ಬದಲಾವಣೆ ಅವರೆಣಿಸಿದಂತೆ ಸುಲಭವೇನಿರಲಿಲ್ಲ. ಅಮೇರಿಕೆಯಲ್ಲಿ ಬಂದು ಮತ್ತೆ ಇಲ್ಲಿಗೆ ಬೇಕಾಗುವ ಪರೀಕ್ಷೆಗಳನ್ನು ಪಾಸು ಮಾಡಿ ತಮ್ಮ ವೃತ್ತಿಯನ್ನು ಪ್ರಾರಂಭಿಸಲು ಹೆಣಗಾಡಬೇಕಾಯಿತು. ಸಮಾಧಾನದ ಮಾತೆಂದರೆ ಹಣದ ಖರ್ಚನ್ನೆಲ್ಲಾ ನ್ಯೂಯಾರ್ಕಿನ ಆಸ್ಪತ್ರೆಯವರೇ ಭರಿಸಿದ್ದು.

ಇನ್ನೂ ವರ್ಷತುಂಬದ ಮಗುವಾಗಿ ಬಂದ ಪೂಜಾ, ಅವಳು ಯೂನಿವರ್ಸಿಟಿ ಹತ್ತುವ ಹೊತ್ತಿಗೆ ಅಮೇರಿಕೆಯ ಸಂಸ್ಕೃತಿಯಲ್ಲಿ ಬೆರೆತು ಹೋಗಿದ್ದಳು. ಮಾತಿನ ಶೈಲಿ, ಧರಿಸುವ ಬಟ್ಟೆ ಎಲ್ಲಾ ಪಾಶ್ಚಾತ್ಯ ಸಂಸ್ಕೃತಿ. ನಾಲ್ಕೈದು ಬಾರಿ ಮಾತ್ರ ಬೆಂಗಳೂರಿಗೆ ಹೋಗಿದ್ದಳು. ಕನ್ನಡ ಮರೆತಾಗಿತ್ತು. ಎಲ್ಲೋ ಹೂಂ, ಸಾಕು, ಬೇಕು ಅನ್ನುವ ಮಾತುಗಳನ್ನು ಬಿಟ್ಟರೆ ಬೇರೇನು ಕನ್ನಡ ಬರುತ್ತಿರಲಿಲ್ಲ. ಬೆಂಗಳೂರಿಗೆ ಬಂದಾಗ ಅವಳ ಸಂಬಂಧಿಗಳೂ ಸಹ ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದರು. ಪೂಜಾ ಬಹಳ ಮಾತುಗಾರ್ತಿ. ಶಾಲೆಗಳಲ್ಲಿ ಚರ್ಚಾಸ್ಪರ್ಧೆಗಳಲ್ಲಿ ಪ್ರಥಮಸ್ಥಾನವನ್ನು ಪಡೆಯುತ್ತಿದ್ದ ಪೂಜಾ, ಕಾಲೇಜಿನಲ್ಲೂ ಮುಂದಾಗಿದ್ದಳು. ಹೀಗಾಗಿ ಅವಳಿಗೆ ಗಂಡು ಹುಡುಗರು ಮತ್ತು ಹೆಣ್ಣು ಹುಡುಗಿಯರು ಬಹಳಷ್ಟು ಜನ ಸ್ನೇಹಿತರು. ಅವಳ ಸ್ನೇಹ ಯಾವುದೇ ದೇಶಕ್ಕೆ ಅಥವ ಮತಕ್ಕಾಗಲಿ ಸೀಮಿತವಾಗಿರಲಿಲ್ಲ. ಅವಳು ನ್ಯೂಯಾರ್ಕ್ ರಾಜ್ಯದ ಆಲ್ಬನಿ ನಗರದ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಓದುತ್ತಿದ್ದಳು.

ಪ್ರಸಾದ್ ಎಷ್ಟೇ ದೇಶಗಳನ್ನು ಸುತ್ತಿದ್ದರೂ, ವೃತ್ತಿಯಲ್ಲಿ ದಂತವೈದ್ಯರಾದರೂ, ತಮ್ಮ ಸಂಸ್ಕೃತಿಯನ್ನು ಬಿಟ್ಟಿರಲಿಲ್ಲ. ದಿನಾ ಬೆಳಿಗ್ಗೆ ದೇವರ ಪೂಜೆ, ಸಂಧ್ಯಾವಂದನೆ ಮಾಡುವ ಪದ್ಧತಿ ಇಟ್ಟುಕೊಂಡಿದ್ದರು. ಮಗಳ ವಿದ್ಯಾಭ್ಯಾಸವೂ ಮುಗಿಯುತ್ತಾ ಬಂದಿತ್ತು. ಅವಳಿಗೆ ಕೆಲಸ ಸಿಗುವುದರಲ್ಲಿ ಸಂಶಯವೇ ಇರಲಿಲ್ಲ. ಏಕೆಂದರೆ ಅವಳ ಯೂನಿವರ್ಸಿಟಿಗೇ ಬಂದ ಲಾಯರ್‌ಗಳು ಅವಳ ಮಾತಿನ ಚುರುಕು ಮತ್ತು ಬುದ್ಧಿವಂತಿಕೆಯನ್ನು ನೋಡಿ ತಮ್ಮ ಕಂಪನಿಗಳಲ್ಲಿ ಕೆಲಸ ಮಾಡಲು ಕರೆ ಕೊಟ್ಟಿದ್ದರು. ಅದರಲ್ಲೂ ನ್ಯೂಯಾರ್ಕ್‌ನಲ್ಲಿನ ಸಂಸ್ಥೆಗಳೇ ಬಹಳಷ್ಟಿದ್ದವು. ಅವರ ಅಪಾರ್ಟ್‌ಮೆಂಟ್‌ಗೆ ಹತ್ತಿರವಿರುವ ಒಳ್ಳೆಯ ಕಂಪನಿಯಲ್ಲಿ ಕೆಲಸ ಸಿಕ್ಕಿದರೆ ಸಂತೋಷದ ವಿಷಯವೆಂದು ಕನಸುಕಂಡಿದ್ದರು ಪೂಜಾಳ ಅಪ್ಪ ಅಮ್ಮ.

ತನ್ನ ಅಪ್ಪ ಪ್ರೀತಿಯ ಮಗಳಿಗೇ ಏನೂ ಇಲ್ಲವೆಂದಿಲ್ಲವೆಂಬ ಧೈರ್ಯದ ಮೇಲೆ ಪೂಜಾ ತನ್ನ ಬಾಯ್ ಫ್ರೆಂಡ್ ವಿಚಾರವನ್ನು ಅಪ್ಪ ಅಮ್ಮನ ಮುಂದಿಟ್ಟಳು. ಸಿಡಿಲಿನಂತಾದ ಸುದ್ದಿಯಾದರೂ ಒಂದಿಷ್ಟೂ ಮನಶ್ಚಲಿತರಾಗದೆ, ಬಹಳ ಸಮಾಧಾನದಿಂದ ತೆಗೆದುಕೊಂಡ ಅಪ್ಪ ಅಮ್ಮ ಇಬ್ಬರೂ, ಮಗಳಿಗೆ ಮದುವೆಯ ಬಗ್ಗೆ ತಿಳುವಳಿಕೆ ಹೇಳಲು ಎಷ್ಟು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಇಬ್ಬರದೂ ಬೇರೆ ಬೇರೆ ಧರ್ಮ. ಆಚಾರ ವಿಚಾರಗಳು ಬೇರೆ ಎಂದು ಎಷ್ಟು ತಿಳಿಹೇಳಿದರೂ ಪೂಜಾ ಅದಕ್ಕೆ ಒಪ್ಪಲಿಲ್ಲ. ಪ್ರಸಾದ್ ಮತ್ತು ಜಯಶ್ರೀ ಅವರು ಮಗಳೆದುರಿಗೆ ಏನೂ ತೋರ್ಪಡಿಸಿಕೊಳ್ಳದಿದ್ದರೂ, ರಾತ್ರಿಯೆಲ್ಲಾ ತಮ್ಮ ಕೊಠಡಿಯಲ್ಲಿ ದುಃಖಗೊಂಡು ಮಾತನಾಡಿಕೊಂಡರು. ಪ್ರಸಾದರಿಗಂತೂ ಏಕಾದರೂ ಅಮೇರಿಕೆಗೆ ಬಂದೆನೋ ಅನ್ನಿಸಿತ್ತು. ''ಬಂದಾದ ಮೇಲೆ ಈಗ ಅದರ ಬಗ್ಗೆ ಯೋಚಿಸಿ ಪ್ರಯೋಜನವಿಲ್ಲ. ಇನ್ನೂ ಸ್ವಲ್ಪ ಬುದ್ಧಿ ಹೇಳಿ ನೋಡೋಣ, ಇಲ್ಲ ಅಂದ್ರೆ, ಅವಳಿಷ್ಟ ಅವಳು ಮದುವೆ ಮಾಡಿಕೊಳ್ಳಲಿ. ಈಗ ಬೆಂಗಳೂರಿನಲ್ಲೂ ಅವಳ್ಗೇ ಅಂತ ಯಾರಿದಾರೆ. ಇನ್ನೊಂದು ತಲೆಮಾರು ಹೋದರೆ ಅವಳನ್ನ ಯಾರೂ ಮಾತನಾಡ್ಸೋಲ್ಲ'' ಎಂದು ಸಮಾಧಾನ ಪಡಿಸಿದವರು ಜಯಶ್ರೀ. ''ದೇವರು ಎಷ್ಟು ಲೆಕ್ಕ ಹಾಕ್ತಿರ್ತಾನೆ ನೋಡು, ನಾವೆಷ್ಟೇ ಮುಚ್ಚಿಟ್ರೂ, ದೇವರು ಅದನ್ನ ಸರಿಪಡಿಸ್ತಾನೆ ನೋಡು'' ಎಂದು ನೊಂದು ನುಡಿದವರು ಪ್ರಸಾದ್.

ಬೆಳಿಗ್ಗೆ ಎಲ್ಲಾ ತಿಂಡಿಗೆ ಟೇಬಲ್ ಮೇಲೆ ಕುಳಿತಿದ್ದಾಗ, ಪ್ರಸಾದ್‌ರೇ ಮೌನ ಮುರಿದು ''ಮರಿ, ನಿನ್ನ ಬಾಯ್ ಫ್ರೆಂಡ್ ತುಂಬಾ ಇಷ್ಟಾ ಆಗಿದ್ದರೆ, ಅವನನ್ನೇ ಮದುವೆ ಮಾಡ್ಕೋ.'' ಎಂದರು. ಪೂಜಾಳಿಗಾದ ಸಂತೋಷ ಅಷ್ಟಿಷ್ಟಲ್ಲ. ಒಮ್ಮೆಯೇ ಬಂದು ಅಪ್ಪನನ್ನು ತಬ್ಬಿ ಮುತ್ತಿಟ್ಟಳು. ''ಹಕ್ಕಿ ತನ್ನ ಗೂಡಿಗೆ ಸೇರಿಕೊಂಡಿತಮ್ಮ'' ಎಂದು ಹೇಳುವಾಗ ಪ್ರಸಾದರ ಕಣ್ಣಲ್ಲಿ ನೀರು ತುಂಬಿತ್ತು. ಅದರರ್ಥವಾಗಲಿಲ್ಲ ಪೂಜಾಳಿಗೆ. ಸ್ವಲ್ಪ ಯೋಚಿಸಿ ಸುಮ್ಮನಾದಳು. ಪೂಜಾಳಿಗೆ ಗೊತ್ತಿತ್ತು ಅವರಪ್ಪ ಅವಳಿಗೆ ಬೇಡ ಎಂದು ಹೇಳಿ ಅಭ್ಯಾಸವೇ ಇಲ್ಲ. ಅವಳೂ ಸಹ ತನಗೆ ಇಷ್ಟವಿಲ್ಲದಿದ್ದವನ್ನು ಕೇಳುತ್ತಲೂ ಇರಲಿಲ್ಲ. ಆದ್ದರಿಂದ ಪ್ರಸಾದ್‌ರಿಗೆ ಪೂಜಾ ಏನಾದರೂ ಕೇಳಿದರೆ ಅದರ ಬಗ್ಗೆ ಬಹಳ ಯೋಚಿಸಿರುತ್ತಾಳೆ ಎಂದು ಗೊತ್ತು.

ಜಯಶ್ರೀಯವರಿಗೆ ಮಗಳು ಬಂದು ತಬ್ಬಿಕೊಂಡಾಗ ಕಣ್ಣಲ್ಲಿ ಜೊಳ್ಳೆಂದು ನೀರೇ ಹರಿದಿತ್ತು. ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದ್ದರು. ಪೂಜಾಳನ್ನು ಪಡೆಯಲು ಪ್ರಸಾದರು ಮಾಡಿದ ತ್ಯಾಗವನ್ನು ನೆನೆದು ಅಳು ಬಂದಿತ್ತು. ಯಜಮಾನರ "ಹಕ್ಕಿ ತನ್ನ ಗೂಡಿಗೆ ಸೇರಿಕೊಂಡಿತು" ಎನ್ನುವ ಮಾತಿನ ಹಿಂದೆ ಇದ್ದ ಗೂಢವಾದ ಅರ್ಥ ಜಯಶ್ರೀಯವರಿಗೆ ಮಾತ್ರ ತಿಳಿದಿತ್ತು.

ಪೂಜಾಳ ಬಾಯ್ ಫ್ರೆಂಡ್ ಅವಳ ಜೊತೆಯಲ್ಲೇ ಓದುತ್ತಿದ್ದ ಕರೀಮ್, ಅಮೇರಿಕೆಯಲ್ಲೇ ಹುಟ್ಟಿ ಬೆಳೆದ ಹುಡುಗ. ಇವನ ಎರಡು ತಲೆಮಾರಿನ ಹಿಂದಿನವರು ಅಂದರೆ ಇವರ ಮುತ್ತಜ್ಜ ಮೂಲತಃ ಅವಿಭಾಜ್ಯ ಭಾರತದ ಲಾಹೋರ್‌ನಿಂದ ಬಂದು ಅಮೇರಿಕೆಯಲ್ಲಿ ನೆಲಸಿದವರು. ರಜೆಯಲ್ಲಿ ಜೊತೆಯಲ್ಲಿ ಕಾಲಕಳೆಯುತ್ತಿದ್ದರು. ಒಂದೆರಡು ದಿವಸ ನ್ಯೂಯಾರ್ಕಿನ ಅಪ್ಪ ಅಮ್ಮನ ಮನೆಗೂ ಕರೆದುಕೊಂಡು ಬಂದಿದ್ದಳು. ಸ್ನೇಹ ಗುಪ್ತವಾಗಿ ಪ್ರೇಮವಾಗಿ ಬೆಳೆದಿತ್ತು. ಪೂಜಾಳ ಮದುವೆ ನ್ಯೂಯಾರ್ಕಿನ ಒಂದು ದೊಡ್ಡ ಮದುವೆ ಹಾಲಿನಲ್ಲಿ ನಡೆದಿತ್ತು. ಪ್ರಸಾದ್‌ರವರು ಬೆಂಗಳೂರಲ್ಲಿ ಯಾರಿಗೂ ತಿಳಿಸಿರಲಿಲ್ಲ. ಅಮೇರಿಕೆಯ ಸ್ನೇಹಿತರಿಗೆ ಮಾತ್ರ ಮದುವೆಯ ಕರೆಯೋಲೆ ಕಳುಹಿಸಿದ್ದರು. ಮದುವೆ ಹಿಂದೂ ಧರ್ಮದ ಪ್ರಕಾರ ಒಂದು ದಿವಸ ಮತ್ತು ಇಸ್ಲಾಮ್ ಧರ್ಮದ ಪ್ರಕಾರ ಒಂದು ದಿವಸ ನಡೆದಿತ್ತು. ಪೂಜಾ ಇಸ್ಲಾಮ್ ಧರ್ಮಕ್ಕೆ ಮತಾಂತರಿಸಲು ಕರೀಮ್ ಆಗಲಿ ಅವನ ಕಡೆಯವರಾಗಲಿ ಬಲವಂತ ಮಾಡಿರಲಿಲ್ಲ. ಪ್ರಸಾದ್ ಮತ್ತು ಜಯಶ್ರೀ ಅವರು ಮದುವೆ ಮುಗಿದ ನಂತರ ಬೆಂಗಳೂರಿಗೆ ಖುದ್ದಾಗಿ ಹೋಗಿ ತಮ್ಮ ಕಡೆಯವರಿಗೆಲ್ಲಾ ಆದ ವಿಷಯ ತಿಳಿಸಿ ಒಂದು ಪಾರ್ಟಿ ಮಾಡಿ ಬರೋಣವೆಂದು ನಿಶ್ಚಯಿಸಿದ್ದರು. ಮದುವೆ ಎಲ್ಲಾ ಸಾಂಗವಾಗಿ ನಡೆದುದ್ದನ್ನು ನೋಡಿ ಅವರಿಗೇ ನಂಬಲಾಗಲಿಲ್ಲ.

ಮದುವೆಯಾಗಿ ಒಂದು ತಿಂಗಳಲ್ಲಿ ಪ್ರಸಾದ್ ಮತ್ತು ಜಯಶ್ರೀ ಬೆಂಗಳೂರಿಗೆ ಹೊರಟರು. ಪೂಜಾ ತಾನೂ ಬರುವುದಾಗಿ ಹೇಳಿದರೂ, ಈ ಬಾರಿ ಬೇಡ, ಮುಂದಿನ ವರ್ಷ ಗಂಡನ ಜೊತೆ ಹೋಗುವಂತೆ ಎಂದು ಸಮಾಧಾನ ಮಾಡಿದರು. ಬೆಂಗಳೂರಿನಲ್ಲಿ ಬಂದು ಒಂದೆರಡು ದಿವಸ ಯಾರಿಗೂ ಏನೂ ಹೇಳಲಿಲ್ಲ. ಬಹಳ ವರ್ಷಗಳ ನಂತರ ಬೆಂಗಳೂರಿಗೆ ಬಂದಿದ್ದ ಪ್ರಸಾದ್ ಮತ್ತು ಜಯಶ್ರೀ ಅವರಿಗೆ ಬೆಳೆದಿರುವ ಬೆಂಗಳೂರು ನೋಡುವ ಯಾವ ಹಂಬಲವೂ ಇರಲಿಲ್ಲ. ತಮ್ಮ ಮಗಳ ವಿವಾಹದ ವಿಚಾರವನ್ನು ಮನೆಯವರಿಗೆ ತಿಳಿಸುವ ವಿಚಾರವೊಂದೇ ತಲೆಯಲ್ಲಿ ಓಡುತ್ತಿತ್ತು. ಅದು ಹೇಗೆ ಮನೆಯವರಿಗೆ ತಿಳಿಸದೇ ಮದುವೆ ಮಾಡಿದೆ ಎಂದರೆ ಏನು ಹೇಳುವುದು? ಅದರಲ್ಲೂ ಅನ್ಯ ಜಾತಿಯವರ ಹುಡುಗ ಎಂದು ಅಪ್ಪನ ಮುಂದೆ ಹೇಳುವ ಧೈರ್ಯ ಪ್ರಸಾದ್‌ಗೆ ಎಲ್ಲಿಂದ ಬರಬೇಕು. ಅಂತೂ ಧೈರ್ಯಮಾಡಿ ರಾತ್ರಿ ಊಟದ ನಂತರ ಪ್ರಸಾದ್ ತಮ್ಮ ಅಪ್ಪ ಅಮ್ಮನನ್ನು ಕರೆದು ಕೂರಿಸಿಕೊಂಡು "ಅಪ್ಪ, ಅಮ್ಮ... ಒಂದು ವಿಷಯ ಹೇಳಬೇಕು. ಅದು ಮನೆತನಕ್ಕೆ ಒಳ್ಳೆ ಹೆಸರು ತರೋ ಅಂತಹದಲ್ಲ." ಎಂದು ವಿಷಯ ಪ್ರಸ್ತಾಪಿಸಿದರು.

ಪ್ರಸಾದರ ತಂದೆ ಡಾ॥ಚಂದ್ರಶೇಖರ್ ಅಗಲೇ ೮೦ ವರ್ಷ ವಯಸ್ಸಿನ ಮುದುಕರು. ಆದರೂ ಸಿಡಿಗೋಪಿ. ಅವರು ಬಹಳ ಪ್ರಸಿದ್ಧ ಹೃದಯ ವೈದ್ಯರೂ ಹೌದು. ತಮ್ಮ ಎರಡನೇ ಮಗ ತಾವು ಬೆಳೆಸಿದ ಆಸ್ಪತ್ರೆಯನ್ನು ನಡೆಸಿಕೊಂಡು ಹೋಗುತ್ತಿದ್ದಾನೆ ಎಂದು ಅವನ ಮೇಲೆ ಪ್ರೀತಿ ಜಾಸ್ತಿ. ಮೊದಲನೇ ಮಗ ತಮ್ಮನ್ನೆಲ್ಲಾ ಬಿಟ್ಟು ಅಮೇರಿಕೆ ಹೋದನೆಂದು ಮುಂಚಿನಿಂದಲೂ ಮನಸ್ಸಿಗೆ ಅಸಮಾಧಾನ. ಈಗ ಮನೆತನಕ್ಕೆ ಒಳ್ಳೆಯ ಹೆಸರು ತರದಂತಹ ಕೆಲಸವೆಂದಾಗಲಂತೂ ಕೋಪ ಮುಗಿಲೇರಿತ್ತು. "ನೀನು ನಮ್ಮ ಆಸ್ಪತ್ರೆ ಬಿಟ್ಟು ಅಮೇರಿಕದಲ್ಲಿ ಏನೋ ಕಡಿದ್ದಾಕೋನ್ ತರ ಹೋದಾಗಲೆ ನಮ್ಮ ಮನೆತನದ ಮಾನ ಹೋಗಿದೆ, ಈಗಿನ್ನೇನ್ ಮಾಡ್ದೆ ಹೇಳು?" ಎಂದು ಗುಡುಗಿದರು.

ಪ್ರಸಾದ್‌ಗೆ ಆ ಗುಡುಗಿದ್ದನ್ನು ಕೇಳಿ ಏನು ಹೇಳಬೇಕೆಂದಿತ್ತೋ ಅದೂ ಮರೆತು ಹೋಗಿತ್ತು. ಸುಮ್ಮನೆ ತಲೆ ಬಗ್ಗಿಸಿ ಕೂತಿದ್ದರು. ಜಯಶ್ರೀ ಧೈರ್ಯತೆಗೆದುಕೊಂಡು "ಇಲ್ಲ ಮಾವ... ನಿಮ್ಮ ಮಾತು ಕೇಳ್ಕೊಂಡು ಇಲ್ಲೇ ಇದ್ದಿದ್ದರೆ ಚೆನ್ನಾಗಿತ್ತು. ಈಗ ಮಾಡಿದ್ದು ತಪ್ಪಾಯ್ತು. ಅದನ್ನೇನು ಬದಲಾಯಿಸೊಕ್ಕಾಗೊಲ್ಲಾ. ನಿಮ್ಮ ಮೇಲೆ ನಮಗೆ ಅಪಾರ ಗೌರವವಿದೆ. ನೀವೆ ದಾರಿ ತೋರಿಸ್ಬೇಕು" ಎಂದರು.

"ಕಳೆಯೋ ಮಾನ ಎಲ್ಲಾ ಕಳ್ದ್ ಮೇಲೆ, ಇನ್ನೇನಿದೆ ವಿಷಯ ಹೇಳು?" ಮತ್ತೆ ಗುಡುಗಿದರು ಚಂದ್ರಶೇಖರ್.
ಇವರ ಗುಡುಗಾಟ ಕೇಳಿ ಏನೋ ನಡೆದಿದೆ ಎಂದು ಅವರ ಎರಡನೇ ಮಗ, ಅವನ ಹೆಂಡ್ತಿ, ಎಲ್ಲಾ ಬಂದು ಸೇರಿದರು. ಚಂದ್ರಶೇಖರ್‌ಗೆ ತಮ್ಮ ಕೋಪದ ಶಾಪ ನಡೆದಿತ್ತು. ಪ್ರಸಾದ್‌ಗೆ ಅವಮಾನವಾದಂತಾಗಿತ್ತು. ಎಲ್ಲರಿಗೂ ಹೋಗಿ ಎಂದು ಹೇಳುವ ಧೈರ್ಯವೂ ಇಲ್ಲ, ಅಧಿಕಾರವೂ ಇರಲಿಲ್ಲ. ಪ್ರಸಾದರ ಮುಖ ಬಾಡಿ ಸಪ್ಪಗಾಗಿತ್ತು. ಬಾಯಿಂದ ಮಾತೇ ಹೊರಡಲಿಲ್ಲ. "ನಾಳೆ ಮಾತನಾಡುವ" ಎಂದು ಎದ್ದು ಹೋಗಿ ತಮ್ಮ ಕೊಠಡಿಯ ಬಾಗಿಲನ್ನು ಹಾಕಿಕೊಂಡರು. ಏನಾಯಿತೋ ಏನೋ ಎಂದು ಜಯಶ್ರೀ

ಅವರೂ ಬಂದು ಕೊಠಡಿಗೆ ಸೇರಿಕೊಂಡರು. ಸ್ವಲ್ಪ ಸಮಯದ ನಂತರ ಜಯಶ್ರೀ ಹೊರ ಬಂದು "ಅನಂತು, ನಿನ್ನ ಕರೀತಿದಾರೆ" ಎಂದು ಪ್ರಸಾದರ ತಮ್ಮನಿಗೆ ಹೇಳಿ ಕೊಠಡಿಯ ಒಳಕ್ಕೆ ಕರೆದುಕೊಂಡು ಹೋದರು ಜಯಶ್ರೀ. ಕೊಠಡಿಯ ಒಳಗೆ ಬಂದ ಅನಂತುವಿಗೆ "ಅನಂತು, ನನಗೆ ಈ ವಿಚಾರಾನ ನಮ್ಮಪ್ಪನ ಮುಂದೆ ಹೇಳಕ್ಕೆ ಆಗುಲ್ಲ. ನಾನು ನಿನಗೆಲ್ಲಾ ಹೇಳ್ತೀನಿ. ನೀನೆ ಹೇಳ್ಬಿಡು" ಎಂದರು ಪ್ರಸಾದ್. ಜಯಶ್ರೀ ಅವರಿಗೆ ಕಣ್ಣಸನ್ನೆ ಮಾಡಿ ಹೊರಗೆ ಹೋಗಲು ಹೇಳಿ ಕೊಠಡಿಯ ಬಾಗಿಲು ಭದ್ರ ಮಾಡಿಕೊಂಡರು.

ಮಾತುಕತೆ ಮುಗಿಸಿ ಅನಂತು ಹೊರಬರುವ ಹೊತ್ತಿಗೆ ಮಧ್ಯರಾತ್ರಿಯಾಗಿತ್ತು. ಅನಂತುವಿನ ಮುಖದಲ್ಲಿ ದುಃಖದ ಛಾಯೆ ಎತ್ತಿ ತೋರುತ್ತಿತ್ತು. ಯಾರ ಹತ್ತಿರವೂ ಮಾತನಾಡದೇ ತನ್ನ ಕೊಠಡಿಯಲ್ಲಿ ಹೋಗಿ ಮಲಗಿಕೊಂಡ. ಜಯಶ್ರೀ ಕೊಠಡಿಯ ಬಾಗಿಲು ತೆಗೆದು ಬಂದಾಗ ಪ್ರಸಾದ್ ಅಳುತ್ತಿದ್ದರು. "ನಮ್ಮಪ್ಪಾನೇ ಎಲ್ಲರ ಮುಂದೆ ಇಷ್ಟು ಅವಮಾನ ಮಾಡ್ತಾರೆ ಅಂತ ನಂಬಿರಲಿಲ್ಲ" ಎನ್ನುತ್ತ ಅಳುತ್ತಿದ್ದರು. ಅವರಪ್ಪ ಇನ್ನೂ ತಮ್ಮನ್ನು ಚಿಕ್ಕ ಹುಡುಗನ ರೀತಿ ಕಾಣುತ್ತಾರೆ, ಎಲ್ಲರ ಎದುರಿಗೆ ಕೂಗಾಡ್ತಿದ್ದರಲ್ಲಾ ಎಂಬ ಅವಮಾನ ಸಹಿಸಲಿಕ್ಕಾಗಿರಲಿಲ್ಲ. ಅಮೇರಿಕೆಗೆ ಹೋಗಿ ನೆಲಸಿದ ಮೇಲಂತೂ ಪ್ರಸಾದ್ ಇನ್ನೂ ಸೂಕ್ಷ್ಮವಾಗಿದ್ದರು. ಜಯಶ್ರೀ ದೊಡ್ಡವರ ಮಾತಿಗೆ ಅದೇಕೆ ಅಷ್ಟು ಹಚ್ಚಿಕೊಳ್ಳುತ್ತೀರಿ ಎಂದು ಸಮಾಧಾನ ಮಾಡುತ್ತಿದ್ದರು.

ಮಾರನೆ ದಿವಸ ಬೆಳಿಗ್ಗೆ ೯ ಘಂಟೆಯಾದರೂ ಪ್ರಸಾದ್ ಮತ್ತು ಜಯಶ್ರೀ ಅವರ ಕೊಠಡಿಯ ಬಾಗಿಲು ತೆರೆಯದಿದ್ದಿದ್ದು ಎಲ್ಲರಿಗೂ ಅಚ್ಚರಿ ಉಂಟು ಮಾಡಿತ್ತು. ಜಯಶ್ರೀ ಏಳುವುದು ತಡವಾದರೂ, ಪ್ರಸಾದ್ ಪ್ರತಿ ದಿವಸ ಬೆಳಿಗ್ಗೆ ಓಡುವುದನ್ನು ಮಾತ್ರ ನಿಲ್ಲಿಸುತ್ತಿರಲಿಲ್ಲ. ಪ್ರಸಾದರ ಅಮ್ಮ ಬಾಗಿಲು ತಟ್ಟಿ ನೋಡಿದರು. ಆದರೂ ಏನು ಶಬ್ದವಿಲ್ಲದಿದ್ದನ್ನು ನೋಡಿ ತಕ್ಷಣ ಅನಂತುವನ್ನು ಕರೆದರು. ಅವನು ಬಂದು "ನೆನ್ನೆ ಮಲಗಿದ್ದು ತಡವಾಗಿತ್ತು. ಏಳ್ತಾರೆ ಬಿಡಿ" ಎಂದು ಹೇಳಿ ಹೊರಟು ಹೋದ.

೧೦ ಘಂಟೆಯಾದರೂ ತೆಗೆಯದಿದ್ದನ್ನು ನೋಡಿ, ಅನಂತುವನ್ನು ಕರೆದು ಬಾಗಿಲು ತಟ್ಟಲು ಹೇಳಿದರು ಪ್ರಸಾದರ ಅಮ್ಮ. ಈ ಬಾರಿ ಅನಂತು ಏನೂ ಮಾತನಾಡಾದೆ "ಪ್ರಸಾದ್...ಪ್ರಸಾದ್" ಎಂದು ಕೂಗುತ್ತ, ಬಾಗಿಲು ತಟ್ಟಿದ. ಒಳಗಿನಿಂದ ಶಬ್ದವೇ ಇಲ್ಲದಿದ್ದನು ನೋಡಿ, ಸ್ವಲ್ಪ ಭಯವಾಯಿತು. ಇನ್ನೂ ಜೋರಾಗಿ ತಟ್ಟಲು ಶುರುಮಾಡಿದ. ಕಡೆಗೆ ಬಾಗಿಲನ್ನು ಜೋರಾಗಿ ತಬ್ಬಿದ. ಬಾಗಿಲು ಒಡೆದು ಬಿತ್ತು. ಎಲ್ಲರಿಗೂ ಕಾರ್ಮೋಡದ ಛಾಯೆ ಕಾದಿತ್ತು. ಪ್ರಸಾದ್ ಮತ್ತು ಜಯಶ್ರೀ ಎಲ್ಲರನ್ನೂ ಅಗಲಿ ಹೋಗಿದ್ದರು. ಹಾಸಿಗೆಯ ಪಕ್ಕದಲ್ಲಿ ನಿದ್ರೆಯ ಮಾತ್ರೆಯ ಖಾಲಿ ಪ್ಯಾಕೆಟ್ ಬಿದ್ದಿತ್ತು. ಎಲ್ಲರಿಗೂ ಆಘಾತದ ವಿಷಯವಾಗಿತ್ತು. ಚಂದ್ರಶೇಖರಿಗಂತೂ ತಾನೇ ಮಗ ಮತ್ತು ಸೊಸೆಯನ್ನು ಕೊಲೆ ಮಾಡಿದಷ್ಟು ಅಳುಕಾಗಿತ್ತು. ಅಮೇರಿಕೆಗೆ ಮಗಳಿಗೆ ಫೋನ್ ಮಾಡಿ ಅಪ್ಪ ಅಮ್ಮನಿಗೆ ಹೃದಯಾಘಾತವಾಗಿದೆ ಎಂದು ತಕ್ಷಣ ಬರಲು ಹೇಳಿದ್ದ ಅನಂತು.

ಅಪ್ಪ ಅಮ್ಮನ ಹಳೆಯ ಫೋಟೋಗಳನ್ನು ನೋಡಿದಾಗಲೆಲ್ಲ ಪೂಜಾಳಿಗೆ ಕಣ್ಣೀರು ಹರಿದು ಬರುತ್ತಿತ್ತು. ಅಪಾರ್ಟ್‌ಮೆಂಟ್ ಸ್ವಚ್ಛಗೊಳಿಸುವುದರಲ್ಲಿ ಕರೀಮ್ ಸಹ ಬಂದು ಸಹಾಯ ಮಾಡುತ್ತಿದ್ದ. ಪೂಜಾಳಿಗೆ ನ್ಯೂಯಾರ್ಕ್‌ನಲ್ಲೇ ಕೆಲಸ ಸಿಕ್ಕಿದ್ದರಿಂದ ಪೂಜಾಳಾ ಅಪ್ಪ ಅಮ್ಮನ ಅಪಾರ್ಟ್‌ಮೆಂಟ್‌ಗೆ ಬಂದು ಇರುವುದೆಂದು ತೀರ್ಮಾನ ತೆಗೆದುಕೊಂಡಿದ್ದರು ಪೂಜಾ ಮತ್ತು ಕರೀಮ್. ಕರೀಮ್‌ನ ಅಪಾರ್ಟ್‌ಮೆಂಟ್ ಇದ್ದಿದ್ದು ಆಲ್ಬನಿಯಲ್ಲಿ. ಅವನಿಗೆ ಇನ್ನೂ ಕೆಲಸ ಸಿಕ್ಕಿರಲಿಲ್ಲ. ಹಾಗಾಗಿ ಈ ವಾರ ಆಲ್ಬನಿಗೆ ಹೋಗಿ ಮನೆಯನ್ನು ಖಾಲಿ ಮಾಡಿಕೊಂಡು ಬರಲು ಹೋಗಿದ್ದ ಕರೀಮ್. ಪೂಜಾ ಒಬ್ಬಳೇ ಮನೆ ಸ್ವಚ್ಛಗೊಳಿಸುತ್ತಿದ್ದಳು. ಆಗಲೇ 'ಬೇಕರ್ಸ್ ಹಾಸ್ಪಿಟಲ್' ಎಂದು ಬರೆದಿದ್ದ ಫೈಲ್ ಸಿಕ್ಕಿದ್ದು.

ಇದರಿಂದ ಏನಾದರೂ ಸುಳಿವು ಸಿಗಬಹುದೆಂದು ಎಣಿಸಿ, ಫೈಲ್‌ನಲ್ಲಿದ್ದ ಫೋನ್ ನಂಬರ್‌ಗೆ ಫೋನ್ ಮಾಡಿ ತನ್ನ ತಂದೆಯ ಮತ್ತು ತಾಯಿಯ ವಿಚಾರವನ್ನು ತಿಳಿಯಲು ಪ್ರಯತ್ನಿಸಿದಳು. ಮೆಡಿಕಲ್ ಹಿಸ್ಟರಿ ಹಳೆಯದಾದ್ದರಿಂದ ಒಂದು ಅಪ್ಲಿಕೇಶನ್ ಬರೆದು ಕಳುಹಿಸಲು ಆಸ್ಪತ್ರೆಯವರು ಸೂಚಿಸಿದರು. ಅದರಂತೆ ತನಗೆ ಸಿಕ್ಕಿದ ಮೆಡಿಕಲ್ ಫೈಲಿನ ನಕಲು ಮಾಡಿ ಅದರ ಜೊತೆಗೆ ಅರ್ಜಿಯನ್ನೂ ಗುಜರಾಯಿಸಿದಳು. ಈ ವಿಷಯವನ್ನು ಕರೀಮನಿಂದ ಮುಚ್ಚಿಟ್ಟಿದ್ದಳು.

ಬಹಳ ದಿವಸದ ತನಕ ಉತ್ತರ ಬರದಿದ್ದನ್ನು ಕಂಡು ಒಂದು ದಿವಸ ಲಂಡನ್ನಿಗೆ ಹೊರಟು ನಿಂತಳು. ಕರೀಮ್‌ಗೆ ಆಫೀಸಿನ ಕೆಲಸದ ಮೇಲೆ ಲಂಡನ್ನಿಗೆ ಒಂದೆರಡು ದಿವಸಕ್ಕೆ ಹೋಗಬೇಕಾಗಿದೆ ಎಂದು ಹೇಳಿ ಹೊರಟಿದ್ದಳು. ಅವಳಿಗೆ ಹೇಳಿಕೊಳ್ಳಲು ಇನ್ಯಾರೂ ಇಲ್ಲ. ಇದ್ದಿದ್ದರಲ್ಲಿ ಅವರ ಚಿಕ್ಕಪ್ಪ ಅನಂತುವೇ ಒಂದೊಂದು ಬಾರಿ ಫೋನ್ ಮಾಡುತ್ತಿದ್ದ. ಅವಳಜ್ಜನಾಗಲಿ ಅವಳಜ್ಜಿಯಾಗಲಿ ಹೆಚ್ಚಿನ ಪ್ರೇಮ ತೋರಿಸಿರಲಿಲ್ಲ. ಅದೂ ಈಗ ಒಬ್ಬ

ಮುಸುಲ್ಮಾನನ್ನು ಮದುವೆಯಾಗಿದ್ದೇನೆ ಎಂದರೆ ಕೇಳುವರೆ? ಹೇಗಾದರೂ ಆಗಲಿ ತನ್ನ ಚಿಕ್ಕಪ್ಪನಿಗೆ ಒಂದು ಫೋನ್ ಹೊಡೆದು ಲಂಡನ್ನಿಗೆ ಹೋಗುವ ಮುಂಚೆ ಅವರ ಅಭಿಪ್ರಾಯ ತಿಳಿಯೋಣವೆಂದು ಅಂದು ರಾತ್ರಿಯೇ ಅನಂತುವಿಗೆ ಫೋನ್ ಮಾಡಿದಳು. ಅವನೊಬ್ಬನೇ ಇವಳ ಜೊತೆ ಮಾತನಾಡುತ್ತಿದ್ದಿದ್ದು. ಇನ್ಯಾರ ಜೊತೆಗೂ ಇವಳು ಮನ ಬಿಚ್ಚಿ ಮಾತನಾಡುತ್ತಿರಲಿಲ್ಲ. ಆ ಮನೆಯಲ್ಲಿ ಎಲ್ಲರೂ ಇವಳೊಬ್ಬಳು ಅಮೇರಿಕೆಯ ಬೊಂಬೆ ಎಂದೇ ಕರೆಯುತ್ತಿದ್ದರು.


ಅನಂತು ಫೋನ್ ತೆಗೆದು ಕೊಂಡು ಉಭಯ ಕುಶಲೋಪರಿಯನ್ನು ವಿಚಾರಿಸಿ "ಪೂಜಾ, ನಿಮ್ಮ ಅಪ್ಪ ಅವನು ಸಾಯುವ ಹಿಂದಿನ ರಾತ್ರಿ ಆಡಿದ ಮಾತುಗಳನ್ನು ಹೇಳುತ್ತೇನೆ. ಈ ವಿಷಯಗಳಲ್ಲಿ ನಿನಗೆ ಎಷ್ಟು ಗೊತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೂ ನಿಮ್ಮಪ್ಪನ ಅಂತಿಮ ಆಸೆಯನ್ನು ಪೂರೈಸುತ್ತಿದ್ದೇನೆ."

"....ಅಂದು ರಾತ್ರಿ ಊಟವಾದ ನಂತರ ನಿಮ್ಮಪ್ಪ ನಮ್ಮಪ್ಪನಿಗೆ ನಿನ್ನ ಮದುವೆ ವಿಷಯ ತಿಳಿಸಲು ಪ್ರಯತ್ನಿಸಿದ. ಮಾತು ಎಲ್ಲಿಂದಲೋ ಎಲ್ಲಿಗೋ ಬೆಳೆದು, ನಮ್ಮಪ್ಪ ಪ್ರಸಾದನ ಮೇಲೆ ಚೆನ್ನಾಗಿ ಎಲ್ಲರೆದುರಿಗೆ ರೇಗಾಡಿದರು. ಇದರಿಂದ ಅವಮಾನವಾದಂತೆ ಏನೂ ಮಾತನಾಡಾದೇ ಹೋಗಿ ಕೊಠಡಿಗೆ ನನ್ನನ್ನು ಕರೆದು ಹೀಗೆ ಹೇಳಿದ. ಈ ಮಾತುಗಳನ್ನು ಹೇಳುವಾಗ ನಿಮ್ಮ ಅಮ್ಮನೂ ಇರಲಿಲ್ಲ. "ಅನಂತು ನೀನು ನನ್ನ ತಮ್ಮ. ದಯವಿಟ್ಟು ನನಗಾಗಿ ಒಂದು ಕೆಲಸ ಮಾಡಿಕೊಡು" ಎಂದು ಬೇಡಿಕೊಂಡ. ನಾನೆಂದೂ ನನ್ನ ಅಣ್ಣನನ್ನು ಆ ರೀತಿ ಬೇಡಿಕೊಂಡಿದ್ದನ್ನು ಕಂಡಿರಲಿಲ್ಲ. ಅವನ ಮಾತಿನಲ್ಲಿ ಗಾಢವಾದ ದು:ಖ ತುಂಬಿತ್ತು. ಕಣ್ಣಲ್ಲಿ ನೀರು ತುಂಬಿತ್ತು. "ನಾನು ಏನು ಮಾಡಲಿ ಹೇಳು" ಎಂದು ಕೇಳಿದಾಗ, ಅಣ್ಣ ಕಿಟಕಿಯ ಬಳಿ ಹೋಗಿ ನನಗೆ ಬೆನ್ನು ಮಾಡಿ ತಿರುಗಿ "ನನ್ನ ಈ ಮಾತುಗಳು ನಿನಗೆ ಸಿನಿಮಾದ ಕಥೆಯ ತರಹ ಎನಿಸಬಹುದು ಆದರೆ ನಿಜ. ನಿನಗೆ ಗೊತ್ತಿರುವ ರೀತಿ ನಮಗೆ ೧೦ ವರ್ಷದ ತನಕ ಮಕ್ಕಳಾಗಿರಲಿಲ್ಲ. ನಾನು ಮಾಡಿಸಬೇಕಾದ ಪರೀಕ್ಷೆಗಳನ್ನೆಲ್ಲಾ ಮಾಡಿಸಿದ್ದೆ. ಮಾಡಿಸಬೇಕಾದ ಪೂಜೆ ಹವನಗಳನ್ನೂ ಮಾಡಿಸಿದ್ದೆ. ಆದರೂ ಮಕ್ಕಳಾಗಿರಲಿಲ್ಲ. ಆ ಸಮಯಕ್ಕೆ ನನಗೆ ಡಾ॥ ರಂಗನಾಥ್ ಎನ್ನುವವರ ಪರಿಚಯವಾಯಿತು. ಅವರು ಆಗತಾನೆ ಇಂಗ್ಲೆಂಡ್‌ನಲ್ಲಿ ಎಫ್.ಆರ್.ಸಿ.ಎಸ್. ಪೂರೈಸಿಕೊಂಡು ಬಂದಿದ್ದರು. ಅವರು ಹೀಗೆ ಮಾತನಾಡುತ್ತ ಹೇಳಿದರು ನಿಮ್ಮ ಮೆಡಿಕಲ್ ಫೈಲ್ ತೆಗೆದುಕೊಂಡು ಬನ್ನಿ, ಸ್ವಲ್ಪ ನೋಡಿ ಹೇಳುತ್ತೇನೆ ಎಂದು. ನಾನು ನನ್ನ ಮತ್ತು ಜಯಳ ಮೆಡಿಕಲ್ ಹಿಸ್ಟರಿ ಫೈಲ್ ತೆಗೆದುಕೊಂಡು ಅವರ ಮನೆಗೆ ಹೋದೆ. ಅದನ್ನು ಕೂಲಂಕುಶವಾಗಿ ನೋಡಿ ಹೇಳಿದರು "ನೋಡಿ ಪ್ರಸಾದ್, ನಿಮ್ಮ ತರಹ ಕೇಸಿನ ಬಗ್ಗೆ ನಾನು ರಿಸರ್ಚ್ ಮಾಡೋಕ್ಕೇನೆ ನನ್ನನ್ನು ಲಂಡನ್‌ಗೆ ಕಳಿಸಿದ್ರು. ಈ ರೀತಿ ಕೇಸ್‌ಗಳಿಗೆ ಈ ದೇಶದಲ್ಲಿ ಇನ್ನೂ ಅವಕಾಶ ಇಲ್ಲ. ನೀವು ತಪ್ಪು ತಿಳಿಕೊಳೋಲ್ಲ ಅಂದರೆ ಒಂದು ಸಲಹೆ ಕೊಡ್ತೀನಿ" ಅಂದರು. ಅವರ ಮಾತಿನಲ್ಲಿ ನಮ್ಮ ಬಗ್ಗೆ ಇದ್ದ ಕಾಳಜೀನೋ ಅಥವ ತಾವು ಕಲಿತುಕೊಂಡು ಬಂದಿದ್ದ ವಿಷಯದ ಪ್ರಯೋಗಕ್ಕಾಗಿ ನನ್ನನ್ನು ಉಪಯೋಗಿಸಿಕೊಳ್ಳುತ್ತಿದ್ದಾರೋ ಎನ್ನುವ ಯೋಚನೆ ಬಂತು. ಹೇಗಾದರೂ ಆಗಲಿ ಹೂಂ ಎಂದು ಹೇಳಿದೆ. ಆಗ ಡಾ॥ರಂಗನಾಥ್ ನನ್ನ ಹತ್ತಿರ ಬಂದು "ಇದು ನಿಮ್ಮೊಬ್ಬರ ನಿರ್ಧಾರವಲ್ಲ. ನನ್ನ ಸಲಹೆಯನ್ನು ನಿಮ್ಮ ಮನೆಯವರ ಹತ್ತಿರವೂ ಚರ್ಚಿಸಿ. ಆಮೇಲೆ ನಿರ್ಧಾರಕ್ಕೆ ಬನ್ನಿ" ಎಂದು ಹೇಳುತ್ತಾ "ಪ್ರಸಾದ್‌ರವರೆ, ನಿಮ್ಮ ಸ್ಪರ್ಮ್ ಕೌಂಟ್ ಸೊನ್ನೆ ಇದೆ. ಇಂತಹ ಕೇಸ್‌ಗಳು ಬಹಳ ಜನಕ್ಕೆ ಇರುತ್ತವೆ. ಹಳ್ಳಿಯವರಾದರೆ, ಮಕ್ಕಳಾಗಲಿಲ್ಲವೆಂದರೆ ಇನ್ನೊಂದು ಮದುವೆ ಮಾಡುತ್ತಾರೆ. ನಮ್ಮ ಸಮಾಜದಲ್ಲಿ ಗಂಡಸಿನ ದೌರ್ಬಲ್ಯದ ಬಗ್ಗೆ ಅನುಮಾನಿಸುವುದೇ ಇಲ್ಲ. ಮಕ್ಕಳಾಗಲಿಲ್ಲವೆಂದರೆ ಹೆಂಗಸನ್ನು ಬಂಜೆ ಎಂದು ಕರೆಯುತ್ತಾರೆ. ನೀವು ತಿಳಿದವರು, ಆದ್ದರಿಂದ ಹೇಳುತ್ತಿದ್ದೇನೆ. ಈಗ ಲಂಡನ್‌ನಲ್ಲಿ ಒಂದು ಹೊಸ ರೀತಿ ಮಕ್ಕಳಾಗಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಅದಕ್ಕೆ ವೀರ್ಯದಾನ ವಿಧಾನವೆನ್ನುತ್ತಾರೆ. ನೀವು ಅಲ್ಲಿಗೆ ಹೋದರೆ ನಿಮಗೆ ಹೋಲುವ ಗುಣಗಳಿಗೆ ತಕ್ಕಂತೆ ವೀರ್ಯದಾನಿಗಳಿಂದ ವೀರ್ಯದಾನ ಪಡೆದು ನಿಮ್ಮ ಹೆಂಡತಿಯ ಗರ್ಭಕೋಶದಲ್ಲಿ ಸೇರಿಸುತ್ತಾರೆ. ವೀರ್ಯದ ಮೂಲದ ವ್ಯಕ್ತಿಯಾಗಲಿ ಅಥವಾ ಆ ವ್ಯಕ್ತಿಗೆ ನಿಮ್ಮ ಹೆಸರನ್ನಾಗಲಿ ಹೇಳುವುದಿಲ್ಲ. ಇವೆಲ್ಲವನ್ನು ಬಹಳ ಕಟ್ಟುನಿಟ್ಟಾದ ಗುಟ್ಟಾಗಿ ಇಟ್ಟಿರುತ್ತಾರೆ." ನನ್ನ ಎದೆಯಲ್ಲಿ ಡವ ಡವ ಎಂಬ ಶಬ್ದ ಕೇಳಬರುತ್ತಿತ್ತು. ತುಟಿಯೆಲ್ಲಾ ಒಣಗಿದಂತಾಗಿತ್ತು. ಡಾ॥ರಂಗನಾಥ್ ತಮ್ಮ ಮಾತನ್ನು ಮುಂದುವರಿಸುತ್ತಿದ್ದರು. "ನನಗೆ ಗೊತ್ತಿರುವ ಡಾಕ್ಟರ ಬಳಿ ಕಳುಹಿಸುತ್ತೇನೆ. ಇದಕ್ಕೆ ತುಂಬ ಹಣ ಖರ್ಚಾಗುತ್ತದೆ. ನೀವು ಅದನ್ನು ಭರಿಸಬಲ್ಲಿರಿ ಆದ್ದರಿಂದ ಹೇಳಿದೆ." ಹೀಗೆ ನಮಗೆ ಸಲಹೆ ಇತ್ತು ಒಂದು ದೊಡ್ಡ ಸಹಾಯ ಮಾಡಿದರೋ ಅಥವಾ ತಪ್ಪನ್ನು ಮಾಡಿದರೋ ನನಗೆ ತಿಳಿಯದು. ಅಂದಿನ ದಿವಸಕ್ಕೆ ನನ್ನ ಪಾಲಿಗೆ ದೇವರಂತೆ ಕಂಡರು. ನಾನು ಜಯಳಿಗೆ ವಿಷಯ ತಿಳಿಸಿದಾಗ ಅತ್ತೂ ಕರೆದು ಎಲ್ಲಾ ಆಯಿತು. ಕಡೆಗೆ ಜಯ ಒಪ್ಪಿಕೊಂಡಳು. ಲಂಡನ್ನಿನ ಬೇಕರ್ಸ್ ಹಾಸ್ಪಿಟಲ್ಲಿನಲ್ಲಿ ಜಯಳಿಗೆ ಈ

ಪ್ರಯೋಗ ಮಾಡಿಸಿದೆ. ಅದರ ರೂಪವೇ ನನ್ನ ಪೂಜಾ. ಅವಳು ನನ್ನ ಸ್ವಂತ ಮಗಳಲ್ಲ. ಅವಳು ನಾನು ಸಾಕಿದ ಮಗಳು. ಈಗ ಅವಳು ಒಬ್ಬ ಮುಸಲ್ಮಾನನನ್ನು ಮದುವೆಯಾಗಿದ್ದಾಳೆ. ಅವಳ ಮೇಲೆ ನನ್ನ ಹಕ್ಕಿಲ್ಲ. ಈ ವಿಷಯವನ್ನು ನಮ್ಮ ಅಪ್ಪನ ಮುಂದೆ ಹೇಳಲಿಕ್ಕಾಗುವುದಿಲ್ಲ. ನಾನು ಮತ್ತು ಜಯ ವಾಪಸ್ ಹೋಗುತ್ತೇವೆ, ಆಮೇಲೆ ನಮ್ಮ ಅಪ್ಪ ಅಮ್ಮನಿಗೆ ಹೇಳಿಬಿಡು. ಈ ವಿಷಯ ಪೂಜಾಳಿಗೂ ತಿಳಿಯದು. ಅವಳಿಗೂ ಸಮಯ ಬಂದಾಗ ಹೇಳುತ್ತೇನೆ. ಅವಳು ಈಗ ತನಗೆ ಇಷ್ಟ ಬಂದವನನ್ನು ಮದುವೆಯಾಗಿದ್ದಾಳೆ. ಅವಳು ಸುಖವಾಗಿರಲಿ. ಹಕ್ಕಿ ತನ್ನ ಗೂಡಿಗೆ ಸೇರಿತು" ಎಂದು ಹೇಳುವಾಗ ನನ್ನ ಅಣ್ಣನ ಧ್ವನಿ ಕ್ಷೀಣವಾಗಿತ್ತು. ನನಗೆ ಏನು ಮಾತನಾಡಗಲಿಲ್ಲ. ಸುಮ್ಮನೆ ಹೊರಗೆ ಬಂದೆ. ಅಷ್ಟೆ. ಮಾರನೆ ದಿವಸ ನೋಡಿದರೆ ತಮ್ಮ ಕೊಠಡಿಯಲ್ಲಿ ಪ್ರಸಾದ್ ಮತ್ತು ಜಯ ಅತ್ತಿಗೆ ನಿದ್ದೆ ಮಾತ್ರೆ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು." ಎನ್ನುತ್ತ ಅನಂತುವಿಗೆ ಅಳು ತಡೆಯಲಾಗಲಿಲ್ಲ. ಪೂಜಾಳ ಬಾಯಿನಿಂದ ಮಾತೇ ಹೊರಡಲಿಲ್ಲ. ಫೋನ್ ಹಿಡಿದು ಹಾಗೇ ಕುಸಿದು ಬಿದ್ದಿದ್ದಳು. ಕರೀಮ್ ಸಹ ಮನೆಯಲ್ಲಿರಲಿಲ್ಲ. ಫೋನ್ ಮಾತ್ರ ಇನ್ನೂ ಕಿವಿಯ ಬಳಿ ಇತ್ತು. ಅನಂತು ಆಕಡೆಯಿಂದ "ಪೂಜಾ .. ಪೂಜಾ ..." ಎಂದು ಕರೆಯುತ್ತಿದ್ದಾನೆ. ಈ ಕಡೆಯಿಂದ ಉತ್ತರವಿಲ್ಲ. ಅನಂತುವಿಗೆ ಗಾಬರಿಯಾಗಿತ್ತು. ಅಳುತ್ತಾ "ಪೂಜಾ ನಿನ್ನ ಮನ ನೋಯಿಸಲು ಹೇಳಲಿಲ್ಲ. ನನ್ನ ಅಣ್ಣನಿಗೆ ಕೊಟ್ಟ ಭಾಷೆಯನ್ನು ಪೂರೈಸಿದ್ದೇನೆ. ಕ್ಷಮಿಸಿಬಿಡು" ಎಂದ. "ಇಲ್ಲ ಚಿಕ್ಕಪ್ಪ. I am fine. I will call you later" ಎಂದು ಅಳುತ್ತಾ ಫೋನ್ ಇಟ್ಟಳು ಪೂಜಾ.

ಒಬ್ಬಳೇ ರಾತ್ರಿಯೆಲ್ಲ ಅತ್ತು ಅತ್ತೂ, ಕರೀಮ್‌ಗೆ ಹೇಗೆ ಹೇಳುವುದು ಅನ್ನುವುದೇ ಯೋಚನೆಯಾಗಿಬಿಟ್ಟಿತ್ತು. ತಾನೊಬ್ಬಳು Test Tube Baby. ತನಗೆ ನಿಜವಾದ ತಂದೆ ಯಾರೆಂದೇ ಗೊತ್ತಿಲ್ಲ. ಎಂತೆಲ್ಲಾ ಯೋಚನೆಗಳು ತಲೆಯಲ್ಲಿ ಹುಳುವಿನಂತೆ ಓಡಾಡಲು ಪ್ರಾರಂಭಿಸಿದವು. ಆದರೂ ತನ್ನ ತಂದೆ ಪ್ರಸಾದ್ ಒಂದೂ ದಿವಸವೂ ತನಗೆ ನಿಜವಾದ ತಂದೆಯಲ್ಲ ಎಂಬುದನ್ನು ತೋರಿಸಿಕೊಳ್ಳುವಂತಹ ಕೆಲಸವನ್ನು ಮಾಡಿಲ್ಲ, ಹಾಗೆ ನಡೆದುಕೊಂಡೂ ಇಲ್ಲ ಎಂಬುದು ಪೂಜಾಳಿಗೆ ಮನದಟ್ಟಾಗಿದೆ. ಆದರೆ ಈಗ biological father ನನ್ನು ಕಂಡುಹಿಡಿಯಬೇಕೆ ಬೇಡವೇ? ಹಿಡಿಯದಿದ್ದರೆ ಜೀವನವೆಲ್ಲಾ biological father ನನ್ನು ನೋಡಲಿಲ್ಲವೆಂಬ ಕೊರಗು. ನೋಡಿದರೆ ಮುಂದೆ ಹೇಗೋ ಏನೋ? ಆ ವ್ಯಕ್ತಿ ಹೇಗಿದ್ದಾನೋ ಏನೋ? ಯಾವ ಸಂಬಂಧ ಇಟ್ಟಿಕೊಳ್ಳಬೇಕು ಆ ವ್ಯಕ್ತಿಯ ಹತ್ತಿರ? ಆ ವ್ಯಕ್ತಿ ಎಷ್ಟೋ ಜನಗಳಿಗೆ ಈ ರೀತಿ ವೀರ್ಯ ದಾನ ಮಾಡಿದ್ದಾನೊ? ನನ್ನನ್ನು ನೋಡಿದರೆ ಹೇಗೆ ಅನ್ನಿಸುತ್ತದೆ ಅವನಿಗೆ? ಯಾವುದು ಸರಿ? ಯಾರ ಹತ್ತಿರ ಹೇಳಿಕೊಳ್ಳಲಿ? ಈ ಮನಸ್ಸಿನ ಯುಧ್ಧದಲ್ಲಿ ಕೆಲವು ದಿನಗಳು ಕಳೆದವು. ಕರೀಮನಿಗೆ ಇವಳು ಬೇಸರದಲ್ಲಿರುವುದನ್ನು ಗುರುತಿಸಿದರೂ, ತನ್ನ ತಂದೆ ತಾಯಿಯರನ್ನು ಕಳೆದು ಕೊಂಡ ದುಃಖದಿಂದರಬೇಕೆಂದು ಅಷ್ಟಾಗಿ ವಿಷಯವನ್ನು ಕೆದುಕಲು ಅವಕಾಶ ಕೊಡುತ್ತಿರಲಿಲ್ಲ.

ಒಂದು ದಿನ ಪೂಜಾ ತನ್ನದೇ ಆದ ತೀರ್ಮಾನಕ್ಕೆ ಬಂದಳು. ಒಬ್ಬಳೇ ಹೋಗಿ ಲಂಡನ್‌ನಲ್ಲಿನ ಬೇಕರ್ಸ್ ಆಸ್ಪತ್ರೆಯಲ್ಲಿ ಹಳೆಯ ರೆಕಾರ್ಡ್‌ಗಳನ್ನು ತೆಗೆಸಿ ಆ biological father ಯಾರೆಂದು ತಿಳಿಯಬೇಕೆಂದು ಲಂಡನ್ ಬಂದು ಸೇರಿದಳು. ಆಸ್ಪತ್ರೆ ಹುಡುಕುವುದು ಅಷ್ಟು ಕಷ್ಟವಿಲ್ಲದಿದ್ದರೂ, ತನ್ನ ತಂದೆ ತಾಯಿಯ ರೆಕಾರ್ಡ್ ಹುಡುಕುವುದು ಬಹಳ ತ್ರಾಸಿನ ಕೆಲಸವೇ ಆಯಿತು. ಮೂರು ದಿವಸ ಕಂಪ್ಯೂಟರ್ ಸಹಾಯದಿಂದ ಎಲ್ಲಾ ಕಡತಗಳನ್ನು ತೆಗೆಸಿದರೂ ತನ್ನ biological father ನ ವಿಷಯ ತಿಳಿಯಲಿಲ್ಲ. ಕಡೆಗೆ ಆಸ್ಪತ್ರೆಯವರು ಇವಳ ಕಾಳಜಿಯನ್ನು ಅರ್ಥಮಾಡಿಕೊಂಡು, ರಾಷ್ಟ್ರೀಯ ಮಟ್ಟದಲ್ಲಿ ಸರಕಾರದ ವತಿಯಿಂದ ನಡೆಯುವ ಒಂದು ಸಂಸ್ಥೆಯ ಬಳಿ ಪೂಜಾಳನ್ನು ಕಳಿಸಿಕೊಟ್ಟರು. ವಿಷಯ ತಿಳಿದಾಗ ಸಿಡಿಲು ಬಡಿದಂತಾಗಿತ್ತು. ಅವಳ ಕೈಯಲ್ಲಿದ್ದ medical Record ಕಾಗದಗಳು ಛಿದ್ರ ಛಿದ್ರವಾಗಿ ಕೆಳಗೆ ಬಿದ್ದವು. ಅವರಪ್ಪನ "ಹಕ್ಕಿ ಗೂಡಿಗೆ ಸೇರಿತು" ಎನ್ನುವುದರ ಅರ್ಥ ತಿಳಿದಿತ್ತು. ವೀರ್ಯ ದಾನಿಯ ಹೆಸರು ಮುದ್ರಿತವಾಗಿತ್ತು 'ಮೊಹಮದ್ ಅಬ್ದುಲ್ ಸತ್ತಾರ್' ಎಂದು. ಲಂಡನ್ನಿನಲ್ಲೇ ಒಂದಂಗಡಿಯಿಂದ ಖುರಾನ್ ಖರೀದಿಸಿ, ತನ್ನ biological father ನನ್ನು ನೋಡುವ ಯೋಚನೆಯನ್ನೂ ಮಾಡದೆ ನ್ಯೂಯಾರ್ಕ್‌ಗೆ ಬಂದು ಸೇರಿದಳು ಪೂಜಾ. ◈


MILLION
INDIANS
ARE VISUALLY
HANDICAPPED
DO YOU HAVE IT IN YOU TO MAKE A DIFFERENCE?
We invite you to proudly partner with us and eradicate curable blindness in India.
Donate $1,000
and become a founding member. Have your name inscribed on
"The Wall of Founders"
at the upcoming Sankara Eye Hospital & Superspeciality Training Center in Bangalore.
Sankara Eye Foundation (SEF) and Sankara Eye Care Institutions together are dedicated to eradicating curable blindness in India – by providing totally free eye care to rural India by operating the largest rural outreach program in India.
Our Mission of - "Vision 20/20 by the year 2020" - aims to perform 1 million surgeries annually - through 20 Sankara Eye Care Institutions all over India, by the year 2020. We are well on our way with 3 eye hospitals in Tamil Nadu and Andhra Pradesh performing 75,000 surgeries annually.
YOU CAN
MAKE A DIFFERENCE
SANKARA
EYE FOUNDATION
Sankara Eye Foundation, USA
WWW.GIFTOFVISION.ORG



# ಜೀವನ ಪಯಣದಲ್ಲೊಂದು ನಿಲ್ದಾಣ

**ವಿಶ್ವನಾಥ ಪತ್ತಾರ್**
ಸ್ಯಾನ್ ಹೊಸೆ, ಕ್ಯಾಲಿಫ಼ೋರ್ನಿಯ

ಅಂದು ಮಧ್ಯರಾತ್ರಿ. ವಿಮಾನ ನಿಲ್ದಾಣದ ಒಳಗೆ ಬಂದ ತಕ್ಷಣ ಸಮಾಧಾನದ ನಿಟ್ಟುಸಿರು ಬಿಟ್ಟೆ. ನ್ಯೂಯಾರ್ಕ್‌ನ ಮೈ ಕೊರೆಯುವ ಛಳಿಯದೊಂದು ಭಯವಾದರೆ, ಅಪಾಯಕಾರಿ ಧಾಂಡಿಗರ ಭಯವೊಂದು ಕಡೆ. ಒಳಗಡೆ ಅದೊಂದು ದೊಡ್ಡ ಛತ್ರದಂತಿತ್ತು. ನಾನು ಹೊರಡಬೇಕಾಗಿದ್ದ ಕಾಂಟಿನೆಂಟಲ್ ಹಾಗು ಸೌದಿ ವಿಮಾನ ಬೋರ್ಡುಗಳು ವಿವಿಧ ಮಾಹಿತಿಗಳನ್ನು ಬಿತ್ತರಿಸಿ ಮೌನವಾಗಿದ್ದವು. ರಾತ್ರಿ ಸರಿಯಾಗಿ ಒಂದು ಮುಕ್ಕಾಲು. ಯಾರು ಇಲ್ಲದೆ ಬಿಕೋ ಎನ್ನುತ್ತಿರುವ ವಿಮಾನ ನಿಲ್ದಾಣ, ಆಗ ತಾನೆ ನಿದ್ರಾದೇವಿ ಸರಿದುದರಿಂದ ನನ್ನ ಕಣ್ಣುಗಳು ಚೇತರಿಕೆಯ ಹಾದಿಯಲ್ಲಿದ್ದುವು. ನನ್ನ ಹತ್ತಿರ ವಿದ್ಯುನ್ಮಾನ–ಟಿಕೆಟ್‌ನ ಮುದ್ರಿತ ಪ್ರತಿ ಮಾತ್ರ ಇತ್ತು, ಅದಕ್ಕಾಗಿ ಪ್ರವೇಶ ಪತ್ರ (ಬೋರ್ಡಿಂಗ್ ಪಾಸು) ತೆಗೆದುಕೊಳ್ಳಲೆಂದು ವಿಮಾನ ಸಂಸ್ಥೆಯ ಮುಂಗಟ್ಟೆ (ಕೌಂಟರ್) ನೋಡಲು, ಅದು ಯಾರೂ ಇಲ್ಲದೆ ಖಾಲಿಯಾಗಿತ್ತು. ಅತ್ತ ಗಣಕ ಯಂತ್ರಗಳಿಂದ ಪ್ರವೇಶ ಪತ್ರವನ್ನು ಮುದ್ರಿಸಲು ಹೋದಾಗ, ಅವು ೪:೩೦ಕ್ಕೆ ಬನ್ನಿ ಎಂದು ಸಂದೇಶ ಬಿತ್ತರಿಸಿ ವಿಶ್ರಾಂತಿಗೈಯ್ಯುತ್ತಿದ್ದವು. ನಾನು ಎಂದಿನಂತೆ ಅತ್ತಿತ್ತ ಸುತ್ತಾಡುತ್ತ ಸ್ವಲ್ಪ ಮುಂದುಗಡೆ ಹೋಗಿ ಅಲ್ಲಿರುವ ಒಬ್ಬ ಯುವಕನಿಗೆ ವಿಮಾನ ಸಂಸ್ಥೆಯ ಮುಂಗಟ್ಟೆಯ ಬಗ್ಗೆ ಕೇಳಲು, ಅವರು ೪:೦೦ ಗಂಟೆಗೆ ಬರುತ್ತಾರೆಂದು ನನಗೆ ಹೇಳಿದ್ದಾರೆ; ನಾನು ಸಹ ಪ್ರವೇಶ ಪತ್ರಕ್ಕಾಗಿ ಕಾಯುತ್ತಿರುವೆ ಎಂದ. ಒಬ್ಬನಾದರೂ ನನ್ನೊಂದಿಗೆ ಇದ್ದಾನೆಂದು ಕೇಳಿ ಸಮಾಧಾನವಾಯಿತು.

ಕುಳಿತುಕೊಳ್ಳಲು ಕುರ್ಚಿಗಳಿಗಾಗಿ ಹುಡುಕಾಡಿದರೆ, ಒಂದೂ ಖಾಲಿ ಕುರ್ಚಿ ಕಾಣಿಸಲಿಲ್ಲ. ಸ್ವಲ್ಪ ಮುಂದೆ ಒಳಗಡೆಯ ಪ್ರವೇಶ ದ್ವಾರದ ಬಳಿ ಒಬ್ಬಳು ಕೆಲಸಗಾರ್ತಿ ಇನ್ನೊಬ್ಬ ಪ್ರಯಾಣಿಕನ ಜೊತೆ ಹರಟುತ್ತ ಕುಳಿತಿರುವುದು ಕಾಣಿಸಿತು. ಅವರೆಡೆಗೆ ಹೋಗಿ ಮಾತನಾಡಿಸಿ ಮತ್ತೇನಾದರೂ ಮಾಹಿತಿ ಪಡೆಯೋಣವೆಂದು ಅತ್ತ ಹೋದೆ. ಪ್ರವೇಶ ದ್ವಾರ ಯಾವಾಗ ತೆರೆಯುತ್ತದೆಂದು ಆಕೆಯನ್ನು ಕೇಳಲು, ಅವಳು "It opens at 4:30 a.m." ಎಂದಳು. ವಿಶಾಲವಾದ ಕಣ್ಣುಗಳು, ಸುಂದರ ಮುಗುಳ್ನಗೆ, ಕರೀ ಕೋಟು ಧರಿಸಿ, ಆಕರ್ಷಕ ಮೊಗದ, ಸುಂದರ ಮೈಕಟ್ಟಿನ ಹೆಂಗಸು, ನಿಶಾ ಸಮಯದಲ್ಲಿ ನನ್ನ ಗಮನ ಸೆಳೆದಿದ್ದಳು. ನಾನು ಕುರ್ಚಿಯನ್ನು ಅರಸುತ್ತಿರುವ್ಯದನ್ನು ನೋಡಿ "You can take this chair" ಎಂದು ಪಕ್ಕದ ಕುರ್ಚಿಯನ್ನು ನನಗೆ ಕೊಟ್ಟಳು. ನಾನು ಸ್ವಲ್ಪ ಸಂಕೋಚದಿಂದಲೆ ಕುರ್ಚಿಯನ್ನು ಪಕ್ಕಕ್ಕೆ ಸರಿಸಿ "Thanks," ಎಂದು ಮುಗುಳ್ನಗುತ್ತ ಕುಳಿತುಕೊಂಡೆ. ಪಕ್ಕದಲ್ಲೆ ಇದ್ದ ಪ್ರಯಾಣಿಕ ನನ್ನೆಡೆ ಮುಗುಳ್ನಕ್ಕು, ಯಾವುದೊ ಒಂದು ದಿನಪತ್ರಿಕೆ ಓದುತ್ತ ಕುಳಿತುಕೊಂಡ. "Are you from India?" ಎಂದಿತು ಆ ಹೆಂಗಸಿನ ಧ್ವನಿ, ಆಗ ನಾನತ್ತ ನೊಡಿ "Yeah" ಎಂದೆ. ಆಗವಳು "I am also from India" ಎಂದಳು, ನಾನಾಗ "Oh!" ಎಂದು ಆಶ್ಚರ್ಯಚಕಿತನಾದೆ. ಏಕೆಂದರೆ ಅವಳ ಉಡುಪು ಹಾಗು ಮಾತಿನ ಶೈಲಿಯಿಂದ ನನಗೆ ಅವಳು ಭಾರತೀಯಳು ಎಂದೆನಿಸಿರಲಿಲ್ಲ. ಆಗಿನಿಂದ ನಾನವಳ ಜೊತೆ ಹಿಂದಿಯಲ್ಲಿ ಮಾತನಾಡಿದೆ; ಓದುಗರಿಗೆ ಸಲೀಸಾಗಲೆಂದು ಆ ಮಾತುಕತೆಗಳ ಕನ್ನಡ ಅವತರಣಿಕೆಯನ್ನು ಬರೆದಿರುವೆ.

"ಓಹ್, ನೀವು ಎಲ್ಲಿಯವರು?" ಎನ್ನಲು, ಪಂಜಾಬಿನವಳು ಎಂದಳು. ೧೯೮೪ರ ದಿಲ್ಲಿ ದಂಗೆಯ ಬಗ್ಗೆ ಓದಿದ ನೆನಪಾಯಿತು. ಇಂದಿರಾಗಾಂಧಿಯವರ ಹತ್ಯೆಯ ನಂತರ ದಿಲ್ಲಿ ಹಾಗೂ ಇನ್ನಿತರ ಕಡೆ ಬಹಳಷ್ಟು ಸಿಖ್ ಜನರನ್ನು ಹೊಡೆದು ಬಡೆದು ಸಾಮೂಹಿಕ ದೌರ್ಜನ್ಯವೆಸಗಿದ್ದರು. ಆವಾಗಲೆ ಬಹಳಷ್ಟು ಜನರು ಪ್ರಾಣಭಯದಿಂದ ಅಮೆರಿಕ, ಇಂಗ್ಲೆಂಡ್ ಮತ್ತಿತರ ಪಾಶ್ಚ್ಯಾತ್ಯದೇಶಗಳಲ್ಲಿ ವಲಸೆ ಬಂದಿದ್ದರು. ಅದಕ್ಕಾಗಿಯೆ ಸಾಮಾನ್ಯವಾಗಿ ಸಿಖ್ ಜನರು ಇಲ್ಲಿ ಬಹಳ ಇರುತ್ತಾರೆಂದುಕೊಂಡು, ಆವಳ ಬಗ್ಗೆ ಲೋಕಾರೂಢಿಯಾಗಿ "ನೀವು ಇಲ್ಲಿ ಎಷ್ಟು ವರ್ಷದಿಂದ ಇದ್ದೀರಿ?" ಎಂದೆ. "ಮೂರು ವರ್ಷದಿಂದ ಇದ್ದೀನಿ" ಎಂದು ಶುದ್ಧ ಪಂಜಾಬಿ ಶೈಲಿಯಲ್ಲಿ ನುಡಿದಳು,

"ನೀವಿಲ್ಲಿ ಓದುತ್ತಿದೀರಾ?"

"ಇಲ್ಲ ರೀ. ನಾನಿಲ್ಲಿ ಕೆಲಸ ಮಾಡುತ್ತೇನೆ. ನಾನು ವಿವಾಹ ವಿಚ್ಛೇದಿತೆ."

"Oh so sad.", ಎಂದು ಅನುಕಂಪ ತೋರಿ, "ನೀವು ಮದ್ವೆ ಆಗಿ ಇಲ್ಲಿಗೆ ಬಂದಿರಾ?" ಎಂದು ಕೇಳಿದೆ.

“ಇಲ್ಲ, ಮೂರು ವರ್ಷದ ಮೊದ್ಲು ನಮ್ಮ ಅಣ್ಣನ ಮನೆಗೆ ಬಂದಿದ್ದೆ,” ಮಂದ ನಗುವಿತ್ತು ಆ ಮುಖದಲ್ಲಿ.
“ಓಹ್, ನೀವು ಇಲ್ಲಿ ಬಂದು ಮದ್ವೆ ಮಾಡ್ಕೊಂಡ್ರಾ? ”
ಆಗ, ತನ್ನ ಹಿಂದಿನ ದಿನಗಳ ಎಳೆಗಳನ್ನು ಬಿಚ್ಚಿಡುತ್ತ “ಹೌದು ರೀ, ನಾನಿಲ್ಲಿ ಬಂದ ತಕ್ಷಣ ನಮ್ಮಣ್ಣ ನನಗೋಸ್ಕರ ಒಂದು ಸಂಬಂಧ ನೋಡಿದ. ಮತ್ತೆ ಇಲ್ಲೆ ಮದ್ವೆನೂ ಆಯ್ತು. ಮದುವೆ ಮೊದಲು ನಾನು ಮದುವೆ ಗಂಡನ್ನ ಭೇಟಿನೂ ಆಗಿರಲಿಲ್ಲ. ಅಮೆರಿಕದಲ್ಲಿದ್ದರೂ ನನ್ನ ಪರಿಸ್ಥಿತಿ ಪಂಜಾಬಿನ ಹಳ್ಳಿಯವಳಿಗಿಂತ ಭಿನ್ನವೇನೂ ಇರಲಿಲ್ಲ. ಹಿರಿಯಣ್ಣನೆ ಈ ಸಂಬಂಧ ಗೊತ್ತು ಮಾಡಿದ್ದ, ಅವನಿಗೇನೂ ಇದಿರು ಹೇಳುವಂತಿರಲಿಲ್ಲ. ಅಮ್ಮ ಇದ್ದರೆ ಕೇಳುತ್ತಿದ್ದಳೇನೋ. ನಾನು ಮದ್ವೆ ಆದ ಗಂಡು, ಮದ್ವೆಯಾಗಿ ೨ ತಿಂಗಳಲ್ಲಿ ನನ್ನನ್ನ ಬಿಟ್ಟು ಹೋದ ಕಣ್ರೀ,” ನೊಂದು ನುಡಿದಳು ಆ ಸರದಾರಿಣಿ.

ನನಗೇನು ತೋಚದಂತಾಯಿತು. ಅವಳನ್ನೆ ನೇರವಾಗಿ ನೋಡುತ್ತಿದ್ದೆ. ಆಕೆಯ ವಿಚಾರಬಂಧ ಕಂಗಳು ನನ್ನಲ್ಲೂ ವಿಚಾರಗಳ ಸುರಿಮಳೆಗೈದುವು. ಮದುವೆ ಎಂಬುದು ಇಷ್ಟೊಂದು ಭಯಾನಕವೆ? ನಮ್ಮ ಪುರಾತನ ಭಾರತೀಯ ಸಂಸ್ಕೃತಿಯಲ್ಲಿ ಇಂತಹ ದುರ್ಬಲತೆಯೆ? ಎಂಬಂತಾಗಲು, ಸೀತಾಮಾತೆಯ ಸ್ವಯಂವರದ ನೆನಪಾಯಿತು. ಅರೆ, ನಮ್ಮ ಸಂಸ್ಕೃತಿಯಲ್ಲಿ ಕನ್ಯೆಯೇ ಸ್ವಂತ ವರನನ್ನು ಆಯ್ಕೆಮಾಡುವ ಪದ್ಧತಿಯಿತ್ತು, ಯಾರದನ್ನು ಕೊಂದು ಹಾಕಿದ್ದು? ಎನ್ನುತ್ತ ಮನಸ್ಸು ಎಲ್ಲೆಲ್ಲೊ ವಿಹರಿಸಲಾರಂಭಿಸಿತು.

ಅಷ್ಟರಲ್ಲಿ ಅವಳೇ ಮುಂದುವರಿದಳು. “ನನ್ನ ಜೀವನ ಶುರು ಆಗುವುದರ ಮೊದಲೆ ಕಣ್ಣೀರಾಯಿತು. ಒಂದು ಮಗುವಿದೆ. ಅದಕ್ಕೋಸ್ಕರಾನೆ ಬದುಕ್ತಾ ಇದ್ದೀನಿ.” ಆಕೆಯ ಕಂಗಳು ತುಂಬಿ ಬಂದಿದ್ದವು.

ಆಕೆಗೆ ಸಾಂತ್ವನ ಹೇಳುತ್ತಾ “ನೀವು ನಿಜವಾಗ್ಲೂ ಧೈರ್ಯಶಾಲಿನಿ. ಒಬ್ಬಳೇ ಪರಿಸ್ಥಿತಿಯನ್ನು ಎದುರಿಸುತ್ತಾ ಇದ್ದೀರಿ. ನಿಮ್ಮ ಮಗು ಎಷ್ಟು ದೊಡ್ಡದಿದೆ?” ಎಂದೆ. ಮಗುವಿನ ವಿಚಾರ ಮಾಡಿ ಆಕೆಯ ಕಣ್ಣರಳಿ “ಒಂದೂವರೆ ವರ್ಷದವನಿದ್ದಾನೆ, ದಿನಾಲು ಪಾಪ ಅವನನ್ನ ಊಟ ಮಾಡಿಸಿ ಮಲಗಿಸಿ ಬರ್ತೀನಿ ರೀ” ಎಂದಳು.

“ಅಯ್ಯೊ ರಾತ್ರಿ ಅವನನ್ನ ಯಾರು ನೊಡ್ಕೊಳ್ತಾರೆ?”
ಆಗವಳು “ಹಾಂ, ಒಬ್ಬಳು ಶಿಶುಪಾಲಕಿನ (baby sitter) ಇಟ್ಟಿದೀನಿ. ದಿನಾ ರಾತ್ರಿ ಬರ್ತಾಳೆ, ತಿಂಗಳಿಗೆ ೬೦೦ ಡಾರ್ ಕೊಡ್ತೀನಿ” ಎಂದು ಆಕೆಯ ಕಂಗಳು ಇತ್ತ ನೋಡಿ “ನೀವು ಇಲ್ಲಿ ಓದುತ್ತೀರಾ? ಇಲ್ಲಿ ಬಹಳ ಜನ ಓದಲು ಬರುತ್ತಾರೆ” ಎಂದಳು. “ಇಲ್ಲಾ, ನಾನು ಕೆಲಸ ಮಾಡಲು ಬಂದಿರುವೆ, ಕ್ಯಾಲಿಫ಼ೋರ್ನಿಯಾದಲ್ಲಿ ಕೆಲಸ ಮಾಡುತ್ತಿರುವೆ.”

“ಮದುವೆ ಮಾಡ್ಕೊಂಡಿದ್ದೀರಾ?”

ಆಗ ನಾನು ಮನಸ್ಸಿನಲ್ಲೇ, “ಅಯ್ಯಮ್ಮಾ ಯಾರಿಗೆ ಬೇಕು ಮದುವೆ, ಒಬ್ಬನೆ ಚೆನ್ನಾಗಿದ್ದೀನಿ! ಯಾಕೀಗ ಮದ್ವೆ ವಿಚಾರಾ? ಹುಡುಗಿ ಚೆನ್ನಾಗಿದ್ದರೆ ಎಲ್ಲಾ ಒಳ್ಳೆಯದು, ಯಾವುದೊ ಜಗಳಗಂಟಿನೊ, ಪಿತೂರಿಪ್ರಿಯಳೊ, ಇಲ್ಲಾ ಬಜಾರಿಯೊ ಸಿಕ್ಕರೆ ಅಧೋಗತಿ” ಎಂದು ವಿಚಾರ ಮಾಡುತ್ತಿರಲು, ಅವಳು ಮತ್ತೊಮ್ಮೆ “ನಿಮ್ಮ ಸಂಸಾರ ಎಲ್ಲಿದೆ?” ಎಂದಳು.
“ಇಲ್ಲಾ, ನನ್ ಮದ್ವೆ ಆಗಿಲ್ಲ, ನಮ್ಮ ಅಮ್ಮ ಅಪ್ಪ ಹುಬ್ಬಳ್ಳಿ, ಕರ್ನಾಟಕದಲ್ಲಿದ್ದಾರೆ”
“ಕರ್ನಾಟಕದಲ್ಲಿ ಯಾವ್ ಭಾಷೆ ಮಾತಾಡ್ತಾರೆ? ಮರಾಠಿನಾ ಇಲ್ಲಾ ತಮಿಳಾ?”
ನನಗೆ ನಾರಾಯಣ ಹುಯಿಲಗೋಳರ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಎಂಬ ಪಂಕ್ತಿ ನೆನಪಾಗಿ ಕನ್ನಡಕ್ಕೆ ಯಾಕೀ ಸ್ಥಿತಿ ದೇವರೇ, ಇನ್ನೂ ಕನ್ನಡ ಉದಯಾನೆ ಆಗಿಲ್ವಲ್ಲಪ್ಪ ಎನಿಸಿತು. “ಉತ್ತರ ಭಾರತದ ಹೆಂಗಸು, ಅದಲ್ಲದೆ ಸಾಮಾನ್ಯ ಜ್ಞಾನ ಕಡಿಮೆ ಇರಬಹುದು. ಮಿಗಿಲಾಗಿ ನಾನೆ ಇವಳಿಗೆ ಸಿಕ್ಕ ಮೊದಲ ಕನ್ನಡಿಗನಿರಬೇಕು” ಎಂದು ನನ್ನೊಳಗೆ ತೀರ್ಮಾನಿಸಿ “ಇಲ್ಲ, ಕರ್ನಾಟಕದಲ್ಲಿ ಕನ್ನಡ ಮಾತನಾಡ್ತಾರೆ. ನಿಮಗೆ ಗೊತ್ತಿಲ್ವೆ?” ಎಂದೆ.
ಆಗವಳು “ಹೌದು ರೀ. ಅದು ಬಹಳ ಕಷ್ಟಕರ ಭಾಷೆ” ಎಂದಳು! ಜೇನಿನ ಹೊಳೆಯೊ, ಹಾಲಿನ ಮಳೆಯೊ ಸುಧೆಯೊ ಕನ್ನಡ ಸವಿನುಡಿಯೊ ಎಂದು ನೆನಪಾಗಿ ಕನ್ನಡದ ಬಗ್ಗೆನೋ ಅಥವಾ ಎನ್ನಡದ ಬಗ್ಗೆ ಹೇಳ್ತಿದ್ದಾಳೋ ಏನೋ ಎಂದು ಸುಮ್ಮನೆ ಮುಗುಳ್ನಕ್ಕೆ.

ಅಷ್ಟರಲ್ಲಿ, ನನ್ನ ಪಕ್ಕದಲ್ಲಿ ಕುಳಿತ ಪ್ರಯಾಣಿಕ, “ನೀವಿಬ್ಬರೂ ಒಂದೇ ದೇಶದವರಾ?” ಎಂದು ವಿಚಿತ್ರ ಆಂಗ್ಲ ಶೈಲಿಯಲ್ಲಿ ನುಡಿದ. ಆಗ ಅವಳು “ಹೌದು, ನಾವಿಬ್ಬರು ಭಾರತದವರು. ನಾವು ನಮ್ಮ ಭಾಷೆ ಮಾತನಾಡುತ್ತಿದ್ದೇವೆ” ಎಂದಳು. ನಾನೂ “ನೀವು ಎಲ್ಲಿಯವರು?” ಎಂದು ವಿಚಾರಿಸಿದೆ.
“ಎಲ್–ಸಾಲ್ವಡಾರ್” ಎಂದು ಮುಗುಳ್ನಕ್ಕ,
೨೫ರ ಹರೆಯದ ಕೆಂಪು ಯುವಕ. ನಸುನಗುವ ಮುಖ, ಗುಂಡು ಮಾಡಿಸಿದ ತಲೆ, ಸೆಳೆಯುವ ಕಂಗಳು. ನನ್ನ

ವಯಸ್ಸಿನವನಾದುದರಿಂದ ಸ್ವಲ್ಪ ಸಲಿಗೆಯಿಂದ ಮಾತನಾಡಿಸಿದೆ.

"ನೀನು ನಿಮ್ಮ ಮಾತೃಭೂಮಿಗೆ ಹೊಗುತ್ತೀದ್ದೀಯಾ?"

ಆಗ ಸರದಾರಿಣಿ ನಡುವೆ ಬಂದು "ಹನ್ನೊಂದು ವರ್ಷದ ನಂತರ ಹೋಗ್ತಿದ್ದಾನ್ರೀ, ಬಹಳ ಖುಷಿಯಾಗಿದ್ದಾನೆ" ಎಂದಳು. ಆಗ ನಾನು "ಅಹ್! ಹನ್ನೊಂದು ವರ್ಷಾನಾ?, ಓಹ್! ನಿಮ್ಮ ಸಂಸಾರ ಸಾಲ್ವಡಾರಲ್ಲೆ ಇದೆಯ?"

ಆತ: "ಹೌದು ನಮ್ಮ ತಾಯಿ ಅಲ್ಲಿರುತ್ತಾರೆ, ನಮ್ಮಣ್ಣ ಹಾಗೂ ಅಕ್ಕ ಇರೋದು ಫ್ಲೊರಿಡಾದಲ್ಲಿ" ಎಂದ.

"ಅಣ್ಣ, ನನಗೆ ೬ ತಿಂಗಳು ಅವ್ವನ್ನ ನೊಡ್ದೆ ಬೇಜಾರಾಗುತ್ತಿದೆ. ಹನ್ನೊಂದು ವರ್ಷಾನಾ? ನೀವು ನಿಮ್ಮ ಅಮ್ಮನ್ನ ನೊಡೋಕೆ ಹೊಗ್ತಿದ್ದೀರಾ?" ಎಂದಾಗ ಮುಗುಳನಗುತ್ತ "yeah yeah" ಎಂದಾಗ ನನಗೂ ಬಹಳ ಸಂತಸವಾಗಿತ್ತು.

"ನಿಮ್ಮಮ್ಮ ನಿನ್ನ ನೋಡಿ ಸಂತಸ ಪಡುತ್ತಾರೆ", ಎಂದೆ

"ನಾನೂ ಸಹ ಖುಶಿಯಾಗಿದ್ದೇನೆ" ಎಂದನವ ನಸುನಗುತ್ತ.

ಅಷ್ಟರಲ್ಲಿ ಸರದಾರಿಣಿಯು ನಾನು ನೀರು ಕುಡಿದು ಬರುವೆ ಎಂದು ನೀರು ಕುಡಿಯಲು ಮೆಟ್ಟಿಲು ಇಳಿದು ಕೆಳಗಿನ ಮಹಡಿಯಲ್ಲಿದ್ದ ನೀರಿನ ಕಾರಂಜಿಯತ್ತ ಹೊರಟಳು. ನಾನು ಪ್ರಯಾಣಿಕನೊಂದಿಗೆ ಮಾತುಕಥೆ ಮುಂದುವರೆಸುತ್ತ "ನಿನ್ನ ಮದುವೆ ಆಗಿದೆಯೆ?" ಎಂದು ಕೇಳಲು, "ನಾನು ಇನ್ನೂ ಗೃಹಸ್ಥನಲ್ಲ, ನಾನೂ ಭಾರತದ ಹುಡ್ಗೀನೆ ಮದುವೆ ಆಗೋದು, ಅವಳು ಚೆನ್ನಾಗಿದ್ದಾಳೆ, ನಾನು ಅವಳನ್ನೇ ಮದುವೆ ಆಗ್ತೀನಿ, She is so cute" ಎಂದು ನೀರು ಕುಡಿಯಲೆಂದು ಆಗಲೆ ಸ್ವಲ್ಪ ದೂರ ನಡೆದ ಸರದಾರಿಣಿಯತ್ತ ಕೈ ಮಾಡಿ ಹೇಳಿದ. ಕೂಡಲೆ ನಾನು ಅವಳತ್ತ ತಿರುಗಿ ನೋಡಿದೆ, ಅವಳೂ ಸಹ ಹೋಗುತ್ತಲೇ ನನ್ನೆಡೆ ತಿರುಗಿ "ಭಾರತಕ್ಕೆ ಬರ್ತಾನಂತೆ ರೀ, ತಾಜ಼್ ಮಹಲ್ ನೊಡಬೇಕಂತೆ" ಎಂದಾಗ, ನಾನು ಸುಮ್ಮನೆ ನಗುತ್ತಿದ್ದೆ. ಆಗ ಸರದಾರಿಣಿ ಮೆಟ್ಟಿಲು ಇಳಿದು ಹೋದಳು. ಈತನ ಜೊತೆ ಮತ್ತೆ ಹರಟೆ ಶುರು ಮಾಡಿದೆ.

"ನೀನು ಯಾವಾಗ ನಿಮ್ಮೂರಿಂದ ವಾಪಸ್ಸು ಬರುವೆ?"

"ನಂಗೊತ್ತಿಲ್ಲ, ನಮ್ಮಮ್ಮ ಬಿಟ್ರೆ ಬರ್ತೀನೀ ಇಲ್ಲಾ ಅಂದ್ರೆ ಬರೊಲ್ಲ"

"ಹೌದಾ, ನ್ಯೂಯಾರ್ಕ್‌ನಲ್ಲಿ ಒಬ್ಬನೆ ಇರೋದಾ?"

"ನಾನು ನಮ್ಮ ಸಹೊದ್ಯೋಗಿಗಳೊಂದಿಗೆ ಇಲ್ಲಿರುವೆ, ನನ್ನ ಸಹೊದ್ಯೋಗಿ ಅವನಿಗೆ ನಿದ್ರೆ ಬರುತ್ತದೆ ಎಂದು ನನ್ನ ರಾತ್ರಿಯೇ ವಿಮಾನ ನಿಲ್ದಾಣಕ್ಕೆ ಬಿಟ್ಟು ಹೊದ, ಆದರೆ ನನ್ನ ವಿಮಾನದ ಸಮಯ ಮುಂಜಾನೆ ಇದೆ, ನನ್ನ ಸಹವರ್ತಿಗಳು ನನ್ನನ್ನ ರಾತ್ರೀನೆ ಒದ್ದು ಹೊರಗಡೆ ಹಾಕಿದ್ರು ಹಾಹಾಹಾ"

"ಆಹಾಹಾ, ಅಂದ ಹಾಗೆ ನೀನು ಊಟಾ ಮನೆನಲ್ಲೆ ಮಾಡ್ಕೊಳ್ತಿಯಾ?"

"ಇಲ್ಲಾ, ನಂಗೆ ಅಡುಗೆ ಮಾಡೊಕ್ಕೆ ಬರೊಲ್ಲ"

"ಓಹೊ, ಹಾಗಾದ್ರೆ ದಿನಾಲು ಹೊರಗಡೆ ಊಟಾ ಮಾಡ್ತೀಯಾ?"

"ಹೌದು ನಾನು ಸಾಮಾನ್ಯವಾಗೀ ದುಬಾರಿಯಲ್ಲದ ಉಪಹಾರಗೃಹಗಳಲ್ಲಿ ಊಟ ಮಾಡ್ತೀನೀ. ಬೇರೆ ಕಡೆ ಹೊದ್ರೆ ೨೦ ಗಟ್ಟೀ ಇಡಬೇಕು, ನಾನೇನಾದ್ರೂ ೩-೪ ಬೀರು ತಗೊಂಡ್ರೆ ೪೦ ಗಟ್ಟೀ! ಹಾಹಾ, ದೇವರು ನನ್ನ ರಾಷ್ಟ್ರಾಧ್ಯಕ್ಷನ್ನಾಗಿಯಾದ್ರು ಮಾಡಲಿಲ್ಲಾ, ಅಧ್ಯಕ್ಷನನ್ನ ಬಿಡು ಕೊನೆಗೆ ಆತನ ಸಂಬಧಿಕನನ್ನಾದರೂ ಮಾಡಬಾರದೆ ಹಾ ಹಾ!"

"ನಿನಗೆ ಅಡುಗೆ ಮಾಡೊಕೆ ಬರೋಲ್ಲ ಅಲ್ವಾ, ನೀನು ಅಡುಗೆ ಮಾಡೋಕೆ ಬರುವವಳ್ನ ಮದ್ವೆ ಆಗು, ದಿನಾಲು ಅಡುಗೆ ಮಾಡದಿದ್ರು, ನಿನಗೆ ಮಾಡೋಕಾದ್ರು ಕಲಿಸ್ತಾಳೆ."

"ಅದೆಲ್ಲಾ ನಂಗೆ ಗೊತ್ತಿಲ್ಲಾ, ಬ್ರೆಜ಼ಿಲ್ ಹುಡುಗಿಯರು ಸಖತ್ತಾಗಿರ್ತಾರೆ ನೋಡೊಕೆ, ಅವರನ್ನೆ ಹುಡುಕುತ್ತೆನೆ ಊಟಾ ಗೀಟಾ ಇವೆಲ್ಲ ನಂಗೆ ಗೊತ್ತಿಲ್ಲಾ."

"ಓಹೊ! ಬರೀ ನಾನು ಹಾಗೆ ಅಂತಾ ಮಾಡಿದ್ದೆ ನೀನೂ ಹಾಗೇನಾ ಹಾ ಹಾ..."

ಆ ನಂತರ ನನಗೂ ಸ್ವಲ್ಪ ನಿದ್ರೆ ಬಂದಂತಾಯಿತು. ಸ್ವಲ್ಪ ಹೊತ್ತಿನ ನಂತರ ಸರ್ದಾರಿಣಿಯು ಬಂದು "ನೀವು ಪ್ರವೇಶ ಪತ್ರ ತಗೊಂಡಿದ್ದೀರಾ?" ಎಂದು ಕೇಳಿದಾಗಲೆ ಎಚ್ಚೆತ್ತದ್ದು. ಹೋಗಿ ಗಣಕಯಂತ್ರದಲ್ಲಿ ಪ್ರವೇಶಪತ್ರ ಮುದ್ರಿಸಿ, ನೀರು ಕುಡಿದು ತಿನ್ನಲು ಚಿಪ್ಸ್ ಪೊಟ್ಟಣವನ್ನು ತಂದೆ. ಚಿಪ್ಸ್ ತಿಂತೀರಾ ಎಂದು ಕೇಳಿದಾಗ, ಸಹಪ್ರಯಾಣಿಕ ಒಂದೆರಡು ತಗೆದುಕೊಂಡ. ಸರದಾರಿಣಿಯು "ನಾನು ಮನೆಗೆ ಹೊಗಿ ಹಲ್ಲುಜ್ಜಿಯೇ ತಿನ್ನೋದು. ಈಗ ಬೇಡ ಧನ್ಯವಾದಗಳು" ಎಂದಳು. ಹರಟೆ ಮುಂದುವರಿಸಿ, ಚಿಪ್ಸ್ ತಿನ್ನುತ್ತ ನಾನು ಸರದಾರಿಣಿಯತ್ತ ನೋಡಿ, "ನಿಮ್ಮ ಅಮ್ಮ ಅಪ್ಪ ಇಲ್ಲಿಯೆ ಇದ್ದಾರೆಯೆ?" ಎಂದೆ.

"ಇಲ್ಲ ಅವರು ಭಾರತದಲ್ಲಿ ಇದ್ದಾರೆ. ಇಲ್ಲಿ ನಮ್ಮಣ್ಣನ ಸಂಸಾರ ಇದೆ."

"ನೀವು ಅವರೊಂದಿಗಿದ್ದೀರಾ?"

ಅದಕ್ಕವಳು, "ಇಲ್ಲಾ ನಾನು ಒಬ್ಬಳೆ ಇರ್ತೀನಿ, ಈ ಜಗತ್ತಿನಲ್ಲಿ ಒಬ್ಬಳೆ ಇರೋದು ತುಂಬಾ ಕಷ್ಟ, ಹಗಲು ರಾತ್ರಿ ದುಡೀಬೇಕಾಗತ್ತೆ." ಎಂದಳು.

“ಒಹ್! ನಿಮ್ಮ ಅಮ್ಮ ಅಪ್ಪ ಭಾರತದಲ್ಲಿ ಇದ್ರೆ ನೀವು ಭಾರತಕ್ಕೆ ಯಾಕೆ ಹೋಗಬಾರದು?”

ಅದಕ್ಕವಳು, “ನಾನಿಲ್ಲಿ ಒಂಥರಾ ಸಿಕ್ಕಿಹಾಕ್ಕೊಂಡಿದ್ದೀನಿ. ಇಲ್ಲೀ ಆರಾಮಾಗಿ ಇರೊಕ್ಕೆ ಆಗೊಲ್ಲ, ಮರಳಿ ಭಾರತಕ್ಕೂ ಹೋಗಲಾರದಂತಹ ಸಂದಿಗ್ಧ ಪರಿಸ್ಥಿತಿ. ನನ್ನ ಮಗೂಗೆ ಓದ್ಸಿ ದೊಡ್ಡ ಮನುಷ್ಯನನ್ನಾಗಿ ಮಾಡ್ತೀನಿ.”


ಆಗ ನಾನು, “ಅವನು ಅಮೇರಿಕಾದ ನಾಗರಿಕನಲ್ಲವೆ? ಯಾವಾಗಲಾದರೂ ಇಲ್ಲಿಗೆ ಬರಬಹುದು” ಎಂದೆ.

“ಇಲ್ರೀ ನನ್ ಬಿಟ್ಟು ಹೋದ್ನಲ್ಲ, ಆ ಖದೀಮನಿಗೆ ತೋರಿಸಬೇಕು ನಾನು ಅವನಿಲ್ಲದೆ ಆರಾಮಾಗಿ ಇರಬಲ್ಲೆ. ಏನಾದ್ರು ಮಾಡಿ ತೋರಿಸಬೇಕು ಕಣ್ರೀ” ಎಂದು ಛಲದಿಂದ ನುಡಿದಾಗ, ನಾನು ಮನದಲ್ಲಿ ಭಲೆ ಭಾರತೀಯಳೆ ಎಂದುಕೊಂಡು, ಕೇವಲ ಸಂಸಾರ ಭಾರವನ್ನು ಹೊತ್ತು ಅತೀತಳಾಗದೆ, ಇಂದಿನ ಸ್ತ್ರೀಯ ಆತ್ಮವಿಶ್ವಾಸ, ಛಲ ಕಂಡು ಹೆಮ್ಮೆ ಎನಿಸಿತು. “ಈಗ ಅವನೆಲ್ಲಿ?” ಎಂದು ತುಸು ಅಳುಕಿನಿಂದಲೇ ಕೇಳಿದೆ.

“ಅವನಿಲ್ಲೆ ಇದ್ದಾನ್ರೀ, ಇದೇ ಊರಲ್ಲಿ. ತನ್ನ ಪ್ರಿಯತಮೆಯ ಹಿಂದೆ ಓಡಿ ಹೋದ,” ಎಂದು ಪಿಸುಗುಟ್ಟಿದಳು.

ಆಗ ನನಗೆ ಇತ್ತೀಚಿನ ಕೆಲವು ಅನಿವಾಸೀ ಭಾರತೀಯರ – ಇಲ್ಲಿ ಯಾರೊಂದಿಗೊ ಇದ್ದು, ಮನೆಯವರ ಒತ್ತಡಕ್ಕೆ ಮಣಿದೊ, ಇಲ್ಲ ಕೆಟ್ಟ ಬುದ್ಧಿಯಿಂದಲೋ ಭಾರತದ ಹೆಣ್ಣನ್ನು ಮದ್ವೆ ಆಗೀ ಜೀತದಾಳಾಗಿ ಮಾಡಿ, ಅಮೇರಿಕವೆಂಬ ಸುಂದರ ಕನಸು ಹೊತ್ತು ಬಂದ ಮುಗ್ಧ ಹೆಂಗಸಿನ ಕನಸು ಭಗ್ನಗೊಳಿಸಿ ಕಾರ್ಗತ್ತಲಿಗೆ ನೂಕಿದ – ಪ್ರಕರಣಗಳು ನೆನಪಾದವು. ಇಂತಹ ಅನಾಗರಿಕರಿಂದ ಬೇರೆ ನಿವಾಸಿಗಳಿಗೂ ಆದ ತೊಂದರೆ ನೆನಪಾಗಿ ನಾನವಳಿಗೆ, “ನೀವ್ಯಾರು ಅವನಿಗೆ ತಿಳುವಳಿಕೆ ಹೇಳಲಿಲ್ವೆ? ನಿಮ್ಮಣ್ಣ, ಇಲ್ಲಾ ಅವ್ನ ತಂದೆ ತಾಯೀ?”

“ಇಲ್ರೀ ಯಾರಿಗೆ ಸರಿಯಾಗಿ ಜೀವನ ಮಾಡೊ ಆಸೆ ಇಲ್ವೊ,



ಚಿತ್ರ: ಸೌಜನ್ಯ ಕೇಣಿ

ಯಾರಿಗೆ ನಾನು ಇಷ್ಟ ಇಲ್ವೊ, ಅವ್ನಿಗೆ ಯಾರು ಏನು ತಿಳ್ಸಿ ಹೇಳ್ತಾರೆ? ಅವನ ತಂದೆ ತಾಯೀನೂ ನನ್ನನ್ನ ನೋಡಿ, ಒಂದು ಹುಡುಗಿ ಬಾಳು ಹಾಳು ಮಾಡಿದೆವಲ್ಲ ಎಂದು ಸಂಕಟ ಪಡ್ತಾರೆ. ಆದರೆ ಏನು ಪ್ರಯೋಜನ?''

''ನೀವು ಅವನಿಗೆ ವಿಚ್ಛೇದನ ಯಾಕೆ ಕೊಟ್ರಿ?''

''ನಾನೆಲ್ಲಿ ಅವನಿಗೆ ವಿಚ್ಛೇದನ ಕೊಟ್ಟೆ? ಅವನು ಅವಳ ಹಿಂದೆ ಓಡಿ ಹೋದ, ಆ ಹೆಂಗಸು ನನಗಿಂತ ದೊಡ್ಡವಳು. ಅವಳಿಗಾಗಲೆ ಏಳು ವರ್ಷದ ಮಗುವಿದೆ. ಆದರೆ ಅವಳು ಬಹಳೇ ಸುಂದರವಾಗಿದ್ದಾಳೆ ರೀ, ತುಂಬಾನೆ ಚೆನ್ನಾಗಿದ್ದಾಳೆ ನೊಡೋಕೆ,'' ಎಂದವಳ ಮಾತುಗಳಲ್ಲಿ ಅಸಹಾಯಕತೆ ತುಂಬಿ ತುಳುಕುತ್ತಿತ್ತು, ಕಂಗಳು ನಿರಾಸೆಯನ್ನಾವರಿಸಿದ್ದುವು. ನನಗೆ ಇದೆಲ್ಲ ವಿಚಿತ್ರವೆನಿಸಿ ನಾಲಿಗೆ ಮಾತನಾಡದೆ ಮೌನವಾಗಿ, ಈಕೆಯ ಪತಿಯ ಹುಚ್ಚು ಪ್ರೇಮ ಅಂದಾಜ್‌ನ ಶಾಹ್‌ರುಕ್ ಖಾನ್‌ನ ಹಾಗೆ ತೋರಿತು.

ಆಗ ನಾನು, ''ಹಾಗಾದರೆ ಅವಳ ಮದುವೆ ಆಗಿಲ್ವೆ? ಮಗು ಯಾರದ್ದು?'' ಎಂದೆ ತುಮುಲದಿಂದ.

''ಅವಳೊಬ್ಬಳು ವಿಧವೆ, ಆದರೆ ತುಂಬಾ ರೂಪವತಿ, ತುಂಬಾ ಸುಂದರವಾಗಿದ್ದಾಳ್ರೀ, ಅವಳ ಸೌಂದರ್ಯವೇ ನಂಗೆ ಮುಳುವಾಗಿದೆ'' ಎಂದು ಮತ್ತೊಮ್ಮೆ ಅಸಹಾಯಕತೆಯ ಸೀಮೆ ತೊರಿದಳು.

ನಾನು ಮನದಲ್ಲೆ, ದೇವರೆ ಯಾಕಪ್ಪಾ ಈ ವೈಚಿತ್ರ್ಯ? ಈಗ ಈಕೆಗೇಕೆ ನಿನ್ನಿಂದ ವಂಚನೆ? ಈಕೆ ಸುಂದರವಾಗಿದ್ದರೆ ಈಕೆಯ ಜೀವನ ಚೆನ್ನಾಗಿರುತ್ತಿತ್ತೆನೋ ಎಂದುಕೊಳ್ಳುತ್ತಿರುವಾಗಲೆ, ಆ ಇನ್ನೊಬ್ಬಾಕೆಯ ಬಗ್ಗೆ ವಿಚಾರ ಮೂಡಿತು. ಅವಳೂ ಸಹ ಸುಂದರಿ. ಯೌವ್ವನದ ಸುಖವು ಬರುವ ಮೊದಲೆ ದೇವರು ಅವಳನ್ನು ವಿಧವೆಯನ್ನಾಗಿ ಮಾಡಿದ. ಆರು ವರ್ಷ ಚಿಕ್ಕವಳು ಸಹ ಅವಳ ನೊಡಿ ಕರುಬುವ ಸುಂದರ ಹೆಣ್ಣು. ಆ ಮಾತು ಹಾಗಿದ್ದರೆ ಅವಳು ಹಾಗು ಇವಳ ನಡುವಿರುವ ಈತ? ಈಕೆಯ ಜೀವನ ಹಾಳು ಮಾಡಿದ ನೀಚನಾದರೆ, ಆ ಅಬಲೆಯನ್ನು ಪ್ರೀತಿಸಿದ ಉದಾರಿ! ಜೀವನವೆಂಬುದು ನಾಣ್ಯದ ಮುಖದ್ವಯಗಳೆಂಬುದು ನೆನಪಿಗೆ ಬಂತು. ಒಂದೆಡೆ ಗೆಲುವು ಮತ್ತೊಂದೆಡೆ ಸೋಲು. ಆಚೆ ಒಳ್ಳೆಯವನು, ಈಚೆ ಕೆಟ್ಟವನು ಎಲ್ಲವನ್ನೂ ನಾವೆ ರೂಪಿಸಿಕೊಂಡದ್ದೆಂಬುದು ನೆನಪಾಗಿ ನಾನವಳಿಗೆ ಏನೂ ಹೇಳದೆ ಸುಮ್ಮನಾಗಿಬಿಟ್ಟೆ.

ಆಗವಳು ತುಂಬಾ ವಿಚಾರಮಗ್ನಳಾಗಿ ''ಜೀವನದಲ್ಲಿ ಎಲ್ಲರೂ ಓಡ್ತಾರೆ ಅಲ್ವಾ? ನಾನು ಅವನ ಹಿಂದೆ, ಅವನು ಅವಳ ಹಿಂದೆ, ಅವಳೂ ಸಹ ಯಾರನ್ನೊ ಪ್ರೀತಿಸುತ್ತಿರಬೇಕು ಮತ್ತು ಅವನ ಹಿಂದೆ ಓಡುತ್ತಿರಬೇಕು'' ಎಂದಾಗ ಅವಳ ಮುಗ್ಧ ಅಸಹಾಯಕ ಮುಖದ ಭಾವ ನನ್ನ ಖಿನ್ನನನ್ನಾಗಿಸಿತು. ಬದುಕೊಂದು ಮರೀಚಿಕೆ, ಎಲ್ಲರು ಏನನ್ನೋ ಹುಡುಕಿಕೊಂಡು ಯಾವುದೋ ಸಾಧನೆಗೆ ಓಡುತ್ತಿರುತ್ತಾರೆ, ಸಿಕ್ಕಾಗ ಸಂತಸ ಮತ್ತೆ ಅದೇ ಮಾರೀಚಮಾಯಾಮೃಗ. ಹುಡುಕುತ್ತಿದ್ದ ವಸ್ತು ಸಿಗದಿದ್ದರಂತೂ ನಿರಾಸೆ ಹಾಗು ವಿಷಾದಗಳ ಸುರಿಮಳೆ. ಆದರೆ ಈ ಮರೀಚಿಕೆ ಎಂಬುದು ತಪ್ಪಿದ್ದಲ್ಲ. ಇವಳು ಆತನ ಹಿಂದೆ ಓಡುತ್ತಿದ್ದಾಳೆ. ಈ ಪ್ರಯಾಣಿಕ ತಮ್ಮ ಅವ್ವನ್ನ ನೋಡದೆ ೧೧ ವರ್ಷ ಇಲ್ಲಿದ್ದಾನೆ. ಈಗ ಅವ್ವನನ್ನು ನೋಡೊ ಓಡಾಟ, ನಾನು ನನ್ನ ಬಳಗವನ್ನು ಅಲ್ಲಿ ಬಿಟ್ಟು ಹೊಸತು ಕಲಿಯುವ, ಹಣ ಗಳಿಸುವ ಮರೀಚಿಕೆಯಿಂದ ಇಲ್ಲಿ ಬಂದೆ. ಹಾಗೆಯೇ ಪ್ರತಿಯೊಬ್ಬರ ಜೀವನ ಸಂಜೀವಿನಿ. ಈ ಹುಡುಕಾಟ, ಶೋಧನೆಯೆಂಬ ಗುರಿ. ಅದೇ ಪಯಣದಲ್ಲಿಂದು ನಾನು, ಆಕೆ ಹಾಗು ಆ ಪ್ರಯಾಣಿಕ ಒಬ್ಬರನ್ನೊಬ್ಬರನ್ನು ನೋಡಿದ್ದೇವೆಂದು ಅರಿವಾಯಿತು. ಆಗಿನ ಅಲ್ಪ ನಿಶ್ಶಬ್ದತೆಯಲ್ಲಿ ಜೀವನವೆಂಬುದು ಏಕೈಕ ಗುರಿ ಹೊತ್ತು ಸಾಧಿಸುವ ಸಾಹಸಕ್ರೀಡೆಯಲ್ಲ. ಅದೊಂದು ಗುರಿಗಳ ಸರಮಾಲೆಯುಳ್ಳ ಅಂತ್ಯ ರಹಿತ ಪಯಣ. ನಮ್ಮ ಪರಿಸರ, ಮನೋಶಕ್ತಿಗಳು ಸಮ್ಮಿಳಿತಗೊಂಡು ಸಾಗುವ ಮುಕ್ತ ದಾರಿ ಎಂದು ಆಕಾಶವಾಣಿಯಾದಂತಾಯಿತು.

ಭಾರವಾದ ಮನಸ್ಸನ್ನು ಹಗುರ ಮಾಡಿಕೊಳ್ಳಲು ''ನೀವು ರಂಗ ದೇ ಬಸಂತಿ ಚಲನಚಿತ್ರ ನೊಡಿದ್ದೀರಾ?'' ಎಂದು ಕೇಳಿದೆ. ಅದಕ್ಕವಳು, ''ಇಲ್ಲಾ. ಚೆನ್ನಾಗಿದೆಯಾ?'' ಎಂದಾಗ ''ರಂಗ ದೇ ಬಸಂತಿ ಎಂದರೆ ಏನು?'' ಎಂದು ಕೇಳಿದೆ ಪಂಜಾಬಿನಳು ಗೊತ್ತಿರಬೇಕು ಎಂದುಕೊಂಡು.

ಆಗವಳು ''ಹಮ್ಮ್..., ನಮ್ಮ ದೇಶದ ಬಾವುಟದಲ್ಲಿ ಬಸಂತೀ ಇದೆಯಲ್ಲ, ಅದನ್ನು ಕೊಡು ಎಂದು ಅರ್ಥ.'' ಎಂದು ಏನೋ ಮಾತಾನಾಡಿದಂತಾಯಿತು. ನಾನು ಇವಳಿಗೆ ಗೊತ್ತಿರಲಿಕ್ಕಿಲ್ಲಾ ಎಂದು ತಿಳಿದು ಚಲನಚಿತ್ರ ಚೆನ್ನಾಗಿದೆ ನೋಡಿ ಎಂದು ಹೇಳಿದೆ. ಆಗ ''ಆಗಲೀ ನಾನು ನಾಳೆಯೇ ಹೋಗುವೆ, ಆದರೆ ಇಲ್ಲಿ ಬಹಳ ದುಬಾರಿಯಾಗಿದೆ ರೀ ಟಿಕೆಟುಗಳು'' ಎಂದು ಮುಖವನ್ನು ಗಂಟು ಹಾಕಿದಳು.

ಆಗ ನನಗೆ ಅವಳ ಆರ್ಥಿಕ ಸ್ಥಿತಿಯ ಬಗ್ಗೆ ನೆನಪಾಗಿ, ಅಯ್ಯೊ ಎನಿಸಿತು. ''ನಿಮಗೆ ಇಲ್ಲಿ ಎಷ್ಟು ಕೊಡುತ್ತಾರೆ? '' ಎಂದು ಕೇಳಿದೆ. ''ಅಯ್ಯೋ, ಕೇಳಬೇಡಿ. ಬಹಳ ಕಡಿಮೆ ಕೊಡ್ತಾರೆ. ಒಂದು ಘಂಟೆಗೆ ೮ ಡಾಲರ್ ಕೊಡ್ತಾರೆ ಹಾಗು ದೀರ್ಘಾವದಿ ಕೆಲಸ (overtime) ಮಾಡಿದರೆ ೧೨ ಕೊಡ್ತಾರೆ. ತೆರಿಗೆ ಬಹಳಾನೇ ಕಟ್ಟಬೇಕಾಗತ್ತೇರೀ ಇಲ್ಲಿ. ಅದಕ್ಕೇ ನಾನು ಬಹಳ ಕೆಲಸ ಮಾಡ್ಬೇಕಾಗತ್ತೆ'' ಎನ್ನುತ್ತಾ ತನ್ನ ಸಂಕಟವನ್ನು

ತೋಡಿಕೊಳ್ಳುತ್ತಾ, "ಸಂಸಾರ ಸಾಗಿಸಲಿಕ್ಕೆ ಹಣ ಬಹಳ ಬೇಕಾಗತ್ತೆ ಅಲ್ವಾ? ಒಬ್ಬಳೆ ಇರ್ತೀನಿ, ಕಡಿಮೆ ಓದಿದ್ದೀನಿ. ಬಹಳ ಕೆಲಸ ಮಾಡಬೇಕಾಗತ್ತೆ, ನಿಮ್ಮದು ಇನ್ನೂ ಮದುವೆ ಆಗಿಲ್ಲವ್ವಲ್ಲ, ನೀವು ಖರ್ಚನ್ನು ಪಾಲು ಮಾಡ್ಕೊಂಡು ಇರ್ತೀರಾ ಅಲ್ವಾ, ನಿಮಗೆ ಅಷ್ಟೊಂದು ಕಷ್ಟ ಆಗಲ್ಲ. ನನಗೆ ತಿಂಗಳ ಬಾಡಿಗೆನೇ ೧೦೦೦ ಡಾಲರ್ ರೀ" ಎಂದೆಲ್ಲ ಹೇಳಿದಾಗ ನಾನು ಅವಾಕ್ಕಾದೆ. ನನ್ನ ಮನದಲ್ಲೇ ಲೆಕ್ಕಾಚಾರ ಹಾಕಿಕೊಂಡೆ. ೮ ಡಾಲರ್ ದಿನಕ್ಕೆ ೮ ತಾಸಿನಂತೆ, ೩೦ ದಿನಕ್ಕೆ ಸುಮಾರು ೧೬೦೦. ರಾಮಾ ರಾಮಾ ೧೦೦೦ ಬಾಡಿಗೆ+೬೦೦ ಶಿಶು ಪಾಲಕಿಗೆ ಆದರೆ, ಊಟಕ್ಕೇನು? ಎಂದು ವಿಚಾರ ಬಂದು ಆಕೆಯ ಸಹೋದರ ಸಹಾಯ ಮಾಡುತ್ತಿರಬಹುದೆಂದು ಆಕೆಯನ್ನು ಕೇಳಿದೆ.

ಆಗವಳು "ಇಲ್ಲಾರೀ, ಅವ್ನು ನಂಗೆ ಬರೀ ಓದೋದಕ್ಕೆ ಸಹಾಯ ಮಾಡ್ತಾನೆ" ಎಂದಾಗ ನಾನು ಮೌನನಾದೆ.

ಆಗ ನನ್ನ ಪಕ್ಕದ ಪ್ರಯಾಣಿಕ "ನೀನೆಲ್ಲಿ ಕೆಲಸ ಮಾಡ್ತೀಯಾ? ಇಲ್ಲೇನಾ? ಇಲ್ಲಾ ಕ್ಯಾಲಿಫೋರ್ನಿಯಾದಲ್ಲಾ?" ಎಂದು ಕೇಳಿದ.

ಆಗ ನಾನು ಕ್ಯಾಲಿಫೋರ್ನಿಯಾ ಎಂದೆ, ಮತ್ತು ಈತನ ಬಗ್ಗೆ ಕುತೂಹಲದಿಂದ, "ನೀನು ಏನು ಮಾಡುತ್ತೀಯ? ಎಂದು ಕೇಳಿದೆ.

ಆಗಾತ, "ನಾನು ಕುದುರೆ ಸವಾರೀ ಮಾಡುತ್ತೇನೆ, ಮತ್ತು ಅವುಗಳಿಗೆ ಪ್ರಶಿಕ್ಷಣ ನೀಡುತ್ತೇನೆ," ಎಂದು ನಗುತ್ತ ನುಡಿದಾಗ ಬೆಳದಿಂಗಳ ಬಾಲೆಯ ರೇವಂತ್‌ನ ವ್ಯಾಖ್ಯಾನ ನೆನಪಾಗಿ, ಇವನು ರೇವಂತಗಿರಿ ಮಾಡಿರಬಹುದು, ಅಲ್ಲದೆ ಜೂಜಿನ ಕುದುರೆಗಳ ಸವಾರನಿರಬಹುದು ಎಂದು ನೀನು ಜೂಜಿನಲ್ಲೀ ಕುದುರೆ ಓಡಿಸಿದ್ದೀಯಾ? ಎಂದು ಕೇಳಿದೆ.

ಅದ್ದಕ್ಕವನು, "ಇಲ್ಲಾ ಇವಾಗ ಓಡಿಸೋದಿಲ್ಲಾ, ನಾನು ೧೪೦ ಪೌಂಡು ಇದ್ದೀನಿ, ಕುದುರೆ ಜೂಜಿನಲ್ಲಿ ಓಡಿಸುವದಕ್ಕೆ ೧೦೦ ಪೌಂಡಿಗಿಂತ ಕಡಿಮೆ ಇರಬೇಕು. ಇಲ್ದಿದ್ರೆ ಭಾರ ಆದ್ರೆ ಕುದುರೆ ಜೋರಾಗೀ ಓಡಲ್ಲಾ ಅಲ್ವಾ?" ಅಂದ.

"ಹಾಗಾದ್ರೆ ನೀನು ಕುದುರೆ ಪ್ರಶಿಕ್ಷಕ, ಎಲ್ಲಿದೆ ನಿಮ್ಮ ಕುದುರೆ ಲಾಯ?"

"ಅದು ಈ ವಿಮಾನ ನಿಲ್ದಾಣದ ಸಮೀಪವೆ ಇದೆ, ಕೇವಲ ಹತ್ತು ಮೈಲು. ನಿನಗೆ ಕುದುರೆ ಸವಾರಿ ಬರುತ್ತಾ? ಬಾ ನಾನು ನಿಂಗೆ ಕಲಿಸುವೆ."

"ಹೌದು ಹೌದು ಕಲಿಸು, ನಿನ್ನ ದೂರವಾಣಿ ಹಾಗೂ ವಿಳಾಸ ಕೊಡು."

"ತಗೊ."

"ಅದು ನಿನ್ನ ವಿಮಾನದ ಪ್ರವೇಶ ಪತ್ರ ಅಲ್ಲವೆ?"

"ಅಯ್ಯೊ, ತಲೆ ಕೆಡಿಸ್ಕೋಬೇಡ, ಅದು ಬರೀ ಒಂದು ನಕಲು ಪ್ರತಿ ಮಾತ್ರ, ನಾನು ಹಲವಾರು ಪ್ರತಿಗಳನ್ನ ತಗೊಂಡಿದ್ದೆ ನಮ್ಮ ಮನೆಯ ಮುದ್ರಣ ಯಂತ್ರದಿಂದ."

"ಆಮೇಲೆ ಅಳಬೇಡ, ನಿಂಗೆ ಇದು ಬೇಕಾದ್ರೆ ನೀನು ಹ್ಯೂಸ್ಟನ್‌ಗೆ ಹೊಗುವ ವಿಮಾನಕ್ಕೆ ಬರಬೇಕಾದೀತು."

"ಅಹಾ ಆಗಲಿ. ನಾನು ಚೀರುತ್ತೇನೆ, ನೀನು ಕಿಟಕಿಯಿಂದ ಅದನ್ನ ಎಸೆದು ಬಿಡು."

"ನೀನು ೧೧ ವರ್ಷದ ಹಿಂದೆ ಬಂದಾಗ ಹೆಚ್ಚು ಕಡಿಮೆ ೧೫ ವರ್ಷದವನಿದ್ದಿರಬಹುದಲ್ವೆ?"

"ಹೌದು..."

ಆಗ ನನ್ನಂತ ಎಷ್ಟೊಂದು ಜನ ನಿರುದ್ಯೋಗದ ನೆಪದಿಂದ ಸುತ್ತಾಡಿದ್ದು ನೆನಪಾಯಿತು. ಅದೆ ವಿಚಾರ ನಮ್ಮಮ್ಮ ಹೇಳುತ್ತಿದ್ದಳು – ಮೈ ಮುರಿದು ದುಡೀರಿ. ವಯಸ್ಸು ಐತಿ, ಬ್ಯಾರೆ ಊರಿಗೆ ಹೊದ್ರ ಇನ್ನ ಛೊಲೊನ. ಪರಸ್ಥಳ ಪ್ರಾಣಸಂಕಟ ಅಂತ ಇನ್ನ ಛೊಲೊ ದುಡೀತಿರೀಪಾ ಎಂಬುದು ನೆನಪಾಯಿತು. ಆತನ ಅವ್ವನೂ ಹಾಗೆ ಹೇಳಿರಬೇಕು ಎಂದುಕೊಂಡಾಗ ಆತ ೧೫ ವರ್ಷದವನಿದ್ದಾಗಲೆ ಊರು ಬಿಟ್ಟು ಬಂದ ಎಂಬುದು ಹೊಳೆಯಿತು. ಆತನ ತಾಯಿ ಎಷ್ಟು ನೊಂದಳೋ ಏನೊ, ಆದರೆ ಅದೆಲ್ಲ ಬೇರೆ, ೧೧ ವರ್ಷಗಳ ತರುವಾಯ ತಾಯಿಯನ್ನು ನೆನಪು ಮಾಡಿಕೊಂಡು ಹೊರಟ ಈ ಪುತ್ರನನ್ನು ನೊಡಿ ಹೆಮ್ಮೆ ಎನಿಸಿ, "ನೀನು ನಿಮ್ಮ ಅಮ್ಮನಿಗೋಸ್ಕರ ಏನೇನು ಉಡುಗೊರೆ ತಗೊಂಡು ಹೋಗ್ತಾ ಇದ್ದೀಯಾ?, ನೀನು ಮೊದಲು ಏಕೆ ಹೋಗಲಿಲ್ಲ?" ಎಂದು ಕೇಳಿದೆ. "ನಾನು ಏನೂ ಉಡುಗೊರೆ ತಗೊಂಡಿಲ್ಲ, ಅವಳಿಗೋಸ್ಕರ ನಾನು ಎಷ್ಟೊಂದು ವರುಷಗಳಿಂದ ಉಳಿತಾಯ ಮಾಡಿದ ಹಣವನ್ನು ತೆಗೆದುಕೊಂಡು ಹೋಗುತ್ತಿರುವೆ. ನನಗೆ ಕಾರಣಾಂತರಗಳಿಂದ ಹೋಗಲು ಆಗಿರಲಿಲ್ಲ. ಇವಾಗ ಸಮಯಾನೂ ಇದೆ ಹಣಾನೂ ಇದೆ ಅದಕ್ಕೆ ಹೋಗುತ್ತಿದ್ದೇನೆ." ಎಂದಾಗ ನನಗೆ ಈತನ ಹೋಗಲಾರದ ಪರಿಸ್ಥಿತಿ ಕಂಡು ಪಾಪ ಎನಿಸಿತು. ಈಗಲಾದರು ಹೋಗುವ ಸೌಭಾಗ್ಯ ಬಂತಲ್ಲ ಈತನಿಗೆ, ಎಂದು ಈತನ ಹಿಂದಿನ ದಿನಗಳ ಬಗ್ಗೆ ವಿಚಾರ ಮೂಡಿ, ಈತ ಬಂದರೂ ತಡೆಯದ ನೊಂದ ತಾಯಿಯ ಹಾಗು ತಾಯಿಯ ನೊಡುವಾಸೆಯ ಮಗನನ್ನು ಕಂಡು ಸರ್ವೇಜನಾಃ ಸುಖಿನೋಭವಂತು ಎಂದು ದೇವರಲ್ಲಿ ಪ್ರಾರ್ಥಿಸಿದೆ. ಜನರ ಕಠಿಣ ಪರಿಶ್ರಮ ಎಷ್ಟೊಂದು ಒಳ್ಳೆಯತನವನ್ನು ಬಿಂಬಿಸುತ್ತದಲ್ಲವೆ? ನಮ್ಮಲ್ಲಿ ಹಣಕ್ಕಾಗಿ ಯೋಧರ ಶವಪೆಟ್ಟಿಗೆಯನ್ನೂ ಬಿಡದ ಮಂತ್ರಿಗಳು, ಎಮ್ಮೆಯ ಮೇವನ್ನೂ ನುಂಗಿ ಹಾಕುವ ಪುಢಾರಿಗಳ ನೆನಪಾಗಿ ಮನಸ್ಸು ಸ್ವಲ್ಪ ಕೆರಳಿದಂತಾಯಿತು!

ಅಷ್ಟರಲ್ಲಿ ಸರದಾರಿಣಿಯು, "ನಿಮಗೆ ಎಷ್ಟು ಸಂಬಳ?" ಎಂದಳು. "ಐದು ಸಾವಿರ" ಎನ್ನಲು ಅವಳು " ಅಲ್ಲೊ ಬಹಳೇ ದುಬಾರಿ ಅಲ್ವೇನ್ರೀ? ಬೇಗ ಮದುವೆ ಮಾಡ್ಕೊಳ್ಳಿ, ಮನೇಲೀ ಹೆಣ್ಣು ಅನ್ನೊ ಜೀವ ಬಂದ್ರೆ ಹಣ ಉಳಿಸ್ತಾಳೆ" ಕಾಳಜಿಯಿಂದ ಎಂದಳು.

ಆಗ ನನ್ನ ಚೆಲುವೆಯ ನೆನಪಾಗಿ ಅಯ್ಯೊ ಉಳಿತಾಯವೆ, ಇದೇ ಬೂಟು ತಗೊ ಅಂತ ಬೆಂಗಳೂರಿನ ಅಂಗಡಿಯೊಂದರಲ್ಲಿ ೫೫೦೦/– ರೂಪಾಯಿಗಳ ಬೂಟು ಹಿಡಿದು ಕುಳಿತದ್ದು, ನಾನವಳಿಗೆ ನಾನು ಇಷ್ಟೊಂದು ದುಬಾರಿ ಅಲ್ಲ ಅಮ್ಮಾ, ನಮ್ಮಂತಹವರ ಒಂದು ತಿಂಗಳ ಸಂಸಾರಾನೆ ಸಾಗತ್ತೆ ಇಷ್ಟು ಹಣದಲ್ಲಿ ಅಂತ ಸಮಜ಼ಾಯಿಷಿ ಹೇಳಲು ಹೋಗಿದ್ದು, ನಿನಗೆ ಇದೇ ಸರಿ ಹೊಂದುತ್ತೆ ಅಂತ ಅವಳು ಗಲ್ಲ ಉಬ್ಬಿಸಿ ಮುನಿಸಿಕೊಂಡಿದ್ದು, ಕೊನೆಗೂ ನಾನದನ್ನ ತಗೊಂಡಿದ್ದು, ನೆನಪಾಗಿ, "ಅದೆಲ್ಲಾ ಆಗಲ್ಲ ರೀ, ವಿವಾಹ ಒಂದು ಪ್ರವಾಹ ಅಲ್ವೆ?" ಎಂದೆ ನಸುನಗುತ್ತ.

"ಅಯ್ಯೊ ಹಾಗೆಲ್ಲಾ ಹೇಳಬೇಡ್ರೀ ವಾಹೇ ಗುರುಂದಿ ಸೌ (ಗುರುದೇವರ ಪ್ರಮಾಣವಾಗಿ) ನಿಮಗೆ ಒಳ್ಳೇ ಹೆಂಡ್ತೀ ಸಿಗಲಿ."

ನಾನಾಗ ನಸುನಗುತ್ತ ಧನ್ಯವಾದಗಳನ್ನು ಅರ್ಪಿಸಿದೆ.

ಅಷ್ಟರಲ್ಲಿ ಮುಂದಿನ ಪಾಳಿಯ ಹುಡುಗಿಯು ಬಂದು ಆಕೆಗೆ "Hi" ಎಂದಳು. ಆಗ ಸರದಾರಿಣಿ ನನ್ನೆಡೆಗೆ ತಿರುಗಿ ನನ್ನ ಪಾಳಿ ಮುಗೀತು ಎಂದು ತನ್ನ ಸರಂಜಾಮುಗಳನ್ನು ಜೊಡಿಸಿಕೊಂಡು ಹೊರಡಲು ಸಜ್ಜಾದಳು.

ಆಗ "Passengers going to Houston by flight no 703 please assemble for security checking" ಎಂದು ಧ್ವನಿಯಾಗಲು ನಾನು ಪ್ರಯಾಣಿಕನಿಗೆ, "ಆಗಲಿ, ಸಿಗುವ ಮತ್ತೆ, ನಿಮ್ಮ ಮನೆಗೆ ಹೋದಾಗ ಮಜಾಮಾಡು. ನಿಮ್ಮ ಅಮ್ಮನಿಗೆ ನನ್ನ ನಮಸ್ಕಾರ ಹೇಳು." ಎಂದೆ. "ನಿನ್ನ ನೋಡಿ ಸಂತೋಷವಾಯ್ತು. ಆಗಲಿ ನಮ್ಮ ಅಮ್ಮನಿಗೆ ಹೇಳುವೆ. ನನ್ನ ಹೆಸರು ಕಾರ್ಲೋಸ್ ಎಂದು ನಿನಗೆ ನೆನಪಿರತ್ತೆ ಎಂದು ತಿಳಿದಿರುವೆ. ನಾನೂ ಭಾರತವನ್ನು ನೋಡಲು ಬರುತ್ತೇನೆ" ಎಂದು ನಗುತ್ತ ಎದ್ದು ನಿಂತು ಹಸ್ತಲಾಘವ ಮಾಡಿದ.

ನಾನು ಒಳಗೆ ಹೋಗುವ ಸಾಲಿನಲ್ಲಿ ನಿಂತಾಗ, "ನಿಮ್ಮನ್ನು ಭೇಟಿಯಾಗಿ ಸಂತಸವಾಯಿತು. ನಮ್ಮೂರಿನವರೊಂದಿಗೆ ಮಾತಾಡಿದಂತಾಯಿತು. ಅವರವರ ಕಷ್ಟ ಅವರಿಗೆ, ಯಾರನ್ನು ಕೇಳಿ ಏನು ಬರುತ್ತವೆ? ಈ ದುಃಖ ನನಗೇಕೆ ಎಂದು ನನಗೂ ಗೊತ್ತಿಲ್ಲ. ಈ ಜನ್ಮದಲ್ಲಿ ಏನಾದರೂ ತಪ್ಪು ಮಾಡಿದ್ದರೆ ಅದರ ಫಲ ಎಂದು ಕೊಳ್ಳುತ್ತೇವೆ. ಇಲ್ಲದಿದ್ದರೆ ಹಿಂದಿನ ಜನ್ಮದ ಪಾಪದ ಫಲ ಎಂದುಕೊಳ್ಳುತ್ತೇವೆ." ಎಂದು ಹೇಳಿದಳು.

"ಅದು ನಿಜ. ಏನೆ ಆಗಲಿ ಈಸಲೆಬೇಕು, ಇದ್ದು ಜಯಿಸಲೇ ಬೇಕು." ಎಂದು ಹೇಳಿದೆ.

"ನೀವು ಹೇಳಿದ್ದು ಖರೆ. ಆಗಲಿ ಇನ್ನು ನಾನು ಹೊರಡುತ್ತೇನೆ ಶುಭಯಾತ್ರೆ" ಎಂದು ಹೊರಟಳು.

ಆಗ ನಾನು, "ನಿಮಗೂ ಒಳ್ಳೆಯದಾಗಲಿ, ಜೀವನದಲ್ಲಿ ನೀವು ಗೆಲ್ಲುತ್ತೀರಿ" ಎಂದೆ. ಅವಳು, "ನಮಸ್ಕಾರ" ಎಂದು ಹೊರಟಳು.

ನಾನವಳಿಗೆ ನಗುತ್ತಾ "ಸತ್ ಶ್ರೀ ಅಕಾಲ್" ಎನ್ನುತ್ತಾ ಮುಂದಿನ ಪಾಳಿಯ ಯುವತಿಗೆ ನನ್ನ ಪ್ರವೇಶ ಪತ್ರ ತೋರಿಸಿ "Are you from India?" ಎಂದೆ.

ಆಗವಳು ಓರೆ ನೊಟದಿಂದ ಮಂದ ನಗೆಯಲ್ಲಿ "No" ಎಂದಳು.

"Oh but you look like the princess for whom TajMahal was built."

"Oh I am flattered" ಎಂದು ನಗುತ್ತಾ, "I am from South America" ಎನ್ನುವಾಗ ನಾನು ಬಾಗಿಲು ಕಡೆ ನೊಡಿದೆ. ಸರದಾರಿಣಿಯು ಮುಗುಳ್ನಕ್ಕು "Bye" ಎಂದು ಕೈ ಮಾಡಿ ಬಾಗಿಲು ತೆರೆದು ಹೋದಾಗ ನಸುಕಿನ ನ್ಯೂಯಾರ್ಕಿನ ತಂಗಾಳಿಯು ಜನರ ಹೋರಾಟ ಮನೋಭಾವದ ನುಡಿಯನ್ನು ಕಲಿಸಿದಂತಾಗಿತ್ತು. ಇರುವೆ ಭಾರ ಇರುವೆಗೆ, ಆನೆ ಭಾರ ಆನೆಗೆ ಎಂದು ಒಣ ಮಾತುಗಳನ್ನಾಡಿ, ನನ್ನ ದುಃಖಗಳೆ ದೊಡ್ಡದೆಂದು ಸಾಧಿಸುವ ನಮ್ಮ ಮನೋಭಾವಕ್ಕೆ ಈಟಿ ಹಾಕಿ, ತಿದ್ದಿಕೊಳ್ಳಲು ತಿಳಿಸಿ ಹೇಳಿದಂತಾಗಿ, ಅಲ್ಲಿಯೇ ನೋಡುತ್ತ ನಿಂತಿರಲು, ಅಲ್ಲಿನ ಭದ್ರತಾ ಸಿಬ್ಬಂದಿಯು "Next please" ಎಂದ. "ಯಾವ ಹೂವು ಯಾರ ಮುಡಿಗೊ, ಯಾರ ಒಲವು ಯಾರ ಕಡೆಯೊ" ಸಣ್ಣಗೆ ಹಾಡುತ್ತಾ ಒಳಗೆ ಹೋದೆ. ನಿಜವಾಗಿಯೂ ಅದೊಂದು ವಿಶಿಷ್ಟ ಸಂಭಾಷಣೆಯ ರಾತ್ರಿಯಾಗಿತ್ತು.

ಬೆಳಿಗ್ಗೆ ಹ್ಯೂಸ್ಟನ್‌ನಲ್ಲಿ ಆ ಪ್ರಯಾಣಿಕ ಮತ್ತೆ ಸಿಕ್ಕ. ವಿಮಾನ ಒಂದು ಘಂಟೆ ತಡವಾಗಿ ಬಂದದ್ದರಿಂದ ಅವಸರದಿಂದ "ಶುಭವಾಗಲಿ" ಎಂದು ಹೇಳಿ ಓಡಿ ನಾನು ಹೋಗುವ ವಿಮಾನದ ಟರ್ಮಿನಲ್‌ಗೆ ಬಂದು, ಸ್ಯಾನ್ ಹೊಸೆಯ ನನ್ನ ಸ್ನೇಹಿತನಿಗೆ ನನ್ನ ಕರೆತರಲು ೧೨:೩೦ಕ್ಕೆ ವಿಮಾನ ನಿಲ್ದಾಣಕ್ಕೆ ಬಾ ಎಂದು ಹೇಳಿ ವಿಮಾನ ಹತ್ತಿದೆ. ಸರಿಯಾಗಿ ೧೨:೩೦ಕ್ಕೆ ವಿಮಾನ ಸ್ಯಾನ್ ಹೊಸೆಗೆ ಬರಲು, ನನ್ನ ಸ್ನೇಹಿತ ೨೦ ನಿಮಿಷ ತಡವಾಗಿ ಬರುವೆನೆಂದು ನನ್ನ ದೂರವಾಣಿಗೆ ಶಬ್ದವಾಣಿಯನ್ನು

ಮಾಡಿದ. ಆಗ ನಾನು ಕುಳಿತುಕೊಂಡು ಅಲ್ಲಿದ್ದ ಟಿವಿಯತ್ತ ಕಣ್ಣು ಹಾಯಿಸಿದೆ.

ಹ್ಯೂಸ್ಟನ್‌ನಿಂದ ಸ್ಯಾನ್-ಸಾಲ್ವಡೊರ್‌ಗೆ ಹೋಗುವ ವಿಮಾನ ದುರ್ಘಟನೆಗೀಡಾಗಿತ್ತು, ಎಲ್ಲಾ ಪ್ರಯಾಣಿಕರೂ ಮರಣ ಹೊಂದಿದ್ದರು. ನಾನು ಅಳುಕಿನಿಂದಲೇ ಆ ಪ್ರಯಾಣಿಕನ ಬಗ್ಗೆ ಯೋಚಿಸಿದೆ, ಆತನು ಕೊಟ್ಟ ಆ ಪ್ರವೇಶ ಪತ್ರದ ನಕಲು ಪ್ರತಿಯನ್ನು ತೆಗೆದಾಗ ಹೆದರಿಬಿಟ್ಟೆ. ವಿಮಾನ ಸಂಖ್ಯೆ ಈ-೨೦೧೪, ದುರ್ಘಟನೆಗೀಡಾದ ವಿಮಾನ. ನನಗೆ ಏನೇನೋ ಯೋಚನೆಗಳು ಬರಲಾರಂಭಿಸಿದವು. ಕೆಲವು ಗಂಟೆಗಳ ಹಿಂದೆ ಮಾತನಾಡಿಸಿದ ವ್ಯಕ್ತಿಯ ವಿಮಾನ ದುರ್ಘಟನೆಗೀಡು? ಆತ ಈಗಿಲ್ಲ. ಓಹ್, ಏನಾದರೂ ಆಗಬಹುದಲ್ಲವೆ, ಆ ಸರದಾರಿಣಿಯು ಸಹ ಈಗ_ , ಏನೇನೊ ಆಗಬಹುದಲ್ಲವೆ? ಮನಸ್ಸು ಭಾರವಾಗಿತ್ತು, ಯೊಚನೆಗಳೇ ವಿಚಿತ್ರವೆನಿಸಿದವು. ಕೆಲವು ತತ್ವಜ್ಞಾನದ ವಿಚಾರಗಳು ಮನಸ್ಸಿಗೆ ಬಂದವು. ಜೀವನವು ನೀರ ಮೇಲಿನ ಗುಳ್ಳೆ, ನೀನು ಏನೇ ಮಾಡು ಕೊನೆಗೆ ಆಗುವದು ವಿಧಿ ಬಯಸಿದ್ದು. ಹಾಗಾದರೆ ಜೀವಿಸಿ ಏನು ಪ್ರಯೋಜನ? ನಮಗೆ ಬೇಕಾದದ್ದು ನಾವು ಪಡೆಯದಿದ್ದರೆ? ಯಾವುದನ್ನು ನಮಗೆ ಬೇಕಾದದ್ದು ಎನ್ನುತ್ತೇವೆಯೊ, ಅದು ನಮಗೆ ಏಕೆ ಬೇಕು? ಎಂದೆಲ್ಲಾ ಯೋಚಿಸುತ್ತಿರುವಾಗ ನನ್ನ ಸ್ನೇಹಿತ ಬಂದು ನನಗೆ ಹೊರಗೆ ಬಾ ಎಂದು ದೂರವಾಣಿ ಕರೆ ಮಾಡಿದ.

ನಾನು ಹೊರಗೆ ಹೋದೊಡನೆ, "ಹೇಗಿತ್ತೊ ನ್ಯೂಯಾರ್ಕ್? ರಾಘವೇಂದ್ರ ಹೇಗಿದ್ದಾನೆ? ಏನು ನಿನಗಿಂತ ದಪ್ಪಕ್ಕೆ ಆಗಿಬಿಟ್ಟಿದಾನಾ, ಕುಡುಕ ನನ್ ಮಗ. ಆ ಫೋಟೊ ಕಳಿಸಿದ್ದಿಯಲ್ಲೊ ಅದರ ತರಹ, ಅವನು ನಿಜವಾಗಿಯೂ ದಪ್ಪಕ್ಕಾಗಿದ್ದಾನೋ?"

"ಹಮ್ಮ್" ಎಂದ ನಾನು, ಇನ್ನೂ ಆ ಸುದ್ದಿಯ ಗುಂಗಿನಲ್ಲೇ ಇದ್ದೆ.


"ಓಯ್, ಏನಾಯ್ತೊ? ಯಾಕೋ ಡಲ್ ಆಗಿ ಕಾಣಿಸ್ತೀಯಾ? ಏನ್ ಸಮಾಚಾರ?"

"ಏನಿಲ್ಲ ಕಣೋ, ನಡಿ ಹೋಗೋಣ"

"ಒಳ್ಳೆ ್ವೀರಭದ್ರನ ತರಹಾ ಆಡ್ತಿದಾನಲ್ಲಪ್ಪಾ, ಯಾಕೊ ಇಷ್ಟು ಸೀರಿಯಸ್ ಮೂಡು? ಗಂಭೀರ ವದನ, ರುದ್ರದೇವ ಸಾಕ್ಷಾತ್ಕಾರನಾ?" ಎಂದು ಏನೇನೊ ನಗೆ ಹನಿಗಳನ್ನ ಆಡ್ತಾ ಇರಲು, "ಏನಿಲ್ವೊ ಸ್ವಲ್ಪ ಮೂಡ್ ಪ್ರಾಬ್ಲಮ್" ಎಂದೆ.

"ಓಹ್, ನಡೀ ನಡೀ, ಅದು ಬೇರೆ ನಿಂಗೆ. ಯಾವ ಸಿನೆಮಾ ನೋಡಿದೆ ಹಿಂಗಾಗೋದಕ್ಕೆ?" ಎನ್ನುತ್ತಾ ಕಾರಿನಲ್ಲಿ ಕುಳಿತಿರಲು, ಮತ್ತೆ ಯೋಚನೆಗಳು ಸುರಿಯಲಾರಂಭಿಸಿದವು. ಕಾರಿನಲ್ಲಿ ಹಿಂಬದಿಗೆ "ಈ ಭೂಮಿ ಬಣ್ಣದ ಬುಗುರೀ" ಎಂದು ಸುಶ್ರಾವ್ಯವಾಗಿ ಎಸ್.ಪಿ. ಅವರ ಹಾಡಿದ ಹಾಡು ತೇಲಿ ಬರಲು. ನಾನು ಅದೂ ನಿಜಾನೆ, ಅಂದುಕೊಂಡೆ. ಮಗ ಬರುತ್ತಿದ್ದನೆಂದು ಹಾದಿ ಕಾಯುತ್ತಿರುವ ಆ ತಾಯಿಗೆ ಹೇಗೆ ಎನಿಸಿರಬೇಕು ಎಂಬ ವಿಚಾರ ಮೂಡಿ ಮನಸ್ಸು ಅಯ್ಯೋ ಎಂದುಕೊಂಡಿತು.

ನನ್ನ ಮನೆಗೆ ಬಿಟ್ಟು ನನ್ನ ಸ್ನೇಹಿತ ಕಛೇರಿಗೆ ಹೊರಟು ಹೋದ. ನಾನು ಮುಂಜಾನೆಯ ಸ್ನಾನಾದಿಗಳನ್ನು ಮುಗಿಸಿ, ಪ್ರಾರ್ಥನೆ ಮಾಡುವಾಗ ಬಾಯಿಯಿಂದ "ನಿಧಯೆ ಸರ್ವ ವಿದ್ಯಾನಾಂ, ಭಿಷಜೆ ಭವ ರೋಗಿಣಾಂ" ಎಂದೇನೋ ಅನ್ನುತ್ತಿದ್ದೆ. ಆದರಲ್ಲೆ ದೇವರಿಗೆ, ನೀನೊಬ್ಬ ನಿಜ ಮಹಾನ್ ಕಂತ್ರೀ ರಾಜಕಾರಿಣಿ ಯಾರಿಗೆ ಎಲ್ಲೀ ವಿಕೆಟ್ ಹಾಕ್ತೀಯೊ ಗೊತ್ತಿಲ್ಲಾ, ಅದಕ್ಕೆ ಹಿರಿಯರು, ಗುರುವಿನ ಮೊರೆ ಹೊಗ್ತಾರೆ ಅನ್ಕೊಂಡೆ. ಪ್ರಾರ್ಥನೆ ಮುಗಿಸಿ ಉಪಹಾರ ಮಾಡುವಾಗ ದೂರದರ್ಶನ ನೊಡಲು, ಆತನ ಹೆಸರು ಒಂದು ವಾರ್ತಾಪ್ರಸಾರದಲ್ಲಿ! ಆತನ ಹೆಸರು ನಾಲ್ಕನೆ ಸ್ಥಾನದಲ್ಲಿತ್ತು. ಹೆಸರು: ಕಾರ್ಲೋಸ್ ವಯಸ್ಸು:೨೫ ಎಂದು ತೋರಿಸಿತು. ಮೇಲೆ ನೋಡಲು, "Those Lucky birds!" ನಾನು ಉತ್ಸುಕತೆಯಿಂದ ನೋಡುತ್ತಿರಲು, "You just saw the list of those who survived due to flight delays" ಎಂದು ವಾರ್ತಾವಾಚಕಿ ಹೇಳಿದಾಗ, ನನಗೆ ಮುಗುಳ್ನಗೆ. ನೂರಾರು ಜನ ಸತ್ತಿರಬಹುದು ಆದರೆ ಆತ ಬದುಕುಳಿದಿದ್ದಾನೆ. ನಾನು ಹೋಗಿ ನನ್ನ ಅಂಗಿಯಲ್ಲಿದ್ದ ಆ ವಿಳಾಸ ಬರೆದಿದ್ದ ಪ್ರವೇಶ ಪತ್ರದ ನಕಲು ಪ್ರತಿಯನ್ನು ತೆರೆದೆ. ಅದರಲ್ಲಿ ನ್ಯೂಯಾರ್ಕ್‌ನಿಂದ ಹ್ಯೂಸ್ಟನ್ ವಿಮಾನ ಸಂಖ್ಯೆ ಎಸ್-೭೦೩ ಎಂದಿತ್ತು. ಆಗ ಹೊಳೆಯಿತು ನನ್ನ ವಿಮಾನ ಒಂದು ಘಂಟೆ ತಡವಾಗಿ ಬಂದಿತ್ತು. ಆತ ಸೀಟು ಸಂಖ್ಯೆಯ ಕ್ರಮಾಂಕದಿಂದಾಗಿ ಕೊನೆಗೆ ಬಂದಿದ್ದ. ಆದರೆ ನನಗೆ ಹೊಳೆದಿರಲಿಲ್ಲ. ಆಗ, ಆತ ಹ್ಯೂಸ್ಟನ್ ವಿಮಾನ ನಿಲ್ದಾಣದಲ್ಲಿ ಸಿಕ್ಕಿದ್ದು, ಹಾಗೂ ನ್ಯೂಯಾರ್ಕ್‌ನಿಂದ ಹ್ಯೂಸ್ಟನ್‌ಗೆ ಬಂದ ವಿಮಾನ ತಡವಾಗಿದ್ದರಿಂದ ಆತ ಹತ್ತಿರಲಿಕ್ಕಿಲ್ಲ ಎಂದು ಹೊಳೆದು, ಯಾವುದೊ ಸಮಾಧಾನದಿಂದ ಕಚೇರಿಯತ್ತ ಹೊರಟೆ. ಮನದಲ್ಲಿ ದೇವರೆ ಕ್ಷಮಿಸಪ್ಪ ನಿನ್ನ ಎಷ್ಟೊಂದು ಹಳಿದೆನಲ್ಲ ತಪ್ಪಾಯಿತು ಎಂದು ಹೇಳುತ್ತಾ, ದೇವರಿಗೆ ಕೃತಜ್ಞತೆ ಸಲ್ಲಿಸಿದೆ. ಆ ದುರ್ದೈವಿ ವಿಮಾನದಲ್ಲಿ ಅವನಂತಹ ಮತ್ತೆ ಎಷ್ಟೋ ಪ್ರಯಾಣಿಕರಿದ್ದಿರಬಹುದು, ಆದರೆ ಕೆಲ ನಿಮಿಷದ ಭೇಟಿ ಮಾನವನಿಗೆ ಎಂತಹ ವಿಚಿತ್ರ ಸ್ಥಿತಿ ಹಾಕುತ್ತದಲ್ವೆ? ಅದಕ್ಕಾಗೆ ಮನುಷ್ಯ ಸಾಮಾಜಿಕ ಜೀವಿ ಅಂತಾರೋ ಏನೋ? ◈



# ವಿಜಯನಗರ ಸಾಮ್ರಾಜ್ಯದ ಕನಸುಗಾರ ಕುಮಾರರಾಮ

**ಮೂಲ: ದಿ. ಓಂಕಾರಪ್ಪ ಸಂಗ್ರಹ: ಸಂಧ್ಯಾ ಗಾಯತ್ರಿ**
ಸಾಂಟಾ ಕ್ಲಾರಾ, ಕ್ಯಾಲಿಫ಼ೋರ್ನಿಯ

ನಮ್ಮ ಕುಮಾರರಾಮನು ಕನ್ನಡಾಂಬೆ ಹೆತ್ತ ವೀರಸಾಹಸಿ ಪುತ್ರರಲ್ಲಿ ಅಗ್ರಗಣ್ಯ. ವಿಜಯನಗರ ಸಾಮ್ರಾಜ್ಯಕ್ಕೆ ಮೊದಲು ಶಂಕುಸ್ಥಾಪನೆ ಮಾಡಿದವನು ನಿಜವಾಗಿ ಕುಮಾರರಾಮ. ಹಕ್ಕಬುಕ್ಕರು ತಮ್ಮ ತಾರುಣ್ಯದಲ್ಲಿ ಕುಮಾರರಾಮನಲ್ಲಿ ಭಂಡಾರದ ಅಧಿಕಾರಿಗಳಾಗಿದ್ದರೆಂಬುದನ್ನು ಇತಿಹಾಸ ಹೇಳುತ್ತದೆ. ಮಹಮ್ಮದ್ ಬಿನ್ ತುಗಲಕ್‌ನ ದಾಳಿಯನ್ನೆದುರಿಸಿ ಕುಮಾರರಾಮನು ಯುದ್ಧರಂಗದಲ್ಲಿ ಮರಣ ಹೊಂದಿದ ನಂತರ ಈ ಸಹೋದರರು ತಮ್ಮ ದೊರೆ ಕುಮಾರರಾಮನ ಕನಸಿನ ಸಾಮ್ರಾಜ್ಯವನ್ನು ವಾಸ್ತವ ಲೋಕಕ್ಕೆ ತರುವ ಪ್ರಯತ್ನ ಮಾಡಿದರು. ಇವರಿಂದ ಈ ಮಹಾಸಾಮ್ರಾಜ್ಯವು ಕಾಲಕ್ರಮದಲ್ಲಿ ಅಸ್ತಿತ್ವಕ್ಕೆ ಬಂದು ಜಗತ್ಪ್ರಸಿದ್ಧವೆನಿಸಿತು. ಅದರ ಹಿನ್ನೆಲೆಯ ಕಥೆ ಈ ಕೆಳಗಿನಂತಿದೆ:

ಹಂಪೆಗೆ ಹತ್ತಿರವಾಗಿದ್ದ ಹೊಸಮಲೆದುರ್ಗದಲ್ಲಿ ಏಳುನೂರು ವರ್ಷಗಳ ಹಿಂದೆ ಕಂಪಿಲನೆಂಬ ದೊರೆ ಆಳುತ್ತಿದ್ದನು. ಆತನ ರಾಜ್ಯವು ತುಂಬ ಚಿಕ್ಕದಾಗಿದ್ದು ಹೊಸಮಲೆಯ ಸುತ್ತಣ ಕೆಲವೇ ಕೆಲವು ಭಾಗಗಳನ್ನು ಒಳಗೊಂಡಿತ್ತು. ಆತನ ಪಟ್ಟದರಸಿ ಹರಿಯಾಲದೇವಿ. ಅಲ್ಲದೆ ಮಾಚಿದೇವಿ, ಚಿನ್ನಾಂಬೆ ಮುಂತಾದ ಉಪಪತ್ನಿಯರೂ ಇದ್ದರು. ಅವರಿಗೆ ಕಾಟಣ್ಣ, ನಾಗಮಯ್ಯ, ವಿರೂಪಾಕ್ಷ ಎಂಬ ಮಕ್ಕಳಿದ್ದರು. ಅವರ ಕುಲದೈವವಾದ ಜಟ್ಟಂಗಿ ರಾಮೇಶ್ವರನ ಅನುಗ್ರಹದಿಂದ ಹರಿಯಾಲ ದೇವಿಯವರಿಗೆ ಜನಿಸಿದ ಮಗನೇ ಕುಮಾರರಾಮ. ಬಾಲಕನಾಗಿ ಬೆಳೆಯುತ್ತಿದ್ದ ರಾಮನಿಗೆ ಕುದುರೆ ಸವಾರಿ ಎಂದರೆ ಪಂಚಪ್ರಾಣ. ಪ್ರೌಢಾವಸ್ಥೆಗೆ ಬರುತ್ತಿದ್ದ ರಾಮನು ಸುಂದರನಾಗಿಯೂ, ಧೈರ್ಯಶಾಲಿಯಾಗಿಯೂ, ಕೀರ್ತಿವಂತನಾಗಿಯೂ, ಸರ್ವ ಸಂಮೋಹಕನಾಗಿಯೂ ಇದ್ದುದರಿಂದ ದೂರದೇಶದ ರಾಜಕುಮಾರಿಯರ, ಅಲ್ಲದೆ ಹತ್ತು ಹಲವು ಲಲನಾಮಣಿಗಳ ಕನಸಾಗಿದ್ದನು. ರಾಮನ ಪ್ರಿಯವಾದ ಕುದುರೆಯ ಹೆಸರು ಬೊಲ್ಲ. ಅಚ್ಚ ಬಿಳಿಯ ಬಣ್ಣದ ಆ ಕುದುರೆಯ ಅಂಗಸೌಷ್ಠವ, ಆಕಾರ ಗಾತ್ರಗಳು ಅತ್ಯಪೂರ್ವವಾಗಿದ್ದುವು. ಗೋವಾದಿಂದ ಬಂದಿದ್ದ ವರ್ತಕರು ಪಣವಾಗಿ ಒಡ್ಡಿದ್ದ ಈ ಅಪರೂಪದ ಅಶ್ವವನ್ನು ಯಾರಿಗೂ ಹತ್ತಿ ಸವಾರಿ ಮಾಡಲಾಗದೇ ವಿಫಲರಾಗಿ ಹೋದಾಗ, ರಾಮನು ಲೀಲಾಜಾಲವಾಗಿ ಬೊಲ್ಲನನ್ನೇರಿ ಶರವೇಗದಲ್ಲಿ ಬಯಲನ್ನೆಲ್ಲ ಸುತ್ತಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರನಾದನು. ವರ್ತಕರು ತಾವು ಒಡ್ಡಿದ ಪಣವನ್ನು ಒಪ್ಪಿಸಿ ಅಭಿನಂದಿಸಿದರು. ಕಂಪಿಲ ದೊರೆಗಳೂ, ಮಂತ್ರಿ ಬೈಚಪ್ಪನವರೂ ಕುಮಾರನ ಶೌರ್ಯ ಸಾಹಸಗಳನ್ನು ಮನಸಾರ ಮೆಚ್ಚಿದರು. ದೊರೆಗಳು ಕೀರ್ತಿಶಾಲಿಯಾದ ಕುಮಾರನಿಗೆ ಯುವರಾಜ್ಯಾಭಿಷೇಕ ಮಾಡಿ ಹರ್ಷಿಸಿದರು. ಯುವರಾಜ್ಯಾಭಿಷೇಕದಿಂದ ಕಂಗೊಳಿಸುತ್ತಿದ್ದ ಕುಮಾರರಾಮ ಪ್ರಭುಗಳ ಪ್ರಖ್ಯಾತಿ ನೆರೆಯ ರಾಜ್ಯಗಳಲ್ಲೂ ಮನೆಮಾತಾಗತೊಡಗಿತು. ಸುಂದರ ಸುಕುಮಾರತೆಗಳನ್ನೂ, ಶೌರ್ಯ ಸಾಹಸಗಳನ್ನೂ, ಆಕರ್ಷಕ ತೇಜಸ್ಸನ್ನೂ ಅಭಿವ್ಯಕ್ತಿಗೊಳಿಸುವ ನಾನಾ ಭಂಗಿಗಳಲ್ಲಿದ್ದ ರಾಮನ ಭಾವಚಿತ್ರಗಳನ್ನು ಮಾರುವುದೇ ಅನೇಕರಿಗೆ ಉದ್ಯೋಗವಾಗಿ ಹೋಯಿತು.

ಚಿತ್ರಪಟಗಳ ವ್ಯಾಪಾರಿಯೊಬ್ಬನಿಂದ ಕುಮಾರರಾಮನ ಶೌರ್ಯ ಸಾಹಸಗಳನ್ನೂ, ಸೌಂದರ್ಯ ಸುಕುಮಾರತೆಗಳನ್ನೂ ಕೇಳಿದ ಓರಂಗಲ್ಲಿನ ರಾಜಕುಮಾರಿ ಮಾತಂಗೀದೇವಿಗೆ ಆತನಲ್ಲಿ ಪ್ರೇಮಾಂಕುರವಾಯಿತು. ಕಾಕತೀಯ ಪ್ರತಾಪರುದ್ರ ದೇವನ ಸಾಕುಮಗಳಾದ ಈಕೆ ಪ್ರಗಲ್ಭೆಯೂ, ಸಾಹಸಿಯೂ ಆಗಿದ್ದಳು. ಸಕಲ ಕ್ಷತ್ರಿಯ ವಿದ್ಯೆಗಳಲ್ಲಿ ಪರಿಣತಳಾಗಿದ್ದು ಯುದ್ಧಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ಕುಮಾರರಾಮನ ಚಿತ್ರಪಟವನ್ನು ಮಾರುವ ನೆಪದಲ್ಲಿ ಅದನ್ನು ಆಕೆಗೆ ತೋರಿಸಿದ ಆ ವ್ಯಾಪಾರಿಯ ಹೆಸರು ಖಲೀಲ್. ಆತನ ಬಲದೋಳು ಮೊಳಕೈ ಹತ್ತಿರ ತುಂಡಾಗಿ ಮೊಂಡಾಗಿತ್ತು. ಹಿಂದೆ ಹಳ್ಳಿಯೊಂದರಲ್ಲಿ ದರೋಡೆ ಅತ್ಯಾಚಾರಗಳಲ್ಲಿ ತೊಡಗಿದ್ದಾಗ ಆತನು ಕುಮಾರರಾಮನ ಸಹಚರ ಹಂಪಣ್ಣನಿಂದ ಕೈ ಕಳೆದುಕೊಂಡಿದ್ದನು. ಹೇಗೋ ಜೀವದಿಂದ ಪಾರಾಗಿದ್ದ ಆತನು ಕುಮಾರರಾಮನ ಮೇಲೆ ಸೇಡು ತೀರಿಸಿಕೊಳ್ಳಲು ನಾನಾ ತಂತ್ರಗಳನ್ನು ಮಾಡುತ್ತಾ ಅದನ್ನೇ ತನ್ನ ಜೀವನದ ಗುರಿಯಾಗಿಟ್ಟುಕೊಂಡಿದ್ದನು. ಓರಂಗಲ್ಲಿನ ರಾಜಕುಮಾರಿಯ ಎದುರು ಉದ್ದೇಶಪೂರ್ವಕವಾಗಿ ಅವನು ಕುಮಾರರಾಮನನ್ನು ಕುರಿತು ಪ್ರಶಂಸೆಯ ಮಾತುಗಳನ್ನಾಡಿ ರಾಜಕುಮಾರಿಯ ಎದೆಯಲ್ಲಿ ಈಡೇರಲಾರದ ಆಸೆಯ ಉರಿಯನ್ನು ಹೊತ್ತಿಸಿ, ಆಸೆಯ ಉರಿ ಸೇಡಿನ ಉರಿಯಾಗುವಂತೆ ಮಾಡುವುದರಲ್ಲಿ ಸಫಲನಾದನು. ಮಗಳಿಗೋಸ್ಕರ ಪ್ರತಾಪರುದ್ರದೇವನು

ಕುಮಾರರಾಮನೊಡನೆ ಯುದ್ಧ ಹೂಡಿ ಸೋತಂತೆ ನಟಿಸಿ ಆತನನ್ನು ಓರಂಗಲ್ಲಿಗೆ ಅತಿಥಿಯಾಗಿ ಆಹ್ವಾನಿಸಿದನು. ತಂದೆಯ ಅನುಮತಿ ಪಡೆದು ಮಂತ್ರಿ ಬೈಚಪ್ಪನವರೊಡನೆ ಓರಂಗಲ್ಲಿಗೆ ಬಂದ ಕುಮಾರನ ಮೇಲೆ ಮೋಹಮಂತ್ರದ ಬಲೆಯನ್ನು ಬೀಸಿದ ಮಾತಂಗೀದೇವಿ ಆತನಿಂದ ಅಷ್ಟೇ ಕಟುವಾಗಿ ತಿರಸ್ಕೃತಳಾಗಿ ಪ್ರಣಯಭಂಗದಿಂದ ಬುಸುಗುಟ್ಟುತ್ತಾ ರೋಷವಿಷವನ್ನು ಕಾರತೊಡಗಿದಳು.

ಪಟ್ಟದರಸಿ ಹರಿಯಾಲ ದೇವಿಯಲ್ಲದೆ ಹಲವು ಜನ ಉಪಪತ್ನಿಯರನ್ನು ಹೊಂದಿದ್ದ ಚಪಲ ಚಿತ್ತರಾದ ಕಂಪಿಲ ದೊರೆಗಳು ತಮ್ಮ ಅಪರ ವಯಸ್ಸಿನಲ್ಲಿ ಹದಿಹರೆಯದ ರತ್ನಾಜಿ ಎಂಬ ಇನ್ನೊಬ್ಬ ಯುವತಿಯನ್ನು ಮದುವೆಯಾಗಿದ್ದರು. ಸಹಜವಾಗಿಯೇ ಇಳಿವಯಸ್ಸಿನ ದೊರೆಯಿಂದ ಅನಾಕರ್ಷಿತಳಾದ ಕಿರಿಯ ರಾಣಿ ರತ್ನಾಜಿ ಯುವರಾಜ ಕುಮಾರರಾಮನಲ್ಲಿ ಆರ್ದ್ರ ಹೃದಯಳಾಗಿದ್ದು ಸಮಯ ನಿರೀಕ್ಷಣೆ ಮಾಡುತ್ತಿದ್ದಳು. ಅವಳ ಆಪ್ತಸಖಿ ಸಂಗಿ ಅವಳ ಆಸೆಯನ್ನು ಈಡೇರಿಸುವಲ್ಲಿ ಸಹಾಯಕಳಾಗಿದ್ದಳು. ಬಟ್ಟೆ ಮತ್ತು ಚಿತ್ರಪಟಗಳ ವ್ಯಾಪಾರದ ನೆಪದಿಂದ ಸಂಗಿಯನ್ನೂ ರತ್ನಾಜಿಯನ್ನೂ ಮೊಂಡಗೈನ ಖಲೀಲ್ ಭೇಟಿಯಾದನು. ಚತುರನೂ ಇಂಗಿತಜ್ಞನೂ ಆಗಿದ್ದ ಆ ವಣಿಕನಿಗೆ ಕುಮಾರರಾಮನ ಚಿತ್ರ ಪಟವನ್ನು ತನ್ಮಯತೆಯಿಂದ ನೋಡುತ್ತಿದ್ದ ಆ ಹೆಂಗಳೆಯರ ಮನೋಗತವನ್ನು ತಿಳಿಯುವುದು ಕಷ್ಟವಾಗಲಿಲ್ಲ. ಮಾತಿಗೆ ಮಾತು ಬೆಳೆಸಿ ಅವರ ಆಸೆಯನ್ನು ಹೊರಬೀಳಿಸಿ ಅವರ ಇಷ್ಟಾರ್ಥಸಿದ್ಧಿಗಾಗಿ ಮಂತ್ರವಾದಿಯೊಬ್ಬನ ನೆರವನ್ನೊದಗಿಸುವುದಾಗಿ ಅವರಿಗೆ ಆಸೆ ಹುಟ್ಟಿಸಿದನು.

ಇತ್ತ ಕಂಪಿಲನ ರಾಜಧಾನಿ ಸಾಲುಸಾಲಾಗಿ ಬರುತ್ತಿದ್ದ ವಿಜಯೋತ್ಸವಗಳಿಂದಲೂ, ಅವು ತರುತ್ತಿದ್ದ ಧನಕನಕಾದಿ ಅಖಿಳೈಶ್ವರ್ಯದಿಂದಲೂ ಬಣ್ಣಕ್ಕೆ ಬಣ್ಣವೇರುತ್ತಿತ್ತು. ಕಂಪಿಲರಾಯರು ಕುಮಾರನ ಸಲಹೆಯಂತೆ ಕುಮ್ಮಟ ದುರ್ಗವನ್ನು ನಿರ್ಮಿಸಿ ರಾಜಧಾನಿಯನ್ನು ಹೊಸಮಲೆ ದುರ್ಗದಿಂದ ಕುಮ್ಮಟ ದುರ್ಗಕ್ಕೆ ಬದಲಾಯಿಸಿದರು. ಪಟ್ಟದರಸಿ ಹರಿಯಾಲದೇವಿಯ ಇಷ್ಟದಂತೆ ಪ್ರಾಪ್ತ ವಯಸ್ಕನಾದ ತಮ್ಮ ಮಗನಿಗೆ ರಾಮಲಾದೇವಿ, ತಿಮ್ಮಲಾದೇವಿ, ಸೋಮಾಯಿ, ಭೂಮಾಯಿ ಮತ್ತು ಕಾಮಿನಿ ಎಂಬ ಐದು ಜನ ಕನ್ಯೆಯರನ್ನು ತಂದು ಮದುವೆ ಮಾಡಿದರು. ಕುಮಾರರಾಮನು ಕಡೆಯವಳಾದ ಕಾಮಿನಿಗೆ ತನ್ನ ಆಯ್ಕೆಯ ಹೆಸರನ್ನಿಟ್ಟು ಹಂಪಾದೇವಿ ಎಂದು ಕರೆಯುತ್ತಿದ್ದನು. ಆಕೆಯಲ್ಲಿ ಜಟ್ಟಂಗಿ ರಾಮ ಎಂಬ ಗಂಡು ಮಗುವನ್ನು ಪಡೆದನು. ಬಹುಪತ್ನಿತ್ವವು ಅರಸೊತ್ತಿಗೆಯ ಅವಿಭಾಜ್ಯ ಅಂಗವೆಂಬಂತಿದ್ದುದರಿಂದ ಶುಚಿಶೀಲ ಸಂಪನ್ನನೆಂದು ಕೀರ್ತಿವಂತನಾಗಿದ್ದ ಕುಮಾರರಾಮನೂ ಸಹ ಅದನ್ನು ಅಂಗೀಕರಿಸಬೇಕಾಯಿತು. ಆದರೂ ಪುರಾಣಪುರುಷರ ಆದರ್ಶಗಳನ್ನು ಬಾಳಿನಲ್ಲಿ ಅನುಷ್ಠಾನಕ್ಕೆ ತರುವ ಮಹತ್ವಾಕಾಂಕ್ಷೆಯಿಂದ ಅತನು ಪರದಾರ ಸೋದರ, ಶರಣಾಗತವಜ್ರಪಂಜರ ಎಂಬ ಬಿರುದುಗಳನ್ನು ಧರಿಸಿದನು.

ದಿಲ್ಲಿಯ ಸುಲ್ತಾನನ ಒಬ್ಬಳೇ ಮಗಳಾದ ಚಾಂದಬೀಬಿ ಸಂಗೀತಕಲಾ ನಿಪುಣೆಯಾಗಿದ್ದು ಚಿತ್ರಕಲೆಯಲ್ಲೂ ಸಾಕಷ್ಟು ಪರಿಶ್ರಮ ಪಡೆದಿದ್ದಳು. ಲೋಕದ ವಿಚಾರದಲ್ಲಿ ಮಹಾಕ್ರೂರಿಯಾಗಿದ್ದ ಸುಲ್ತಾನನು ತಾಯಿಯಿಲ್ಲದ ತನ್ನ ಒಬ್ಬಳೇ ಮಗಳ ವಿಚಾರದಲ್ಲಿ ಅಷ್ಟೇ ಮೃದು ಹೃದಯಿಯಾಗಿದ್ದನು. ಇದೆಲ್ಲವನ್ನೂ ತಿಳಿದ ಮೊಂಡಗೈನ ಖಲೀಲ್ ಮತ್ತೊಮ್ಮೆ ದಿಲ್ಲಿಯಲ್ಲಿ ತನ್ನ ಅದೃಷ್ಟ ಪರೀಕ್ಷೆ ಮಾಡಲು ಹವಣಿಸಿದ್ದು ಆತನ ನಿರ್ದೇಶನದಂತೆ ಚಿತ್ರಕಲೆಯ ಪ್ರದರ್ಶನದ ನೆಪದಲ್ಲಿ ಮಾತಂಗೀದೇವಿ ಚಾಂದಬೀಬಿಯ ಅಂತ:ಪುರಕ್ಕೆ ಪ್ರವೇಶ ಪಡೆದು ಕುಮಾರರಾಮನ ಚಿತ್ರಪಟವನ್ನು ಅವಳಿಗೆ ತೋರಿಸಿ ಅವಳ ಮನಸ್ಸನ್ನು ಅಪಹರಿಸುವುದರಲ್ಲಿ ಸಫಲಳಾದಳು. ಬೊಲ್ಲನನ್ನೇರಿ ರಣಯಾತ್ರೆಗೆ ಹೊರಟಿದ್ದ ಆತನ ಮುಖದ ತೇಜಸ್ಸನ್ನೂ ಸೌಂದರ್ಯವನ್ನೂ ಕಂಡ ಬೀಬಿಗೆ ದಖನ್ನಿನ ಈ ವೀರನಲ್ಲಿ ಎಲ್ಲೆ ಮೀರಿದ ಆಕರ್ಷಣೆಯುಂಟಾಯಿತು.

ಕುಮಾರರಾಮನ ಸದ್ಗುಣಗಳಿಗೂ, ಪರಾಕ್ರಮ ಸಾಹಸ ಪರತೆಗಳಿಗೂ ಮರುಳಾಗಿ ಆತನ ಸೇನೆಗೆ ಸೇರಲು ಬಂದಿದ್ದವರಲ್ಲಿ ಇಬ್ಬರು ತೇಜಸ್ವಿ ತರುಣರಿದ್ದರು. ಅವರ ಹೆಸರು ಹರಿಹರ ಮತ್ತು ಬುಕ್ಕ. ಹಂಪೆಯ ವಿದ್ಯಾರಣ್ಯರಲ್ಲೂ ಮತ್ತು ಅವರ ತಮ್ಮ ಸಾಯಣರಲ್ಲೂ ವಿದ್ಯಾರ್ಜನೆ ಮಾಡಿ ಅವರ ನಿರ್ದೇಶನದಂತೆ ತನ್ನಲ್ಲಿಗೆ ಬಂದಿದ್ದ ಆ ವೀರರು ಶೇಕಡ ನೂರರಷ್ಟು ಪ್ರಾಮಾಣಿಕರಾಗಿದ್ದುದರಿಂದ ಸೇನೆಯ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕಿಂತಲೂ ಅತಿ ಮುಖ್ಯವಾದ ಜವಾಬ್ದಾರಿಯನ್ನು ಅವರ ತಲೆಯ ಮೇಲೇರಿಸಲು ಕುಮಾರರಾಮನು ಇಚ್ಛಿಸಿದನು. ಕುಮಾರರಾಮನ ಮತ್ತು ಕಂಪಿಲರಾಯರ ಅಣತಿಯಂತೆ ಅಥವಾ ಆ ರೂಪದಿಂದ ಬಂದ ವಿಧಿಯ ಇಚ್ಛೆಯಂತೆ ಅವರಿಬ್ಬರೂ ಕುಮಾರರಾಮನಲ್ಲಿ ರಾಜಭಂಡಾರ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತು ಭಂಡಾರದ ಅಧಿಕಾರಿಗಳಾಗಿ ನಿಂತರು.

ಈ ನಡುವೆ ಬಹಾವುದ್ದೀನ್ ಗಷ್ತಾಫ್ ಎಂಬ ಪ್ರಾಂತಾಧಿಕಾರಿಯ ಮೇಲೆ ವಿನಾಕಾರಣ ಸುಲ್ತಾನರು ಕೋಪಾವಿಷ್ಟರಾಗಿದ್ದರು. ಶಿಕ್ಷೆಗೆ ಹೆದರಿದ ಆತನು ವಿಂಧ್ಯ ಪರ್ವತಗಳನ್ನು ದಾಟಿ ದಖನ್ನಿಗೆ ಹಾರಿದನು. ಯಾರಿಂದಲೂ ಅಭಯ ಸಿಕ್ಕದ ಆತನು ರಾಮನಾಥ ಪ್ರಭುಗಳಲ್ಲಿ

ಶರಣಾಗತನಾಗಿ ಪ್ರಾಣಭಿಕ್ಷೆ ಬೇಡಿದನು. ಕುಮಾರರಾಮ ಪ್ರಭುಗಳು ಶರಣಾಗತವಜ್ರಪಂಜರ ಎಂಬ ತಮ್ಮ ಬಿರುದನ್ನುಳಿಸಿಕೊಳ್ಳಲು ಬಹಾವುದ್ದೀನನಿಗೆ ಅಭಯಪ್ರದಾನ ಮಾಡಿದರು. ಈ ವಿದ್ಯಮಾನಗಳೆಲ್ಲ ದೂರದ ದಿಲ್ಲಿಗೆ ಸುಲಭವಾಗಿ ತಲುಪುವಂತಿರಲಿಲ್ಲ. ಕೆಲವು ಕಾಲದ ನಂತರ ಬಹಾವುದ್ದೀನನನ್ನು ಹಿಡಿತರಲು ದಖ್ಖಿನ್ನಿಗೆ ಹೋಗಿದ್ದ ತಮ್ಮ ದಳಪತಿಗಳಿಬ್ಬರೂ ಕುಮಾರರಾಮನಿಂದ ಹತರಾದರೆಂಬ ಸುದ್ದಿ ಮಾತ್ರ ಸುಲ್ತಾನರ ಕಿವಿಗೆ ಮುಟ್ಟಿತು.

ಆವರೆಗೂ ಮದುವೆಗೇ ಒಪ್ಪದಿದ್ದ ಸುಲ್ತಾನರ ಮಗಳು ತನ್ನ ಏಕೈಕ ಹಂಬಲವನ್ನು ತಂದೆಯಲ್ಲಿ ತೋಡಿಕೊಂಡಳು. ಆದರೆ ಆ ವೇಳೆಗಾಗಲೇ ತಾವು ಕಳಿಸಿದ್ದ ಇಬ್ಬರು ದಳಪತಿಗಳು ಕುಮಾರರಾಮನಿಂದ ಲಡಾಯಿಯಲ್ಲಿ ಹತರಾದ ಸುದ್ದಿ ಬಂದು ಸುಲ್ತಾನರು ಕ್ರುದ್ಧರಾದರು. ಚೀನಾ ದಂಡಯಾತ್ರೆಗೆ ಹುಕುಂ ಕೊಟ್ಟಿದ್ದ ಸುಲ್ತಾನರು ತಮ್ಮ ಮುದ್ದುಮಗಳ ಆಸೆಯನ್ನು ಪೂರೈಸಲು ಲೋಕವಿಜಯಕ್ಕೆ ಹೊರಟಿದ್ದ ತಮ್ಮ ದಂಡನ್ನು ವಾಪಸು ಕರೆಸಿ ಚಾದುರ್ ಖಾನನ ನಾಯಕತ್ವದಲ್ಲಿ ಕುಮ್ಮಟ ದುರ್ಗವನ್ನು ಮುತ್ತಲು ಆಜ್ಞಾಪಿಸಿದರು. ಕುಮಾರರಾಮನನ್ನು ಕೊಲ್ಲದೆ ಸರ್ವಪ್ರಯತ್ನದಿಂದಲೂ ಜೀವಸಹಿತ ಹಿಡಿದು ತರಬೇಕೆಂದು ಸುಲ್ತಾನರ ಆಜ್ಞೆಯಾಗಿತ್ತು. ಇಲ್ಲಿಯೂ ವಿಧಿ ಖಲೀಲನ ರೂಪದಿಂದ ಗೆದ್ದಿತ್ತು.

ಚಾದುರ್ ಖಾನರ ದಂಡು ಕುಮ್ಮಟವನ್ನು ಮುತ್ತುವುದರ ಬಗ್ಗೆ ಬೇಹುಗಾರರಿಂದ ಮೊದಲೇ ತಿಳಿದಿದ್ದ ಕುಮಾರರಾಮ ಪ್ರಭುಗಳು ಚಾದುರ್ ಖಾನರ ದಂಡನ್ನು ವಿಂಧ್ಯ ಪರ್ವತದ ನಂತರ ಎದುರಾಗುವ ಯಾವುದೋ ಕಣಿವೆಯ ಹತ್ತಿರ ಎದುರಿಸಲು ಸಿದ್ಧರಾದರು. ಚಾದುರ್ ಖಾನರ ಸಂಗಡಿಗರಾದ ಪೀರ್ ಖಾನರು ಸೇನೆಯ ಹಿಂಚೂಣಿಯಲ್ಲಿದ್ದರು. ಕತ್ತಲಲ್ಲಿ ಮುಂದುವರಿಯುತ್ತಿದ್ದ ಸೇನೆಯು ಅಕಸ್ಮಾತ್ ನಿಂತಾಗ ಅಚ್ಚರಿಗೊಂಡು ಮುಂದಿನ ಸೇನೆಗೆ ಏನಾಗುತ್ತಿದೆ ಎಂದು ಯೋಚಿಸುವಷ್ಟರಲ್ಲಿ ಕಗ್ಗತ್ತಲಲ್ಲಿ ಬೆಟ್ಟದ ನೆತ್ತಿಯಿಂದ ಉರುಳಿದ ಬಂಡೆಗಳು ಬೆಟ್ಟದೋರೆಯಲ್ಲಿದ್ದ ಕಣಿವೆಗೆ ಉರುಳುವುದರೊಂದಿಗೆ ಮುಂಚೂಣಿಯಲ್ಲಿ ದಂಡಿನ ಮಧ್ಯೆ ಹೋಗುತ್ತಿದ್ದ ಚಾದುರ್ ಖಾನರೂ ತಮ್ಮ ಸಂಗಡಿಗರೊಡನೆ ಕೊರಕಲಿನಲ್ಲಿ ಬಿದ್ದು ಕಣಿವೆಗೆ ಉರುಳಿದ್ದರು. ಮಾರನೇ ಬೆಳಿಗ್ಗೆ ಕೆಲವು ಸೈನಿಕರು ಬಹಳವಾಗಿ ಗಾಯಗೊಂಡ ಚಾದುರ್ ಖಾನರನ್ನು ಹಲಗೆಗೆ ಕಟ್ಟಿ ಮಲಗಿಸಿ ಬಿಡಾರಕ್ಕೆ ತಂದಾಗ ತಲೆಗೆ ಪೆಟ್ಟಾಗಿ ಕಾಲುಗಳೆರಡೂ ಜಜ್ಜಿ ಹೋಗಿದ್ದ ಖಾನರನ್ನು ಶೈತ್ಯೋಪಚಾರ ಮಾಡಿ ಒಳ್ಳೆಯ ಮದ್ಯದಿಂದ ಅವರನ್ನು ತಣಿಸಿ ಊಟೋಪಚಾರಗಳಾದ ನಂತರ ಮಿತಪರಿವಾರದೊಡನೆ ಮೇನೆಯಲ್ಲಿ ಮಲಗಿಸಿ ದಿಲ್ಲಿಗೆ ರವಾನಿಸಿದರು. ಸದ್ಯಕ್ಕೆ ಪೀರ್ ಖಾನರೇ ದಂಡಿನ ಒಡೆಯರಾದರು. ಮೋಸದಿಂದ ಗೆಲ್ಲ ಬಯಸಿದ ಕುಮಾರರಾಮನಿಗೆ ತಕ್ಕ ಪಾಠ ಕಲಿಸಿ ಕಂಪಿಲ ನಾಡನ್ನು ಸೂರೆ ಮಾಡದೆ ಹೋಗಬಾರದು ಎಂದು ಯೋಚಿಸುತ್ತಾ ಖಾನರು ನಿದ್ದೆ ಹೋಗಿದ್ದರು. ಬೆಳಗಿನ ಜಾವ ನಿದ್ರೆಯಲ್ಲಿ ಯಾರೋ ಅವರನ್ನು ಎಬ್ಬಿಸುತ್ತಿದ್ದರು. ಎಚ್ಚರಗೊಂಡು ನೋಡಿದಾಗ ಕುಮಾರರಾಮನ ದಂಡು ಬಿಡಾರವನ್ನು ಮುತ್ತುವುದರ ಬಗ್ಗೆ ತಿಳಿಯಿತು. ಯುದ್ಧದ ಪೋಷಾಕು ಧರಿಸಿ ಕತ್ತಿ ಗುರಾಣಿಗಳನ್ನು ಹಿಡಿದು ತೇಜಿಯನ್ನೇರುವಷ್ಟರಲ್ಲಿ ಶತ್ರುಗಳು ಬಿಡಾರಕ್ಕೆ ಮುತ್ತಿಗೆ ಹಾಕಿ ಕಗ್ಗೊಲೆಯಲ್ಲಿ ತೊಡಗಿ ಆಗಿತ್ತು.

ಕುಮಾರರಾಮ ಪ್ರಭುಗಳು ಬೊಲ್ಲನೊಂದಿಗೆ ಪೀರ್ ಖಾನರನ್ನು ಎದುರಿಸಿದಾಗ ಪೀರ್ ಖಾನರಿಗೆ ರಾಮನನ್ನು ಭಾವಚಿತ್ರಗಳಲ್ಲಿ ನೋಡಿದ ಗುರುತಿನಿಂದಾದ ದಿಗಿಲು, ಆಶ್ಚರ್ಯ, ರೋಷಗಳನ್ನು ಹೊರಗೆಡುವುದಕ್ಕೂ ವ್ಯವಧಾನವಿರಲಿಲ್ಲ. ಖಡ್ಗಗಳು ಒಂದನ್ನೊಂದು ತಾಗಿ ಖಣಲ್ ಖಣಲ್ ಎಂದು ಕಿಡಿಗರೆದವು. ಖಾನರ ಕುದುರೆ ಏಟು ತಿಂದು ನೆಲದಲ್ಲೊರಗಿತು. ಆಗ ಪ್ರಭುಗಳಿಗೆ ಖಾನರೊಡನೆ ಕತ್ತಿವರಸೆಯಲ್ಲಿ ಕಮಾಲು ಮಾಡಲು ಮೋಜೆನಿಸಿ ಬೊಲ್ಲನಿಂದ ಇಳಿದು ಬಂದರು. ಇಬ್ಬರಿಗೂ ಚಮತ್ಕಾರದ ಹೋರಾಟ ನಡೆಯುತ್ತಿತ್ತು. ಇತ್ತ ಖಾನರ ಪಡೆ ಚೆಲ್ಲಾಪಿಲ್ಲಿಯಾಗಿ ಓಡುತ್ತಿತ್ತು. ಖಾನರು ತಮ್ಮ ವರಸೆಗಳನೆಲ್ಲಾ ಮುಗಿಸಿ ಮತ್ತಾವ ಪಟ್ಟು ಹಾಕುವುದು ಎಂದು ಯೋಚಿಸುತ್ತಾ ಹಿಂದೆ ಹಿಂದೆ ಸರಿದು ಆಯಕಟ್ಟಿನ ಸ್ಥಳಕ್ಕಾಗಿ ಪರದಾಡುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಕಾಲು ಜಾರಿ ಮಾಯವಾಗಿಬಿಟ್ಟರು. ರಾಮನಾಥ ಪ್ರಭುಗಳು ಏನಾಯಿತು ಎಂದು ನಿಧಾನವಾಗಿ ಹೆಜ್ಜೆ ಮುಂದೆ ಇಟ್ಟು ನೋಡಿದರೆ ಆ ಜಾಗದಲ್ಲಿ ಹುಲ್ಲು ಬೆಳೆದು ಮುಚ್ಚಿಹೋಗಿದ್ದ ಭಾವಿಯಲ್ಲಿ ಖಾನರು ಬಿದ್ದು ಹೋಗಿದ್ದರು. ಇತ್ತ ಖಾನರ ಮುಕ್ಕಾಲು ಪಾಲು ಸೇನೆ ನೆಲಕಚ್ಚಿತ್ತು. ಉಳಿದವರು ಹತ್ತಿರದ ಕಾಡುಗಳಲ್ಲಿ ಕಣ್ಮರೆಯಾಗಿದ್ದರು. ವಿಜಯಶ್ರೀಯನ್ನು ಪಡೆದ ಪ್ರಭುಗಳು ಸಂಗಡಿಗರಾದ ಕಾಟಣ್ಣ, ಹಂಪಣ್ಣನವರೊಡನೆ ಕುಮ್ಮಟವನ್ನು ತಲುಪಿ ರಾಜಧಾನಿಯ ಬೀದಿಗಳಲ್ಲಿ ಮೆರವಣಿಗೆ ಬರುತ್ತಿರುವಾಗ ಹೊಗಳು ಭಟ್ಟರು ಕೂಗುತ್ತಿದ್ದ ಘೋಷಣೆಗಳ ಧ್ವನಿ ಮುಗಿಲು ಮುಟ್ಟುತ್ತಿತ್ತು. ದೊರೆಗಳು ದಾನಸನ್ಮಾದಿಗಳಲ್ಲಿ ತೊಡಗಿದ್ದರು. ಬೊಲ್ಲನನ್ನೇರಿ ಅರಮನೆಗೆ ಬಂದ ಪ್ರಭುಗಳಿಗೆ ಹರಿಯಾಲದೇವಿಯವರು ಮುತ್ತಿನಾರತಿ ಎತ್ತಿ ಹರಸಿದರು. ಹಂಪಾದೇವಿಯವರು ಎರಡು ವರ್ಷದ ಹಸುಳೆ ಜಟ್ಟಂಗಿ ರಾಮನಿಂದ ತಂದೆಗೆ ಅಕ್ಷತೆಗಳನ್ನು ಬೀರಿಸಿ ಆನಂದಿಸಿದರು.

ಆ ವೇಳೆಗೆ ಕುಮ್ಮಟ ದುರ್ಗದಲ್ಲಿ ಶೂಲದ ಹಬ್ಬದ

ಸಂಭ್ರಮದ ಅಚರಣೆ ಆರಂಭವಾಯಿತು. ಅಲಂಕೃತವಾಗಿದ್ದ ರಾಜಧಾನಿಯಲ್ಲಿ ಹಬ್ಬದ ಅಚರಣೆ ಪೂಜಾವಿಧಿಗಳೆಲ್ಲ ಮುಗಿಯುವುದರಲ್ಲಿದ್ದುವು. ಹಬ್ಬದ ದಿನ ಮಧ್ಯಾಹ್ನ ಕಂಪಿಲ ದೊರೆಗಳು ವಿಹಾರಾರ್ಥವಾಗಿ ತಮ್ಮ ಸಂಗಡಿಗರೊಡನೆ ಬೇಟೆಗೆ ಹೋಗಿದ್ದರು. ಯುವರಾಜ ಕುಮಾರರಾಮಪ್ರಭುಗಳೂ, ಕಾಟಣ್ಣ, ಹಂಪಣ್ಣ ಮುಂತಾದವರೂ ಅರಮನೆಯ ಆವರಣದಲ್ಲಿ ಚೆಂಡಾಟವಾಡಲು ಆರಂಭಿಸಿದ್ದರು. ಆಟದ ಮಧ್ಯೆ ಹೊಡೆದ ಚೆಂಡು ಅದಾವ ಮಂತ್ರದ ಕಾರಣದಿಂದಲೋ ಎಂಬಂತೆ ರತ್ನಾಜಿಯ ಅರಮನೆಯ ಮೊಗಸಾಲೆಯಲ್ಲಿ ಬಂದು ಬಿದ್ದಿತು. ಅಟದ ಚೆಂಡನ್ನು ಕೇಳಿ ತರಲು ರಾಜಕುಮಾರರ ಗುಂಪು ಕಾಟಣ್ಣನನ್ನು ಕಳಿಸಿತು. ಅರಮನೆಗೆ ಬಂದು ಚೆಂಡನ್ನು ಕೇಳಿದ ಕಾಟಣ್ಣನಿಂದ ಅದು ಪಟ್ಟದರಸಿ ಹರಿಯಾಲ ದೇವಿಯವರ ಚೆಂಡೆಂದೂ ಯುವರಾಜ ಕುಮಾರರು ಅದನ್ನು ಆಟಕ್ಕೆ ತಂದಿದ್ದರೆಂದೂ ತಿಳಿಯಿತು. ಹಾಗಾದರೆ ಇಲ್ಲಿಗೆ ಬಂದು ಬಿದ್ದ ಆ ಚೆಂಡನ್ನು ತರಲು ಯುವರಾಜರು ಇತರರನ್ನು ಕಳಿಸುವ ಅಗತ್ಯವೇನಿತ್ತು? ಅವರೇ ಬಂದು ಕೇಳಿದ್ದರಾಗುತ್ತಿರಲಿಲ್ಲವೇ? ಅವರನ್ನೇ ಕಳಿಸಿ ಎಂಬ ಉತ್ತರ ಬಂತು. ತಾಯಿಯನ್ನು ಕೇಳಿ ಚೆಂಡನ್ನು ತರಲು ಮಗನಿಗೆ ಶಂಕೆ ಏನು? ತಾನೆ ಹೋಗಿ ಬರುತ್ತೇನೆ ಎಂದು ಯುವರಾಜರು ರತ್ನಾಜಿಯ ಅರಮನೆಗೆ ಬಂದರು. ಸಮಯ ನಿರೀಕ್ಷಣೆಯಲ್ಲಿದ್ದ ರತ್ನಾಜಿ ಸಖಿ ಸಂಗಿಯಿಂದ ಉತ್ತೇಜಿತಳಾಗಿ ತನ್ನ ಹಾವಭಾವ ವಿಲಾಸಗಳಿಂದ ರಾಮನನ್ನು ಮರುಳು ಮಾಡಲೆತ್ನಿಸಿದಳು. ರಾಮನು ತೋರಿದ ನಯ ವಿನಯಗಳೂ, ಆದರ್ಶದ ಮಾತುಗಳೂ, ಪರದಾರಸೋದರನೆಂಬ ಆತನ ಬಿರುದಿನ ನೆನಪೂ ಫಲಿಸದೆ ನಿರುಪಾಯನಾಗಿ ಆತನು ಅವಳನ್ನು ನೂಕಿ ಬೀಳಿಸಿ ಕಡೆಗೆ ಚೆಂಡಿಲ್ಲದೆ ವಾಪಸು ಬಂದನು. ಆಟವೇನೋ ಅಲ್ಲಿಗೆ ಮುಕ್ತಾಯವಾಯಿತು. ಆದರೆ ಪ್ರಣಯಭಂಗದಿಂದ ಕ್ರುದ್ಧಳಾದ ಕಿರಿಯ ರಾಣಿ ಬೇಟೆಯಿಂದ ಹಿಂದಿರುಗಿ ಬಂದ ದೊರೆಗಳಿಗೆ ಆದಿನ ಚೆಂಡಿನ ನೆಪದಿಂದ ಬಂದಿದ್ದ ರಾಮನು ತನ್ನ ಮೇಲೆ ಬಲಾತ್ಕಾರ ಮಾಡಿ ಮಾನಭಂಗಕ್ಕೆ ಯತ್ನಿಸಿದನೆಂದೂ ಅವನ ತಲೆಯನ್ನು ತಂದು ತೋರಿಸುವವರೆಗೆ ತಾನು ಅನ್ನ ನೀರುಗಳನ್ನು ಮುಟ್ಟುವುದಿಲ್ಲವೆಂದೂ ಗೋಳಿಟ್ಟು ಹೇಳಿ ಪ್ರತಿಜ್ಞೆ ಮಾಡಿದಳು. ಮೊದಲೇ ಸ್ತ್ರೀಮೋಹದಿಂದ ಕುರುಡಾಗಿದ್ದ ಇಳಿವಯಸ್ಸಿನ ದೊರೆ ಕಂಪಿಲ ರಾಯರು ಚಿಕ್ಕ ಹೆಂಡತಿ ಹೇಳಿದುದೆಲ್ಲವನ್ನೂ ಸುಲಭವಾಗಿ ನಂಬಿಬಿಟ್ಟರು. ಹಿಂದು ಮುಂದು ನೋಡದೆ ಅವಳ ಇಷ್ಟಾರ್ಥ ಪೂರೈಕೆಗಾಗಿ ತಾವು ಮಾತೃದ್ರೋಹಿ ಎಂದು ಬಗೆದ ರಾಮನ ಶಿರಸ್ಸನ್ನು ತಂದು ತೋರಿಸುವಂತೆ ರಾಜಾಜ್ಞೆ ಮಾಡಿ ಮಂತ್ರಿ ಬೈಚಪ್ಪನವರನ್ನೇ ಆ ಕಾರ್ಯಕ್ಕೆ ನೇಮಿಸಿದರು.

ವಿಚಿತ್ರವಾದ ರಾಜಾಜ್ಞೆಯ ನಿರೂಪವನ್ನು ಪಡೆದ ವೃದ್ಧ ಮಂತ್ರಿಗಳು ಅದನ್ನು ಕಾರ್ಯಗತಗೊಳಿಸಲು ಒಂದು ವಾರದ ಗಡುವನ್ನು ಕೇಳಿದರು. ಅಷ್ಟರಲ್ಲಿ ರಾಜನು ಮನಸ್ಸು ಬದಲಾಯಿಸಬಹುದೇನೋ ಎಂಬುದು ಅವರ ದೂರದ ಆಸೆಯಾಗಿತ್ತು. ರಾಮನ ಸುಶೀಲತೆ ಮತ್ತು ಉನ್ನತಾದರ್ಶಗಳನ್ನು ಕಣ್ಣಾರೆ ಕಾಣುತ್ತಾ ಬಂದಿದ್ದ ಮಂತ್ರಿಗಳಿಗೆ ವಿಚಾರಣೆಯಿಲ್ಲದೆಯೇ, ಆತನ ಮೇಲಿನ ಆರೋಪವೇನೆಂಬುದನ್ನು ತಿಳಿಸದೆಯೇ ಏಕಾಏಕಿ ಬಂಧಿಸಿ ಕಾರಾಗೃಹದಲ್ಲಿಡಬೇಕಾದ ಗುರುತರ ಜವಾಬ್ದಾರಿ ಅವರ ಮೇಲಿತ್ತು.

ಇತ್ತ ರಾಮನಾಥ ಪ್ರಭುಗಳು ರತ್ನಾಜಿಯ ಕೋಪದ ಪರಿಣಾಮವೇನಾಗಬಹುದೆಂಬುದನ್ನು ಅವರ ಅತ್ಯಂತ ಆಪ್ತರಾದ ಕಾಟಣ್ಣ ಮತ್ತು ಹಂಪಣ್ಣರೊಡನೆ ಚರ್ಚಿಸುತ್ತ ರಾತ್ರಿ ಕುಳಿತಿದ್ದರು. ರಾಜಾಜ್ಞೆ ಏನಿದ್ದರೂ ಅದಕ್ಕೆ ತಲೆಬಾಗುವುದೇ ಪ್ರಜಾಧರ್ಮ ಎಂಬ ತಮ್ಮ ನಿಶ್ಚಯವನ್ನು ರಾಮನಾಥ ಪ್ರಭುಗಳು ಬಾಯಿಂದ ಆಡುತ್ತಿದ್ದಾಗಲೇ ಮಂತ್ರಿಗಳು ಯುದ್ಧದ ಪೋಷಾಕಿನಲ್ಲಿ ಅಪ್ಪಣೆಗಾಗಿ ಕಾಯದೆ ಕೋಣೆಯೊಳಗೆ ನುಗ್ಗಿದರು. ಕಾಟಣ್ಣ, ಹಂಪಣ್ಣರನ್ನು ಪ್ರತಿಭಟಿಸದಂತೆ ತಡೆದು ಯುವರಾಜರು ರಾಜಾಜ್ಞೆಗೆ ತಲೆಬಾಗಿ ಗೌರವ ಸೂಚಿಸಿದರು. ರಾತ್ರಿಯ ಕತ್ತಲಲ್ಲಿ ಅವರ ಕೈಕಾಲುಗಳಿಗೆ ಸಂಕೋಲೆ ತೊಡಿಸಿ ಸೆರೆಮನೆಗೆ ಕರೆದೊಯ್ಯಲಾಯಿತು. ಸುದ್ದಿ ಊರಲ್ಲೆಲ್ಲಾ ಪ್ರಸಾರವಾಯಿತಾದರೂ ಅದರ ಕಾರಣ ಮಾತ್ರ ಯಾರಿಗೂ ತಿಳಿಯದಾಯಿತು. ಇದಾದ ಎರಡು ದಿನಗಳ ನಂತರ ಹರಿಯಾಲದೇವಿಯವರು ಕಾಟಣ್ಣನಿಂದ ನಿಜಸ್ಥಿತಿಯನ್ನು ತಿಳಿದು ಸ್ಥಂಭೀಭೂತರಾದರು. ಸ್ವೈರಿಣಿಯಾದ ಕಿರಿಯ ರಾಣಿಯ ಮನಃಕಷಾಯದ ಸತ್ಯ ಸ್ವರೂಪವನ್ನು ದೊರೆಗಳು ತಾವೇ ತಿಳಿಯುವಂತೆ ಮಾಡಲು ಮಂತ್ರಿಗಳು ಹಂಚಿಕೆ ಹಾಕುತ್ತಿದ್ದಾರೆಂದೂ ಅದು ಸಫಲವಾಗುವವರೆಗೆ ರಾಮನು ನೆಲ ಮಾಳಿಗೆಯಲ್ಲಿ ಗೋಪ್ಯವಾಗಿರುವಂತೆ ಏರ್ಪಾಟು ಮಾಡಿ, ಅವನ ಕೃತಕ ರುಂಡವನ್ನು ತಂದು ದೊರೆಗಳಿಗೆ ತೋರಿಸಿ ಅವರನ್ನು ಸಂತೈಸುವ ಉಪಾಯವನ್ನು ಹೂಡಲಾಗಿದೆ ಎಂದೂ ಕಾಟಣ್ಣನು ದೊಡ್ಡಮ್ಮನಿಗೆ ವಿವರವಾಗಿ ತಿಳಿಸಿದನು. ರಾಮನಾಥ ಪ್ರಭುಗಳ ಕೃತಕ ರುಂಡವನ್ನು ತಂದು ತೋರಿಸಿದಾಗ ಕಂಪಿಲ ದೊರೆಗಳೂ ಕಿರಿಯ ರಾಣಿ ರತ್ನಾಜಿಯೂ ತಾವು ಗೆದ್ದಂತೆ ಹರ್ಷಿಸಿ ಮಂತ್ರಿಗಳ ಸ್ವಾಮಿ ಭಕ್ತಿಯನ್ನು ಶ್ಲಾಘಿಸಿದರು.

ಮಂತ್ರಿಗಳು ಸತ್ಯಸ್ಥಿತಿಯೇನೆಂಬುದನ್ನು ದೊರೆಗಳಿಗೆ ರುಜುವಾತು ಮಾಡಿಕೊಡಲು ಸಾಕ್ಷಿ ಪುರಾವೆಗಳ ಶೋಧನೆಯಲ್ಲಿ ತೊಡಗಿದ್ದು ಆ ದಿಕ್ಕಿನಲ್ಲಿ ದೊರೆಗಳನ್ನು ಹುರಿದುಂಬಿಸತೊಡಗಿದರು. ದಿಲ್ಲಿಯ ಸುಲ್ತಾನನ ದಾಳಿಯ

ಭೀತಿಯು ಒಂದು ಕಡೆ ರಾಜ್ಯದಲ್ಲಿ ಹರಡುತ್ತಿತ್ತು. ರಾಮನಿಲ್ಲದ ರಾಜ್ಯವು ಅನಾಥವಾಗುತ್ತಿದ್ದಂತೆ ದೊರೆಗಳಿಗೆ ಭಾಸವಾಗತೊಡಗಿತು. ತಾವು ಮಾಡಿದ್ದು ತಪ್ಪಾಗಿರಬಹುದೇ ಎಂಬ ಬಗ್ಗೆ ಮಂತ್ರಿಗಳ ಸಲಹೆ ಸೂಚನೆಗಳ ಬಗ್ಗೆ ಅವರ ಮನಸ್ಸು ಧಾವಿಸತೊಡಗಿತು.

ಕುಮ್ಮಟ ದುರ್ಗದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳನ್ನು ಕುರಿತ ಸಂಗತಿಗಳನ್ನು ಕೇಳಿ ಸುಲ್ತಾನರೂ ಅವರ ಮಗಳು ಚಾಂದಬೀಬಿಯೂ ಅದನ್ನು ನಂಬಲಾರದೇ ಹೋದರು. ಇದೇನೋ ಸುಲ್ತಾನನ ಕಣ್ಣಿಗೆ ಮಣ್ಣೆರಚುವ ರಾಜಕೀಯ ತಂತ್ರವಿರಬಹುದೆ ಎಂದು ಶಂಕಿಸಲಾರಂಭಿಸಿದರು. ಅಷ್ಟು ಉದಾತ್ತಚರಿತನೂ, ವೀರನೂ ಆದಂತಹ ಸುಪುತ್ರನನ್ನು ತಂದೆಯೇ ಕೊಲ್ಲಿಸುವುದೆಂಬುದನ್ನು ನಂಬುವುದೇ ಅವರಿಗೆ ಕಷ್ಟವೆನಿಸಿತು. ಕುಮ್ಮಟ ದುರ್ಗದ ಮೇಲೆ ಮತ್ತೆ ದಾಳಿ ಮಾಡಿ ಅದನ್ನು ಸುಟ್ಟು ಸೂರೆ ಮಾಡಿಸಲು ಅಲ್ಲಿಯೇ ಇದ್ದ ಮಾತಂಗಿ ಬೇರೆ ಅವರ ಸಂಶಯಕ್ಕೆ ಪುಷ್ಟಿಕೊಟ್ಟು ಹುರಿದುಂಬಿಸುತ್ತಲೇ ಇದ್ದಳು. ಇದೆಲ್ಲದರ ಪರಿಣಾಮವಾಗಿ ಸುಲ್ತಾನರು ನೇಮಿಖಾನ್ ಎಂಬ ಸರದಾರನ ನೇತೃತ್ವದಲ್ಲಿ ಹಿಂದಿನದಕ್ಕಿಂತಲೂ ಇಮ್ಮಡಿ ದಂಡನ್ನು ದಖನ್ನಿಗೆ ಕೊಂಡೊಯ್ಯಲು ಹುಕುಂ ಮಾಡಿದರು. ಕುಮ್ಮಟ ದುರ್ಗವನ್ನು ಸುಟ್ಟು ಸೂರೆಮಾಡಬೇಕೆಂದೂ ರಾಮನೇನಾದರೂ ಬದುಕಿದ್ದು ಲಡಾಯಿಗೆ ಬಂದರೆ ಯಾವುದೇ ಕಾರಣಕ್ಕೂ ಅವನನ್ನು ಕೊಲ್ಲದೆ ಜೀವಸಹಿತ ಹಿಡಿದು ತರಬೇಕೆಂದೂ ಸುಲ್ತಾನರ ಹುಕುಂ ಆಯಿತು. ಒಂದು ವೇಳೆ ಸೆರೆ ಸಿಕ್ಕದೆ ತಪ್ಪಿಸಿಕೊಂಡರೂ ಚಿಂತೆ ಇಲ್ಲ. ಜೀವಕ್ಕೆ ಅಪಾಯ ಮಾಡಕೂಡದು ಎಂದು ಸುಲ್ತಾನರು ಒತ್ತಿ ಒತ್ತಿ ಹೇಳಿದ್ದರು. ಅಕಸ್ಮಾತ್ ವೇಷಾಂತರದಿಂದ ಲಡಾಯಿಗೆ ಬಂದರೂ ರಾಮನನ್ನು ಗುರುತಿಸುವುದಕ್ಕಾಗಿಯೂ ಲಡಾಯಿಯಲ್ಲಿ ಕೈತಪ್ಪಿನಿಂದಲಾದರೂ ಆತನು ಸಾಯದಿರುವಂತೆ ಉಳಿಸಿಕೊಡುವ ಸಲುವಾಗಿಯೂ ಈ ಸಲ ಮಾತಂಗಿಯೂ ಸಹ ದಂಡಿನೊಡನೆ ದಖನ್ನಿಗೆ ಹೋಗುವುದಾಗಿ ಹೇಳಿ ಸುಲ್ತಾನರಿಗೆ ಸಂತೋಷವುಂಟು ಮಾಡಿದಳು. ಅದರೆ ಪಾಪ, ಸುಲ್ತಾನರಿಗಾಗಲೀ ಅವರ ಮುದ್ದು ಮಗಳು ಚಾಂದಬೀಬಿಗಾಗಲೀ ಮಾತಂಗಿಯ ಉದ್ದೇಶ ಅದಕ್ಕೆ ತೀರಾ ವಿರುದ್ಧವಾಗಿತ್ತೆಂದು ಹೇಗೆ ತಿಳಿಯಬೇಕು?

ದಿಲ್ಲಿಯಿಂದ ದಾಳಿಯ ಸಿದ್ಧತೆಗಳ ಮತ್ತು ದಂಡಿನ ಚಲನೆಯ ಸುದ್ದಿಯನ್ನು ಗೂಢಚಾರರು ಕುಮ್ಮಟ ದುರ್ಗಕ್ಕೆ ತಂದಾಗ ರಾಮನೂ ಆತನ ಅನುಚರರೂ ಕಾಣೆಯಾಗಿದ್ದುದರಿಂದ ಅವರಿಗೆ ಸುದ್ದಿ ತಲುಪುವಷ್ಟರಲ್ಲಿ ಕಾಲ ಮೀರಿತ್ತು. ಕಂಪಿಲ ದೊರೆಗಳು ಮಗನನ್ನು ನೆನೆದು ಪಶ್ಚಾತ್ತಾಪ ಪಡುತ್ತಿದ್ದರು. ಮಂತ್ರಿ ಬೈಚಪ್ಪನವರು ದೊರೆಗಳಿಗೆ ಧೈರ್ಯ ತುಂಬುತ್ತಿದ್ದರು. ಗೋವಾದ ಕಡೆಯಿಂದ ಯೋಧರ ಪರಿವಾರವೊಂದು ಸಕಾಲದಲ್ಲಿ ತಮಗೆ ಕದನಕ್ಕೆ ಒದಗುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಅವರ ನೆರವಿನಿಂದ ಸುಲ್ತಾನನ ಪಡೆಯನ್ನು ನಾವು ಗೆಲ್ಲಬಲ್ಲೆವು. ಆದ್ದರಿಂದ ಕಾಳಗಕ್ಕೆ ಸಿದ್ಧತೆಗಳನ್ನು ನಡೆಸೋಣ ಎಂಬುದು ಬೈಚಪ್ಪನವರ ಸಲಹೆಯಾಗಿತ್ತು.

ಯುದ್ಧನೀತಿಯನ್ನು ಕುರಿತ ಚರ್ಚೆಗಾಗಿ ಕರೆದಿದ್ದ ಸಭೆಯಲ್ಲಿ ಭಾಗವಹಿಸಲು ದೊರೆಗಳು ತನ್ನ ಅಂತಃಪುರದಿಂದ ಹೊರಟು ಹೋದರೆಂದು ತಿಳಿದು ರತ್ನಾಜಿ ತನ್ನ ಸಖಿ ಸಂಗಿಯೊಡನೆ ಏಕಾಂತ ಸಂಭಾಷಣೆಯಲ್ಲಿ ತೊಡಗಿದ್ದಳು. ಬೈಚಪ್ಪನವರ ಸೂಚನೆಯಂತೆ ಆಗಾಗ ಅವರ ಮಾತುಗಳನ್ನು ಗುಟ್ಟಾಗಿ ಆಲಿಸುವ ಪರಿಪಾಠದಲ್ಲಿದ್ದ ದೊರೆಗಳು ಆ ದಿನ ಅವರ ಸಂಭಾಷಣೆಯನ್ನು ಗುಪ್ತಸ್ಥಾನದಲ್ಲಿ ನಿಂತು ಕೇಳುತ್ತಿದ್ದರು. ರಾಮನನ್ನು ಕೊಲ್ಲಿಸಬಾರದಿತ್ತು, ಬದುಕಿದ್ದರೆ ಒಂದಲ್ಲ ಒಂದು ದಿನ ಆತನನ್ನು ನನ್ನವನನ್ನಾಗಿ ಮಾಡಿಕೊಳ್ಳಬಹುದಿತ್ತು. ಸಿಟ್ಟಿನಲ್ಲಿ ಅವನನ್ನು ಕಳೆದುಕೊಂಡಿದ್ದು ತಪ್ಪಾಯಿತು. ಅಂತಹ ಸುಂದರ ಪುರುಷನನ್ನು ಇನ್ನೆಲ್ಲಿ ತಾನೆ ಪಡೆಯಲು ಸಾಧ್ಯ? ಎಂಬ ಮಾತುಗಳು ರತ್ನಾಜಿಯ ಬಾಯಿಂದ ಬರುತ್ತಿದ್ದುದನ್ನೂ ಸಂಗಿ ಅವಳನ್ನು ಸಂತೈಸುತ್ತಿದ್ದುದನ್ನೂ ಕಿವಿಯಾರೆ ಕೇಳಿದ ದೊರೆಗಳ ಕತ್ತಿ ಅ ಕ್ಷಣವೇ ಅವರಿಬ್ಬರ ರುಂಡಗಳನ್ನೂ ನೆಲಕ್ಕುರುಳಿಸಿಬಿಟ್ಟಿತು. ಇಂತಹ ಸಂದರ್ಭವನ್ನೇ ಕಾಯುತ್ತಿದ್ದ ಮಂತ್ರಿಗಳು ಮಗನಿಗಾಗಿ ಸಂತಾಪ ಪಡುತ್ತಿದ್ದ ದೊರೆಗಳಿಗೆ ನಿರಪರಾಧಿಯಾದ ರಾಮನು ಬದುಕಿರುವ ನಿಜ ಸಂಗತಿಯನ್ನು ತಿಳಿಸಿ ರಾಜಾಜ್ಞೆಯನ್ನು ಮೀರಿದ್ದಕ್ಕಾಗಿ ತಮ್ಮನ್ನು ಕ್ಷಮಿಸಬೇಕೆಂದು ಬೇಡಿಕೊಂಡರು. ದೊರೆಗಳ ಕಣ್ಣುಗಳಿಂದ ಮಾಲೆಮಾಲೆಯಾಗಿ ಹನಿಗಳು ಉದುರುತ್ತಿದ್ದುವು. ಆ ದಿನ ಸಂಜೆ ರಾಮನಾಥ ಪ್ರಭುಗಳು ವೀರಪರಿವಾರ ಸಮೇತರಾಗಿ ಬಂದು ತಂದೆ ತಾಯಿಗಳಿಗೆ ವಂದಿಸಿ ಆಶೀರ್ವಾದ ಬೇಡಿದರು. ಹೆಂಡತಿಯರನ್ನೂ ಮಗ ಜಟ್ಟಂಗಿ ರಾಮನನ್ನೂ ಆಲಿಂಗಿಸಿಕೊಂಡರು. ಎಲ್ಲರ ಕಣ್ಣುಗಳಲ್ಲೂ ನೀರು ಧಾರೆಗಟ್ಟಿತ್ತು.

ಆದರೆ ಆ ವೇಳೆಗಾಗಲೇ ಕಾಲ ಮಿಂಚಿ ಹೋಗಿತ್ತು. ವೈರಿಗಳ ದಂಡು ಆಗಲೇ ಗಡಿಯನ್ನು ದಾಟಿ ತಡೆಯುವವರಿಲ್ಲದೆ ರಭಸದಿಂದ ಮುನ್ನುಗ್ಗುತ್ತಿತ್ತು. ದೊರೆಗಳೂ, ಮಂತ್ರಿಗಳು, ದುರ್ಗದಲ್ಲಿದ್ದುಕೊಂಡೇ ಯುದ್ಧ ಮಾಡುವ ಸಲಹೆ ಇತ್ತರು. ಆದರೆ ರಾಮನಾಥ ಪ್ರಭುಗಳು ಇದಕ್ಕೊಪ್ಪದೆ ತಂದೆ ತಾಯಿಗಳಿಗೆ ನಮಸ್ಕರಿಸಿ ಮೂರು ವರ್ಷದ ಹಸುಳೆ ಜಟ್ಟಂಗಿ ರಾಮನನ್ನು ಆಲಂಗಿಸಿ, ಮುದ್ದಿಸಿ, ಹೆಂಡತಿಯರ ಕಂಬನಿಗಳನ್ನೊರೆಸಿ, ಅವರು ಎತ್ತಿದ ಮುತ್ತಿನಾರತಿಯನ್ನು

ಕೈಕೊಂಡು ಇತರ ವೀರಪರಿವಾರದೊಡನೆ ತುಂಗಭದ್ರೆಯ ದಡವನ್ನು ಸೇರಿದರು. ಆದರೆ ನದಿಯನ್ನು ದಾಟಿ ಬಂದ ಸುಲ್ತಾನನ ದಂಡು ಅಪಾರವಾಗಿದ್ದು ಆಗಲೇ ಕವಲು ಕವಲಾಗಿ ಹರಡಿಕೊಂಡು ದುರ್ಗದ ಸೇನೆಗೆ ಯೋಚಿಸಲು ಅವಕಾಶವೇ ಇಲ್ಲದಂತೆ ದಶದಿಕ್ಕುಗಳಲ್ಲಿಯೂ ಮುತ್ತಿಕೊಂಡಿತ್ತು. ದೂರದಿಂದ ಮಾತಂಗಿ ಮತ್ತು ನೇಮಿಖಾನರು ಹುರಿದುಂಬಿಸುತ್ತಿದ್ದರು. ಸರದಿಯ ಮೇಲೆ ಹೋರಾಡುತ್ತಿದ್ದ ವೈರಿಗಳ ಅಪಾರ ಸೇನಾಜಲಧಿಯೊಡನೆ ಹಲವು ದಿನ ನಡೆಸಿದ ಹಗಲಿರುಳ ಕಾಳಗದಲ್ಲಿ ಕನ್ನಡ ವೀರರು ಬಳಲತೊಡಗಿದರು. ಸೋಲರಿಯದ ಅವರಿಗೆ ಗೆಲುವು ಅನಿಶ್ಚಿತವೆಂಬಂತೆ ತೋರತೊಡಗಿತು.

ಈ ವಿಷಮಸ್ಥಿತಿಯಲ್ಲಿ ಭಂಡಾರಿಗಳಾಗಿದ್ದ ಹರಿಹರ ಮತ್ತು ಬುಕ್ಕರು ರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅನುಮತಿ ಕೊಡುವಂತೆ ಕಂಪಿಲ ದೊರೆಗಳನ್ನು ಬೇಡಿಕೊಂಡರು. ಆದರೆ ರಾಜಭಂಡಾರವನ್ನು ಗುಪ್ತಮಾರ್ಗದಿಂದ ಸಾಗಿಸಿ ಹತ್ತಿರದ ಕಾಡಿನಲ್ಲಿ ಹೂತಿಟ್ಟು ರಕ್ಷಿಸುವ ಗುರುತರವಾದ ಜವಾಬ್ದಾರಿಯನ್ನು ದೊರೆಗಳು ಅವರಿಗೆ ವಹಿಸಿ ತ್ವರೆ ಮಾಡುವಂತೆ ಆಜ್ಞಾಪಿಸಿದರು. ಆಗ ವಿಧಿಯಿಲ್ಲದೆ ಭಂಡಾರಿಗಳಾಗಿದ್ದ ಸೋದರರಿಬ್ಬರೂ ರಾಜಾಜ್ಞೆಯನ್ನು ಪಾಲಿಸಲು ಮುಂದಾದರು. ದಿನದಿನಕ್ಕೆ ಗೆಲುವಿನ ಆಸೆ ಕಮರುತ್ತಾ ಬರುತ್ತಿತ್ತು. ಮುಂದೇನು ನಡೆಯುತ್ತದೋ ಎಂಬ ಕಾತರದಲ್ಲಿದ್ದಾಗಲೇ ದೊರೆಗಳ ಅಳಿಯ, ಭಾವ ಸಂಗಮದೇವರು ಮತ್ತು ಬಹಾವುದ್ದೀನರು ಕಾಳಗದಲ್ಲಿ ಮಡಿದರೆಂಬ ವಾರ್ತೆ ಸಿಡಿಲಿನಂತೆ ಬಂದೆರಗಿತು. ಇದನ್ನು ತಿಳಿಸಲು ದೊರೆಗಳು ಅರಮನೆಗೆ ಬಂದಾಗ ಅವರ ಹೆಣ್ಣುಮಕ್ಕಳಾದ ಸಿಂಗಮ್ಮ ಮತ್ತು ಮಾರಮ್ಮರು ಆಗಲೇ ಸರ್ವಾಲಂಕಾರಭೂಶಿತೆಯರಾಗಿ ತಮ್ಮ ಜೀವವನ್ನು ಅಗ್ನಿಗೆ ಸಮರ್ಪಿಸಲು ಸಿದ್ಧರಾಗಿದ್ದರು. ಆಳಿಯನ ಸಾವು ಮತ್ತು ಅದರಿಂದಾದ ಪರಿಣಾಮಗಳನ್ನು ಕಂಡ ದೊರೆಗಳ ಮುಪ್ಪಿನ ಎದೆ ಜರ್ಜರಿತವಾಗಿತ್ತು. ಮುತ್ತೈದೆಯರು ಆರತಿ ಬೆಳಗಿ ಅಕ್ಷತೆಗಳನ್ನು ಎರಚುತ್ತಿದ್ದಂತೆ ಅಕ್ಕತಂಗಿಯರು ಕಣ್ಣೀರಿಡುತ್ತ ತಮ್ಮ ಕಂದ ವಿರೂಪಾಕ್ಷನನ್ನು ಹಂಪಾದೇವಿಯವರಿಗೆ ಒಪ್ಪಿಸಿ ಉರಿಯುತ್ತಿದ್ದ ಚಿತೆಯ ಬಳಿಗೆ ಬಂದಾಗ ವಿಧವೆಯರಾದ ಇನ್ನೂ ಎಂಟು ಹತ್ತು ಜನ ವೀರಪತ್ನಿಯರು ಸಹಗಮನಕ್ಕೆ ಸಿದ್ಧರಾಗಿ ರಾಜಕುಮಾರಿಯರನ್ನು ಕೂಡಿಕೊಂಡರು. ಅತ್ತಿಗೆ ಹಂಪಾದೇವಿಯ ತೋಳಿನಾಸರೆಯಲ್ಲಿ ಮಲಗಿ ಅಳುತ್ತಿದ್ದ ಮಗನ ಕಡೆಗೊಮ್ಮೆ, ತಂದೆ ತಾಯಿಯರ ಕಡೆಗೊಮ್ಮೆ ಅಸಹಾಯಕತೆಯಿಂದ ನೋಡುತ್ತಾ ಇತರ ವೀರವನಿತೆಯರೊಡನೆ ಒಬ್ಬೊಬ್ಬರಾಗಿ ಉರಿಯುತ್ತಿದ್ದ ಚಿತೆಗೆ ತಮ್ಮ ದೇಹಗಳನ್ನರ್ಪಿಸಿ ಸುಟ್ಟು ಬೂದಿಯಾದರು. ಅನಂತರ ವಾಪಸು ಬಂದು ಆಸನದಲ್ಲಿ ಮೈಚೆಲ್ಲಿದ ದೊರೆಗಳಿಗೆ ಯೋಚಿಸುವುದಕ್ಕೂ ಅಗದಷ್ಟು ಅಸಹಾಯಕತೆ ಕವಿದಿತ್ತು. ದಿನದಿನವೂ ಒಂಟಿಗಾಲಿನಲ್ಲಿ ನಿಂತು ಕಾಳಗದ ಸುದ್ದಿ ಏನನ್ನು ತರುವುದೋ ಎಂದು ಕಾಯುವುದೇ ಆಗಿತ್ತು. ದೊರೆಗಳು ನಿರೀಕ್ಷಿಸಿದ್ದಕ್ಕಿಂತ ಮೊದಲೇ ಯುವರಾಜರಿಂದ ಪತ್ರ ಬಂತು. ನಮ್ಮ ಪಾಲಿಗೆ ಗೆಲುವು ಬಹಳ ಅನಿಶ್ಚಿತವೆಂಬಂತೆ ಕಾಣುತ್ತಿದೆ. ಆದ್ದರಿಂದ ಆದಷ್ಟು ಧನಕನಕಾದಿಗಳನ್ನು ತೆಗೆದುಕೊಂಡು ಪರಿವಾರ ಸಹಿತ ಗುಪ್ತ ಮಾರ್ಗದಿಂದ ಹೊರಬಿದ್ದು ಹೊಸಮಲೆಯ ಸಮೀಪದ ಗುಪ್ತ ಸ್ಥಾನಗಳಲ್ಲಿ ಆಶ್ರಯ ಪಡೆಯುವುದು ಕ್ಷೇಮ ಎಂಬುದು ಅದರ ಸಾರಾಂಶವಾಗಿತ್ತು. ಅದನ್ನು ಓದಿದ ದೊರೆಗಳ ಮುಖ ಕಪ್ಪಿಟ್ಟಿತು. ವಿಶ್ರಾಂತಿಗೆಂದು ಹೋದ ಮಂತ್ರಿಗಳನ್ನು ಕರೆಸಿ ಯುವರಾಜರನ್ನು ಗುಪ್ತಮಾರ್ಗದಿಂದ ದುರ್ಗದೊಳಕ್ಕೆ ಕರೆತರಬೇಕೆಂದು ತಿಳಿಸಿ ತಮ್ಮ ಪರಿವಾರಕ್ಕೆ ಇನ್ನು ನೀವು ಇಲ್ಲಿರುವುದು ಬೇಡ ಮಕ್ಕಳನ್ನು ಕರೆದುಕೊಂಡು ಈ ಕ್ಷಣವೇ ಹೊರಡತಕ್ಕದ್ದು ಎಂದು ಆಜ್ಞಾಪಿಸಿದರು. ರಾಜಪರಿವಾರದವರು ಆಗಲೇ ಮಂತ್ರಿಗಳೊಡನೆಯೇ ಹೊರಟುಬಿಡಬೇಕು ಎಂಬ ತೀರ್ಮಾನವನ್ನು ಕೇಳಿ ಹಂಪಾದೇವಿ, ಸೋಮಾಯಿ ಮುಂತಾದ ರಾಮನಾಥ ಪ್ರಭುಗಳ ಪತ್ನಿಯರು ಅಗ್ನಿದೇವನನ್ನಾಶ್ರಯಿಸುವ ತಮ್ಮ ನಿಶ್ಚಯವನ್ನು ಹರಿಯಾಲದೇವಿಯವರಿಗೆ ತಿಳಿಸಿದರು. ಹಂಪಾದೇವಿ ಜಟ್ಟಂಗಿ ರಾಮನನ್ನು ಕರೆದುಕೊಂಡು ಹೋಗುವಂತೆ ಹರಿಯಾಲದೇವಿಯವರನ್ನು ಗೋಗರೆದು ಬೇಡಿಕೊಂಡಳು. ತಾನು ಮಾತ್ರ ಏನೇ ಆದರೂ ಬದುಕುವುದಿಲ್ಲವೆಂದೂ ಅಗ್ನಿದೇವನೇ ತನಗೆ ಆಶ್ರಯದಾತನೆಂದೂ ಹೇಳಿದಳು. ಆಗಲೇ ಹೊರಡಬೇಕೆಂದು ಪ್ರಭುಗಳ ಅಪ್ಪಣೆಯಾಗಿದ್ದರಿಂದ ಮಲಗಿ ನಿದ್ರಿಸುತ್ತಿದ್ದ ಜಟ್ಟಂಗಿ ರಾಮನನ್ನು ಬರಸೆಳೆದು ತಬ್ಬಿಕೊಂಡು ಬಿಕ್ಕಿಬಿಕ್ಕಿ ರೋದಿಸತೊಡಗಿದಳು. ಇದನ್ನು ನೋಡುತ್ತಿದ್ದ ದೊರೆಗಳಿಗೆ ಅತೀವ ಸಂಕಟವುಕ್ಕಿ ಬಂತು. ಅವರ ಕಣ್ಣಿನಲ್ಲೂ ನೀರು ತೊಟ್ಟಿಕ್ಕತೊಡಗಿತು. ಕಣ್ಣೀರ್ಗರೆಯುತ್ತಿದ್ದ ಹರಿಯಾಲದೇವಿಯವರು ತಾವಾದರೂ ಯಾವ ಸೌಭಾಗ್ಯಕ್ಕಾಗಿ ಬದುಕಬೇಕು, ಇಲ್ಲೇ ಇರುತ್ತೇವೆಂದರು. ಆದರೆ ಆ ಹಸುಳೆಗಳನ್ನು–ಜಟ್ಟಂಗಿರಾಮ ಮತ್ತು ವಿರೂಪಾಕ್ಷ–ಕೈ ಬಿಡುವುದು ಅವರಿಗೆ ಸಾಧ್ಯವೇ ಇರಲಿಲ್ಲ. ಆದ್ದರಿಂದ ಅರೆಮನಸ್ಸಿನಿಂದ ಅವರು ನಿದ್ರಿಸುತ್ತಿದ್ದ ಜಟ್ಟಂಗಿರಾಮನನ್ನು ಎದೆಗಪ್ಪಿಕೊಂಡು ಹೊರಟರು. ವಿರೂಪಾಕ್ಷನನ್ನೂ ಇತರ ಹಸುಳೆಗಳನ್ನೂ ಅವಚಿಕೊಂಡು ಕೆಲವು ಜನ ದಾಸದಾಸಿಯರು ಅವರನ್ನು ಹಿಂಬಾಲಿಸಿದರು. ತಕ್ಕಷ್ಟು ನಗನಾಣ್ಯಗಳನ್ನು ತೆಗೆದುಕೊಂಡು ಸರಿರಾತ್ರಿಯಲ್ಲಿ ಮಂತ್ರಿಗಳು ಕನ್ನಗಂಡಿಯಿಂದ ಪರಿವಾರದೊಡನೆ ಹೊರಟರು. ಸುರಂಗಮಾರ್ಗದಲ್ಲಿ ಪಯಣಿಸಿ ದೂರದ ಕಾಡಿನ ಮಧ್ಯೆ ಹೊರಬಂದ ನಂತರ ಅಲ್ಲೇ ಸಮೀಪದಲ್ಲಿ ಕಂಡಿಯ ಕಾವಲಿಗೆ ನಿಂತಿದ್ದ ಸೈನಿಕರಿಬ್ಬರನ್ನೂ ಮೈಗಾವಲಿಗೆ ನೇಮಿಸಿ ಬೆಳಗಾದನಂತರ

ಪರಿವಾರವನ್ನು ಅವರು ತಲುಪಿಸಬೇಕಾದ ದೂರದ ಹಳ್ಳಿಯ ಗುರುತನ್ನು ತಿಳಿಸಿದರು. ಮಂತ್ರಿಗಳ ಕಣ್ಣಿನಿಂದಲೂ ನೀರು ಧಾರಾಕಾರವಾಗಿ ಸುರಿಯತೊಡಗಿತು.

ರಾಜಪರಿವಾರವು ಕತ್ತಲಲ್ಲಿ ಕರಗಿಹೋದನಂತರ ಯುದ್ಧದ ಬಿಡಾರಕ್ಕೆ ಬಂದು ಯುವರಾಜರನ್ನು ಕಂಡ ಮಂತ್ರಿಗಳು ತಮ್ಮ ಮತ್ತು ದೊರೆಗಳ ಸಲಹೆಯನ್ನು ಅವರ ಮುಂದಿಟ್ಟರು. ಯುವರಾಜರು ತಮ್ಮ ಹಿಂದಿನ ನಿಲುವನ್ನೇ ಸಮರ್ಥಿಸಿಕೊಂಡುದರಿಂದ ಮಂತ್ರಿಗಳು ನಿರುಪಾಯರಾಗಿ ಅದನ್ನು ದೊರೆಗಳಿಗೆ ತಿಳಿಸಲು ವಾಪಸು ಹೊರಟರು. ಗುಪ್ತದ್ವಾರದ ಪ್ರವೇಶ ಇನ್ನೂ ತುಸುದೂರದಲ್ಲಿತ್ತು. ಅಷ್ಟರಲ್ಲಿ ಕತ್ತಲ ಗರ್ಭದಿಂದ ರೊಯ್ಯೆಂದು ಬಂದ ಈಟಿ ಅಂಗರಕ್ಷಕ ಬೀರಯ್ಯನ ಎದೆಯ ಕವಚಕ್ಕೆ ತಗುಲಿತು. ಅಷ್ಟರಲ್ಲಿ ಕತ್ತಿ ಹಿಡಿದ ನೂರಾರು ರಾವುತರ ಗುಂಪೊಂದು ಮಂತ್ರಿಗಳನ್ನು ಮುತ್ತಿಕೊಂಡಿತು. ಮಿಂಚಿನಂತೆ ಒರೆಯಿಂದ ಹೊರಬಿದ್ದ ಅವರ ಖಡ್ಗವು ಕಾರ್ಯ ಪ್ರವೃತ್ತವಾಯಿತು. ಮಂತ್ರಿಗಳ ಅಂಗರಕ್ಷಕರು ನೆಲಕ್ಕುರುಳಿದರು. ಮಂತ್ರಿಗಳ ಸುತ್ತಲೂ ವೈರಿಗಳು ಸುತ್ತಿಕೊಂಡರು. ಮತ್ತೆ ಎದುರಾದ ಹತ್ತೆಂಟು ತಲೆಗಳು ಉರುಳಿ ಬಿದ್ದುವು. ಮಂತ್ರಿಗಳ ಕೈಚಳಕದ ವೈಶಿಷ್ಟ್ಯ ತಿಳಿಯುವಷ್ಟರಲ್ಲಿ ಅವರ ಹಿಂದಿದ್ದವರ ಹತ್ತೆಂಟು ತಲೆಗಳು ಕಳಚಿ ಬಿದ್ದುವು. ನಡೆದುದೇನೆಂಬುದನ್ನು ಅರಿಯುವಷ್ಟರಲ್ಲೇ ಮತ್ತಷ್ಟು ವೈರಿಗಳ ತಲೆಗಳು ಕಳಚಿಬಿದ್ದುವು. ಕುದುರೆಗಳು ಕತ್ತಲಲ್ಲಿ ಮರೆಯಾಗುತ್ತಿದ್ದುವು. ನೂರಾರು ತಲೆಗಳು ನೆಲಕಂಡುದನ್ನು ಹಿಂದೆ ಹೊಂಚುತ್ತಿದ್ದ ವೈರಿ ರಾವುತನೊಬ್ಬನು ಕಂಡು ತನ್ನ ಸರದಿಯೂ ಬಂದೀತೆಂದುಕೊಂಡು ಜೀವಭಯದಿಂದ ಹತ್ತಿರದಲ್ಲಿದ್ದ ಮರದ ಕೊಂಬೆಯನ್ನು ಹಿಡಿದು ಸದ್ದಿಲ್ಲದಂತೆ ಹತ್ತಿ ಕುಳಿತನು. ಎಲ್ಲವೂ ಬಯಲಾದದ್ದನ್ನು ಕಂಡ ಮಂತ್ರಿಗಳು ಮುಂದೇನು ನಡೆಯಬಹುದು ಎಂದು ರಣಾವೇಶದಿಂದ ನಿರೀಕ್ಷಿಸುತ್ತಾ ಸಿಪಾಯಿ ಕುಳಿತಿದ್ದ ಮರದಡಿಯಲ್ಲಿ ಬಂದು ನಿಂತರು. ಸಂದರ್ಭವು ತನಗೆ ಅನುಕೂಲವಾಗಿದ್ದುದನ್ನರಿತ ಆ ಜೀವಗಳ್ಳನು ತನ್ನ ಕೈಯ ಕತ್ತಿಯಿಂದ ಇದ್ದಕ್ಕಿದ್ದಂತೆಯೇ ಹಿಂದಿನಿಂದ ಮಂತ್ರಿಗಳ ಶಿರಸ್ಸನ್ನು ಕತ್ತರಿಸಿ ಪರಾರಿಯಾಗಿಬಿಟ್ಟನು. ಎಡಗೈ ಎಡಗಾಲುಗಳೆರಡನ್ನೂ ಮೊದಲ ಸುತ್ತಿನಲ್ಲೇ ಕಳೆದುಕೊಂಡಿದ್ದ ಬೀರಯ್ಯನು ದೂರದಿಂದಲೇ ನಿಸ್ಸಹಾಯಕನಾಗಿ ಮಂತ್ರಿಗಳ ವೀರಕಾಳಗವನ್ನು ಕಾಣುತ್ತಿದ್ದು ಮರುದಿನ ಕಣ್ಣೀರು ಕರೆಯುತ್ತಾ ಹೇಗೋ ಅರಮನೆಗೆ ಬಂದು ನಡೆದುದೆಲ್ಲವನ್ನೂ ಬಣ್ಣಿಸಿದಾಗ ಅದನ್ನು ಕೇಳಿದ ದೊರೆಗಳು ಕಡೆಯಲ್ಲಿ ಬಳಬಳನೆ ಕಣ್ಣೀರು ಸುರಿಸುತ್ತಾ ಮರವಟ್ಟವರಂತೆ ಕುಳಿತುಬಿಟ್ಟರು. ಕಾಳಗದಲ್ಲಿ ಆ ದಿನ ನಡುಹಗಲಿನಲ್ಲಿ ರಣಮಧ್ಯದಲ್ಲಿ ದೇಹಾಲಸ್ಯದಿಂದ ಬಳಲಿದ ಬೊಲ್ಲನು ಮುಗ್ಗರಿಸಿ ಬಿದ್ದು ಪ್ರಾಣ ಬಿಟ್ಟಿತು. ಅದರಿಂದ ನೆಲಕ್ಕೆ ಬಿದ್ದು ಮೂರ್ಛೆ ಹೋಗಿದ್ದ ಕುಮಾರರಾಮಪ್ರಭುಗಳನ್ನು ಮುಟ್ಟಲೂ ಎದೆಯೊಗದೆ ವೈರಿಗಳು ಹಿಂಜರಿಯುತ್ತಿದ್ದಾಗ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತಿದ್ದ ಮಾತಂಗಿ ಆತನ ತಲೆಯನ್ನು ಕತ್ತರಿಸಿ ಕೊಡಲು ಹತ್ತಿರದಲ್ಲಿದ್ದ ಸರದಾರನೊಬ್ಬನಿಗೆ ಆಜ್ಞಾಪಿಸಿದಳು. ಪಾರಿವಾಳಗಳು ತಂದ ಸುದ್ದಿಯಿಂದ ರಣದಲ್ಲಿ ತಮ್ಮವರೆಲ್ಲರೂ ಮಡಿದದ್ದನ್ನು ಕೇಳಿದ ಸೊಸೆಯರು ಉರಿಯುತ್ತಿದ್ದ ಚಿತಾಗ್ನಿಗೆ ತಮ್ಮ ದೇಹಗಳನ್ನರ್ಪಿಸಲು ದೊರೆಗಳ ಅನುಮತಿ ಪಡೆದು ರಾಜಧಾನಿಯ ಇತರ ಹೆಣ್ಣುಮಕ್ಕಳೊಡನೆ ಅಗ್ನಿಗೆ ಹಾರಿ ಅಮರರಾದರು. ಕಂಪಿಲ ದೊರೆಗಳಿಗೆ ಬದುಕಿನಲ್ಲಿ ಇನ್ನೇನೂ ಉಳಿದಂತೆ ತೋರಲಿಲ್ಲ. ಅವರು ಇಳಿಹೊತ್ತಿನಲ್ಲಿ ಕೋಟೆಯ ಬಾಗಿಲನ್ನು ತೆರೆದು ತಮ್ಮ ಮೂಲ ಬಲದೊಡನೆ ವೈರಿಗಳ ಮೇಲೆ ಬಿದ್ದರು. ಸಂಜೆಯವರೆಗೂ ಹೋರಾಡಿ ವೈರಿಯ ಖಡ್ಗಕ್ಕೆ ತಮ್ಮ ಶರೀರವನ್ನೊಪ್ಪಿಸಿದರು.

ಕುಮಾರರಾಮನ ತಲೆಯನ್ನು ಕಂಡ ಚಾಂದಬೀಬಿ ಹೃದಯಾಘಾತದಿಂದ ಮಡಿದಳು. ಸೆರೆಹಿಡಿಯುವ ಯತ್ನದಲ್ಲಿದ್ದಾಗ ಆತನು ತನ್ನ ತಲೆಯನ್ನು ತಾನೇ ಕತ್ತರಿಸಿಕೊಂಡನೆಂದು ಮಾತಂಗಿ ಹೇಳಿದಳಂತೆ. ಸತ್ಯಸಂಗತಿಯನ್ನು ತಮ್ಮವರಿಂದ ತಿಳಿದ ಸುಲ್ತಾನರು ಮಾತಂಗಿಗೆ ಗಲ್ಲು ಶಿಕ್ಷೆಯನ್ನು ವಿಧಿಸಿದರು. ಕುಮ್ಮಟ ದುರ್ಗವು ಸೂರೆಯಾಗಿ ಸುಟ್ಟು ಬೂದಿಯಾದ ಕೆಲಕಾಲನಂತರ ಭಂಡಾರಿಗಳಾದ ಹರಿಹರ ಮತ್ತು ಬುಕ್ಕರು ಹರಿಯಾಲ ದೇವಿಯವರಿದ್ದ ಹಳ್ಳಿಯನ್ನು ಪರಿಶೋಧಿಸಿ ಅವರಲ್ಲಿಗೆ ಬಂದರು. ಅವರಿಗೆ ರಾಜಭಕ್ತಿಯಿಂದ ದಂಡಪ್ರಣಾಮ ಮಾಡಿ ರಾಜಧನವನ್ನು ಒಪ್ಪಿಸಿಕೊಳ್ಳಬೇಕೆಂದೂ ಜಟ್ಟಂಗಿ ರಾಮನನ್ನು ರಾಜನೆಂದು ಘೋಷಿಸಲು ಅನುಮತಿ ಕೊಡಬೇಕೆಂದೂ ಬೇಡಿಕೊಂಡರು. ನಾಡಿನ ಸೇವೆಯಲ್ಲಿ ಸರ್ವಸ್ವವನ್ನೂ ಕಳೆದುಕೊಂಡು ಕಂಗೆಟ್ಟಿದ್ದ ಆ ವೃದ್ಧೆ ಅದಕ್ಕೊಪ್ಪಲಿಲ್ಲ. ರಾಜಭಂಡಾರದ ಅಗತ್ಯ ತಮಗಿಲ್ಲ. ನಾಡಿನ ಸೇವೆಗಾಗಿ ಅದನ್ನು ಅವರಿಷ್ಟ ಬಂದಂತೆ ವಿನಿಯೋಗಿಸಬಹುದು, ತಮ್ಮ ಮಗುವನ್ನು ಮಾತ್ರ ನೆಮ್ಮದಿಯಾಗಿರಲು ಅವಕಾಶಕೊಡಬೇಕೆಂದು ಕಣ್ಣೀರಿಟ್ಟರು. ಇದಾದ ಹತ್ತು ವರ್ಷಗಳ ನಂತರ ಮತ್ತೊಮ್ಮೆ ಅದೇ ಪ್ರಯತ್ನ ಮಾಡಿಯೂ ಸಫಲರಾಗದ ಅ ಸಹೋದರರು ವಿದ್ಯಾರಣ್ಯರ ಆಶೀರ್ವಾದದಿಂದ ಕುಮಾರರಾಮ ಪ್ರಭುಗಳ ಕನಸಿನ ಸಾಮ್ರಾಜ್ಯವನ್ನು ಭೂಮಿಗಿಳಿಸುವಲ್ಲಿ ಸಫಲರಾದರು. ◈



# ಪ್ರೇಮಾಂತರಂಗ

**ಡಾ.ಮೀನಾ ಸುಬ್ಬರಾವ್**
ಸಲೀನಾಸ್, ಕ್ಯಾಲಿಫೋರ್ನಿಯ


ಪ್ರೇಮಕ್ಕೆ ಎರಡು ಮುಖಗಳಿವೆಯೇ? ಇದ್ದರೆ, ಸಹನಾ ಮೌನವಾಗಿ ಒಂದೇ ದಿಕ್ಕಿನಲ್ಲಿ ಹರಿಯುವ ಪ್ರೇಮದಿಂದ ಮಧುವನ್ನು ಪ್ರೀತಿಸಿದ್ದು 'ಪ್ರೇಮಾಂತರಂಗ'ವೇ? ಅದು ಅನುಭವಿಸುವವರಿಗೆ ಮಾತ್ರ ಅರಿವಾಗುವುದೇ? ಪ್ರೇಮದ ಎರಡೂ ಮುಖಗಳೂ ಬಹಳಷ್ಟು ಬಾರಿ ಬೇತಾಳದಂತೆ ಬರಡಾಗುವುದು, ಬೆಂಬೂತದಂತೆ ಕಾಡುವುದು ಒಂದು ಋಣಾನುಬಂಧವಿಲ್ಲದ ವಿಷಯವೇ?

ನನ್ನ ನೆನಪಿನ ಸುರಳಿ ಸಾವಕಾಶವಾಗಿ ಬಿಚ್ಚಿದಾಗ, ನನಗಾಯಿತು ರೋಮಾಂಚನ!

ಸಹನಾ ನಮ್ಮೆಲ್ಲರಂತೆ ನೂರು ವಿದ್ಯಾರ್ಥಿಗಳಲ್ಲಿ ಒಬ್ಬಳಾಗಿ ಮೈಸೂರು ಮೆಡಿಕಲ್ ಕಾಲೇಜಿಗೆ ಮೊದಲನೇ ವರ್ಷದ ವಿದ್ಯಾರ್ಥಿನಿಯಾಗಿ ಬಂದು ಸೇರಿದ್ದಳು. ಸಹನಾ ಬೆಂಗಳೂರಿನವಳು ಅನ್ನುವುದು ಹೆಸರಿಗಷ್ಟೆ. ಏಕೆಂದರೆ, ಅಪ್ಪ, ಅಮ್ಮ ,ಅಣ್ಣ ಮತ್ತು ಅಕ್ಕರನ್ನೊಳಗೊಂಡ ಸಹನಾ ಮನೆ ಬೆಂಗಳೂರಿನಲ್ಲಿದ್ದರೂ, ಸಹನಾ ಮಾತ್ರ ಬೆಳಗಾಮ್‌ನ ಪ್ರಸಿದ್ಧ ಬೋರ್ಡಿಂಗ್ ಸ್ಕೂಲ್‌ನಲ್ಲಿ ಓದಿದವಳು. ತುಂಬಾ ಸಣ್ಣ ತರಗತಿಯಲ್ಲಿದ್ದಾಗಲೇ ಅಂದರೆ ಪ್ರೈಮರಿ ಸ್ಕೂಲ್ ಮುಗಿಸಿದ ತಕ್ಷಣವೇ ಅವಳ ಅಪ್ಪ, ಅಮ್ಮ ಅವಳನ್ನು ಬೋರ್ಡಿಂಗ್ ಸ್ಕೂಲ್‌ಗೆ ಹಾಕಿದ್ದರು. ಪಿ.ಯು.ಸಿ. ಮುಗಿದ ಮೇಲೆ ನೇರವಾಗಿ ಮೈಸೂರ್ ಮೆಡಿಕಲ್ ಕಾಲೇಜ್‌ಗೆ ಬಂದು ಸೇರಿದ್ದಳು. ಅವಳ ಬೋರ್ಡಿಂಗ್ ಸ್ಕೂಲ್ ಸಾಕಷ್ಟು ಸ್ಟ್ರಿಕ್ಟ್ ಇತ್ತಂತೆ, ಹುಡುಗಿಯರದಷ್ಟೇ ಆಗಿದ್ದರಿಂದ ಹುಡುಗರ ಸುಳಿವೇ ಇರಲಿಲ್ಲವಂತೆ, ಓದಾಯಿತು ಅವರಾಯಿತಂತೆ, ಇನ್ನೇನೂ ಹೇಳಕ್ಕೆ, ಕೇಳಕ್ಕೆ ವಿಷಯವೇ ಇರಲಿಲ್ಲವಂತೆ, ಹೀಗೆ ಸಹನಾ ಹೇಳುತ್ತಿದ್ದಾಗ, ನಾವೆಲ್ಲಾ ಕಥೆಯನ್ನು ಕೇಳುವಂತೆ ತುಟಿ ಪಿಟಿಕ್ ಅನ್ನದೆ ಕೇಳುತ್ತಿದ್ದೆವು. ಇದನ್ನು ಕೇಳಿದ ತಕ್ಷಣ ನನಗೆ ಜೈಲಿಗೆ ಹೋದಂತಾಗಿತ್ತು ಸ್ವಲ್ಪ ಹೊತ್ತು. ಅದಕ್ಕೇ ಇರಬೇಕು, ಹುಡುಗರನ್ನು ನೋಡಿದಾಗಲೆಲ್ಲ ಒಂದು ತರಹ ಎಕ್ಸೈಟ್ ಆಗುತ್ತಿದ್ದಳು ಸಹನಾ ಮೆಡಿಕಲ್ ಕಾಲೇಜ್ ಮೊದಲ ವರ್ಷದಲ್ಲಿ. ಎರಡನೇ ವರ್ಷದಲ್ಲಿ ಸಹನಾ ಮೌನವಾಗಿ ನಮಗೆಲ್ಲಾ ಒಂದು ವರ್ಷ ಸೀನಿಯರ್ ಆಗಿದ್ದ ಹುಡುಗನೊಬ್ಬನನ್ನು ಪ್ರೀತಿಸತೊಡಗಿದಳು. ಇದೊಂದು ಒಂದೇ ದಿಕ್ಕಿನಲ್ಲಿ ಹರಿಯುವ ವಿಶೇಷ ಪ್ರೇಮವಾಗಿದ್ದರಿಂದ ನಮ್ಮ ತರಗತಿಯಲ್ಲಿ ಎಲ್ಲರಿಗೂ ಈ ವಿಷಯ ತಿಳಿಯದಿರುವುದು ಸಹನಾಳಿಗೆ ಒಂದು ರೀತಿಯಲ್ಲಿ ಸಹಾಯವಾದಂತಿತ್ತು. ಸಹನಾ ಹಾಸ್ಟೆಲ್‌ನಲ್ಲಿದ್ದರಿಂದ ಅವಳ ರೂಮ್‌ಮೇಟ್ಸ್ ಮತ್ತು ಇತರ ಹತ್ತಿರದ ಸ್ನೇಹಿತೆಯರಿಗೆ ಮಾತ್ರ ಇದರ ಅರಿವಿತ್ತು. ನಾನು ಕಾಲೇಜ್‌ನಲ್ಲಿ ಮಾತ್ರ ಅವಳನ್ನು ಭೆಟ್ಟಿಯಾಗುತ್ತಿದ್ದರಿಂದ ನನಗೆ ಇವಳ ಪ್ರೇಮ ಪರಾಗ ತಿಳಿಯುವ ಹೊತ್ತಿಗೆ ನಾವೆಲ್ಲಾ ಮೂರನೇ ವರ್ಷದಲ್ಲಿದ್ದೆವು.

ಸಹನಾ ತುಂಬ ಬುದ್ಧಿವಂತ ಹುಡುಗಿ, ಎಲ್ಲಾ ವಿಷಯದಲ್ಲೂ ಮೆಚೂರಿಟಿ ಕಂಡರೂ, ಈ ಪ್ರೇಮಲೋಕದಲ್ಲಿ ಸ್ವಲ್ಪ ಚಿಂತನೆ ಕಡಿಮೆ ಇದ್ದಂತಿತ್ತು. ಸಹನಾ ಬಲು ಚೆಲುವೆಯಲ್ಲದಿದ್ದರೂ, ಒಳ್ಳೆಯ ಎತ್ತರ, ಮೀಡಿಯಮ್ ಕಾಂಪ್ಲೆಕ್ಶನ್ ಮತ್ತು ಗುಂಗುರು ಕೂದಲು ಹೊತ್ತು, ನನ್ನ ಅಭಿಪ್ರಾಯದಮೇರೆಗೆ ಯಾರನ್ನಾದರೂ ಆಕರ್ಷಿಸುವ ನೋಟ ಇವಳಿಗಿತ್ತು. ತುಂಬಾ ಟ್ಯಾಲೆಂಟೆಡ್ ಹುಡುಗಿ ಕೂಡಾ. ಡ್ರಾಯಿಂಗ್, ಪೈಂಟಿಂಗ್ ಮಾಡುವುದಷ್ಟೇ ಅಲ್ಲದೇ ಬರಹಗಾರ್ತಿಯೂ ಆಗಿದ್ದಳು. ಸಿನಿಮಾ ನೋಡುವುದು ಇವಳಿಗೊಂದು ದೊಡ್ಡ ಹಾಬಿಯಾಗಿತ್ತು. ಬೆಳಗಾಮ್ ಬದುಕಲ್ಲಿ ಸಿನಿಮಾಕ್ಕೆ ಕಾಲಿಡದಿದ್ದು ಮೈಸೂರ್‌ನಲ್ಲಿ 'ನೀರಿಗೆ ಫ್ಲಡ್ ಗೇಟ್ಸ್ ಓಪನ್' ಆದಂತಾಗಿತ್ತು ಸಿನಿಮಾ ನೋಡುವುದು. ನಾನೂ ಸಹನಾಳ ಜೊತೆ ಒಂದೆರಡು ಸಿನಿಮಾ ನೋಡಿದಾಗಲೇ ನನಗೆ ಅವಳ ಪ್ರೇಮದ ಪರಿಮಳ ಪರಿಚಯವಾಗಿದ್ದು. ಸಹನಾ ಪ್ರೇಮಿಸುತ್ತಿದ್ದ ಹುಡುಗ, ಮನ್ಮಥನಂತೆ ರೂಪವಿದ್ದು ಸಾಕ್ಷಾತ್ ಕೃಷ್ಣ ಪರಮಾತ್ಮನಂತೆಯೇ ಹುಡುಗಿಯರೆಲ್ಲರ ಮನಸೆಳೆದಿದ್ದ ಮಧುಕೇಶ್. ಮನ್ಮಥನನ್ನು ನಾನು ನೋಡಿದ್ದೆಲ್ಲಿ? ಅಂತ ಕೇಳಬೇಡಿ! ನಾನೂ ನಿಮ್ಮಂತೆಯೇ ಓದಿ ತಿಳಿದಿದ್ದೆ ಅವನ ರೂಪವನ್ನು. ಆದರೆ, ಅದನ್ನು ಮಧುಕೇಶ್‌ನಲ್ಲಿ ನೋಡಿದ್ದೆವು. ಮಧುಗೆ ಸಹನಾಳ ಪ್ರೇಮದ ತಿಳುವಳಿಕೆಯಾಗಲು ಬಹಳ ದಿನ ಬೇಕಾಗಿರಲಿಲ್ಲ. ಆದರೂ, ಇದೊಂದು ಒಂದೇ ದಿಕ್ಕಿನಲ್ಲಿ ಹರಿಯುವ ವಿಚಿತ್ರ ಒಲವಾಗಿದ್ದರಿಂದ , ಸಹನಾಳಿಗೆ ಮಧುವಿಂದ ಯೆಸ್ ಆಗಲಿ ಅಥವಾ ನೋ ಆಗಲಿ, ಯಾವ ಉತ್ತರವೂ ಸಿಕ್ಕಿರಲಿಲ್ಲ. "ನಿನ್ನ ಒಗಟಿಗೇ ಉತ್ತರಾ, ಕೊಡುವೆ ಬಾರೆ ಹತ್ತಿರ" ಎಂದು ಮಧು ಹಾಡಲೇ ಇಲ್ಲ. ಇದರಿಂದ ಬರಡಾಗಬೇಕಾಗಿದ್ದ ಪ್ರೀತಿ–ಪ್ರೇಮ ಬಲವಾಗಿದ್ದು, ನನಗೆ ಇಂದಿಗೂ ಬಿಡಿಸಲಾಗದ ಚಾಲೆಂಜಿಂಗ್ ಸೈಕಲಾಜಿಕಲ್ ಒಗಟಾಗಿರುವುದು ಈಗ ಬೇಡವಾದ ಬೇರೆಯ ವಿಷಯ.

ಹೀಗೇ ಒಂದು ದಿನ, ಕ್ಯಾಂಟೀನ್‌ನಲ್ಲಿ ಕಾಫಿಯ ಸೇವನೆಯಾಗುತ್ತಿತ್ತು. ನಾವು ಐದು ಸ್ನೇಹಿತೆಯರು ಮೇಜಿನ ಸುತ್ತ ಕುಳಿತು ಮಾತಾಡುತ್ತಿದ್ದೆವು. ಏನೋ ಪಾಠದ ವಿಷಯ ಮಾತಾಡುತ್ತಿದ್ದೆವಾದರೂ, ಸಹನಾ ಸಡನ್ ಆಗಿ ''ನೋಡ್ರೇ, ಅವನೂ ಬಂದಿದ್ದಾನೆ ಕ್ಯಾಂಟೀನ್‌ಗೆ, ಕಿಟಕಿಯ ಬಳಿ ಇರುವ ಕುರ್ಚಿಯಲ್ಲಿ ಕುಳಿತು ಕಿಟಕಿಯ ಹೊರಗೆ ನೋಡುತ್ತಿದ್ದಾನೆ. ಎಷ್ಟು ಸುಂದರವಾಗಿದ್ದಾನಲ್ವಾ? ಭಾವನಾತ್ಮಕನಾಗಿ ಯೋಚನಾಲಹರಿಯಲ್ಲಿ ಇನ್ನಷ್ಟು ಹ್ಯಾಂಡ್‌ಸಮ್ ಆಗಿ ಕಾಣಿಸುತ್ತಿದ್ದಾನೆ.'' ಎಂದಳು.



ಬೇರೇ ಸ್ನೇಹಿತೆಯರು ''ಸದಾಶಿವಂಗೆ ಅದೇ ಧ್ಯಾನ'' ಅಂತೆ ಅಂದು ಅವರವರ ಮಾತುಗಳನ್ನು ಮುಂದುವರೆಸಿದರು. ನಾನು ಮನಸ್ಸಿನಲ್ಲಿ ''ಅಜ್ಜಿಗೆ ಅರಿವೆ ಚಿಂತೆ, ಮಗಳಿಗೆ ಮಿಂಡನ ಚಿಂತೆ'' ಅಂದುಕೊಂಡು ಸಹನಾಳ ಮೇಲೆ ಒಂದು ತರಹ ಅನುಕಂಪ ತೋರಿಸುತ್ತಾ, ''ಎಷ್ಟು ಸುಂದರವಾಗಿದ್ದರೇನು ಲಾಭ? ನಿನ್ನನ್ನು ತಲೆ ಎತ್ತಿ ಒಂದು ಸಲವಾದರೂ ಕೂಡಾ ನೋಡುತ್ತಿಲ್ಲವಲ್ಲಾ?'' ಎಂದು, ಸಹನಾಳ ಪ್ರತಿಕ್ರಿಯೆಗಾಗಿ ಕಾದು ಅವಳಕಡೆ ನೋಡಿದೆ. ಅಲ್ಲಿ ಯಾವ ರೀತಿಯ ನಿರಾಸೆಯೂ ಕಾಣಿಸಲಿಲ್ಲ. ಆಶ್ಚರ್ಯದಿಂದ ''ಮಧು ಬೇರೇ ಯಾರನ್ನೋ ಪ್ರೀತಿಸುತ್ತಿರಬೇಕು, ನಿನ್ನ ಹೃದಯದಿಂದ ಅವನಿಗೆ ಕೊಟ್ಟ ಜಾಗವನ್ನು ಖಾಲಿಮಾಡು, ನಿನ್ನ ಹೃದಯ ಹಗುರಾದೀತು'' ಎಂದೆ.

ಸಹನಾ ಆರಾಮವಾಗಿ ನಗುತ್ತಾ ''ಏನಮ್ಮಾ, ಏನೋ ವೇದಾಂತ ಹೇಳುತ್ತಿದ್ದೀಯಾ? ವೇದಾಂತ ಸೊಸೈಟಿಗೆ ಹೋಗೋದು ಬಿಟ್ಟು ಇನ್ನೂ ಇಲ್ಲೇ ಮೆಡಿಕಲ್ ಕಾಲೇಜಿನಲ್ಲಿ ಕಂಟಿನ್ಯೂ ಮಾಡುತ್ತಿದ್ದೀಯಾ?'' ಎಂದು, ಸೀರಿಯಸ್ ವಿಷಯಕ್ಕೆ ಹಗುರಾಗಿ ಉತ್ತರಿಸಿದ್ದಳು. ಇವಳಿಗೆಲ್ಲೋ ಪ್ರೀತಿ, ಪ್ರೇಮದ ಹುಚ್ಚು ಹಿಡಿದುಬಿಟ್ಟಿದೆ, ಮದುವೆ ಹುಚ್ಚು ಅಂತ ಹೇಳುವುದು, ಅಷ್ಟು ಸೂಕ್ತವಾಗಿ ಕಾಣಿಸುತ್ತಿಲ್ಲ ಎಂದುಕೊಂಡು ''ನಾ ಏನೋ ಹೇಳಿದರೆ, ನೀನೇನೋ ಹೇಳ್ತೀಯಲ್ಲಾ, ಉಂಡ್ಯೇನೋ ಗುಂಡ ಅಂದರೆ, ಮುಂಡಾಸ್ ಮೂವತ್ತು ಮೊಳ ಅಂದನಂತೆ ಹಾಗಾಯಿತು ನಿನ್ನ ಸಮಾಚಾರ'' ಅಂದೆ. ಸಹನಾ ನಕ್ಕು ''ಥ್ಯಾಂಕ್ಸ್ ಫಾರ್ ದ ಪ್ರಾವರ್ಬ್'' ಎಂದು ಅದಕ್ಕೆ ಸಮನಾದ ಇಂಗ್ಲೀಷ್ ಪ್ರಾವರ್ಬ್ ಯೋಚಿಸುತ್ತಿದ್ದಳು. ಸಹನಾ ಮೊದಲಿಂದ ಇಂಗ್ಲೀಷ್

ಓದಿದ್ದರಿಂದ, ಅವಳ ಬರವಣಿಗೆ ಎಲ್ಲಾ ಇಂಗ್ಲೀಷ್‌ನಲ್ಲೇ ಇರುತ್ತಿತ್ತು, ಆದರೂ ಕನ್ನಡದ ಮೇಲೆ ಸಾಕಷ್ಟು ಒಲವಿತ್ತು. ನಾನು: "ಸಹನಾ, ಪ್ಲೀಸ್ ಕಮ್ ಟು ದ ಪಾಯಿಂಟ್. ನೀನಾಗೇ ವೇದಾಂತ ಸೊಸೈಟಿಗೆ ಹೋಗಿ ಲೆಕ್ಚರ್ ಕೇಳಲ್ಲಾ, ಅವರಾಗೇ ನಮ್ಮಂತಹ ಕಾಲೇಜ್‌ಗೆ ಬಂದು, ಲೆಕ್ಚರ್ ಕೊಡೋಲ್ಲಾ. ಹಾಗಿರುವಾಗ, ನಿನ್ನ ಈ ಪುಳಕಗೊಳ್ಳುವ ಸಮಸ್ಯೆಯನ್ನು ಕೇಳಿದ ಮೇಲಾದರೂ, ಯಾರಾದರೂ ಒಂದಿಷ್ಟು ಕ್ಲಾಸ್ ತಗೊಳ್ಳಲೇ ಬೇಕಲ್ವೇ?" ಎಂದೆ.

ಸಹನಾ ಅದಕ್ಕೆ ನಕ್ಕು "ನಿನಗೆ ಪ್ರೇಮಿಸುವುದರ ವಿಷಯದಲ್ಲಿ ಎಷ್ಟು ಅನುಭವ ಇದೆ ಅಂತ ಯಾವ ಆಧಾರದ ಮೇಲೆ ನಿನ್ನ ಈ ಉಪದೇಶವನ್ನ ನಂಬಿ ಸ್ವೀಕರಿಸಲಿ? ನೀನು ಯಾವತ್ತಾದರೂ, ಯಾರಾದರೂ ಹುಡುಗನ್ನ ಪ್ರೇಮಿಸಿದ ಅನುಭವ ಇದೆಯಾ ಹೇಳು?" ಎಂದಳು.

ಸಹನಾಳ ಮಾತು ಕೇಳಿ ನನಗೆ ಜೋರಾಗಿ ನಗಬೇಕೆನಿಸಿತು; ಸೀರಿಯಸ್ ಆಗಿದ್ದವಳು, ನಗುತ್ತಾ ಹೇಳಿದೆ: "ನೀನು ಹೇಳೋದೆಲ್ಲಾ ಸರಿಯಾಗೇ ಇದೆ. ನಾನು ಪ್ರೈಮರಿ ಸ್ಕೂಲ್ ನಿಂದ ಇದುವರೆಗೆ ಕೋ-ಎಜುಕೇಶನ್‌ನಲ್ಲಿ ಓದಿ, ಎಲ್ಲೆಲ್ಲೂ ಹುಡುಗರ ಅಕ್ಕ-ಪಕ್ಕ ಬೆಳೆದು ಬಂದಿದ್ದೇನೆ. ಅದಕ್ಕೆ ಸಾಲದು ಅಂತ ನಮ್ಮ ಡಿಸೆಕ್ಶನ್ ಟೀಮ್‌ನಲ್ಲಿ ಹತ್ತು ಜನರಿದ್ದರೂ, ನಾನೊಬ್ಬಳೇ ಹುಡುಗಿ ಬೇರೆ. ನನಗೆ ಹುಡುಗರನ್ನು ನೋಡಿದರೆ, ಏನೋ ಒಂದು 'ಹಿತವಾದ ಸ್ನೇಹ' ತಕ್ಷಣ ಮನಸ್ಸಿಗೆ ಬಂದಿದೆಯೇ ಹೊರತು, ನಿನ್ನ ತರಹ 'ಪ್ರೇಮ ಪರಾಗ' ಪಸರಿಸಿಲ್ಲ. ಅದೂ ಅಲ್ಲದೇ 'ಒಂದೇ ದಿಕ್ಕಿನ ಈ ಮೌನ ಪ್ರೇಮ-ಪ್ರೇಮಾಂತರಂಗ' ಇದುವರೆಗೆ ಹುಟ್ಟೇ ಇಲ್ಲ" ಅಂದೆ. ಇದು ಒಂದು ವಿಧದಲ್ಲಿ ಒಳಿತೇ ಆಗಿತ್ತು, ಮೂರು ಅಕ್ಕಂದಿರು, ಒಬ್ಬ ಅಣ್ಣನನ್ನು ಹೊಂದಿದ್ದ ನನಗೆ ಮೆಡಿಕಲ್ ಕಾಲೇಜಿನಲ್ಲಿ ಪ್ರೇಮ ಪಾಶಕ್ಕೆ ಸಿಕ್ಕಿ ಬಿಸಿ ತುಪ್ಪ ನುಂಗೋಕ್ಕು ಆಗಲ್ಲಾ, ಉಗಿಯಕ್ಕೂ ಆಗೊಲ್ಲಾ ಅನ್ನೋತರಹ ಪರಿಸ್ಥಿತಿಗೆ ಅವಕಾಶವಿರಲಿಲ್ಲ.

ಸಹನಾ: "ಸರಿ, ನಿನ್ನ ಪಾಸ್ಟ್ ಅಂಡ್ ಪ್ರಸಂಟ್ ಹಿಸ್ಟರಿ ಎಲ್ಲಾ ಗೊತ್ತಾಯಿತು, ಈಗ ಫಿಸಿಕಲ್ ಎಕ್ಸಾಮ್ ಮಾಡೋಣ ಬಾ. ಡಾ. ರಾಮಶೆಟ್ಟಿ ಕಾಯ್ತಾ ಇದಾರೆ, ಕ್ಲಿನಿಕಲ್ ಡಿಸ್ಕಶನ್ ಆನ್ ದಟ್ ಕೇಸ್‌ಗೆ. ಇನ್ನೊಂದ್ ಸಲ ಸಿಕ್ಕಾಗ ವಿವರವಾಗಿ ಮಾತಾಡೋಣ." ಅಂತ ಹೇಳಿ ಮಧುವಿನ ಹಿಂದೆ ಓಡಿದ್ದಳು.

ನಮ್ಮ ಮಾತುಕತೆಗೆ ಕಡಿವಾಣ ಬಿದ್ದಿದ್ದು ನನ್ನ ಮನಸ್ಸಿಗೆ ಸಮಾಧಾನವಾದರೂ, ಅದು ಸಹನಾ ಮತ್ತು ಮಧುವಿನ ಪ್ರೇಮ ಸೌರಭವನ್ನು ಮೆಲುಕು ಹಾಕುತ್ತಿತ್ತು. "ಈ ಪ್ರೇಮಾಂತರಂಗವು ಇದೇ ವೇಗದಲ್ಲಿ ಮುಂದುವರೆದರೆ, ಮುಂದೇನು ಗತಿ? ಒಂದಲ್ಲಾ ಒಂದು ದಿನ, ಸಹನಾ ಮಾನಸಿಕವಾಗಿ ನಿಶ್ಯಕ್ತಳಾಗಿ, ಭಗ್ನಪ್ರೇಮಿಯಂತೆ ಅವಳ ಜೀವನವನ್ನು ಹಾಳುಮಾಡಿಕೊಂಡರೆ? ಅಥವಾ ಬಾಳನ್ನು ಕೊನೆಗೊಳಿಸಲು ಆತ್ಮಹತ್ಯೆಗೆ ಪ್ರಯತ್ನಿಸಿದರೆ?" ಎಂಬುದು ಬೆಂಭೂತದಂತೆ ಕಾಡತೊಡಗಿತು. ನನ್ನ ಮತ್ತು ಸಹನಾಳ ಗೆಳತಿ, ಗೆಳೆಯರು ನನ್ನ ಈ ಕಾಳಜಿಗೆ ಮೂಗು ಮುರಿದು "ಈ ವಿಷಯಾನ ಸಹನಾಳ ಅಪ್ಪ, ಅಮ್ಮ ಅವಲೋಕಿಸಿ ಆಲೋಚಿಸಬೇಕು. ಅದ್ಬಿಟ್ಟು, ನಿನಗ್ಯಾಕೆ ಅವಳ ಈ ವಿಷಯದಲ್ಲಿ ಅವರಿಗಿಂತ ಆತಂಕ?" ಎಂದು ನನ್ನ ಬಾಯಿ ಮುಚ್ಚಿಸಿದರು.

ಸಹನಾ ಇತ್ತೀಚೆಗೆ ಶನಿವಾರ ಭಾನುವಾರದ ರಜೆದಿನಗಳಲ್ಲಿ ಮೊದಲಿನಂತೆ ಬೆಂಗಳೂರಿಗೆ ಹೋಗುವುದನ್ನು ಸಂಪೂರ್ಣ ನಿಲ್ಲಿಸಿದ್ದರಿಂದ, ಅವಳ ಅಪ್ಪ ಅಮ್ಮನೂ ಮೈಸೂರಿಗೆ ಬಂದು ಹೋಗುತ್ತಿರಲಿಲ್ಲವಾದರಿಂದ ಅವರಿಗೆ ಈ ವಿಷಯ ತಿಳಿಯುವ ಅವಕಾಶವೇ ಇರಲಿಲ್ಲ. ಸಹನಾ ಎಲ್ಲಾ ಪರೀಕ್ಷೆಗಳಲ್ಲೂ ಉತ್ತೀರ್ಣಳಾಗುತ್ತಿದ್ದರಿಂದ ಅವಳ ಅಪ್ಪ ಅಮ್ಮಂದಿರಿಗೆ ಯಾವುದೇ ವಿಷಯದಲ್ಲಿ ಅನುಮಾನ ಬರದೇ ಇದ್ದಿದ್ದು, ಸಹನಾಳಿಗೆ ಅನುಕೂಲವಾದಂತಿತ್ತು.

ನಾನು ಸಹನಾಳ 'ಪ್ರೇಮ ಸಂಬಂಧ'ದಲ್ಲಿ ಅನುಕಂಪ ತೋರಿಸಿದ್ದರಿಂದಲೋ ಏನೋ, ನನಗೆ ಸಿಕ್ಕಾಗಲೆಲ್ಲ ಸಹನಾ ಅವಳ ಪ್ರೇಮದ ವಿಷಯವನ್ನು ಸ್ವಲ್ಪ ಹೊತ್ತಾದರೂ ಮಾತನಾಡಿ ಆಗು ಹೋಗುಗಳನ್ನು ಅರುಹಿ ವಿಷಯವನ್ನು ವರ್ತಮಾನದಲ್ಲಿರಿಸುತ್ತಿದ್ದಳು. ನಮ್ಮ ಮತ್ತು ಮಧುವಿನ ಕ್ಲಾಸ್‌ನಲ್ಲಿ ಎಲ್ಲರಿಗೂ ಈಗ ವಿಷಯ ತಿಳಿದು, ಒಂದು ರೀತಿಯ ಕುತೂಹಲ ಕುದುರಿತ್ತು "ಯಾವ ರೀತಿ ಕೊನೆಗೊಳ್ಳಬಹುದು ಈ ಒನ್ ವೇ ಟ್ರಾಫ್ಫಿಕ್ ಲವ್? ಮೆಡಿಕಲ್ ಡಿಗ್ರಿ ಮುಗಿಯುವ ಹೊತ್ತಿಗೆ? ಮದುವೆಯೋ? ಇಲ್ಲಾ ಮಸಣವೋ?" ಎಂಬಂತಿತ್ತು.

ನನಗೆ ಮಧುವಿನ ಪರಿಚಯ ಅಷ್ಟಾಗಿ ಇರಲಿಲ್ಲ. ಬುದ್ಧಿವಂತ, ಸುಂದರಾಂಗ, ಎಲ್ಲದರಲ್ಲೂ ತೊಡಗಿಸಿಕೊಂಡಿದ್ದರಿಂದ ಮೈಸೂರ್ ಮೆಡಿಕಲ್ ಕಾಲೇಜಿನಲ್ಲಿ ಎಲ್ಲರಿಗೂ ಅವನ ಒಂದು ರೀತಿಯ ಪರಿಚಯ ಇತ್ತು. ಆದರೂ, ಒಂದು ಸಲ ನೇರವಾಗಿ ಅವನನ್ನು ಮಾತನಾಡಿಸಿ, ನನ್ನ ಸ್ನೇಹಿತೆ ಸಹನಾ ಬಗ್ಗೆ ಅವನಿಗಿರುವುದು "ಪ್ರೇಮವೋ? ಅನುಕಂಪವೋ? ಸ್ನೇಹವೋ? ಅನುಮಾನವೋ?" ಅಂತ ಕೇಳಬೇಕೆನಿಸಿತು. ಅದಕ್ಕೆ ಒಂದು ಉಪಾಯವೂ ಹೊಳೆಯಿತು. ನನ್ನ ಡಿಸೆಕ್ಶನ್ ಟೀಮ್‌ನಲ್ಲಿದ್ದ ಒಂಬತ್ತುಜನ ಹುಡುಗರಿಗೂ ನನ್ನ ಕಂಡರೆ ಗೌರವ ಮತ್ತು ಅಭಿಮಾನ ಇತ್ತು. ನಾನು ಏನು ಕೆಲಸ ಹೇಳಿದ್ದರೂ ಇಲ್ಲ ಅನ್ನುತ್ತಿರಲಿಲ್ಲ. ನಮ್ಮ ಟೀಮ್‌ನ ನರೇಶ್ ಮತ್ತು ಮಧು ಹಾಸ್ಟಲ್‌ನಲ್ಲಿ ಅಕ್ಕಪಕ್ಕದ ರೂಮ್‌ನಲ್ಲಿದ್ದು,

ಇಬ್ಬರ ನಡುವೆ ಸ್ನೇಹವೂ ಇತ್ತು. ಹಾಗಾಗಿ ನರೇಶನಿಗೆ ಸೂಕ್ಷ್ಮವಾಗಿ ಮಧುವಿನ ಮೇಲೆ ಮಾಹಿತಿಯನ್ನು ಸಂಗ್ರಹಿಸಲು ಹೇಳಿದೆ. ನನಗಾದ್ದರಿಂದ "ಆಗಲಿ" ಎಂದು, "ಲೀಲಾ, ನೀನು ಸಹನಾಳ ಲೋಕಲ್ ಗಾರ್ಡಿಯನ್ ಆಗಿರುವಂತಿದೆ, ನನಗೂ ಸ್ವಲ್ಪ ಆ ತರಹ ಸರ್ವೀಸಸ್ ಬೇಕು, ಬೇಕಾದರೆ ಸ್ವಲ್ಪ ಅಡ್ವಾನ್ಸ್ ಕೊಡುತ್ತೇನೆ." ಎಂದು ಗೇಲಿ ಮಾಡಿದ.

ಹೀಗೇ ದಿನಗಳು ಉರುಳಿದವು! ಸಹನಾಳ ಪ್ರೇಮ ಮಾತ್ರ ಹಸಿರಾಗೇ ಇತ್ತು. ಚೆನ್ನಾಗಿ ಪೋಷಿಸುತ್ತಿದ್ದಳು. ಹೀಗೇ ಒಂದು ದಿನ ನಮ್ಮ ವಾರ್ಷಿಕ ಸಂಚಿಕೆಯನ್ನು ಓದುತ್ತಿದ್ದೆ. ಕೆಲವೊಮ್ಮೆ ಡಾ. ಅನುಪಮಾ ನಿರಂಜನ ಅವರ ಕಥೆಗಳು ಇರುತ್ತಿತ್ತು. ಡಾ. ಅನುಪಮಾ ನಿರಂಜನ, ಮೈಸೂರ್ ಕಾಲೇಜ್‌ನ ಹಳೆಯ ವಿದ್ಯಾರ್ಥಿನಿ ಹಾಗೂ ಹೆಸರು ಮಾಡಿದ ಸಾಹಿತಿ ತಾನೇ. ನನಗೆ ಅವರ ಕಥೆ ಓದುವುದು ತುಂಬಾ ಸ್ವಾರಸ್ಯಕರವಾಗಿತ್ತು. ಸಂಚಿಕೆಯ ಪುಟ ತಿರುವಿ ಹಾಕುವಾಗ ಮಧು ಬರೆದ ಒಂದು ಆರ್ಟಿಕಲ್ ಇಂಗ್ಲೀಷ್ ಸೆಕ್ಶನ್ ನಲ್ಲಿ ಇತ್ತು. ಅದನ್ನೂ ಓದಿದೆ, ಅವನು 'ಹಣ, ಹೆಂಡ, ಹೆಣ್ಣು ಮತ್ತು ನಾನು' ಎಂಬ ಆರ್ಟಿಕಲ್ ಅನ್ನು ಇಂಗ್ಲೀಷ್‌ನಲ್ಲಿ ತುಂಬಾ ಕುತೂಹಲಕಾರಿಯಾಗಿ ಬರೆದಿದ್ದ. ಇದರಲ್ಲಿ ಹಾಲಿವುಡ್ ಮೂವೀಸ್, ಸ್ಟಾರ್ಸ್ ಬಗ್ಗೆ ಉತ್ಪ್ರೇಕ್ಷೆಯೂ ಇತ್ತು. ಅದಿಲ್ಲದೇ ಹೇಗೆ ಸಾಧ್ಯ? ಈ ಮೂರೂ ವಸ್ತುಗಳು ಒಟ್ಟಿಗೇ ಸಿಗುವ ಸ್ಥಳ ಅಂದರೆ ಹಾಲಿವುಡ್ ಅಲ್ಲವೇ? ಡಿಕ್ಶನರಿಯನ್ನು ಬಿಟ್ಟರೆ? ಇಷ್ಟೆಲ್ಲಾ ಬರೆದವನು ಸಹನಾಳನ್ನು ತಲೆ ಎತ್ತಿ ಕೂಡಾ ನೋಡದಿರುವುದಕ್ಕೆ ಕಾರಣ ಯೋಚಿಸಿದರೂ ಸಿಗಲಿಲ್ಲ. ನಂತರ ಹೀಗೆನಿಸಿತು "ಮಧುಗೆ ಅಮೇರಿಕಾಕ್ಕೆ ಹೋಗುವ ಹಂಬಲ, ಅಲ್ಲಿ ಓದು ಮುಂದುವರೆಸಿ ಅಲ್ಲೇ ನೆಲಸುವ ಆಸೆ ಬಲವಾಗಿರಬೇಕು ಅದಕ್ಕೇ ಸಹನಾಳನ್ನು ಕಂಡರೆ ಈ ರೀತಿಯ ಪ್ರತಿಕ್ರಿಯೆ."

ಇವುಗಳ ಮಧ್ಯೆ ಕಾಲ ಹೋಗಿದ್ದು ತಿಳಿಯದಾಗಿತ್ತು. ನಾವೆಲ್ಲಾ ನಾಲ್ಕನೇ ವರ್ಷದಲ್ಲಿದ್ದೆವು. ಸಹನಾ ನನ್ನ ಜೊತೆ ಆಫ಼್ತಲ್‌ಮಾಲಜಿ ರೊಟೇಶನ್ ಮಾಡುವಾಗ ಕಾಲಾವಕಾಶ ಇದ್ದಿದ್ದರಿಂದ ಅವಳನ್ನು ಭೆಟ್ಟಿ ಮಾಡಿ ಪ್ರಸ್ತಾಪಿಸಿದೆ.
ನಾನು: "ಹೇಗಿದೆ ನಿನ್ನ ಪ್ರೇಮ ಸಾಗರ? ಏನಾದರೂ ಬದಲಾವಣೆ ಆಗಿದೆಯಾ?" ಎಂದೆ.

ಸಹನಾ: "ಬದಲಾವಣೆ ಅವನ ಕಡೆಯಿಂದ ಏನೂ ಇಲ್ಲ. ಆದರೆ, ನನ್ನ ಕಡೆಯಿಂದ ಇನ್ನಷ್ಟು ಬಲವಾಗಿದೆ." ಎಂದಳು. ನನಗೆ ಅಯ್ಯೋ, ಹುಚ್ಚೀ ಎಂದು ಹೇಳಬೇಕೆನಿಸಿದರೂ ತಡೆದು "ನನಗೊಂದು ಪ್ರಶ್ನೆ ಇದೆ, ನಿನ್ನ ಈ ಮೌನ ಪ್ರೇಮ ಬಲವಾಗುವುದಕ್ಕೆ ಇನ್‌ಸೆಂಟೀವಾದರೂ ಏನು?" ಎಂದೆ.

ಸಹನಾ ಅದಕ್ಕೆ "ಅಯ್ಯೋ ಹುಚ್ಚೀ, ಯಾವುದು ಮನಸ್ಸಿಗೆ ಉತ್ಸಾಹ, ಸಂತೋಷ ತರುವುದೋ, ಅದನ್ನು ಸಹಜವಾಗಿ ಹುಡುಕಿಕೊಂಡುಹೋಗತ್ತೆ ಈ ಮನಸ್ಸು. ಇದು ನನ್ನ ಮನಸ್ಸು ಒಂದೇ ಅಲ್ಲಾ, ಮಾನವಮನಸ್ಸಿನ ಸಹಜವಾದ ಮನೋಪ್ರವೃತ್ತಿ ಮತ್ತು ಮಮಕಾರವೂ ಹೌದು. ಕುವೆಂಪು ರಚಿಸಿರುವ ಕವಿತೆ ಕೇಳಿಲ್ವಾ? 'ತನುವು ನಿನ್ನದು, ಮನವು ನಿನ್ನದು, ನೀನು ಹೊಳೆದರೆ, ನಾನು ಹೊಳೆವೆನು, ನೀನು ಬೆಳೆದರೆ, ನಾನು ಬೆಳೆವೆನು.' ಮೈಸೂರು ಅನಂತಸ್ವಾಮಿ ಗಾಯನದಲ್ಲಿ ಇನ್ನೂ ಚೆನ್ನಾಗಿ ಗೋಚರಿಸಿದೆ, ಒಂದು ಸಲ ಕೇಳಿನೋಡು." ಎಂದು ಕವಯಿತ್ರಿಯ ಹಾಗೆ ಕೊರೆದಳು.

ನನಗೆ ಬಾಯೇ ಹೊರಡಲಿಲ್ಲ. ಸ್ವಲ್ಪ ಹೊತ್ತು ಯೋಚಿಸಿ, "ಅರ್ಥವಾಯಿತು! ಆದರೆ, ನಿನ್ನ ಈ ಶುದ್ಧ ಪವಿತ್ರ ಪ್ರೇಮವನ್ನು ಕೇಳುವ ಕಿವಿಗಳಿಲ್ಲ ಎಂದ ಮೇಲೆ ಹೀಗೇ ಎಷ್ಟು ದಿನ ಹಾಡಲು ಸಾಧ್ಯ ಈ ಹೃದಯದ ಕೋಗಿಲೆಗೆ?" ಎಂದೆ.

ಸಹನಾ: "ಉತ್ಸಾಹದಿಂದ ಹಾಡುವ ಹೃದಯದ ಕೋಗಿಲೆಗೆ ಆಯಾಸವೆಂಬುದೇ ಇರುವುದಿಲ್ಲಾ. ಒಂದಲ್ಲಾ ಒಂದು ದಿನ ಈ ಹಾಡನ್ನು ಕೇಳಬೇಕಾದವರು ಕೇಳೇ ಕೇಳುತ್ತಾರೆ ಎಂಬುದು ನನ್ನ ನಂಬಿಕೆ." ಎಂದು ಆಶಾವಾದಿಯಾಗಿ ನುಡಿದಳು.

ನಾನು: "ಸಹನಾ, ಕರೆಕ್ಶನ್ ಪ್ಲೀಸ್, ನಂಬಿಕೆ ಅಲ್ಲ, ಸುಳ್ಳು ನಂಬಿಕೆ, ಅಥವಾ ಮೂಢ ನಂಬಿಕೆ" ಎಂದೆ.

ಇದಾದ ನಂತರ ಸಹನಾ ನನಗೆ ಪ್ರೇಮದ ವಿಷಯ ಕುರಿತು ದೊಡ್ಡ ಲೆಕ್ಚರನ್ನೇ ಕೊಟ್ಟಿದ್ದಳು. ಅದಕ್ಕೆ ಈ ಕಥೆಯಲ್ಲಿ ಸಾಕಷ್ಟು ಸ್ಥಳ ಮತ್ತು ಸ್ಕೋಪ್ ಇಲ್ಲದಿರುವುದರಿಂದ, ಅದರ ಸಾರಾಂಶವನ್ನು ಎರಡುಸಾಲುಗಳಲ್ಲಿ ಹೀಗೆ ವ್ಯಾಖ್ಯಾನಿಸಬಹುದು. "ಪ್ರೇಮ ಅಥವಾ ಪ್ರೇಮಿಸುವುದು ಎರಡೂ ಕುರುಡಲ್ಲ – ಜನ ಸಾಮಾನ್ಯರು ಹೇಳುವಂತೆ; ಪ್ರೇಮಕ್ಕೆ ಅದರದೇ ಆದ ಕಣ್ಣುಗಳು ಮತ್ತು ಅಸಂಖ್ಯಾತ ದೃಷ್ಟಿ ಕೋನಗಳಿವೆ. ಕೆಲವೊಮ್ಮೆ ಪ್ರೇಮಿಸುವರ ಕೋನಗಳು ಬೇರೆ ಬೇರೆ ಯಾಗಿದ್ದಾಗ ಪ್ರೇಮಿಗಳ ಮಿಲನವಾಗದಿರಲೂ ಬಹುದು. ದೇರ್ ಕ್ಯಾನ್ ಬಿ ನತಿಂಗ್ ಗ್ರೇಟರ್ ಇನ್ ಲೈಫ಼್ ದ್ಯಾನ್ ರಿನೌನ್ಸಿಂಗ್ ಯುವರ್ ಲವ್ ಟು ಸಮ್‌ಒನ್ ಯು ಲವ್" ಎಂದಿದ್ದಳು.
ಇಷ್ಟೆಲ್ಲಾ ಕೇಳಿದಮೇಲೆ, ನನ್ನ ಯೋಚನಾ ಲಹರಿ ಗರಿಕೆದರಿ ಕುಣಿಯುತ್ತಿತ್ತು. ಸಹನಾ ಈ ಪ್ರೇಮ ಲೋಕದಲ್ಲಿ ಬಹುದೂರ ಪಯಣಿಸಿದ್ದಾಳೆ. ಪ್ರಣಯಕ್ಕಾಗಿ ಹುಡುಕುತ್ತಿದ್ದಾಳೆ. ಗುರಿಮುಟ್ಟದಿದ್ದರೂ ಹಿಂತಿರುಗಿ ಬರಲು ಸಾಧ್ಯವಿಲ್ಲ ಎನ್ನಿಸಿತ್ತು.

"ಭಾವಾಂತರಂಗದಲ್ಲಿ ಅಲ್ಲೋಲ ಕಲ್ಲೋಲ
ಪ್ರೇಮಾಂತರಂಗದಲ್ಲಿ ಇನ್ನೇನು ಕೋಲಾಹಲ"

ಸಹನಾ ಹೇಳುವುದು ಸರಿಯಾಗೇ ಇರಬಹುದಲ್ಲವೇ? ಸರಿ, ತಪ್ಪು ಅಂತ ಬೇರೆಯವರು ಇವಳ ಪ್ರೇಮ ಸಮಾಚಾರಗಳಲ್ಲಿ ನಿರ್ಧರಿಸುವುದು ಎಷ್ಟು ಸರಿಯಾಗಿರಲು ಸಾಧ್ಯ? ಅವಳ ಹೃದಯ ಮಧುವನ್ನು ಕಂಡರೆ ಉಲ್ಲಾಸದಿಂದ ಹಾಡುತ್ತದೆ, ಮನಸ್ಸು ಸಂತೋಷದಿಂದ ಮಾರು ಹೋಗುತ್ತದೆ. ಮಧು ಅವಳನ್ನು ಇಷ್ಟಪಡದಿದ್ದರೇನು? ಒಂದು "ಶನಿ" ಅಂತ ಪರಿಗಣಿಸದಿದ್ದರೆ ಸಾಕು ಎಂದರಿತಿರುವಾಗ, ಇನ್ನು ಅವಳ ಅಂತರಾಳದಲ್ಲಿರುವ "ಪ್ರೇಮಾಮೃತ ವಾಹಿನಿ" ಹರಿಯದೇ ನಿಲ್ಲುವುದೇ? ಮಧು, ಇವಳ ಕುಹು ಕುಹು ಕೂಗಿಗೆ ಓಗೊಡಲಿಲ್ಲ ಅಂತ ಸಹನಾ ಒಂದು ದಿನಾನೂ ಬಡಬಡಿಸಿಲ್ಲ. ನಮ್ಮೆಲ್ಲರಿಗೂ ಇದರ ಬಗ್ಗೆ ಒಂದು ರೀತಿಯ ಆತಂಕ, ಅನುಮಾನ, ಅಸಹನೆ ಇದೆಯೇ ಹೊರತು ಸಹನಾಳಿಗೆ ಇದರ ಬಗ್ಗೆ ಎಳ್ಳಷ್ಟೂ ಬೇಸರವಿಲ್ಲ. ಇದಿಷ್ಟೇ ಆಗಿದ್ದರೆ, ನಾವೆಲ್ಲಾ ಈ ವಿಷಯದ ಬಗ್ಗೆ ಚಿಂತಿಸುವುದು ಅನಗತ್ಯವಷ್ಟೇ ಅಲ್ಲಾ, ಸಹನಾಳ ದೃಷ್ಟಿಯಲ್ಲಿ ಅಸಮಂಜಸವೂ ಹೌದು. ಆದರೂ, ಮನಸ್ಸಿನಲ್ಲಿ ಎಲ್ಲೋ ಅಡಗಿದ್ದ ಈ "ಮಾನಸಿಕ ನಿಶ್ಯಕ್ತಿ, ಆತ್ಮಹತ್ಯೆ" ಪದಗಳು ಕುಣಿದು ಕುಪ್ಪಳಿಸುತ್ತಿದ್ದವು.

ಅಷ್ಟರಲ್ಲಿ ನರೇಶನೂ ನನ್ನನ್ನು ಸಂಧಿಸಿ ಮಧುವನ್ನು ಕುರಿತು "ಮಧುಗೆ ಸಹನಾಳ ಪ್ರೇಮದ ಅರಿವಿದೆ. ಆದರೆ, ಅವನಿಗೆ ಅದೇ ರೀತಿಯ ಒಲವಿಂದ ಸಹನಾಳನ್ನು ಆವರಿಸಲು ಅವನ ಮನಸ್ಸು ಆಮಂತ್ರಣ ನೀಡಿಲ್ಲ. ಹಾಗಂದ ಮಾತ್ರಕ್ಕೆ ಬೇರೆ ಹುಡುಗಿಯ ಜೊತೆ ಈ ರೀತಿಯ ಅನುಬಂಧವಿನ್ನೂ ಹುಟ್ಟಿಲ್ಲ. ಮಧು ಸೌಜನ್ಯ ಶೀಲ ಹುಡುಗನಾದ್ದರಿಂದ ಈವರೆಗೂ ಸಹನಾಳ ಪ್ರೇಮವನ್ನು ದುರುಪಯೋಗಿಸಿಕೊಳ್ಳದೇ ಪವಿತ್ರವಾಗಿರಿಸಿದ್ದಾನೆ" ಎಂದು ವಿವರಿಸಿದ.

ನಾನು ನಕ್ಕು "ಇವಿಷ್ಟೂ ನನಗೂ ಗೊತ್ತಿದ್ದ ವಿಷಯವಾಯಿತಲ್ಲ." ಅಂದೆ.

ನರೇಶ್ "ಜಸ್ಟ್ ಲೀವ್ ದ ಮ್ಯಾಟರ್ ಯಾಸ್ ಇಟ್ ಈಸ್, ಲೀಲಾ," ಎಂದ.

ನಿನ್ನ ಹೊಳಪು ಕಣ್ಣುಗಳ ಹಸಿರಾದ ಹುರುಪು.

ನನ್ನ ಮನ ಕಾಯುತ್ತಿತ್ತು,
ಕುಡಿ ಸ್ನೇಹ ಚಿಗುರೊಡೆಯಲೆಂದು,

ನನಗೂ ಒಂದು ರೀತಿಯಲ್ಲಿ ಅದು ಸರಿ ಎನಿಸಿತು.

ನಾಲ್ಕನೇ ವರ್ಷ ಮುಗಿಯುತ್ತಾ ಬಂದಿತು. ಬೆಂಗಳೂರಿನ ಹುಡುಗ, ಹುಡುಗಿಯರೆಲ್ಲಾ ಹೌಸ್ ಸರ್ಜನ್ಸಿಗೆ ಬೆಂಗಳೂರಿಗೆ ಟ್ರಾನ್ಸ್‌ಫರ್ ತಗೊಳ್ಳಲು ಅರ್ಜಿ ಸಲ್ಲಿಸಿ, ಕೆಲಸ ಶುರುಮಾಡಿದ್ದರು. ಸಹನಾ ಮಾತ್ರ ಮೈಸೂರ್‌ನಲ್ಲೇ ಟ್ರೈನಿಂಗ್ ಮಾಡುವುದು ಎಂದು ತೀರ್ಮಾನಿಸಿದ್ದಳು, ಕಾರಣ ಎಲ್ಲರಿಗೂ ಗೊತ್ತಿತ್ತು, ಮಧುವನ್ನು ಅಗಾಗ್ಗೆ ನೋಡುತ್ತಿರಬಹುದೆಂದು. ಹೌಸ್ ಸರ್ಜೆನ್ಸಿಯಲ್ಲೂ ನನ್ನ ಜೊತೇನೇ ರೂರಲ್ ರೊಟೇಶನ್ ಮಾಡಿದ್ದರಿಂದ ಇನ್ನಷ್ಟು ಹತ್ತಿರವಾದಳು. ಒಂದು ದಿನ, ಸಹನಾಳು ಬರೆದ ಕಾರ್ಟೂನ್ ಓದುತ್ತಿದ್ದೆ. ಹಾಗೇ ಅವಳ ನೋಟ್‌ಬುಕ್‌ನಲ್ಲಿ ಎಲ್ಲೆಲ್ಲೂ ಮಧುವಿನ ಭಾವಚಿತ್ರಗಳು ಕಂಡವು – ಇವೆಲ್ಲಾ ಸಹನಾಳ ಹಸ್ತದಿಂದ ರಚಿಸಿದ್ದು, ತುಂಬಾ ಮನೋಹರವಾಗಿತ್ತು. ಸಹನಾ ಬರೆದಿದ್ದ ಕವನಗಳೂ ಇದ್ದವು. ಒಂದು ಕವನ ನನ್ನ ಮನಸೆಳೆಯಿತು. "ಈ ಕವನಕ್ಕೆ ನಾನು ಹೆಸರು ಕೊಡುತ್ತೇನೆ." ಎಂದೆ.

"ಏ ಕಳ್ಳೀ, ಕಾರ್ಟೂನ್ ಓದುತ್ತೀನಿ ಅಂತ ಕವನಾನೂ ಕದ್ದು ಓದುತ್ತಿದ್ದೀಯಾ?" ಅಂತ ರೇಗಿಸಿದ್ದಳು ಸಹನಾ.

ಸಹನಾ ಬರೆದ ಕವನದ ಸಾಲುಗಳು ಹೀಗೆ ಸಾಗಿತ್ತು (ಕನ್ನಡ ಅನುವಾದ ನನ್ನದು):

"ಪ್ರೇಮಾಂತರಂಗ"

ನೀ ಅರಿಯಲಾರದೇ ಹೋದೆ,
ನಾ ನಿಂತು ನಿಂತಲ್ಲೇ ನಿನ್ನ ನೋಡುತ್ತಾ ನಿಂತಿದ್ದು,
ನನ್ನ ಕಣ್ಣಿನ ದೃಷ್ಟಿ ಖಣಜದ ಕಣ ಕಣಗಳಲ್ಲೂ,
ನಿನ್ನ ಭಾವ-ಚಿತ್ರವ ಬರೆದಿಟ್ಟಿದ್ದೂ,
ನನ್ನ ಸ್ಮೃತಿಪಟಲದ ಪದರ ಪದರಗಳಲ್ಲೂ,
ನಿನ್ನ ಪ್ರತಿಬಿಂಬವ ಪಸರಿಸಿದ್ದೂ,
ನನ್ನ, ಕಡೆಗೊಂದು ಸಲ ತಿರುಗಿ ನೋಡುವೆಯೆಂದು,
ಕಲ್ಲಾಗುವರೆಗೂ ಕಾದಿದ್ದು.

ನಾ ಮರೆಯಲಾರದೇ ಹೋದೆ,
ನಿನ್ನ ಮರುಕದ ಮುಖದ ಮೇಲಿದ್ದ ಮಾರಕ ನಗು,
ನನ್ನ ಕಣ್ಣುಗಳು ಕೇಳುತ್ತಾ, ಅರಸುತ್ತಾ ಕೊರಗಿದವು,

ನಿನ್ನ ಹುಡುಕಿ ಹುಡುಕಿ ತಡಕಾಡಿತು.


ಇದನ್ನೆಲ್ಲಾ ನೋಡಿದಾಗ "ಸಹನಾ ಎಷ್ಟು ಟ್ಯಾಲೆಂಟೆಡ್ ಗರ್ಲ್, ಆದರೆ, ಅವಳ ಟ್ಯಾಲೆಂಟ್ಸ್ ಎಲ್ಲಾ

ಸದುಪಯೋಗವಾದಂತೆ ಅನ್ನಿಸುತ್ತಾ ಇಲ್ಲ. ಎಲ್ಲಕ್ಕೂ ಒಂದು ಋಣಾನುಬಂಧವಿರಬೇಕೆನ್ನುವುದು ಸತ್ಯ." ಎನಿಸಿತು. ಹೌಸ್ ಸರ್ಜನ್ಸಿಯೂ ಮುಗಿಯುತ್ತಾ ಬಂದಿತು, ಸಹನಾಳನ್ನು ಕುತೂಹಲದಿಂದ ಕೇಳಿದ್ದೆ "ಮುಂದೇನು ಮಾಡುತ್ತೀಯಾ?" ಅದಕ್ಕೆ "ಬೆಂಗಳೂರಿಗಂತೂ ಹೋಗಲೇಬೇಕು, ಹೋಗುತ್ತೀನಿ." ಎಂದಿದ್ದಳು. ಈಚೀಚೆಗೆ ಬೆಂಗಳೂರಿಂದ ಬಂದಾಗಲೆಲ್ಲ ಅವಳ ಅಣ್ಣನ ಪುಟಾಣಿ ಮಗಳ ವಿಷಯ ಹೇಳುತ್ತಿದ್ದಳು. ಅದು ಒಂದು ರೀತಿಯಲ್ಲಿ ನನಗೆ ಸಮಾಧಾನ ಕೊಟ್ಟಿತ್ತು "ಹಾಸ್ಟಲ್ ಬಿಟ್ಟು ವಾಪಸ್ ಮನೆಗೆ ಹೋದರೆ ಸರಿಹೋಗುತ್ತಾಳೆ." ಎಂದು ಕೊಂಡೆ. ಹೌಸ್ ಸರ್ಜನ್ಸಿ ಟ್ರೈನಿಂಗ್ ಮುಗಿದು ನಾನು, ಕರ್ನಾಟಕ ಸರ್ಕಾರಕ್ಕೆ ಎರಡು ವರ್ಷಗಳ ಸೇವೆ ಸಲ್ಲಿಸಿ, ನಂತರ ಮದುವೆಯಾಗಿ ಅಮೇರಿಕಾಕ್ಕೆ ಬಂದೆ. ಬೆಂಗಳೂರಿಗೆ ಹೋದಮೇಲೆ ಸಹನಾಳ ವಿಷಯ ಏನಾಯಿತು ಎಂದು ತಿಳಿದಿರಲಿಲ್ಲ, ಕಥೆಯನ್ನು ಹೇಗೆ ಮುಕ್ತಾಯ ಗೊಳಿಸುವುದು ಎಂದು ಆಲೋಚಿಸುತ್ತಿದ್ದೆ. ಸಹನಾಳ ನಿಜ ಜೀವನದಲ್ಲಿ ಏನಾಗಿರಬಹುದು ಎಂದು ಕಾತರದಿಂದ ಕಾಯುತ್ತಿರುವಾಗ, ಫೀನಿಕ್ಸ್‌ನಿಂದ ನನ್ನ ಗೆಳತಿ ಲಕ್ಷ್ಮಿಯ ಕರೆ ಬಂತು.

ಲಕ್ಷ್ಮಿ ನನ್ನ ಮೆಡಿಕಲ್ ಕಾಲೇಜ್ ಗೆಳತಿ, ನನಗಿಂತ ಎರಡು ವರ್ಷ ಮುಂಚೆನೇ ಅಮೇರಿಕಾಕ್ಕೆ ಬಂದಿದ್ದಳು. ಸಹನಾಳ ವಿಷಯ ಬಂದಾಗ, ಲಕ್ಷ್ಮಿ : "ನಾನು ಅಮೇರಿಕಾಕ್ಕೆ ಬರುವ ಮೊದಲು ಸಹನಾ ಒಂದು ಸಲ ಆತ್ಮಹತ್ಯೆಗೆ ಪ್ರಯತ್ನಿಸಿದ್ದಳು. ನಮ್ಮ ಮನೆ ಅವರ ಮನೆ ಹತ್ತಿರ ಇತ್ತಲ್ಲ, ಅದಕ್ಕೆ ಅವಳ ಅಮ್ಮ ನನ್ನ ಹತ್ತಿರ ಬಂದು ಸಹನಾಳ ಜೊತೆ ಮಾತಾಡಲು ಕೇಳಿಕೊಂಡಿದ್ದರು. ಅದೃಷ್ಟವಶಾತ್ ಪ್ರಾಣ ಹೋಗಲಿಲ್ಲ, ಬದುಕಿಕೊಂಡಳು. ಆಮೇಲೆ ಸಹನಾ, ಅವಳು ಕೆಲಸಮಾಡುತ್ತಿದ್ದ ಜಾಗದಲ್ಲಿ ಪರಿಚಯವಾದ ಒಬ್ಬ ಡಾಕ್ಟರ್ ಜೊತೆ ಮದುವೆಯಾದಳು. ಅಮೇರಿಕಾಕ್ಕೂ ಬಂದು, ಎರಡು ವರ್ಷವಿದ್ದು ಹೋದರು. ಅಮೇರಿಕಾಕ್ಕೆ ಬಂದಾಗ ನನಗೆ ಫೋನ್ ಮಾಡಿದ್ದಳು." ಎಂದಳು. ನನ್ನ ಮನಸ್ಸು ಸಂತೋಷದಿಂದ ಎದ್ದು ಕುಣಿದು ಭಾವನಾಲಹರಿಯನ್ನು ಮುಂದುವರೆಸಿತು, "ಈ ಜನ್ಮದಲ್ಲಿ ಬೇರೆ ಯಾವುದೂ ಸಹನಾಳ ಮನಸ್ಸು ಬದಲಿಸುತ್ತದೆ" ಎಂದು ನನಗನಿಸಿರಲಿಲ್ಲ. "ಸಹನಾಳ ಶುದ್ಧ ಪವಿತ್ರ ಪ್ರೇಮಕ್ಕೆ ಸಾಕ್ಷಾತ್ ಆ ಕೇಶವನೇ ಬೇರೆ ರೂಪದಲ್ಲಿ ಬಂದೊಲಿದಿರಬೇಕು."

"ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ,
ಎಲ್ಲಿ ಭಕುತರು ಕರೆದರಲ್ಲೇ ಬಂದೊದಗುವನು" ಎಂಬುದು ನಿಜವಾಗಿತ್ತು!!

ಶುಭಂ!!! ◈






**Guy Nazareno, D.D.S**

*Pacific* Dental Spa
120 Fremont Hub Courtyard,
Fremont, CA 94587
T: (510) 744-1300
F: (510) 744-1303

Welcome to Pacific Dental Spa and experience the state of the art virtually pain-free dentistry. Our office is a highly personal dental practice offering comprehensive services from simple fillings to the most sophisticated crown, bridge and denture restorations.

What's different about us is our belief in very personal, quality dental care – the best dentistry we can possibly do. Our goal is to ensure our clients receive the highest level of satisfaction – someone who feels good, looks good and enjoys the vitality that all the advances in dentistry can bestow.

- Emergency Care
- Fillings & Fluoride
- Root Canals
- Laser Whitening (Zoom)
- Porcelain Veneers
- Cosmetic Dentistry/Veneers

- Exams and Cleaning
- Periodontal Care
- Extractions
- Oral Surgery
- Dentures and Partials
- Crowns and Bridges

Most dental insurance plans accepted, credit cards, convenient financing. Weekend and evening appointments available.

If you're new to the area, or need to catch up on dental work you've been putting off, we, invite you to call us and schedule an appointment for consultation. Come with questions. You're going to find a different kind of dentistry here. Whatever your requirements, you can depend on the best possible clinical treatment here, in a friendly, workable environment.